ಸೋಮವಾರ, ಅಕ್ಟೋಬರ್ 7, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 279 | ಪುಟ 18

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶಿಕ್ಷಣ
ಮಕ್ಕಳಿಗೆ ಕಲಿಕೆಯಲ್ಲಿರಲಿ ಕೃಷಿಯ ಒಡನಾಟ

ಅನುಭವ ಮಂಟಪ
ಉನ್ನತ ಹುದ್ದೆ: ಮೀಸಲಾತಿ ನಿರಾಕರಣೆಯ ಹುನ್ನಾರ

ದಸರಾ: ಮೈಸೂರಲ್ಲಿ ಹೋಟೆಲ್ ದರ ದುಬಾರಿ 5

ಮಹಿಳೆ ಹೊಟ್ಟೆಯಲ್ಲಿ 2 ಕೆ.ಜಿ ಕೂದಲು 6

ಗೊಬ್ಬರವಾಗಲಿದೆ ಶಬರಿಮಲೆಯ ಪ್ರಸಾದ 6

ಅನಾಥ ಸೇವಾಶ್ರಮ: ಅಧಿಕಾರಕ್ಕಾಗಿ ಮೇಲಾಟ 2B

ಲೋಕಾಯುಕ್ತದಿಂದ ಪ್ರಾಸಿಕ್ಯೂಷನ್‌ಗೆ ಕೋರಿಕೆ: ಸರ್ಕಾರದಿಂದ ವಿವರ ಕೇಳಿದ್ದ ರಾಜ್ಯಪಾಲ

329ಕ್ಕೆ ಅನುಮತಿ; 190 ಬಾಕಿ

• ರಾಜೇಶ್ ರೈ ಚಟ್ಲ

ಮುಖ್ಯಾಂಶಗಳು

- 2023ರ ಮೇ 20ರಿಂದ ಈವರೆಗಿನ ಮಾಹಿತಿ
- ಒಟ್ಟು 525 ಪ್ರಸ್ತಾವ ಸಲ್ಲಿಸಿದ್ದ ಲೋಕಾಯುಕ್ತ
- ಮಾಜಿ ಸಚಿವರಾದ ರೆಡ್ಡಿ, ರೇಣುಕಾಚಾರ್ಯ ಪ್ರಕರಣಗಳು ಬಾಕಿ

ಬೆಂಗಳೂರು: ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ದಿನದಿಂದ ಈವರೆಗೆ ರಾಜ್ಯ ಸರ್ಕಾರಿ ಅಧಿಕಾರಿಗಳು, ನೌಕರರು, ಜನಪ್ರತಿನಿಧಿಗಳ ವಿರುದ್ಧ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯಡಿ ಆರೋಪ ಪಟ್ಟಿ ಸಲ್ಲಿಸಲು ಅನುಮತಿ ಕೋರಿ ಲೋಕಾಯುಕ್ತ ಪೊಲೀಸರು 525 ಪ್ರಸ್ತಾವಗಳನ್ನು ಸಕ್ಷಮ ಪ್ರಾಧಿಕಾರಗಳಿಗೆ ಸಲ್ಲಿಸಿದ್ದಾರೆ. ಈ ಪೈಕಿ 329ಕ್ಕೆ ಒಪ್ಪಿಗೆ ಸಿಕ್ಕಿದ್ದರೆ, ಆರನ್ನು ತಿರಸ್ಕರಿಸಲಾಗಿದೆ. 190 ಪ್ರಸ್ತಾವಗಳು ಸಕ್ಷಮ ಪ್ರಾಧಿಕಾರಗಳ ಬಳಿಯೇ ಬಾಕಿ ಉಳಿದಿವೆ.

ಲಂಚ ಪ್ರಕರಣ, ಘೋಷಿತ ಆದಾಯಕ್ಕಿಂತ ಹೆಚ್ಚು ಆಸ್ತಿ ಹೊಂದಿರುವುದು, ಅಧಿಕಾರ ದುರ್ಬಳಕೆ ಸೇರಿದಂತೆ ವಿವಿಧ ಆರೋಪಗಳ ಅಡಿಯಲ್ಲಿ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆ ಅನ್ವಯ ದಾಖಲಿಸಿದ್ದ ಪ್ರಕರಣಗಳಲ್ಲಿ ಆರೋಪಿಗಳ ವಿರುದ್ಧ ತನಿಖೆಗೆ ಅನುಮತಿ ಕೋರಿ ಲೋಕಾಯುಕ್ತ ಪೊಲೀಸರು ಸಕ್ಷಮ ಪ್ರಾಧಿಕಾರಗಳಿಗೆ ಪ್ರಸ್ತಾವ ಸಲ್ಲಿಸಿದ್ದರು. ಈ ಪೈಕಿ ಶೇ 36.19ರಷ್ಟು ಪ್ರಸ್ತಾವಗಳ ಬಗ್ಗೆ ಯಾವುದೇ ನಿರ್ಧಾರ ಕೈಗೊಂಡಿಲ್ಲ.

ಶಾಸಕ ಗಾಲಿ ಜನಾರ್ದನ ರೆಡ್ಡಿ, ಮಾಜಿ ಅಬಕಾರಿ ಸಚಿವ ಎಂ.ಪಿ. ರೇಣುಕಾಚಾರ್ಯ ವಿರುದ್ಧದ ಪ್ರಕರಣವೂ ಸೇರಿ ರಾಜ್ಯ ಸರ್ಕಾರದ ಹಂತದಲ್ಲಿ ಪ್ರಾಸಿಕ್ಯೂಷನ್ ಕೋರಿಕೆಯ ಪ್ರಸ್ತಾವಗಳು ಬಾಕಿ ಇವೆ. ಲೋಕಾಯುಕ್ತದ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರಿಂದ ಪಡೆದ ಈ ಮಾಹಿತಿಯನ್ನು ಲೋಕಾಯುಕ್ತದ ರಿಜಿಸ್ಟ್ರಾರ್ ಅವರು ಸೆ. 21ರಂದು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ (ಜಾಗೃತ ವಿಭಾಗ) ಕಾರ್ಯದರ್ಶಿಗೆ ರವಾನಿಸಿದ್ದಾರೆ ಎಂದು ಸರ್ಕಾರದ ಉನ್ನತ ಮೂಲಗಳು ‘ಪ್ರಜಾವಾಣಿ’ಗೆ ತಿಳಿಸಿವೆ.

ಸೆ. 5ರಂದು ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರಿಗೆ ಪತ್ರ ಬರೆದಿದ್ದ ರಾಜ್ಯಪಾಲ ಥಾವರಚಂದ್ ಗೆಹಲೋತ್, ‘ಸಿದ್ದರಾಮಯ್ಯ ನೇತೃತ್ವದ ಸರ್ಕಾರ ರಾಜ್ಯದಲ್ಲಿ ಅಧಿಕಾರದ ಚುಕ್ಕಾಣಿ ಹಿಡಿದ ದಿನದಿಂದ (2023ರ ಮೇ 20) ಇಲ್ಲಿಯವರೆಗೆ ಸರ್ಕಾರಿ ಅಧಿಕಾರಿ, ನೌಕರರು ಮತ್ತು ಜನಪ್ರತಿನಿಧಿಗಳ ವಿರುದ್ಧ ಪ್ರಾಸಿಕ್ಯೂಷನ್‌ಗೆ ಮಂಜೂರಾತಿ ಕೋರಿ ಲೋಕಾಯುಕ್ತದಿಂದ ಬಂದ ಪ್ರಸ್ತಾವಗಳ ಸಮಗ್ರ ಮಾಹಿತಿ ನೀಡಬೇಕು’ ಎಂದು ನಿರ್ದೇಶನ ನೀಡಿದ್ದರು.

ಮುಡಾ ನಿವೇಶನ ಹಂಚಿಕೆ ಪ್ರಕರಣದಲ್ಲಿ ತಮ್ಮ ವಿರುದ್ಧ ತನಿಖೆಗೆ ರಾಜ್ಯಪಾಲರು ಅನುಮತಿ ನೀಡಿರುವುದನ್ನು ಪ್ರಶ್ನಿಸಿ ಮುಖ್ಯಮಂತ್ರಿ ಸಲ್ಲಿಸಿದ್ದ ರಿಟ್ ಅರ್ಜಿ ಹೈಕೋರ್ಟ್‌ನಲ್ಲಿ ವಿಚಾರಣೆ ನಡೆಯುತ್ತಿದ್ದ ಸಂದರ್ಭದಲ್ಲಿ ರಾಜ್ಯಪಾಲರು ಈ ಮಾಹಿತಿ ಕೇಳಿದ್ದರು.

5ನೇ ಪುಟ ನೋಡಿ

‘ಕೋಟಿ ಕುಳ’ಗಳ ಪ್ರಸ್ತಾವಗಳು ಬಾಕಿ

ಅಕ್ರಮ ಆಸ್ತಿ ಗಳಿಕೆ, ಭ್ರಷ್ಟಾಚಾರ, ಲಂಚ ಪ್ರಕರಣಗಳಲ್ಲಿ ಬಲೆಗೆ ಬಿದ್ದ ಹಲವು ‘ಕೋಟಿ ಕುಳ’ಗಳ ಮೇಲೆ ತನಿಖೆ ನಡೆಸಿ ಮೇಲ್ನೋಟಕ್ಕೆ ಆರೋಪ ಸಾಬೀತಾದ ಪ್ರಕರಣಗಳಲ್ಲಿ ಪ್ರಾಸಿಕ್ಯೂಷನ್‌ಗೆ ಅನುಮತಿ ಕೋರಿ ಸಕ್ಷಮ ಪ್ರಾಧಿಕಾರಗಳಿಗೆ ಲೋಕಾಯುಕ್ತ ಪ್ರಸ್ತಾವ ಸಲ್ಲಿಸಿದೆ.

ಆದಾಯಕ್ಕಿಂತ ಹೆಚ್ಚಿನ ಆಸ್ತಿ ಗಳಿಸಿದ ಆರೋಪ ಎದುರಿಸುತ್ತಿರುವ ‘ಕುಬೇರರು’ ಈ ಪಟ್ಟಿಯಲ್ಲಿ ದೊಡ್ಡ ಸಂಖ್ಯೆಯಲ್ಲಿದ್ದಾರೆ. ಮುಖ್ಯ ಎಂಜಿನಿಯರ್, ಸಹಾಯಕ ಕಾರ್ಯಪಾಲಕ ಎಂಜಿನಿಯರ್, ಸಹಾಯಕ ಎಂಜಿನಿಯರ್, ಕಿರಿಯ ಎಂಜಿನಿಯರ್, ಕೆಎಎಸ್ ಅಧಿಕಾರಿಗಳು, ತಹಶೀಲ್ದಾರ್, ಶಿರಸ್ತೇದಾರ್, ಭೂಮಾಪಕರು, ಭೂಸ್ವಾಧೀನಾಧಿಕಾರಿಗಳು, ಲೆಕ್ಕ ಪರಿಶೋಧಕರು, ಉಪ ನೋಂದಣಾಧಿಕಾರಿಗಳು, ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು (ಪಿಡಿಒ), ಬೆಸ್ಕಾಂ, ಕೆಐಎಡಿಬಿ, ಬಿಡಿಎ ಅಧಿಕಾರಿಗಳು ಹೀಗೆ ಎಲ್ಲ ಸ್ತರಗಳಲ್ಲಿರುವ ಅಧಿಕಾರಿ, ನೌಕರರು ಇದ್ದಾರೆ. ಕೆಲವು ಪ್ರಸ್ತಾವಗಳು 8–9 ತಿಂಗಳುಗಳ ಹಿಂದೆಯೇ ಸಲ್ಲಿಕೆ ಆಗಿವೆ. ಆದರೆ, ರಾಜ್ಯ ಸರ್ಕಾರ ಯಾವುದೇ ತೀರ್ಮಾನ ಕೈಗೊಳ್ಳದೇ ಇರುವುದು ಲೋಕಾಯುಕ್ತ ಸಲ್ಲಿಸಿರುವ ಪಟ್ಟಿಯಿಂದ ಬಹಿರಂಗವಾಗಿದೆ.

ಚಿನಕುರುಳಿ

ಪ್ರಕಾಶ್ ಶೆಟ್ಟಿ

ಇಬ್ಬರ ಬಂಧನ • ಪ್ರಕರಣ ಭೇದಿಸಿದ ಗುಜರಾತ್ ಎಟಿಎಸ್, ಎನ್‌ಸಿಬಿ

₹1,841 ಕೋಟಿ ಮೌಲ್ಯದ ಡ್ರಗ್ಸ್ ವಶ

ಪ್ರಜಾವಾಣಿ ವಾರ್ತೆ

ಅಹಮದಾಬಾದ್: ಗುಜರಾತ್‌ನ ಎಟಿಎಸ್ (ಭಯೋತ್ಪಾದಕ ನಿಗ್ರಹ ದಳ), ನವದೆಹಲಿಯ ಎನ್‌ಸಿಬಿ (ಮಾದಕವಸ್ತು ನಿಯಂತ್ರಣ ಘಟಕ) ಜತೆಗೂಡಿ ಮಧ್ಯಪ್ರದೇಶದ ರಾಜಧಾನಿ ಭೋಪಾಲ್‌ನಲ್ಲಿ ನಡೆಸಿದ ಜಂಟಿ ಕಾರ್ಯಾಚರಣೆಯಲ್ಲಿ ₹1,841 ಕೋಟಿ ಮೌಲ್ಯದ ‘ಮೆಫೆಡ್ರೋನ್’ ಮಾದಕದ್ರವ್ಯವನ್ನು ವಶಪಡಿಸಿಕೊಂಡಿದ್ದು, ಇಬ್ಬರನ್ನು ಬಂಧಿಸಿದೆ.

ಈ ವಿಚಾರವನ್ನು ಗುಜರಾತ್ ಗೃಹ ಖಾತೆ ರಾಜ್ಯ ಸಚಿವ ಹರ್ಷ ಸಾಂಘವಿ ‘ಎಕ್ಸ್’ ಮೂಲಕ ಖಚಿತಪಡಿಸಿದ್ದಾರೆ.

ಎಟಿಎಸ್ ಅಧಿಕಾರಿಗಳ ಪ್ರಕಾರ, ‘ಕಾರ್ಖಾನೆಯಲ್ಲಿ ಮಾದಕದ್ರವ್ಯ ತಯಾರಿಸುತ್ತಿದ್ದ ಅತೀ ದೊಡ್ಡ ಪ್ರಕರಣ ಇದಾಗಿದೆ’.

ಭೋಪಾಲ್‌ನ ಹೊರವಲಯದಲ್ಲಿರುವ ಬಗ್ರೋಡಾ ಕೈಗಾರಿಕಾ ವಲಯದಲ್ಲಿರುವ ಕಾರ್ಖಾನೆ ಮೇಲೆ ಶನಿವಾರ ದಾಳಿ ನಡೆಸಲಾಯಿತು. ಈ ವೇಳೆ ಕಾರ್ಖಾನೆಯಲ್ಲಿ ‘ಮೆಫೆಡ್ರೋನ್’ ತಯಾರಿಸುತ್ತಿದ್ದರು. ಘನ ಹಾಗೂ ದ್ರವ ರೂಪದಲ್ಲಿದ್ದ 907.09 ಕೆ.ಜಿ ‘ಮೆಫೆಡ್ರೋನ್’ ಅನ್ನು ವಶಕ್ಕೆ ಪಡೆಯಲಾಗಿದೆ. 2,500 ಚದರ ಅಡಿ ವಿಸ್ತೀರ್ಣದಲ್ಲಿ ಈ ಘಟಕವಿದ್ದು, ದಿನವೊಂದಕ್ಕೆ 25 ಕೆ.ಜಿ. ‘ಮೆಫೆಡ್ರೋನ್’ ತಯಾರಿಸುವ ಸಾಮರ್ಥ್ಯ ಹೊಂದಿತ್ತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಇದರ ಜತೆಗೆ ಮಾದಕದ್ರವ್ಯ ತಯಾರಿಸಲು ಬಳಸುತ್ತಿದ್ದ 5 ಸಾವಿರ ಕೆ.ಜಿ ಕಚ್ಚಾವಸ್ತುಗಳನ್ನು ವಶಕ್ಕೆ ಪಡೆಯಲಾಗಿದೆ. ಸ್ಥಳದಲ್ಲಿದ್ದ ಗ್ರೈಂಡರ್, ಮೋಟರ್, ಗ್ಲಾಸ್ ಫ್ಲಾಸ್ಕ್, ಹೀಟರ್ ಹಾಗೂ ಇತರೆ ಉಪಕರಣಗಳನ್ನು ವಶಕ್ಕೆ ಪಡೆಯಲಾಗಿದೆ. ಭೋಪಾಲ್‌ನ ಸುಲ್ತಾನ್‌ಬಾದ್ ರಸ್ತೆಯ ಕೊಟ್ರಾ ನಿವಾಸಿ ಅಮಿತ್ ಪ್ರಕಾಶ್‌ಚಂದ್ರ ಚತುರ್ವೇದಿ (57) ಮಹಾರಾಷ್ಟ್ರದ ನಾಸಿಕ್‌ನ ಪ್ರಭು ಅಂಟ್ಲಾಟೀಸ್ ನಿವಾಸಿ ಸನ್ಯಾಲ್ ಪ್ರಕಾಶ್ ಬಾನೆ (40) ಅವರನ್ನು ಎಟಿಎಸ್ ವಶಕ್ಕೆ ಪಡೆದುಕೊಂಡಿದೆ.

ಮುಂಬೈನ ಅಂಬೋಲಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ 2017ರಲ್ಲಿ ಮೆಫೆಡ್ರೋನ್ ವಶಕ್ಕೆ ಪಡೆಯಲಾಗಿತ್ತು. ಈ ಪ್ರಕರಣದಲ್ಲಿ ಸನ್ಯಾಲ್ ಪ್ರಕಾಶ್ ಬಾನೆಯನ್ನು ಬಂಧಿಸಲಾಗಿತ್ತು.

6ನೇ ಪುಟ ನೋಡಿ

ಈಗ ಗೆಲ್ಲಿರಿ 3.5 Kg ಚಿನ್ನವನ್ನು ನಿಮ್ಮ ಈ ಬೆಂಗಳೂರು ಗೋಲ್ಡ್ ಶಾಪಿಂಗ್ ಫೆಸ್ಟಿವಲ್ ನೊಂದಿಗೆ!

ಬಂಪರ್ ಬಹುಮಾನ 1 ಕೆಜಿ ಚಿನ್ನ

3.5 ಕೆಜಿ ವರೆಗೆ ಚಿನ್ನದ ಬಹುಮಾನಗಳು

100 ಕೆಜಿ ವರೆಗೆ ಬೆಳ್ಳಿ ಬಹುಮಾನಗಳು

ಅನುಕೂಲವಾದ ಡಿಜಿಟಲ್ ಕೂಪನ್ ಗಳು

3rd Edition

Bengaluru GOLD Shopping Festival™

3rd Oct-16th Nov 2024

ಆಯೋಜಿಸಿದವರು

THE JEWELLERS' ASSOCIATION BENGALURU

ಸಹ-ಪ್ರಾಯೋಜಕರು

Jewels of India Bangalore

18 - 21 October 2024

Tripura Vasini, Palace Grounds, Bengaluru

ಹೆಚ್ಚಿನ ಮಾಹಿತಿಗಾಗಿ www.goldfestival.in ಅಥವಾ ಕರೆಮಾಡಿ 89517 89988

ಅಧಿಕೃತ ಲಾಜಿಸ್ಟಿಕ್ ಪಾಲುದಾರ: Sequel Global precious logistics

ತಂತ್ರಜ್ಞಾನ ಪಾಲುದಾರ: SalesWizz Simple, Fast & Secure

ವ್ಯಾಪಾರ ಮಾಧ್ಯಮ ಪಾಲುದಾರ: The Art of Jewellery

* ಬದಲಾವಣೆಗೆ ಒಳಪಟ್ಟಿದೆ

ಬಂಗಾರದಲ್ಲಿನ ಹೂಡಿಕೆ ಜೀವನಪೂರ್ತಿ ಸುರಕ್ಷೆ

INSTAGRAM FACEBOOK YOUTUBE

ABARAN TIMELESS JEWELLERY (P) LTD.
All Bengaluru Branches

C. KRISHNIAH CHETTY GROUP
All Bengaluru Branches

GRT JEWELLERS PVT LTD
All Bengaluru Branches

JOS ALUKKAS ENTERPRISES PVT LTD
All Bengaluru Branches

JOYALUKKAS INDIA LTD
All Bengaluru Branches

KALYAN JEWELLERS INDIA LTD.
All Bengaluru Branches

LALITHAA JEWELLERY MART LIMITED
All Bengaluru Branches

MALABAR GOLD LTD
All Bengaluru Branches

NEELKANTH GOLD & DIAMONDS PVT LTD.
All Bengaluru Branches

SHREE SAI GOLD PALACE
All Bengaluru Branches

SRI KRISHNA DIAMONDS & JEWELLERY, Bengaluru | **SENCO GOLD & DIAMONDS,** All Bengaluru Branches

Aabushan Jewellery | Anand Jewels & Diamonds | Arjunaa Jewellers | Chemmanur Jewellers | Josco Jewellers | M P Swarna Mahal | Panchkesari Badera Jewellers (LLP) | PMJ Gems & Jewellers Pvt Ltd. | Rajamahal Fancy Jewellers | S K Ayodhyarama Setty & Sons | Sheelvant & Sons Jewels Pvt. Ltd. | Simha Jewellers Pvt. Ltd.

HVS Jewellers (Tiptur) | Kumara Jewellers | MOH By Manpasand | MPS Jewellers | National Gold & Diamonds | Nikhaar Jewels Pvt Ltd | Panduranga Bommayya Vernekar | Prakash Jewellers

Arjun Jewellers | Aura Jewels | Brindavan Gems & Jewellers | Khea Finest Bespoke Jewellery | Motis Concept Jewels | Mukesh Jewellers | Navyaa Aabharan | Om Jewels | Rajalaxmi Jewells | R.H. Radhakrishna Gupta Jewellers Pvt. Ltd | Shree Bhagyalaxmi Jewellers | Sree Rama Jewels | Sri Ganesh Jewellers (Nagarbhavi) | Vishwas Jewels Pvt Ltd

Anand Jewellers | Ananya Jewels | Apranje Jewellers Private Limited | Aswathanarayana Jewellery | Bhadraiah Abharana Bhandar | Bhagya Lakshmi Gold Palace | Dhanalakshmi Jewellers | Geetha Jewells | Heera Jewellery | Hiranyam | Inder Jewellery Pvt Ltd | Kohira Diamonds | Kudur Jewellers | Mahaveer Jewellers | Mayur Jewellers, Bidadi | Mitesh Jewels | Moti's | My Silver | N S Jewells | Navarathna Jewellers | Pawan Jewellers | Pragati Jewels & Diamonds | Prakash Jewels & Diamonds | Ramlal Mohanlal Jewellers | S.K. Jewellers | Sagar Jewellers | Shree Samarth Jewellers | Sonal Jewels | Sree Chinnamma Devi Photo Frame Works | Sri Dhanalakshmi Jewellers | Sri Gokul Jewellers & Diamonds | Sri Kundan Jewellers | Sri Manohar Jewellers | Sri Varamahalakshmi Jewellers | Srikanteswara Jewellery Mart | Tayi Jewellers | Uttam Jewel Palace | Varaa Jewels Pvt. Ltd. | Vijay Jewellers | Vivant Gold Diamonds

ಸೋಮವಾರ, ಅಕ್ಟೋಬರ್ 7, 2024 | ₹ 7.00 |
www.prajavani.net
prajavani.net | prajavani | prajavani | prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ನೋಟ

ಮುಂಬೈನಲ್ಲಿ ನಡೆದ ಸಮಾರಂಭದಲ್ಲಿ ನಟಿ ಕೃತಿ ಸನೋನ್ ಅವರು ಫೋಟೊಗೆ ಪೋಸ್ ನೀಡಿದ್ದು ಹೀಗೆ...

ರಾಷ್ಟ್ರೀಯ ಪ್ರಶಸ್ತಿ ಅಮಾನತುಗೊಳಿಸಿದ ಐ.ಬಿ 6
ಎಡಪಕ್ಷ ಶಾಸಕ ಕೆ.ಟಿ. ಜಲೀಲ್ ಹೇಳಿಕೆ- ವ್ಯಾಪಕ ಆಕ್ರೋಶ 6
ಕುತೂಹಲ ಕೆರಳಿಸಿದ ಪರಮೇಶ್ವರ–ಸತೀಶ ಭೇಟಿ 2B
‘ಚಿನ್ನ ಕಳ್ಳಸಾಗಾಣಿಕೆದಾರರಲ್ಲಿ ಬಹುತೇಕರು ಮುಸ್ಲಿಮರು’ 6

ಜಾತಿಗಣತಿ; ತೀವ್ರ ಜಟಾಪಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ (ಜಾತಿಗಣತಿ) ವರದಿಯ ಶಿಫಾರಸುಗಳನ್ನು ಶೀಘ್ರವೇ ಜಾರಿಗೆ ತರಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದು, ರಾಜ್ಯ ರಾಜಕಾರಣದಲ್ಲಿ ಹೊಸ ಸಂಚಲನಕ್ಕೆ ಕಾರಣವಾಗಿದೆ. ಈ ವರದಿಯ ಬಿಡುಗಡೆ ಮತ್ತು ಅದರ ಶಿಫಾರಸುಗಳ ಜಾರಿ ಬಗ್ಗೆ ವಿರೋಧ ಪಕ್ಷಗಳ ಆಕ್ಷೇಪ ಒಂದೆಡೆಯಾದರೆ, ಕಾಂಗ್ರೆಸ್ ನಾಯಕರಲ್ಲಿನ ಭಿನ್ನ ನಿಲುವು ಮುನ್ನೆಲೆಗೆ ಬಂದಿದೆ. ‘ಜಾತಿಗಣತಿ ವಿಚಾರದಲ್ಲಿ ಮುಖ್ಯಮಂತ್ರಿ ಎಚ್ಚರಿಕೆಯ ಹೆಜ್ಜೆ ಇಡಬೇಕು’ ಎಂದು ಡಿ.ಕೆ.ಸುರೇಶ್ ಅವರು ಈಚೆಗೆ ಹೇಳಿದ್ದಕ್ಕೆ ಕಾಂಗ್ರೆಸ್‌ನಲ್ಲೇ ದೊಡ್ಡ ಮಟ್ಟದ ಆಕ್ಷೇಪ ವ್ಯಕ್ತವಾಗಿದೆ. ವರದಿ ಜಾರಿಗೆ ಒತ್ತಾಯವೂ ವ್ಯಕ್ತವಾಗಿದೆ.

‘ಸರ್ಕಾರ ಬಿದ್ದರೆ ಬೀಳಲಿ ವರದಿ ಜಾರಿಗೆ ತನ್ನಿ’

ಸರ್ಕಾರ ಬೀಳುತ್ತದೆ ಎಂಬ ಭಯವೇ? ಸರ್ಕಾರ ಬಿದ್ದರೆ ಬೀಳಲಿ, ಜಾತಿಗಣತಿ ವರದಿಯ ಶಿಫಾರಸುಗಳನ್ನು ಜಾರಿಗೆ ತರಲೇಬೇಕು. ನಾವು ಸರ್ಕಾರ ಉಳಿಸಿಕೊಂಡು, ಅಧಿಕಾರ ಅನುಭವಿಸಲಷ್ಟೇ ಅಧಿಕಾರಕ್ಕೆ ಬಂದಿಲ್ಲ. ಇದನ್ನು ಜಾರಿಗೆ ತರುವುದರಿಂದ ಎಲ್ಲರಿಗೂ ಒಳ್ಳೆಯದಾಗುತ್ತದೆ.



ಈ ವರದಿಯನ್ನು ಜಾರಿಗೆ ತರಲು ಕಾಂಗ್ರೆಸ್ ಸೇರಿದಂತೆ ಯಾವ ಪಕ್ಷವೂ ಇಚ್ಛಾಶಕ್ತಿ ತೋರಿಲ್ಲ. ನನ್ನ ಪಕ್ಷ ಸರಿಯಾಗಿ ಕೆಲಸ ಮಾಡಿಲ್ಲ ಎಂದಾದರೆ, ನಾನು ಅದನ್ನು ಟೀಕಿಸದೇ ಇರುವುದಿಲ್ಲ. ಪಕ್ಷದ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ನಾಯಕರಾದ ರಾಹುಲ್ ಗಾಂಧಿ ಅವರು ಜಾತಿಗಣತಿ ನಡೆಸುತ್ತೇವೆ ಎಂದು ಎಲ್ಲೆಡೆ ದೃಢವಾಗಿ ಹೇಳುತ್ತಿದ್ದಾರೆ. ನಮ್ಮ ಪಕ್ಷದ ಪ್ರಣಾಳಿಕೆಯಲ್ಲೂ ಅದು ಇದೆ. ಹೀಗಿದ್ದಾಗ ಈಗಾಗಲೇ ಸಿದ್ಧವಿರುವ ವರದಿಯನ್ನು ಬಿಡುಗಡೆ ಮಾಡುವ ಜವಾಬ್ದಾರಿ ಸಿದ್ದರಾಮಯ್ಯ ಅವರ ಸರ್ಕಾರದ ಮೇಲೆ ಇದೆ.

ಈ ವಿಚಾರದಲ್ಲಿ ಸಿದ್ದರಾಮಯ್ಯ ಅವರು ಎಚ್ಚರಿಕೆಯಿಂದ ಹೆಜ್ಜೆ ಇಡಬೇಕು ಎಂದು ಡಿ.ಕೆ.ಸುರೇಶ್ ಹೇಳಿದ್ದಾರೆ. ಯಾಕಾಗಿ ಮತ್ತು ಯಾವುದರ ಬಗ್ಗೆ ಎಚ್ಚರಿಕೆ ಇರಬೇಕು. ಅವರು ಯಾರಿಗೆ ಎಚ್ಚರಿಕೆ ನೀಡುತ್ತಿದ್ದಾರೆ? ಅವರು ಪಕ್ಷದ ಪ್ರಣಾಳಿಕೆಯನ್ನು ನೋಡಿದ್ದಾರೆಯೇ?

ಬಿ.ಕೆ.ಹರಿಪ್ರಸಾದ್, ವಿಧಾನ ಪರಿಷತ್ ಸದಸ್ಯ

‘ಸಚಿವ ಸಂಪುಟ ಸಭೆಯ ಮುಂದಿಟ್ಟು ತೀರ್ಮಾನ’

ಜಾತಿಗಣತಿ ವರದಿಯನ್ನು ಸಚಿವ ಸಂಪುಟ ಸಭೆಯ ಮುಂದಿಟ್ಟು ತೀರ್ಮಾನ ತೆಗೆದುಕೊಳ್ಳುತ್ತೇವೆ. ಇದೊಂದು ವಿಚಿತ್ರ ಸಂದರ್ಭ. ಜಾತಿ ಜನಗಣತಿ ವರದಿಯನ್ನು ಸ್ವೀಕರಿಸದೇ ಇದ್ದರೆ, ಸ್ವೀಕರಿಸಿಲ್ಲ ಎನ್ನುತ್ತಾರೆ. ಸ್ವೀಕರಿಸಿದರೆ ಈಗ ಯಾಕೆ ಎಂದು ವ್ಯಾಖ್ಯಾನಿಸುತ್ತಾರೆ. ವರದಿ ಸ್ವೀಕರಿಸಲು ವಿಳಂಬಕ್ಕೂ ಕಾರಣಗಳಿವೆ.

ವರದಿಯ ಕುರಿತು ಸಚಿವ ಸಂಪುಟ ಸಭೆಯಲ್ಲಿ ಚರ್ಚಿಸಿ, ವಿಧಾನಮಂಡಲ ಅಧಿವೇಶನದಲ್ಲಿ ಮಂಡಿಸಬೇಕೇ, ಬೇಡವೇ ಎಂದು ತೀರ್ಮಾನಿಸುತ್ತೇವೆ. ವಿಧಾನಮಂಡಲ ಅಧಿವೇಶನದಲ್ಲಿ ಮಂಡಿಸಬೇಕಿಲ್ಲವೆಂದು ಸಂಪುಟ ಸಭೆ ತೀರ್ಮಾನಿಸಿದರೆ ಮುಗಿಯಿತು.

ಕೇಂದ್ರ ಸರ್ಕಾರದಿಂದಲೂ ಜನಗಣತಿ ನಡೆಯಲಿ. ಯಾವುದಾದರೂ ಸಮುದಾಯದ ಅಂಕಿ ಸಂಖ್ಯೆ ಹೆಚ್ಚು ಕಡಿಮೆ ಆಗಿದ್ದರೆ ಸರಿ ಮಾಡಿಕೊಳ್ಳಬಹುದು. ಯಾವಾಗಲೂ ಕೇಂದ್ರ ಸರ್ಕಾರದ ಜನಗಣತಿಯನ್ನೇ ಎಲ್ಲರೂ ಪರಿಗಣಿಸುತ್ತಾರೆ ಮತ್ತು ಬಳಸುತ್ತಾರೆ. ಸಂಪುಟ ಸಭೆಯಲ್ಲಿ ಚರ್ಚೆಯಾಗಲಿ. ಆ ಮೇಲೆ ನೋಡೋಣ. ರಾಜ್ಯ ಸರ್ಕಾರ ₹160 ಕೋಟಿ ವೆಚ್ಚ ಮಾಡಿದೆ. ಅದಕ್ಕೂ ಲೆಕ್ಕ ಕೊಡಬೇಕು. ಇಲ್ಲದೇ ಇದ್ದರೆ ಸಿಎಜಿ ಕೂಡ ಆಕ್ಷೇಪ ವ್ಯಕ್ತಪಡಿಸಬಹುದು.

ಜಿ.ಪರಮೇಶ್ವರ, ಗೃಹ ಸಚಿವ

‘ಹಗರಣ ಮರೆಸಲು ಜಾತಿಗಣತಿ ವಿಚಾರ’

ಮುಡಾ ಹಗರಣವು ಮುಖ್ಯಮಂತ್ರಿ ಸ್ಥಾನಕ್ಕೆ ಕುತ್ತು ತಂದಿದೆ. ಸಿದ್ದರಾಮಯ್ಯ ರಾಜೀನಾಮೆ ನೀಡಬೇಕಾದ ಪರಿಸ್ಥಿತಿ ಸೃಷ್ಟಿಯಾಗಿದೆ. ಇಂಥ ಸಮಯದಲ್ಲಿ ಹಗರಣ ಬದಿಗೊತ್ತಲು ಜಾತಿಗಣತಿ ವಿಚಾರವನ್ನು ಎತ್ತಲಾಗಿದೆ. ಜಾತಿಗಣತಿಗೆ ನಮ್ಮ ವಿರೋಧವಿಲ್ಲ. ಆದರೆ, ತರಾತುರಿಯಲ್ಲಿ ಅವೈಜ್ಞಾನಿಕವಾಗಿ ಗಣತಿ ಮಾಡಲಾಗಿದೆ ಎಂದು ಶಾಮನೂರು ಶಿವಶಂಕರಪ್ಪರಂಥ ಕಾಂಗ್ರೆಸ್ ಮುಖಂಡರೇ ಹೇಳಿದ್ದಾರೆ. ವೈಜ್ಞಾನಿಕವಾಗಿ ಗಣತಿ ಮೊದಲು ನಡೆಯಲಿ.

ಬಿ.ವೈ.ವಿಜಯೇಂದ್ರ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ

‘ಎಲ್ಲರಿಗೂ ಅಧಿಕಾರ ಸಿಗಲಿ’

ಗ್ರಾಮ ಪಂಚಾಯಿತಿ ಸದಸ್ಯರೂ ಆಗದ ಸಮುದಾಯಗಳು ರಾಜ್ಯದಲ್ಲಿವೆ. ಅವರು ದೇಶದ ಪ್ರಜೆಗಳಲ್ಲವೇ? ಅವರಿಗೂ ನ್ಯಾಯ ಸಿಗಬೇಕಿದ್ದರೆ ಜಾತಿ ಗಣತಿ ವರದಿ ಜಾರಿಯಾಗಬೇಕು. ಎಲ್ಲ ಸಮುದಾಯಗಳಿಗೆ ಅಧಿಕಾರ, ಸಂಪತ್ತು ಹಂಚಿಕೆ ಆಗಬೇಕಿದ್ದರೆ ವರದಿ ಬಿಡುಗಡೆ ಮಾಡಬೇಕು. ಜಾತಿಗಣತಿಯನ್ನು ವಿರೋಧ ಮಾಡುವ ಎರಡು ಬಲಿಷ್ಠ ಸಮುದಾಯಗಳಿಂದ 22 ಬಾರಿ ಮುಖ್ಯಮಂತ್ರಿಗಳಾಗಿದ್ದಾರೆ. 1.60 ಕೋಟಿ ಇರುವ ನಮ್ಮ ಸಮುದಾಯಗಳು ಸುಮ್ಮನಿರಬೇಕಾ? ಯಾವ ಸಮುದಾಯದ ಜನಸಂಖ್ಯೆ ಎಷ್ಟಿದೆ ಎಂದು ಹೊರಬರಲಿ. ರಾಜ್ಯದಲ್ಲಿ ಸಿದ್ದರಾಮಯ್ಯ ದಲಿತರ, ಶೋಷಿತರ ಪರ ಇದ್ದಾರೆ. ಮುಖ್ಯಮಂತ್ರಿ ಸ್ಥಾನಪಲ್ಲಟದ ಬಗ್ಗೆ ಅವರ ಪಕ್ಷ ತೀರ್ಮಾನ ಕೈಗೊಳ್ಳುತ್ತದೆ. ಒಂದು ವೇಳೆ ಬದಲಾವಣೆ ಮಾಡುವುದಿದ್ದರೆ ದಲಿತರಿಗೆ ಮುಖ್ಯಮಂತ್ರಿಯಾಗಲು ಅವಕಾಶ ನೀಡಬೇಕು.

ಜ್ಞಾನಪ್ರಕಾಶ ಸ್ವಾಮೀಜಿ, ಉರಿಲಿಂಗಪೆದ್ದಿಮಠ

‘ಫಲಾನುಭವಿಗಳಿಂದಲೇ ಮೀಸಲಾತಿಗೆ ವಿರೋಧ’ 05

ಮಹಿಳೆಯರ ಟಿ20 ಕ್ರಿಕೆಟ್ ವಿಶ್ವಕಪ್

ಹರ್ಮನ್ ಬಳಗಕ್ಕೆ ಪಾಕ್ ಶರಣು

ಅರುಂಧತಿ ರೆಡ್ಡಿ	
ಓವರ್	4
ರನ್	19
ವಿಕೆಟ್	3

ಶ್ರೇಯಾಂಕಾ ಪಾಟೀಲ	
ಓವರ್	4
ಮೇಡನ್	1
ರನ್	12
ವಿಕೆಟ್	2

ಶ್ರೇಯಾಂಕಾ ಪಾಟೀಲ

ಪಾಕಿಸ್ತಾನ 8ಕ್ಕೆ105 (20 ಓವರ್‌ಗಳಲ್ಲಿ)
ಭಾರತ 4ಕ್ಕೆ108 (18.5 ಓವರ್‌ಗಳಲ್ಲಿ)
ಫಲಿತಾಂಶ: ಭಾರತ ತಂಡಕ್ಕೆ 6 ವಿಕೆಟ್‌ಗಳ ಜಯ

ಐಸಿಸಿ ಮಹಿಳೆಯರ ಟಿ20 ವಿಶ್ವಕಪ್ 2024

ದುಬೈ (ಪಿಟಿಐ): ಹರ್ಮನ್‌ಪ್ರೀತ್ ಕೌರ್ ನಾಯಕತ್ವದ ಭಾರತ ತಂಡವು ಇಲ್ಲಿ ನಡೆಯುತ್ತಿರುವ ಮಹಿಳೆಯರ ಟಿ20 ಕ್ರಿಕೆಟ್ ವಿಶ್ವಕಪ್ ಟೂರ್ನಿಯ ಎ ಗುಂಪಿನ ಪಂದ್ಯದಲ್ಲಿ ಪಾಕಿಸ್ತಾನ ಎದುರಿನ ಪಂದ್ಯದಲ್ಲಿ ಜಯಿಸಿತು.

ಅರುಂಧತಿ ರೆಡ್ಡಿ

8 ವರ್ಷವಾದರೂ ನೇಮಕಾತಿಯಿಲ್ಲ, ಹುದ್ದೆ ಭರ್ತಿಗೆ ಆಗ್ರಹ

ಆರೋಗ್ಯ ನಿರೀಕ್ಷಣಾಧಿಕಾರಿ 2,849 ಹುದ್ದೆಗಳು ಖಾಲಿ

• ಮಲ್ಲಪ್ಪ ಪಾರೇಗಾಂವ

ಕಲಬುರಗಿ: ರಾಜ್ಯದಲ್ಲಿ 2,849 ಆರೋಗ್ಯ ನಿರೀಕ್ಷಣಾಧಿಕಾರಿಗಳ ಹುದ್ದೆಗಳು ಖಾಲಿಯಿದ್ದು, ಕಳೆದ 8 ವರ್ಷಗಳಿಂದ ಒಂದು ಹುದ್ದೆಯೂ ಭರ್ತಿಯಾಗಿಲ್ಲ.

ಸಮುದಾಯದ ಆರೋಗ್ಯ ಕಾಪಾಡುವಲ್ಲಿ ತಳಮಟ್ಟದಿಂದಲೂ ಆರೋಗ್ಯ ನಿರೀಕ್ಷಣಾಧಿಕಾರಿಗಳು ಶ್ರಮಿಸುತ್ತಾರೆ. ಕೇಂದ್ರ ಹಾಗೂ ರಾಜ್ಯ ಸರ್ಕಾರದ ಆರೋಗ್ಯ ಯೋಜನೆಗಳ ಅನುಷ್ಠಾನದಿಂದ ಹಿಡಿದು ಸಾಂಕ್ರಾಮಿಕ ರೋಗಗಳ ನಿಯಂತ್ರಣ, ಜನರಲ್ಲಿ ಆರೋಗ್ಯ ಜಾಗೃತಿ ಮೂಡಿಸುವುದು, ಹದಿಹರೆಯದವರಿಗೆ ಲೈಂಗಿಕ ಶಿಕ್ಷಣ,

ಆರೋಗ್ಯ ನಿರೀಕ್ಷಣಾಧಿಕಾರಿ ಖಾಲಿ ಹುದ್ದೆಗಳು

ವಿಭಾಗ	ಹುದ್ದೆಗಳು
ಕಲಬುರಗಿ ವಿಭಾಗ	221
ಬೆಳಗಾವಿ ವಿಭಾಗ	887
ಮೈಸೂರು ವಿಭಾಗ	1,049
ಬೆಂಗಳೂರು ವಿಭಾಗ	692
ಒಟ್ಟು	2,849

ಸಮುದಾಯ ಮಟ್ಟದಲ್ಲಿ ಆರೋಗ್ಯ ಜಾಗೃತಿ, ಜನನ–ಮರಣ ವರದಿ ಸಂಗ್ರಹ ಸೇರಿದಂತೆ 30ಕ್ಕೂ ಹೆಚ್ಚು ಆರೋಗ್ಯ ಯೋಜನೆಗಳ ಅನುಷ್ಠಾನದ ಕಾರ್ಯನಿರ್ವಹಿಸುತ್ತಾರೆ. ಸಮುದಾಯದ ಕಟ್ಟಕಡೆಯ ವ್ಯಕ್ತಿಗೆ ಆರೋಗ್ಯ ಯೋಜನೆ ತಲುಪಿಸುವಲ್ಲಿ ಇವರು ಪ್ರಮುಖ ಪಾತ್ರವಹಿಸುತ್ತಾರೆ.

2B ಪುಟ ನೋಡಿ

ಹುದ್ದೆಗಳ ಭರ್ತಿಗೆ ಆರ್ಥಿಕ ಇಲಾಖೆ ಅನುಮೋದನೆ ನೀಡುತ್ತಿಲ್ಲ. ಈ ಸಂಬಂಧ ಸರ್ಕಾರ ಕ್ರಮಕೈಗೊಳ್ಳಬೇಕು

ಪ್ರವೀಣ ಯಾದವ, ರಾಜ್ಯ ಸಂಘಟನಾ ಕಾರ್ಯದರ್ಶಿ, ಆರೋಗ್ಯ ನಿರೀಕ್ಷಣಾಧಿಕಾರಿ ಹುದ್ದೆ ಆಕಾಂಕ್ಷಿಗಳ ಸಂಘ

ಹೆಲ್ತ್ ಇನ್‌ಸ್ಪೆಕ್ಟರ್ ಕೋರ್ಸ್ ಮುಗಿಸಿ 6 ವರ್ಷ ಆಗುತ್ತಿದೆ. ಸರ್ಕಾರ ಖಾಲಿ ಹುದ್ದೆ ಭರ್ತಿ ಮಾಡುತ್ತಿಲ್ಲ. ಖಾಸಗಿ ವಲಯದಲ್ಲೂ ಕೆಲಸ ಸಿಗುತ್ತಿಲ್ಲ. ಶೀಘ್ರ ಖಾಲಿ ಹುದ್ದೆ ಭರ್ತಿ ಮಾಡಬೇಕು

ರಾಘವೇಂದ್ರ, ಹುದ್ದೆ ಆಕಾಂಕ್ಷಿ, ತುಮಕೂರು

ಗಣಿಗಾರಿಕೆ: ವನ್ಯಜೀವಿ ಮಂಡಳಿ ಸಭೆಯಲ್ಲಿ ಇಂದು ನಿರ್ಧಾರ

ಕಪ್ಪತಗುಡ್ಡ: 28 ಪ್ರಸ್ತಾವಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗದಗ ಜಿಲ್ಲೆಯ ಕಪ್ಪತಗುಡ್ಡ ವನ್ಯಜೀವಿ ಧಾಮದ 10 ಕಿ.ಮೀ ವ್ಯಾಪ್ತಿಯಲ್ಲಿ ಗಣಿಗಾರಿಕೆಗೆ ಅನುಮತಿ ಕೋರಿ ಒಟ್ಟು 28 ಪ್ರಸ್ತಾವಗಳು ಕರ್ನಾಟಕ ರಾಜ್ಯ ವನ್ಯಜೀವಿ ಮಂಡಳಿಗೆ ಸಲ್ಲಿಕೆಯಾಗಿವೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ಸೋಮವಾರ ನಡೆಯುವ ಮಂಡಳಿ ಸಭೆಯಲ್ಲಿ ಕಪ್ಪತಗುಡ್ಡದ ಭವಿಷ್ಯ ತೀರ್ಮಾನವಾಗಲಿದೆ.

ಕಪ್ಪತಗುಡ್ಡದ ಒಂದು ಕಿ.ಮೀ ವ್ಯಾಪ್ತಿಯಲ್ಲಿ ಕಲ್ಲು–ಮರಳು ಸೇರಿ ಯಾವುದೇ ರೀತಿಯ ಗಣಿಗಾರಿಕೆ ನಡೆಸುವಂತಿಲ್ಲ ಎಂದು ನಿಷೇಧ ವಿಧಿಸಿ ರಾಜ್ಯ ಸರ್ಕಾರ ಆದೇಶ ಹೊರಡಿಸಿತ್ತು. ಈ ಆದೇಶವನ್ನು ಕರ್ನಾಟಕ ಹೈಕೋರ್ಟ್ ಎತ್ತಿಹಿಡಿದಿತ್ತು. ಪ್ರಭಾವಿ ಸಚಿವರ ಮಕ್ಕಳು ಮತ್ತು ರಾಜಕೀಯ ವ್ಯಕ್ತಿಗಳ ಜತೆ ನಂಟು ಹೊಂದಿರುವವರು ಮಂಡಳಿಯ ಸದಸ್ಯರಾಗಿದ್ದಾರೆ. ಇಂತಹವರಿಂದ ಪರಿಸರ ಸೂಕ್ಷ್ಮ ವಿಷಯಗಳಲ್ಲಿ ನ್ಯಾಯ ಸಿಗಲು ಸಾಧ್ಯವೇ ಎಂಬುದು ಪರಿಸರ ಪ್ರೇಮಿಗಳ ಪ್ರಶ್ನೆ.

5ನೇ ಪುಟ ನೋಡಿ

10 ಸಾವಿರ ಉದ್ಯೋಗಿಗಳ ನೇಮಕಕ್ಕೆ ಎಸ್‌ಬಿಐ ಸಜ್ಜು

ನವದೆಹಲಿ (ಪಿಟಿಐ): ಪ್ರಸಕ್ತ ಆರ್ಥಿಕ ವರ್ಷದಲ್ಲಿ 10 ಸಾವಿರ ಉದ್ಯೋಗಿಗಳ ನೇಮಕಕ್ಕೆ ಸರ್ಕಾರಿ ಸ್ವಾಮ್ಯದ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ (ಎಸ್‌ಬಿಐ) ನಿರ್ಧರಿಸಿದೆ. ತನ್ನ ಬ್ಯಾಂಕಿಂಗ್ ಮತ್ತು ತಂತ್ರಜ್ಞಾನ ಸೇವೆಯನ್ನು ಉತ್ತಮಪಡಿಸುವುದಕ್ಕಾಗಿ ಈ ನೇಮಕಾತಿಗೆ ಮುಂದಾಗಿದೆ.

ಡಿಜಿಟಲ್ ಸೇವೆಯನ್ನು ಬಲಪಡಿಸಿ ಗ್ರಾಹಕರಿಗೆ ನಿರಂತರ ಸೇವೆ ನೀಡುವುದು ಬ್ಯಾಂಕ್‌ನ ಉದ್ದೇಶವಾಗಿದೆ. ಇದಕ್ಕಾಗಿ ತಂತ್ರಜ್ಞಾನ ವಿಭಾಗದಲ್ಲಿ ಹೂಡಿಕೆ ಪ್ರಮಾಣವನ್ನು ಹೆಚ್ಚಿಸಿದೆ. ‘ಸಾಮಾನ್ಯ ಬ್ಯಾಂಕಿಂಗ್, ತಂತ್ರಜ್ಞಾನ ವಿಭಾಗದ ಕಾರ್ಯಪಡೆಯ ಬಲವರ್ಧನೆಗೆ ನಿರ್ಧರಿಸಿದ್ದೇವೆ. ಇತ್ತೀಚೆಗೆ 1,500 ತಾಂತ್ರಿಕ ಉದ್ಯೋಗಿಗಳ ನೇಮಕಕ್ಕೆ ಪ್ರಕಟಣೆ ಹೊರಡಿಸಲಾಗಿದೆ’ ಎಂದು ಎಸ್‌ಬಿಐ ಅಧ್ಯಕ್ಷ ಸಿ.ಎಸ್. ಸೆಟ್ಟಿ ಪಿಟಿಐಗೆ ನೀಡಿರುವ ಸಂದರ್ಶನದಲ್ಲಿ ತಿಳಿಸಿದ್ದಾರೆ.

ಹೊರಗೆ 'ರಾಜಕಾರಣಕ್ಕೆ ಪ್ರವೇಶವಿಲ್ಲ' ಫಲಕ, ಒಳಗೆ ರಾಜಕಾರಣಿಗಳದ್ದೇ ಕಾರುಬಾರು

ಅನಾಥ ಸೇವಾಶ್ರಮ: ಅಧಿಕಾರಕ್ಕಾಗಿ ಮೇಲಾಟ

• ಎಂ.ಎನ್.ಯೋಗೇಶ್

ಚಿತ್ರದುರ್ಗ: ಯೋಗ ಗುರು, ಆಯುರ್ವೇದ ವೈದ್ಯ, ಸಾಹಿತಿ, ಕಲಾವಿದ ರಾಘವೇಂದ್ರ ಸ್ವಾಮೀಜಿ 'ತಿರುಕ'ನೆಂಬ ಹೆಸರಿನೊಂದಿಗೆ ಭಿಕ್ಷೆ ಬೇಡಿ ಹೊಳಲ್ಕೆರೆ ತಾಲ್ಲೂಕು ಮಲ್ಲಾಡಿಹಳ್ಳಿ ಗ್ರಾಮದಲ್ಲಿ ಸ್ವಾತಂತ್ರ್ಯ ಪೂರ್ವದಲ್ಲೇ ಸ್ಥಾಪಿಸಿದ್ದ 'ಅನಾಥ ಸೇವಾಶ್ರಮ' ಈಗ ರಾಜಕಾರಣದ ತಾಣವಾಗಿದ್ದು, ಅಧಿಕಾರದ ಮೇಲಾಟ ತೀವ್ರಗೊಂಡಿದೆ.

ಈ ಸೇವಾಶ್ರಮ ಪ್ರವೇಶಿಸುತ್ತಿದ್ದಂತೆಯೇ 'ರಾಜಕಾರಣಕ್ಕೆ ಅವಕಾಶವಿಲ್ಲ' ಎಂಬ ಫಲಕ ಬಾಗಿಲಲ್ಲೇ ಗಮನ ಸೆಳೆಯುತ್ತದೆ. ಆದರೆ, ಒಳಹೊಕ್ಕರೆ ಅಲ್ಲಿಯ ಚಟುವಟಿಕೆ ರಾಜಕಾರಣವನ್ನೇ ಹೊದ್ದು ಮಲಗಿದೆ. 'ತಿರುಕ' ಕಟ್ಟಿದ್ದ ಕನಸು ಬೀದಿಪಾಲಾಗಿರುವುದು ಅರಿವಿಗೆ ಬರುತ್ತದೆ.

ಆಶ್ರಮಕ್ಕೆ ಬಂದವರ ಮೇಲೆ ಅನುಮಾನದ ನೋಟ, ಹಲವು ಗುಂಪುಗಳಿಂದ ಪ್ರಶ್ನೆಗಳ ಸುರಿಮಳೆ, ಆತಂಕದ ವಾತಾವರಣ ಸೃಷ್ಟಿ, ಗೊಂದಲ, ಗದ್ದಲ ಇರುವುದು ಅನಾವರಣಗೊಳ್ಳುತ್ತವೆ. '1943ರಿಂದ 5 ದಶಕ ಅಧ್ಯಾತ್ಮ, ಆರೋಗ್ಯ, ರಂಗಭೂಮಿ, ಶೈಕ್ಷಣಿಕ ಚಟುವಟಿಕೆಗಳ ಮೂಲಕ ಗ್ರಾಮೀಣ ಜನರ ಆರಾಧನಾ ಕೇಂದ್ರವಾಗಿದ್ದ, 'ಬಂಜರು ಭೂಮಿಯ ಕಲ್ಪವೃಕ್ಷ' ಎಂದೇ ಪ್ರಖ್ಯಾತಿ ಪಡೆದಿದ್ದ ಸೇವಾಶ್ರಮ ಇದೇನಾ' ಎಂಬ ಪ್ರಶ್ನೆ ಮೂಡುತ್ತದೆ.

'ಇಲ್ಲಿನ ಆಯುರ್ವೇದ ವೈದ್ಯಕೀಯ ವಿದ್ಯಾಲಯ– ಆಸ್ಪತ್ರೆ ಸೇರಿದಂತೆ ಶಾಲೆ–ಕಾಲೇಜುಗಳು ಇದ್ದೂ ಇಲ್ಲದಂತಿವೆ. ಹಲವು ಸಂಸ್ಥೆಗಳು ಮುಚ್ಚಿವೆ.

ಹೊಳಲ್ಕೆರೆ ತಾಲ್ಲೂಕು ಮಲ್ಲಾಡಿಹಳ್ಳಿಯ ಅನಾಥ ಸೇವಾಶ್ರಮದ ಆವರಣದಲ್ಲಿರುವ ರಾಘವೇಂದ್ರ ಸ್ವಾಮೀಜಿ ಧ್ಯಾನ ಮಂಟಪ

ಮಲ್ಲಾಡಿಹಳ್ಳಿ, ದೇವರಹಳ್ಳಿ, ದುಮ್ಮಿ, ದಾವಣಗೆರೆ, ಮೈಸೂರು, ಶಿಕಾರಿಪುರ ತಾಲ್ಲೂಕಿನ ಶೆಟ್ಟಿಹಳ್ಳಿಯಲ್ಲಿರುವ 500 ಎಕರೆಗೂ ಹೆಚ್ಚು ಭೂಮಿಯ ಮೇಲೆ ಪಟ್ಟಭದ್ರ ಹಿತಾಸಕ್ತಿಗಳ ಕಣ್ಣು ಬಿದ್ದಿದೆ. ಸ್ವಾಮೀಜಿ ನಿಧನರಾದ ನಂತರ ಆಶ್ರಮದ ಚಟುವಟಿಕೆ ಸ್ಥಗಿತಗೊಂಡಿದ್ದು ಅವರ ಕನಸು ಮಣ್ಣುಪಾಲಾಗಿದೆ' ಎಂದು ಮಲ್ಲಾಡಿಹಳ್ಳಿ ಗ್ರಾಮಸ್ಥ ಶಿವರಾಜಪ್ಪ ಬೇಸರ ವ್ಯಕ್ತಪಡಿಸಿದರು.

ಸಮಸ್ಯೆ ಏನಾಗಿದೆ?: 1996ರಲ್ಲಿ ರಾಘವೇಂದ್ರ ಸ್ವಾಮೀಜಿ, 1998ರಲ್ಲಿ ಅವರ ಶಿಷ್ಯ, ಆಶ್ರಮದ ಮತ್ತೊಬ್ಬ ಶಿಲ್ಪಿ ಸೂರದಾಸ್ ತೀರಿಕೊಂಡ ನಂತರ ಆಡಳಿತ ಮಂಡಳಿಯು ಚಿತ್ರದುರ್ಗದ ಮುರುಘಾ ಮಠದ ಶಿವಮೂರ್ತಿ ಮುರುಘಾ ಶರಣರನ್ನು ಅನಾಥ ಸೇವಾಶ್ರಮ ವಿಶ್ವಸ್ತ ಸಮಿತಿಗೆ ಟ್ರಸ್ಟಿಯನ್ನಾಗಿ ನೇಮಿಸಿಕೊಂಡಿತು. ನಂತರ ಅವರನ್ನೇ ಅಧ್ಯಕ್ಷರನ್ನಾಗಿ ಮಾಡಿತು.

ಬಳಿಕ ಶರಣರು ತಮ್ಮ ಆಪ್ತರಾಗಿದ್ದ ಎಸ್.ಕೆ. ಬಸವರಾಜನ್ ಅವರನ್ನು ಕಾರ್ಯದರ್ಶಿಯನ್ನಾಗಿ ಮಾಡಿಕೊಂಡರು. ಕ್ರಮೇಣ ವೈಮನಸ್ಸು ಮೂಡಿ ಶರಣರು ಬಸವರಾಜನ್ ಅವರನ್ನು ವಜಾಗೊಳಿಸಿದರು. 'ಶರಣರು ಅಧ್ಯಕ್ಷರಾದ ನಂತರ ಆಶ್ರಮವು ಟ್ರಸ್ಟ್ ಡೀಡ್‌ನಂತೆ ನಡೆಯುತ್ತಿಲ್ಲ, ಅವರು ತಮಗೆ ಬೇಕಾದವರನ್ನು ಟ್ರಸ್ಟಿಗಳನ್ನಾಗಿ ಮಾಡಿದ್ದಾರೆ, ಸಾಮಾಜಿಕ ಚಟುವಟಿಕೆಗಳನ್ನು ಸ್ಥಗಿತಗೊಳಿಸಿದ್ದಾರೆ, ಹಣ ದುರುಪಯೋಗವಾಗಿದೆ' ಎಂದು ಕೆಲ ಟ್ರಸ್ಟಿಗಳು ಪ್ರಶ್ನೆ ಎತ್ತಿದರು.

ರಾಘವೇಂದ್ರ ಸ್ವಾಮೀಜಿ ಯಾರು?

ಬಾರ್ಕೂರಿನ ರಾಘವೇಂದ್ರರಾವ್ ಬರೋಡಾದ ರಾಜರತ್ನ ಮಾಣಿಕ್‌ರಾಯ್ ಅವರಿಂದ ಯೋಗ ಶಿಕ್ಷಣ, ಕರಾಚಿಯ ಲಕ್ಷ್ಮಣ ಬಾಬಾರಿಂದ ಆಯುರ್ವೇದ ಶಿಕ್ಷಣ ಪಡೆದವರು. ದೈಹಿಕ ಶಿಕ್ಷಣ (ಬಿಪಿಇ) ಪದವಿ ಗಳಿಸಿದವರು. ಕಾಲರಾ ಹಾವಳಿ ಇದ್ದ ವೇಳೆ ಕುಗ್ರಾಮ ಮಲ್ಲಾಡಿಹಳ್ಳಿಯಲ್ಲಿ ರೋಗಿಗಳ ಸೇವೆ ಮಾಡುತ್ತಾ ಅದನ್ನೇ ಕರ್ಮಭೂಮಿ ಮಾಡಿಕೊಂಡರು. ದೀಕ್ಷೆ ಪಡೆಯದಿದ್ದರೂ ಸ್ಥಳೀಯವಾಗಿ ಸ್ವಾಮೀಜಿ ಎಂದೇ ಗುರುತಿಸಿಕೊಂಡರು. ಅನಾಥ ಸೇವಾಶ್ರಮ ಸ್ಥಾಪಿಸಿ ಅನಾಥರು, ಅಂಗವಿಕಲರು, ನಿರ್ಗತಿಕರಿಗೆ ಆರೋಗ್ಯ ಸೇವೆ ಮಾಡಿದರು. ಶಿಕ್ಷಕ ತರಬೇತಿ ಸಂಸ್ಥೆ ಸ್ಥಾಪಿಸಿ ಈ ಭಾಗದ ಸಾವಿರಾರು ಬಡ ಜನರು ಶಿಕ್ಷಕರಾಗಿ ಬದುಕು ಕಟ್ಟಿಕೊಳ್ಳಲು ನೆರವಾದರು. ಶಾಲಾ, ಕಾಲೇಜು, ದೈಹಿಕ ಶಿಕ್ಷಕ ತರಬೇತಿ ಸಂಸ್ಥೆ, ಕೈಗಾರಿಕಾ ತರಬೇತಿ ಸಂಸ್ಥೆ ತೆರೆದರು. ನಟರೂ ಆಗಿದ್ದ ಅವರು ರಂಗಭೂಮಿಗೆ ಪ್ರೋತ್ಸಾಹ ನೀಡಿದ್ದರು. 'ತಿರುಕ' ಕಾವ್ಯನಾಮದಲ್ಲಿ ಹಲವು ಕೃತಿ ಬರೆದರು. ಆಯುರ್ವೇದ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆ ಇಂದಿಗೂ ರಾಜ್ಯದ ಪ್ರತಿಷ್ಠಿತ ವೈದ್ಯಕೀಯ ಕಾಲೇಜು ಆಗಿದೆ. ಇದು ಸಂಸ್ಥೆಗೆ ಪ್ರಮುಖ ಆದಾಯದ ಮೂಲವೂ ಆಗಿದೆ.

ರಾಘವೇಂದ್ರ ಸ್ವಾಮೀಜಿ

ಈಚೆಗೆ ಮುರುಘಾ ಶರಣರು ಪೋಕ್ಸೊ ಅಡಿ ಜೈಲು ಸೇರಿದ ನಂತರ ಸ್ಥಳೀಯರು ಬಂಡೆದ್ದು ಅವರನ್ನು ಟ್ರಸ್ಟ್‌ನಿಂದ ಹೊರಹಾಕುವಂತೆ ಒತ್ತಾಯಿಸಿದರು. ಆಶ್ರಮದ ಬಳಿಯ ಶರಣರ ಪ್ರತಿಮೆಯನ್ನೇ ಧ್ವಂಸಗೊಳಿಸಿದರು. ನಂತರ ಆಡಳಿತ ಮಂಡಳಿಯು ಶರಣರನ್ನು ಪದಚ್ಯುತಗೊಳಿಸಿತು. ನಂತರ 2023ರಲ್ಲಿ ಟ್ರಸ್ಟ್ ಪುನಾರಚನೆಯಾಗಿದ್ದು, ಈ ಹಿಂದೆ ಆಡಳಿತಾಧಿಕಾರಿಯಾಗಿದ್ದ ಸಾಹಿತಿ ರಾಘವೇಂದ್ರ ಪಾಟೀಲ ಉಪಾಧ್ಯಕ್ಷರಾದರೆ, ಮಾಜಿ ಶಾಸಕ ಎಸ್.ಕೆ. ಬಸವರಾಜನ್ ಕಾರ್ಯದರ್ಶಿಯಾಗಿದ್ದಾರೆ.

ಬಸವರಾಜನ್ ಮತ್ತೆ ಆಶ್ರಮಕ್ಕೆ ಬಂದದ್ದು, ಆಶ್ರಮಕ್ಕೆ ಸಂಬಂಧವೇ ಇಲ್ಲದವರನ್ನು ಟ್ರಸ್ಟಿಗಳನ್ನಾಗಿ ಮಾಡಿದ್ದನ್ನು ಖಂಡಿಸಿ ರಾಘವೇಂದ್ರ ಸ್ವಾಮೀಜಿಗೆ ಆಪ್ತ ಟ್ರಸ್ಟಿಗಳಾಗಿದ್ದ ಕೆ.ಇ. ರಾಧಾಕೃಷ್ಣ, ನಾಗರಾಜ್, ಕೆ.ವಿ. ಪ್ರಭಾಕರ್, ಜಿ.ತಿಮ್ಮಪ್ಪ, ಎಂ.ಡಿ. ಲಕ್ಷ್ಮಿನಾರಾಯಣ್ ರಾಜೀನಾಮೆ ನೀಡಿದ್ದಾರೆ. ತೆರವಾದ ಸ್ಥಾನಗಳಿಗೆ ಈಗ ಮತ್ತೆ ಐವರನ್ನು ನೇಮಿಸಿರುವುದೂ ವಿವಾದಕ್ಕೆ ಕಾರಣವಾಗಿದೆ.

ಸಮಾನ ಮನಸ್ಕರೆಲ್ಲರೂ ಸೇರಿ 'ಅನಾಥ ಸೇವಾಶ್ರಮ ರಕ್ಷಣಾ ಸಮಿತಿ' ರಚಿಸಿಕೊಂಡಿದ್ದು, ರಾಘವೇಂದ್ರ ಸ್ವಾಮೀಜಿ ನಿಧನಾನಂತರ ನಡೆದ ಎಲ್ಲಾ ಅಕ್ರಮಗಳನ್ನು ತನಿಖೆ ಮಾಡಬೇಕು, ಸಂಪೂರ್ಣ ಚಟುವಟಿಕೆಗಳನ್ನು ಪರಾಮರ್ಶೆಗೆ ಒಳಪಡಿಸಬೇಕು ಎಂದು ಒತ್ತಾಯಿಸಿದ್ದಾರೆ. ಈ ಕುರಿತು ಮುಖ್ಯಮಂತ್ರಿ ಕಚೇರಿಗೂ ದೂರು ನೀಡಿದ್ದಾರೆ.

'ಆಸ್ತಿ ಮಾರಾಟಕ್ಕೆ ಯತ್ನ'

'ಸ್ಥಳೀಯರಿಗೆ ಮುರುಘಾ ಶರಣರ ಮೇಲೆ ಎಷ್ಟು ಕೋಪ ಇದೆಯೋ ಅಷ್ಟೇ ಕೋಪ ಬಸವರಾಜನ್ ಮೇಲೂ ಇದೆ. ಹೀಗಾಗಿ ಅವರೂ ಸ್ಥಾನ ತೊರೆಯಬೇಕು. ಈಗಿರುವ ಅನಧಿಕೃತ ಟ್ರಸ್ಟ್ ಆಶ್ರಮದ ಆಸ್ತಿಗಳನ್ನು ಮಾರಾಟ ಮಾಡಲು ಯತ್ನಿಸುತ್ತಿದೆ. ಆ ಕುರಿತ ಹಲವು ದಾಖಲೆ ನಮ್ಮ ಬಳಿ ಇವೆ. ರಾಘವೇಂದ್ರ ಸ್ವಾಮೀಜಿ ಕನಸಿನ ಅನಾಥ ಸೇವಾಶ್ರಮ ಮತ್ತೆ ರೂಪುಗೊಳ್ಳಬೇಕು ಎಂಬುದೇ ನಮ್ಮ ಒತ್ತಾಸೆ. ಸರ್ಕಾರ ಮಧ್ಯಪ್ರವೇಶ ಮಾಡಿ ಆಡಳಿತಾಧಿಕಾರಿಯನ್ನು ನೇಮಿಸಬೇಕು. ಟ್ರಸ್ಟ್ ಡೀಡ್ ಆಶಯದಂತೆ ಹೊಸ ಸಮಿತಿ ರಚಿಸಬೇಕು' ಎಂದು ಅನಾಥ ಸೇವಾಶ್ರಮ ರಕ್ಷಣಾ ಸಮಿತಿ ಗೌರವಾಧ್ಯಕ್ಷ, ಹೊಳಲ್ಕೆರೆ ಮಾಜಿ ಶಾಸಕ ಎ.ವಿ.ಉಮಾಪತಿ ಒತ್ತಾಯಿಸಿದ್ದಾರೆ.

'ಆಶ್ರಮದ ಚಟುವಟಿಕೆಗಳು ಕಾನೂನು ಪ್ರಕಾರವೇ ನಡೆಯುತ್ತಿವೆ. ಟ್ರಸ್ಟಿಗಳಲ್ಲಿ ಯಾವುದೇ ಗೊಂದಲವಿಲ್ಲ. ಹೊರಗಿನ ಕೆಲವರು ದೂರು ನೀಡಿರಬಹುದು, ಆ ಬಗ್ಗೆ ನಾವು ತಲೆ ಕೆಡಿಸಿಕೊಳ್ಳುವುದಿಲ್ಲ' ಎಂದು ವಿಶ್ವಸ್ತ ಸಮಿತಿ ಕಾರ್ಯದರ್ಶಿ, ಬಿಜೆಪಿ ಮುಖಂಡ ಎಸ್.ಕೆ.ಬಸವರಾಜನ್ ತಿಳಿಸಿದರು.

ಸುಜೀತ್, ಭೈರತಿ ಸುರೇಶ್ ವಿರುದ್ಧ ತನಿಖೆಗೆ ಮನವಿ

ಪ್ರಜಾವಾಣಿ ವಾರ್ತೆ

ಮೈಸೂರು: ಲೋಕಾಯುಕ್ತದ ಹಿಂದಿನ ಮೈಸೂರು ಎಸ್.ಪಿ. ಸುಜೀತ್, ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್ ವಿರುದ್ಧ ತನಿಖೆ ಕೈಗೊಳ್ಳುವಂತೆ ಕೋರಿ ಸಾಮಾಜಿಕ ಹೋರಾಟಗಾರ ಸ್ನೇಹಮಯಿ ಕೃಷ್ಣ ಪೊಲೀಸ್ ಮಹಾನಿರ್ದೇಶಕರಿಗೆ ಭಾನುವಾರ ಇ–ಮೇಲ್ ಮೂಲಕ ದೂರು ನೀಡಿದ್ದಾರೆ.

'ಮುಡಾದಲ್ಲಿ ನಡೆದಿರುವ ಅಕ್ರಮಗಳ ಕುರಿತು ಮಾಹಿತಿ ಸಂಗ್ರಹಿಸಿದ್ದ ಲೋಕಾಯುಕ್ತ ಪೊಲೀಸರು, ಲೋಕಾಯುಕ್ತರಿಂದ ಸರ್ಚ್ ವಾರಂಟ್ ಪಡೆದು ಮುಡಾ ಕಚೇರಿ ಮೇಲೆ ದಾಳಿಗೆ ಯೋಜಿಸಿದ್ದರು. ಆದರೆ, ಈ ಮಾಹಿತಿಯನ್ನು ಎಸ್.ಪಿ. ಸುಜೀತ್ ಸಚಿವ ಭೈರತಿ ಸುರೇಶ್‌ಗೆ ತಿಳಿಸಿದ್ದರು. ನಂತರದಲ್ಲಿ ಭೈರತಿ ಸುರೇಶ್ ಹೆಲಿಕಾಪ್ಟರ್‌ನಲ್ಲಿ ಮೈಸೂರಿಗೆ ಬಂದು ಮುಡಾ ಕಚೇರಿಯಲ್ಲಿದ್ದ ಪ್ರಮುಖ ದಾಖಲೆಗಳನ್ನು ಬೆಂಗಳೂರಿಗೆ ಒಯ್ದರು. ಇದೇ ದಾಖಲೆಗಳನ್ನು ಇಟ್ಟುಕೊಂಡು ಮುಖ್ಯಮಂತ್ರಿ ಸಿದ್ದರಾಮಯ್ಯ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ್ದರು. ಈ ರೀತಿ ಸಹಾಯ ಮಾಡಿದ್ದಕ್ಕೆ ಪ್ರತಿಯಾಗಿ ಸುಜೀತ್ ಅವರನ್ನು ಸರ್ಕಾರ ಮೈಸೂರಿನಿಂದ ಬೆಂಗಳೂರಿಗೆ ಆಯಕಟ್ಟಿನ ಜಾಗಕ್ಕೆ ವರ್ಗಾಯಿಸಿದೆ. ಇದನ್ನು ಗಂಭೀರವಾಗಿ ಪರಿಗಣಿಸಬೇಕು' ಎಂದು ದೂರಿನಲ್ಲಿ ಕೋರಿದ್ದಾರೆ.

'ಸುಜೀತ್ ಹಾಗೂ ಭೈರತಿ ಸುರೇಶ್ ನಡುವಿನ ದೂರವಾಣಿ ಕರೆಗಳನ್ನು ತನಿಖೆಗೆ ಒಳಪಡಿಸಬೇಕು. ಮೈಸೂರಿನಿಂದ ಹೆಲಿಕಾಪ್ಟರ್‌ನಲ್ಲಿ ದಾಖಲೆಗಳನ್ನು ಕೊಂಡೊಯ್ದ ಕುರಿತು ಕೂಡ ತನಿಖೆ ನಡೆಸಬೇಕು' ಎಂದು ಒತ್ತಾಯಿಸಿದ್ದಾರೆ.

ಸೋಮವಾರ ಪೊಲೀಸ್ ಮಹಾನಿರ್ದೇಶಕರಿಗೆ ಲಿಖಿತವಾಗಿ ದೂರು ಸಲ್ಲಿಸುವುದಾಗಿ ಸ್ನೇಹಮಯಿ ಕೃಷ್ಣ ತಿಳಿಸಿದರು.

'ತಪ್ಪೇ ಮಾಡದಿದ್ದರೆ ಜೈಲಿಗೆ ಕಳುಹಿಸುವುದು ಹೇಗೆ?'

ಮಡಿಕೇರಿ: 'ಎಚ್.ಡಿ.ಕುಮಾರಸ್ವಾಮಿ ಅವರು ಬೇರೆಯವರನ್ನು ಜೈಲಿಗೆ ಕಳುಹಿ ಸಲು ಸಂಚು ಮಾಡುತ್ತಿದ್ದರು. ಆದರೆ, ಈಗ ಅವರೇ ಆ ಸುಳಿಗೆ ಸಿಲುಕಿಕೊಳ್ಳುತ್ತಿದ್ದಾರೋ ಏನೋ ಗೊತ್ತಿಲ್ಲ' ಎಂದು ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ಹೇಳಿದರು.

ಚಲುವರಾಯ ಸ್ವಾಮಿ

ಇಲ್ಲಿ ಭಾನುವಾರ ಸುದ್ದಿಗಾರರ ಪ್ರಶ್ನೆಗಳಿಗೆ ಪ್ರತಿಕ್ರಿಯಿಸಿದ ಅವರು, 'ಈ ಸರ್ಕಾರ ನನ್ನನ್ನು ಜೈಲಿಗೆ ಕಳುಹಿಸಲು ಸಂಚು ರೂಪಿಸುತ್ತಿದೆ ಎಂದು ಒಂದೆಡೆ ಆರೋಪಿಸುತ್ತಾರೆ. ಮತ್ತೊಂದೆಡೆ ಯಾವುದೇ ತಪ್ಪನ್ನೂ ನಾನು ಮಾಡಿಲ್ಲ ಎನ್ನುತ್ತಾರೆ. ತಪ್ಪು ಮಾಡಿಲ್ಲದವರನ್ನು ಜೈಲಿಗೆ ಕಳುಹಿಸುವುದಾದರೂ ಹೇಗೆ?' ಎಂದರು.

'ಕೊಡಗಿನ ಭಾಗಮಂಡಲದಲ್ಲೂ ಗಂಗಾರತಿ ಮಾದರಿಯಲ್ಲಿ ಕಾವೇರಿ ಆರತಿಯನ್ನು ಯಾವುದಾದರೂ ಸಂದರ್ಭದಲ್ಲಿ ಸಾಂಕೇತಿಕವಾಗಿ ನಡೆಸಲಾಗುವುದು' ಎಂದರು.

'ದಸರಾ ಬಳಿಕ ಸಿದ್ದರಾಮಯ್ಯ ರಾಜೀನಾಮೆ'

ಕಾಂಗ್ರೆಸ್ ಹೈಕಮಾಂಡ್ ಮಟ್ಟದಲ್ಲೂ ಇದೆ ಚಿಂತನೆ: ವಿಜಯೇಂದ್ರ ಹೇಳಿಕೆ

ಪ್ರಜಾವಾಣಿ ವಾರ್ತೆ

ಮೈಸೂರು: 'ಮುಖ್ಯಮಂತ್ರಿ ಸಿದ್ದರಾಮಯ್ಯ ದಸರಾ ಬಳಿಕ ರಾಜೀನಾಮೆ ನೀಡುತ್ತಾರೆ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದರು.

ಬಿ.ವೈ. ವಿಜಯೇಂದ್ರ

ಇಲ್ಲಿ ಭಾನುವಾರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, 'ಮುಡಾ ಹಗರಣದ ವಿರುದ್ಧ ಮೈತ್ರಿಕೂಟದಿಂದ ಹಮ್ಮಿಕೊಂಡಿದ್ದ ಪಾದಯಾತ್ರೆ ಯಶಸ್ವಿಯಾಗಿದ್ದು, ಮುಖ್ಯಮಂತ್ರಿ ರಾಜೀನಾಮೆ ಕೊಟ್ಟೇ ಕೊಡುತ್ತಾರೆ. ಇದಕ್ಕೆ ಕ್ಷಣಗಣನೆ ಆರಂಭವಾಗಿದೆ' ಎಂದರು.

'ಮುಖ್ಯಮಂತ್ರಿಯಾಗಿ ನಾನೇ ಮುಂದುವರಿಯುತ್ತೇನೆ ಎಂದು ನಿತ್ಯವೂ ಹೇಳಿಕೊಳ್ಳುವ ಕೆಟ್ಟ ಪರಿಸ್ಥಿತಿ ಸಿದ್ದರಾಮಯ್ಯ ಅವರಿಗೆ ಬಂದಿದೆ. ಅವರನ್ನು ಬೆಂಬಲಿಸಿ ಸಚಿವರೂ ಹೇಳಿಕೆ ನೀಡುತ್ತಿದ್ದಾರೆ' ಎಂದು ವ್ಯಂಗ್ಯವಾಡಿದರು.

'ಸಚಿವ ಸತೀಶ ಜಾರಕಿಹೊಳಿ ಅವರನ್ನು ಸಿದ್ದರಾಮಯ್ಯ ಅವರೇ ದೆಹಲಿಗೆ ಕಳುಹಿಸಿಕೊಟ್ಟಿದ್ದಾರೆ. ಯಾವ ಸಂದರ್ಭದಲ್ಲೂ ಬೇಕಾದರೂ ರಾಜೀನಾಮೆ ಕೊಡಬಹುದು. ಕಾಂಗ್ರೆಸ್ ಹೈಕಮಾಂಡ್ ಮಟ್ಟದಲ್ಲೂ ಈ ಕುರಿತು ಚಿಂತನೆ ನಡೆದಿದೆ. ಇದು ಮುಖ್ಯಮಂತ್ರಿಗೂ ಗೊತ್ತಿದೆ' ಎಂದು ಹೇಳಿದರು. 'ಸಿಎಂ ಸ್ಥಾನಕ್ಕೆ 7–8 ಮಂದಿ ಕಾಯುತ್ತಿದ್ದಾರೆ' ಎಂದರು.

'ಮುಡಾ ಪ್ರಕರಣ 14 ನಿವೇಶನಗಳಿಗಷ್ಟೆ ಸಂಬಂಧಿಸಿದ್ದಲ್ಲ. ಸಾವಿರಾರು ಕೋಟಿ ರೂಪಾಯಿ ಹಗರಣ ಇದಾಗಿದೆ. ಮೂಂದೆ ಇದು ಬಹಿರಂಗವಾಗುತ್ತದೆ. ಯಾವುದೇ ಹಗರಣ ನಡೆದಿಲ್ಲ ಎಂದು ವಾದಿಸುತ್ತಿದ್ದವರಿಗೆ ಈಗ ಯಾವ ಪರಿಸ್ಥಿತಿ ಬಂದಿದೆ ನೋಡಿ' ಎಂದು ವ್ಯಂಗ್ಯವಾಡಿದರು.

'ತಪ್ಪಿನ ಅರಿವಾದ ರಿಂದಲೇ 14 ನಿವೇಶನ ವಾಪಸ್ ಮಾಡಿದ್ದಾರೆ. ಆರೋಪಿ ಸ್ಥಾನದಲ್ಲಿರುವ ಮುಖ್ಯಮಂತ್ರಿಗೆ ಅಧಿಕಾರದಲ್ಲಿ ಮುಂದುವರಿಯುವ ಅರ್ಹತೆ ಇಲ್ಲ. ಈ ಹಿಂದೆ ಬಿ.ಎಸ್. ಯಡಿಯೂರಪ್ಪ ಅವರಿಗೆ ಅನೇಕ ಸವಾಲುಗಳನ್ನು ಹಾಕಿದ್ದರು. ಈಗ ಅವರಿಗೇ ಈ ಪರಿಸ್ಥಿತಿ ಬಂದಿರುವಾಗ ಪ್ರಾಮಾಣಿಕವಾಗಿ ನಡೆದುಕೊಳ್ಳಬೇಕಾಗುತ್ತದೆ. ಅಧಿಕಾರಕ್ಕೆ ಅಂಟಿಕೊಳ್ಳದೇ ಪಾರದರ್ಶಕ ತನಿಖೆಗೆ ಒಳಪಡಬೇಕು' ಎಂದರು.

'ರಾಜ್ಯ ಸರ್ಕಾರದ ಹಗರಣಗಳ ವಿರುದ್ಧ ಪಾದಯಾತ್ರೆಯನ್ನು ನಾವು ಜೆಡಿಎಸ್ ಶಾಸಕ ಜಿ.ಟಿ. ದೇವೇಗೌಡರನ್ನು ಕೇಳಿ ನಡೆಸಿರಲಿಲ್ಲ. ಅವರ ಹೇಳಿಕೆ ಜೆಡಿಎಸ್ ಆಂತರಿಕ ವಿಚಾರ; ಕುಮಾರಸ್ವಾಮಿ ಅದನ್ನು ನೋಡಿಕೊಳ್ಳುತ್ತಾರೆ. ಜಿಟಿಡಿ ಯಾವಾಗ ಬೇಕಾದರೂ ಸರಿಹೋಗಬಹುದು' ಎಂದು ಪ್ರತಿಕ್ರಿಯಿಸಿದರು.

'ರಾಜೀನಾಮೆ ಅವರ ಪಕ್ಷಕ್ಕೆ ಬಿಟ್ಟಿದ್ದು...'

ಬಳ್ಳಾರಿ: 'ಮುಡಾ ಪ್ರಕರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜೀನಾಮೆ ಪಡೆಯುವುದು, ಬಿಡುವುದು ಅವರ ಪಕ್ಷಕ್ಕೆ ಬಿಟ್ಟ ವಿಚಾರ. ನಾವು ಸಿದ್ದರಾಮಯ್ಯ ಪತ್ನಿ ಬಗ್ಗೆ ಮಾತನಾಡಿಲ್ಲ. ಅವರ ಬಗ್ಗೆ ನಮಗೆ ಗೌರವ ಇದೆ' ಎಂದು ಕೇಂದ್ರ ಸಚಿವ ವಿ. ಸೋಮಣ್ಣ ಸ್ಪಷ್ಟಪಡಿಸಿದರು.

'ಜನಾರ್ದನ ರೆಡ್ಡಿ ಸಹೋದರರು, ಮಾಜಿ ಸಚಿವ ಬಿ.ಶ್ರೀರಾಮುಲು ಬೇರೆಯಾದಾಗ ಏನಾಯಿತು ಎಂಬುದು ಎಲ್ಲರಿಗೂ ಈಗ ಗೊತ್ತಾಗಿದೆ. ಈಗ ಒಂದಾಗುವ ಸಮಯ ಬಂದಿದೆ. ಶ್ರೀರಾಮುಲುಗೆ ಮುಂಗೋಪ. ಸ್ವಲ್ಪ ದಿನದಲ್ಲಿ ಎಲ್ಲರೂ ಒಟ್ಟಾಗಲಿದ್ದಾರೆ. ಬಳ್ಳಾರಿ ಅಷ್ಟೇ ಅಲ್ಲ, ರಾಜ್ಯದ ಎಲ್ಲ ನಾಯಕರೂ ಒಂದಾಗಲಿದ್ದಾರೆ' ಎಂದರು.

ಪಾಕಿಸ್ತಾನದ ಮಹಿಳೆಯನ್ನು ಮದುವೆಯಾಗಿದ್ದ ಆರೋಪಿ

ಪಾಕ್ ಕುಟುಂಬಕ್ಕೆ ನೆರವು: ಕಿಂಗ್‌ಪಿನ್ ಸೆರೆ

ಪ್ರಜಾವಾಣಿ ವಾರ್ತೆ

ಆನೇಕಲ್: ಜಿಗಣಿ ಮತ್ತು ಬೆಂಗಳೂರಿನ ಪೀಣ್ಯದಲ್ಲಿ ಬಂಧಿಸಲಾದ ಪಾಕಿಸ್ತಾನದ ಎರಡು ಕುಟುಂಬಗಳಿಗೆ ನೆರವು ನೀಡಿದ ಆರೋಪಿಯನ್ನು ಜಿಗಣಿ ಪೊಲೀಸರು ಭಾನುವಾರ ಬಂಧಿಸಿದ್ದಾರೆ.

ಮುಂಬೈಗೆ ತೆರಳಲು ಬೆಂಗಳೂರು ರೈಲು ನಿಲ್ದಾಣದಲ್ಲಿ ನಿಂತಿದ್ದ ಉತ್ತರ ಪ್ರದೇಶದ ಫರ್ವೇಜ್ ಅಹಮದ್ ಎಂಬಾತನನ್ನು ಪೊಲೀಸರು ಬಂಧಿಸಿದರು. ಅನೇಕ ಪಾಕಿಸ್ತಾನಿಯರು ಭಾರತದಲ್ಲಿ ನೆಲೆಸಲು ಅಗತ್ಯ ದಾಖಲೆಗಳನ್ನು ಈತ ಸಿದ್ಧಪಡಿಸಿಕೊಡುತ್ತಿದ್ದ ಎಂದು ಪೊಲೀಸ್ ಮೂಲಗಳು ತಿಳಿಸಿವೆ. ಅಜ್ಞಾತ ಸ್ಥಳದಲ್ಲಿ ಪೊಲೀಸರು ಈತನನ್ನು ವಿಚಾರಣೆಗೆ ಒಳಪಡಿಸಿದ್ದಾರೆ.

ಸದ್ಯ ಮುಂಬೈನಲ್ಲಿ ನೆಲೆಸಿರುವ ಪರ್ವೇಜ್ ಅಹಮದ್, ಮೆಹದಿ ಫೌಂಡೇಷನ್ ಇಂಟರ್‌ನ್ಯಾಷನಲ್ ಧಾರ್ಮಿಕ ಸಂಘಟನೆಯ ಭಾರತದ ಉಸ್ತುವಾರಿಯಾಗಿದ್ದಾನೆ.

ಪಾಕಿಸ್ತಾನಿ ಮಹಿಳೆಯನ್ನು ಮದುವೆಯಾಗಿದ್ದ ಪರ್ವೇಜ್, ಪತ್ನಿಯ ನೆರವಿನಿಂದ ಮೆಹದಿ ಫೌಂಡೇಷನ್ ಸಂಪರ್ಕ ಸಾಧಿಸಿದ್ದ. ಯೂನಸ್ ಅಲ್ಗೋರ್ ಧರ್ಮಗುರು ಪ್ರವಚನಗಳನ್ನು ಭಾರತದಲ್ಲಿ ಪ್ರಚಾರ ಮಾಡುವ ಕೆಲಸದಲ್ಲಿ ಈತ ತೊಡಗಿಸಿಕೊಂಡಿದ್ದ.

2007ರಲ್ಲಿ ಭಾರತಕ್ಕೆ ಬಂದ ಪಾಕಿಸ್ತಾನದ 63 ಪ್ರಜೆಗಳಲ್ಲಿ ಪರ್ವೇಜ್ ಪತ್ನಿಯೂ ಒಬ್ಬಳು. ಪಾಕಿಸ್ತಾನದ ವಿರುದ್ಧ ದೆಹಲಿಯಲ್ಲಿ ನಡೆದ ಪ್ರತಿಭಟನೆಯಲ್ಲೂ ಆಕೆ ಪಾಲ್ಗೊಂಡಿದ್ದಳು ಎಂದು ತಿಳಿದು ಬಂದಿದೆ.

ಜಿಗಣಿಯಲ್ಲಿ ಬಂಧಿಸಲಾದ ಪಾಕಿಸ್ತಾನಿ ಪ್ರಜೆಗಳ ಕುಟುಂಬದ ನಾಲ್ವರಿಗೆ ನೆರವು ನೀಡಿದ ಆರೋಪದ ಮೇಲೆ ಫರ್ವೇಜ್ ವಿರುದ್ಧವೂ ಪ್ರಕರಣ ದಾಖಲಾಗಿತ್ತು.

ಜಿಗಣಿ ಪೊಲೀಸರು ಬಂಧಿಸಿದ ಪಾಕಿಸ್ತಾನದ ಏಳು ಪ್ರಜೆಗಳ ಜತೆಗೂ ಈತ ನಿಕಟ ಸಂಪರ್ಕ ಹೊಂದಿದ್ದ. ತನಿಖೆ ವೇಳೆ ಅವರು ನೀಡಿದ ಮಾಹಿತಿ ಮೇರೆಗೆ ಈತನನ್ನು ಬಂಧಿಸಲು ಜಿಗಣಿ ಪೊಲೀಸರ ತಂಡ ಮುಂಬಯಿಗೆ ತೆರಳಿತ್ತು.

ಆದರೆ, ಆತ ಅದಾಗಲೇ ಬೆಂಗಳೂರಿಗೆ ಹೊರಟು ಬಂದಿದ್ದ. ಈ ಮಾಹಿತಿ ತಿಳಿಯುತ್ತಲೇ ಬೆಂಗಳೂರಿಗೆ ಮರಳಿದ ಪೊಲೀಸರು ಫರ್ವೇಜ್‌ಗಾಗಿ ಬಲೆ ಬೀಸಿದ್ದರು. ಕೇಂದ್ರ ರೈಲು ನಿಲ್ದಾಣದಲ್ಲಿ ಆತ ಪೊಲೀಸರಿಗೆ ಸಿಕ್ಕಿ ಬಿದ್ದ ಎಂದು ಮೂಲಗಳು ಹೇಳಿವೆ.

ದಾಖಲೆ ಸೃಷ್ಟಿಸಲು ನೆರವು: ಜಿಗಣಿ ಬಳಿಯ ರಾಜಾಪುರ ಮತ್ತು ಪೀಣ್ಯದಲ್ಲಿ ಬಂಧಿಸಲಾಗಿರುವ ಪಾಕಿಸ್ತಾನಿ ಕುಟುಂಬಗಳ ಸದಸ್ಯರಿಗೆ ಹಿಂದೂ ಧರ್ಮೀಯರ ಹೆಸರಿನಲ್ಲಿ ನಕಲಿ ದಾಖಲೆಗಳನ್ನು ಸೃಷ್ಟಿಸಲು ನೆರವಾಗಿದ್ದ ಎಂಬುದು ಪ್ರಾಥಮಿಕ ಹಂತದ ತನಿಖೆಯಲ್ಲಿ ಪೊಲೀಸರಿಗೆ ಗೊತ್ತಾಗಿದೆ. ದೇಶದ ವಿವಿಧೆಡೆ ಅಕ್ರಮವಾಗಿ ನೆಲಸಿರುವ ಇನ್ನಷ್ಟು ಮಂದಿಗೆ ಆತ ನೆರವಾಗಿರುವ ಶಂಕೆ ಇದೆ. ಆ ಬಗ್ಗೆಯೂ ತನಿಖೆ ನಡೆಸಲಾಗುತ್ತಿದೆ ಎಂದು ಮೂಲಗಳು ತಿಳಿಸಿವೆ.

'ನೆರೆಯ ರಾಜ್ಯಗಳಲ್ಲಿ ಮತ್ತಷ್ಟು ಮಂದಿ'

'ನೆರೆಯ ಕೇರಳ, ತಮಿಳುನಾಡು ಮತ್ತು ತೆಲಂಗಾಣ ರಾಜ್ಯಗಳಲ್ಲಿ ಪಾಕಿಸ್ತಾನದ ಹಲವರು ಅಕ್ರಮವಾಗಿ ನೆಲೆಸಿರುವ ಮಾಹಿತಿ ತನಿಖೆ ವೇಳೆ ರಾಜ್ಯದ ಪೊಲೀಸರಿಗೆ ಲಭಿಸಿದೆ. ಈ ಕುರಿತು ಸಂಬಂಧಿಸಿದ ರಾಜ್ಯಗಳ ಪೊಲೀಸರ ಜೊತೆ ಮಾಹಿತಿ ಹಂಚಿಕೊಳ್ಳಲಾಗಿದೆ' ಎಂದು ಉನ್ನತ ಪೊಲೀಸ್ ಮೂಲಗಳು 'ಪ್ರಜಾವಾಣಿ'ಗೆ ತಿಳಿಸಿವೆ.

'ನಮ್ಮ ಪೊಲೀಸರು ಹಂಚಿಕೊಂಡಿರುವ ಖಚಿತ ಮಾಹಿತಿ ಆಧರಿಸಿ ವಿವಿಧ ರಾಜ್ಯಗಳಲ್ಲಿ ಕಾರ್ಯಾಚರಣೆ ಆರಂಭವಾಗಿದೆ. ರಾಜ್ಯದಲ್ಲೂ ವಿವಿಧೆಡೆ ಪರಿಶೀಲನೆ, ಶೋಧ ನಡೆಯುತ್ತಿದೆ' ಎಂದು ಮೂಲಗಳು ಹೇಳಿವೆ.

ಸಿ.ಎಂ ಕಾರಿಗೆ ಅಡ್ಡಿ: ರೆಡ್ಡಿ ಕಾರು ಚಾಲಕನ ವಿರುದ್ಧ ಎಫ್‌ಐಆರ್

ಗಂಗಾವತಿ (ಕೊಪ್ಪಳ ಜಿಲ್ಲೆ): ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಗಂಗಾವತಿಯಲ್ಲಿ ಶನಿವಾರ ರಾತ್ರಿ 'ಝೀರೊ ಟ್ರಾಫಿಕ್' ನಡುವೆ ತೆರಳುವಾಗ ಶಾಸಕ ಜನಾರ್ದನ ರೆಡ್ಡಿ ಅವರ ವಾಹನ ಸಿ.ಎಂ ಬೆಂಗಾವಲು ವಾಹನಕ್ಕೆ ವಿರುದ್ಧವಾಗಿ ತೆರಳಿದ್ದು, ರೆಡ್ಡಿ ವಾಹನ ಚಾಲಕನ ವಿರುದ್ಧ ಪೊಲೀಸರು ಎಫ್‌ಐಆರ್ ದಾಖಲಿಸಿದ್ದಾರೆ.

ಮುಖ್ಯಮಂತ್ರಿ ರಾಯಚೂರು ಜಿಲ್ಲೆಯ ಪ್ರವಾಸ ಮುಗಿಸಿ ಗಂಗಾವತಿ ಮಾರ್ಗದ ಮೂಲಕ ಬಳ್ಳಾರಿಗೆ ತೆರಳುವಾಗ ಈ ಘಟನೆ ನಡೆದಿದೆ. ಬೆಂಗಾವಲು ವಾಹನ ಬೇಗನೇ ಬಾರದ ಕಾರಣ ತಾಳ್ಮೆ ಕಳೆದುಕೊಂಡ ರೆಡ್ಡಿ ಕಾರು ಚಾಲಕ ರಸ್ತೆ ವಿಭಜಕದಿಂದಲೇ ಮಧ್ಯದಲ್ಲಿ ನುಗ್ಗಿ ಸಿ.ಎಂ. ಕಾರು ಬರುವ ವಿರುದ್ಧ ದಿಕ್ಕಿನಲ್ಲಿ ವಾಹನ ಚಲಾಯಿಸಿದ್ದರು.

ಸಂಚಾರ ನಿಯಮ ಉಲ್ಲಂಘಿಸಿದ ಕಾರಣಕ್ಕಾಗಿ ಗಂಗಾವತಿ ಸಂಚಾರ ಪೊಲೀಸ್ ಠಾಣೆಯ ಎಎಸ್‌ಐ ಹಮೀದ್ ಹುಸೇನ್ ದೂರು ನೀಡಿದ್ದರು.

ಆರೋಗ್ಯ ನಿರೀಕ್ಷಣಾಧಿಕಾರಿ ಹುದ್ದೆ ಖಾಲಿ

2ನೇ ಮುಖ ಪುಟದಿಂದ...

ಆದರೆ, ಸಿಬ್ಬಂದಿ ಕೊರತೆಯಿಂದಾಗಿ ಯೋಜನೆಗಳ ಅನುಷ್ಠಾನ ಸಮರ್ಪಕವಾಗಿ ಆಗುತ್ತಿಲ್ಲ.

ಆರೋಗ್ಯ ಕಾಯ್ದೆಯಂತೆ ಪ್ರತಿ 5,000 ಜನರಿಗೆ ಒಬ್ಬರು ಆರೋಗ್ಯ ನಿರೀಕ್ಷಣಾಧಿಕಾರಿ ಕರ್ತವ್ಯ ನಿರ್ವಹಿಸಬೇಕು. ಈ ಕಾಯ್ದೆಯಂತೆ ರಾಜ್ಯದಲ್ಲಿ 14 ಸಾವಿರ ಆರೋಗ್ಯ ನಿರೀಕ್ಷಣಾಧಿಕಾರಿಗಳ ಅಗತ್ಯವಿದೆ. ಸದ್ಯ 5,944 ಹುದ್ದೆಗಳ ಭರ್ತಿಗೆ ಮಾತ್ರ ಮಂಜೂರಾತಿ ದೊರೆತಿದೆ. ಇದರಲ್ಲಿ 3,095 ಹುದ್ದೆಗಳು ಮಾತ್ರ ಭರ್ತಿಯಾಗಿವೆ.

'2016ರಲ್ಲಿ 465 ಆರೋಗ್ಯ ನಿರೀಕ್ಷಣಾಧಿಕಾರಿ ಹುದ್ದೆಗಳನ್ನು ಭರ್ತಿ ಮಾಡಲಾಗಿತ್ತು. ಬಳಿಕ ಇದುವರೆಗೂ ಹುದ್ದೆಗಳ ಭರ್ತಿಯಾಗಿಲ್ಲ. ಹುದ್ದೆಗಳ ಭರ್ತಿಗಾಗಿ ಹಲವು ಬಾರಿ ಜನಪ್ರತಿನಿಧಿಗಳು, ಸರ್ಕಾರಕ್ಕೆ ಮನವಿ ಮಾಡಲಾಗಿದೆ. ಈ ಸಂಬಂಧ ರಾಜ್ಯಮಟ್ಟದಲ್ಲಿ ಪ್ರತಿಭಟನೆಗಳನ್ನು ನಡೆಸಿದರೂ ಪ್ರಯೋಜನವಾಗಿಲ್ಲ. ಸಚಿವ ದಿನೇಶ್ ಗುಂಡೂರಾವ್ ಅವರು ಹುದ್ದೆ ಭರ್ತಿಗೆ ಕ್ರಮಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದ್ದಾರೆ. ಆದರೆ ಭರವಸೆ ಭರವಸೆಯಾಗಿಯೇ ಉಳಿದಿದೆ' ಎಂದು ಆಕಾಂಕ್ಷಿಗಳು ಬೇಸರ ವ್ಯಕ್ತಪಡಿಸುತ್ತಾರೆ.

ವಯೋಮಿತಿ ಮೀರುವ ಚಿಂತೆ

ರಾಜ್ಯದ 275ಕ್ಕೂ ಹೆಚ್ಚು ಸರ್ಕಾರಿ ಮತ್ತು ಖಾಸಗಿ ಅರೆವೈದ್ಯಕೀಯ ಕಾಲೇಜುಗಳಿಂದ ಆರೋಗ್ಯ ನಿರೀಕ್ಷಣಾಧಿಕಾರಿ ಕೋರ್ಸ್ ಮುಗಿಸಿ, ಪ್ರತಿ ವರ್ಷ 2,000ಕ್ಕೂ ಹೆಚ್ಚು ವಿದ್ಯಾರ್ಥಿಗಳು ಹೊರಬರುತ್ತಾರೆ.

ಆದರೆ, ಉದ್ಯೋಗ ಅವಕಾಶವಿಲ್ಲದೇ ಪರದಾಡುವಂತಾಗಿದೆ. ನಿರೀಕ್ಷಣಾಧಿಕಾರಿ ಕೋರ್ಸ್ ಮುಗಿಸುವವರಿಗೆ ಖಾಸಗಿ ವಲಯದಲ್ಲೂ ಉದ್ಯೋಗ ಸಿಗುವುದಿಲ್ಲ. ಸರ್ಕಾರದ ನೇಮಕಾತಿಗಾಗಿಯೇ ಕಾಯುವಂತಾಗಿದ್ದು, ವಯೋಮಿತಿ ಮೀರುವ ಚಿಂತೆ ಕಾಡುತ್ತಿದೆ.

ಕರ್ನಾಟಕ ರಾಜ್ಯ ಸರ್ಕಾರಿ ಎನ್‌ಪಿಎಸ್ ನೌಕರರ ಸಂಘದ ನಿರ್ಣಯ; ಉಗ್ರ ಹೋರಾಟಕ್ಕೆ ನಿರ್ಧಾರ

ಒಪಿಎಸ್ ಜಾರಿಗೆ ಒತ್ತಾಯ; ಸರ್ಕಾರಕ್ಕೆ ಗಡುವು

ಪ್ರಜಾವಾಣಿ ವಾರ್ತೆ

ದಾವಣಗೆರೆ: ರಾಷ್ಟ್ರೀಯ ಪಿಂಚಣಿ ವ್ಯವಸ್ಥೆ (ಎನ್‌ಪಿಎಸ್) ರದ್ದು ಮಾಡಿ, ಹಳೇ ಪಿಂಚಣಿ ವ್ಯವಸ್ಥೆ (ಒಪಿಎಸ್) ಮರು ಜಾರಿಗೊಳಿಸಲು ಒತ್ತಾಯಿಸಿ ರಾಜ್ಯ ಸರ್ಕಾರಕ್ಕೆ ಗಡುವು ನೀಡಿ, ಅದಕ್ಕೂ ಸರ್ಕಾರ ಸ್ಪಂದಿಸದಿದ್ದರೆ ಜನವರಿ 15ರಿಂದ ಉಗ್ರ ಹೋರಾಟ ನಡೆಸಲು 'ಕರ್ನಾಟಕ ರಾಜ್ಯ ಸರ್ಕಾರಿ ಎನ್‌ಪಿಎಸ್ ನೌಕರರ ಸಂಘ' ತೀರ್ಮಾನಿಸಿದೆ.

ನಗರದಲ್ಲಿ ಭಾನುವಾರ ನಡೆದ ಸಂಘದ ವಿಶೇಷ ರಾಜ್ಯ ಕಾರ್ಯಕಾರಿಣಿ ಸಭೆಯಲ್ಲಿ ಈ ನಿರ್ಣಯವೂ ಸೇರಿದಂತೆ ಒಟ್ಟು ಮೂರು ನಿರ್ಣಯ ಕೈಗೊಳ್ಳಲಾಯಿತು.

ಎನ್‌ಪಿಎಸ್ ಬದಲಿಗೆ ಒಪಿಎಸ್ ಜಾರಿಯ ಸಾಧ್ಯತೆಗಳ ಕುರಿತು ಪರಿಶೀಲಿಸಲು ರಾಜ್ಯ ಸರ್ಕಾರ ಸಮಿತಿ ರಚಿಸಿರುವುದು ಸಮಯವನ್ನು ಹಾಳು ಮಾಡುತ್ತ ಮುಂದೂಡುವ ತಂತ್ರಗಾರಿಕೆಯಾಗಿದೆ. ಹೀಗಾಗಿ ಸಮಿತಿಯನ್ನು ವಿರೋಧಿಸುವುದು ಹಾಗೂ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಮತದಾರರ ಪಟ್ಟಿಯಿಂದ ಕರ್ನಾಟಕ ರಾಜ್ಯ ಸರ್ಕಾರಿ ಎನ್‌ಪಿಎಸ್ ನೌಕರರ ಸಂಘದ ಅಧ್ಯಕ್ಷರು ಮತ್ತು ಪದಾಧಿಕಾರಿಗಳ ಹೆಸರುಗಳನ್ನು ಕೈ ಬಿಟ್ಟಿರುವುದನ್ನು ವಿರೋಧಿಸುವ ನಿರ್ಣಯವೂ ಇದರಲ್ಲಿ ಸೇರಿದೆ.

ದಾವಣಗೆರೆಯಲ್ಲಿ ಭಾನುವಾರ ನಡೆದ ಕರ್ನಾಟಕ ರಾಜ್ಯ ಸರ್ಕಾರಿ ಎನ್‌ಪಿಎಸ್ ನೌಕರರ ಸಂಘದ ವಿಶೇಷ ರಾಜ್ಯ ಕಾರ್ಯಕಾರಿಣಿ ಸಭೆಯಲ್ಲಿ ಪದಾಧಿಕಾರಿಗಳು ಪಾಲ್ಗೊಂಡಿದ್ದರು

ಸಂಘಟನೆಯ ರಾಜ್ಯ ಘಟಕದ ಅಧ್ಯಕ್ಷ ಶಾಂತಾರಾಮ ತೇಜ್ ಅವರು ಸಭೆಯಲ್ಲಿ ಕೈಗೊಂಡ ನಿರ್ಣಯಗಳನ್ನು ಪಠಿಸಿದರು.

'ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಮತದಾರರ ಪಟ್ಟಿಯಿಂದ ಎನ್‌ಪಿಎಸ್ ನೌಕರರ ಸಂಘದ ಅಧ್ಯಕ್ಷರು ಮತ್ತು ಪದಾಧಿಕಾರಿಗಳ ಹೆಸರನ್ನು ಕೈಬಿಟ್ಟಿರುವುದು ಸಂಘಟನೆಯನ್ನು ಹತ್ತಿಕ್ಕುವ ಕ್ರಮವಾಗಿದೆ. ಇದು ಚುನಾವಣಾ ತಂತ್ರವಾಗಿದ್ದು, ಅದಕ್ಕೆ ಬೆದರುವುದಿಲ್ಲ' ಎಂದು ಸಂಘದ ಪ್ರಧಾನ ಕಾರ್ಯದರ್ಶಿ ಸಿದ್ದಪ್ಪ ಸಂಗಣ್ಣನವರ ಹೇಳಿದರು.

ರಾಜ್ಯ ಘಟಕದ ಪ್ರಮುಖರು ಸೇರಿದಂತೆ ವಿವಿಧ ಜಿಲ್ಲೆಗಳ ಪದಾಧಿಕಾರಿಗಳು ಸಭೆಯಲ್ಲಿ ಭಾಗವಹಿಸಿದ್ದರು.

ಒಡಿಶಾ ಹೈಕೋರ್ಟ್‌ನ ನಿವೃತ್ತ ನ್ಯಾ. ಎಸ್.ಮುರಳೀಧರ ಅಭಿಮತ

'ಐಸಿಡಿಎಸ್‌ಗೆ ಕಾನೂನಿನ ಬಲ ಅಗತ್ಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಮಗ್ರ ಶಿಶು ಅಭಿವೃದ್ಧಿ ಯೋಜನೆಗೆ (ಐಸಿಡಿಎಸ್) ಕಾನೂನಿನ ಬಲ ನೀಡಿದರೆ, ದೇಶದಲ್ಲಿರುವ ಅಪೌಷ್ಟಿಕತೆಯಿಂದ ಬಳಲುತ್ತಿರುವ ಮಕ್ಕಳ ಪ್ರಮಾಣವನ್ನು ತಗ್ಗಿಸಲು ಸಾಧ್ಯವಿದೆ' ಎಂದು ಒಡಿಶಾ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಎಸ್. ಮುರಳೀಧರ ಭಾನುವಾರ ಅಭಿಪ್ರಾಯಪಟ್ಟರು.

'ಐಸಿಡಿಎಸ್ ಉಳಿಸಿ– ಮಕ್ಕಳನ್ನು ರಕ್ಷಿಸಿ ವೇದಿಕೆ' ಆಯೋಜಿಸಿದ್ದ 'ಐಸಿಡಿಎಸ್ ಯೋಜನೆಯಿಂದ ಕಾಯ್ದೆಯೆಡೆಗೆ– ಪೌಷ್ಟಿಕತೆ ಮತ್ತು ಪೂರ್ವ ಪ್ರಾಥಮಿಕ ಶಿಕ್ಷಣದ ಹಕ್ಕಿನೆಡೆಗೆ' ಕುರಿತ ಎರಡು ದಿನದ ವಿಚಾರ ಸಂಕಿರಣದ ಉದ್ಘಾಟನಾ ಸಮಾರಂಭದಲ್ಲಿ ಅವರು, 'ಐಸಿಡಿಎಸ್ ಅನ್ನು ಕಾನೂನಾಗಿ ಮಾರ್ಪಾಡು ಮಾಡಬೇಕು' ಎಂದು ಪ್ರತಿಪಾದಿಸಿದರು.

2011ರ ಜನಗಣತಿಯ ಅಂಕಿಅಂಶಗಳ ಪ್ರಕಾರ, 'ದೇಶದ ಒಟ್ಟು ಜನಸಂಖ್ಯೆಯಲ್ಲಿ ಶೇ 15ರಷ್ಟು ಮಕ್ಕಳಿದ್ದಾರೆ (15 ಕೋಟಿ). ಇದರಲ್ಲಿ ಶೇ 43ರಷ್ಟು ಮಕ್ಕಳು ಪೌಷ್ಟಿಕಾಂಶದ ಕೊರತೆಯಿಂದ ಬಳಲುತ್ತಿದ್ದಾರೆ. ಇಂಥ ಮಕ್ಕಳು ಬೆಳೆದ ಮೇಲೆ ದೇಶಕ್ಕೆ ಯಾವ ರೀತಿಯಲ್ಲಿ ಕೊಡುಗೆ ಕೊಡಲು ಸಾಧ್ಯ? ಹೀಗೆಯೇ ಮುಂದುವರಿದರೆ, ಆ ಮಕ್ಕಳ ಭವಿಷ್ಯ ಏನು? ಇಂಥ ಅಂಶಗಳನ್ನು ಅರ್ಥ ಮಾಡಿಕೊಂಡರೆ, ಐಸಿಡಿಎಸ್ ಮಹತ್ವವೂ ಅರ್ಥವಾಗುತ್ತದೆ' ಎಂದರು.

ವಿಚಾರಸಂಕಿರಣದಲ್ಲಿ ಇಂಡಿಯನ್ ಸ್ಟ್ಯಾಟಿಸ್ಟಿಕಲ್ ಇನ್‌ಸ್ಟಿಟ್ಯೂಟ್‌ನ ಪ್ರೊ.ಮಧುರಾ ಸ್ವಾಮಿನಾಥನ್, ಒಡಿಶಾ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಎಸ್. ಮುರಳೀಧರ, ವಿಶ್ರಾಂತ ಕುಲಪತಿ ಪ್ರೊ.ಸಬಿಹಾ ಭೂಮಿಗೌಡ, ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರ ಅಖಿಲ ಭಾರತ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಎ.ಆರ್.ಸಿಂಧು ಮತ್ತು ವೇದಿಕೆಯ ಸಂಚಾಲಕಿ ಎಸ್. ವರಲಕ್ಷ್ಮಿ ಅವರು ಪಾಲ್ಗೊಂಡಿದ್ದರು – ಪ್ರಜಾವಾಣಿ ಚಿತ್ರ

> **ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ಶಾಲಾ ಶಿಕ್ಷಣ ಸಚಿವರು ಪರಸ್ಪರ ವಿಶ್ವಾಸ, ಬದ್ಧತೆಯಿಂದ ಕೆಲಸ ಮಾಡಿದರೆ, ಐಸಿಡಿಎಸ್ ಯೋಜನೆಯನ್ನು ಕಾಯ್ದೆಯಾಗಿಸಲು ಸಾಧ್ಯವಾಗುತ್ತದೆ**
> **ಪ್ರೊ.ಸಬಿಹಾ ಭೂಮಿಗೌಡ**
> ವಿಶ್ರಾಂತ ಕುಲಪತಿ

ಇಂಡಿಯನ್ ಸ್ಟ್ಯಾಟಿಸ್ಟಿಕಲ್ ಇನ್‌ಸ್ಟಿಟ್ಯೂಟ್‌ನ ಪ್ರೊ.ಮಧುರಾ ಸ್ವಾಮಿನಾಥನ್ ಮಾತನಾಡಿ 'ಅಂಗನವಾಡಿ ಕೇಂದ್ರಗಳನ್ನು ಬಲಪಡಿಸಿದರೆ, ಮಕ್ಕಳ ಆರೋಗ್ಯ ಮತ್ತು ಶಿಕ್ಷಣದ ಬಗ್ಗೆ ಹೆಚ್ಚಿನ ಕೆಲಸ ಮಾಡಲು ಸಾಧ್ಯವಾಗುತ್ತದೆ' ಎಂದು ಹೇಳಿದರು.

'2024ರ ಅಂಕಿ ಅಂಶಗಳ ಪ್ರಕಾರ, ಒಂದು ದಿನಕ್ಕೆ ಒಬ್ಬ ಮಹಿಳೆಗೆ ಪೌಷ್ಟಿಕಾಂಶಯುಕ್ತ ಆಹಾರಕ್ಕಾಗಿ ₹82 ವೆಚ್ಚ ಮಾಡಬೇಕಿದೆ. ಅಂಗನವಾಡಿ ಕಾರ್ಯಕರ್ತೆಯರಿಗೆ ಕನಿಷ್ಠ ವೇತನ ನಿಗದಿಪಡಿಸುವಾಗ ಈ ಅಂಶಗಳನ್ನೆಲ್ಲ ಗಮನದಲ್ಲಿಟ್ಟುಕೊಳ್ಳಬೇಕು' ಎಂದು ಸಲಹೆ ನೀಡಿದರು.

ಅಂಗನವಾಡಿ ಕಾರ್ಯಕರ್ತೆಯರ ಮತ್ತು ಸಹಾಯಕಿಯರ ಅಖಿಲ ಭಾರತ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಎ.ಆರ್.ಸಿಂಧು ಮಾತನಾಡಿ, 'ಕೇಂದ್ರ ಸರ್ಕಾರ, ಮೂರು ವರ್ಷಗಳ ಬಜೆಟ್‌ನಲ್ಲಿ ಐಸಿಡಿಎಸ್ ಯೋಜನೆಯ ಶೇ 40ರಷ್ಟು ಅನುದಾನ ಕಡಿತಗೊಳಿಸಿದೆ. ಯೋಜನೆಗಳಿಗೆ 'ಪೋಷಣ್'ನಂತಹ ಚಂದದ ಹೆಸರುಗಳನ್ನು ಇಡುತ್ತಾರೆಯೇ ಹೊರತು, ಒಂದು ಪೈಸೆ ಅನುದಾನ ಹೆಚ್ಚಿಸಿಲ್ಲ' ಎಂದು ಆಕ್ಷೇಪಿಸಿದರು.

'ಕೇಂದ್ರ ಸರ್ಕಾರ ಸೆಪ್ಟೆಂಬರ್ ತಿಂಗಳನ್ನು 'ಪೋಷಣ್ ಮಾಸ' ಎಂದು ಆಚರಿಸಲು ಹೇಳಿದೆ. ಆದರೆ ಈ ತಿಂಗಳಲ್ಲಿ ಅಂಗನವಾಡಿ ಕಾರ್ಯಕರ್ತೆಯರು ತಾವೇ ಕೈಯಿಂದ ಹಣ ವ್ಯಯಿಸಿ ಪೋಷಣ್ ಮಾಸಾಚರಣೆ ಮಾಡಬೇಕಾದ ಪರಿಸ್ಥಿತಿ ಇದೆ' ಎಂದರು. ವೇದಿಕೆಯ ಸಂಚಾಲಕಿ ಎಸ್. ವರಲಕ್ಷ್ಮಿ ಪ್ರಾಸ್ತಾವಿಕವಾಗಿ ಮಾತನಾಡಿದರು.

ಕುತೂಹಲ ಕೆರಳಿಸಿದ ಪರಮೇಶ್ವರ–ಸತೀಶ ಭೇಟಿ

ಪ್ರಜಾವಾಣಿ ವಾರ್ತೆ

ತುಮಕೂರು: ದೆಹಲಿಯಲ್ಲಿ ಈಚೆಗೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಕಂಡು ರಾಜ್ಯ ರಾಜಕೀಯ ಬೆಳವಣಿಗೆಗಳ ಬಗ್ಗೆ ಚರ್ಚೆ ನಡೆಸಿದ್ದ ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಭಾನುವಾರ ನಗರದಲ್ಲಿ ಗೃಹ ಸಚಿವ ಜಿ.ಪರಮೇಶ್ವರ ಅವರನ್ನು ಭೇಟಿಯಾಗಿ ಚರ್ಚೆ ನಡೆಸಿದರು.

ಪರಮೇಶ್ವರ ಭೇಟಿಯ ನಂತರ ಸುದ್ದಿಗಾರರ ಜತೆ ಮಾತನಾಡಿದ ಸತೀಶ ಜಾರಕಿಹೊಳಿ, 'ಬೇರೆ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಇಲ್ಲಿಗೆ ಬಂದಿದ್ದೆ. ಹಾಗೆಯೇ ಪರಮೇಶ್ವರ ಅವರನ್ನು ಭೇಟಿ ಮಾಡಿದೆ. ಇಬ್ಬರೂ ಕುಳಿತು ಊಟ ಮಾಡಿದೆವು' ಎಂದರು.

ಭೇಟಿ ವೇಳೆ ರಾಜಕೀಯ ಚರ್ಚೆ ಆಗಿಲ್ಲ. ರಾಜ್ಯದಲ್ಲಿ ದಲಿತ ಸಿ.ಎಂ ಪ್ರಸ್ತಾವನೆ ಸದ್ಯಕ್ಕಿಲ್ಲ. ಮುಖ್ಯಮಂತ್ರಿ ಸ್ಥಾನ ಖಾಲಿ ಇಲ್ಲ. ಸಿ.ಎಂ ಬದಲಾವಣೆಯ ಸನ್ನಿವೇಶ ಬರುವುದಿಲ್ಲ ಎಂದರು.

'ನಾವು ಎಲ್ಲರೂ ಸಿದ್ದರಾಮಯ್ಯ ಜತೆ ನಿಂತಿದ್ದೇವೆ. ಸರ್ಕಾರವನ್ನು ಅಸ್ಥಿರ ಮಾಡಲು ಬಿಡುವುದಿಲ್ಲ. ಸತೀಶ ಭೇಟಿ ಮಾಡಿ ಊಟ ಮಾಡಿಕೊಂಡು ಹೋಗಿದ್ದಾರೆ. ಬೇರೆ ಯಾವುದೇ ಚರ್ಚೆಯಾಗಿಲ್ಲ' ಎಂದು ಪರಮೇಶ್ವರ ಕೂಡ ಹೇಳಿದರು.

ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಅವರು ಗೃಹ ಸಚಿವ ಪರಮೇಶ್ವರ ಅವರನ್ನು ತುಮಕೂರಿನಲ್ಲಿ ಭಾನುವಾರ ಭೇಟಿಯಾಗಿ ಚರ್ಚಿಸಿದರು

'ಜಾರಕಿಹೊಳಿ ಮುಂದಿನ ಸಿ.ಎಂ....' ಘೋಷಣೆ

ಬೆಳಗಾವಿ/ತುಮಕೂರು: ಬೆಳಗಾವಿಯ ಕುಮಾರ ಗಂಧರ್ವ ರಂಗಮಂದಿರದಲ್ಲಿ ಜಿಲ್ಲಾ ವಾಲ್ಮೀಕಿ ಸಮಾಜ ಭಾನುವಾರ ಆಯೋಜಿಸಿದ್ದ ಜಿಲ್ಲಾಮಟ್ಟದ ವಾಲ್ಮೀಕಿ ಸಮಾಜದ ಸಮ್ಮೇಳನದಲ್ಲಿ ಮತ್ತು ತುಮಕೂರಿನಲ್ಲಿ ದಲಿತ ಸಂಘರ್ಷ ಸಮಿತಿ ಹಮ್ಮಿಕೊಂಡಿದ್ದ ರಾಜ್ಯ ಸರ್ವ ಸದಸ್ಯರ ಮಹಾ ಅಧಿವೇಶನದ ಸಮಾರೋಪ ಸಮಾರಂಭದಲ್ಲಿ 'ಮುಂದಿನ ಮುಖ್ಯಮಂತ್ರಿ ಸಚಿವ ಸತೀಶ ಜಾರಕಿಹೊಳಿ' ಎಂಬ ಘೋಷಣೆ, ಜೈಕಾರ ಮೊಳಗಿದವು.

ಮಹಾರಾಷ್ಟ್ರದ ಮುಖಂಡ ವಸಂತರಾವ್ ಚವ್ಹಾಣ, 'ಜಾರಕಿಹೊಳಿ ಅವರಿಗೆ ಸಹಕಾರ ನೀಡೋಣ. ಸದ್ಯದಲ್ಲೇ ಸಿಹಿಸುದ್ದಿ ಕೊಡಲಿದ್ದಾರೆ' ಎಂದರು. ವೇದಿಕೆ ಮುಂಭಾಗದಲ್ಲಿದ್ದ ಬೆಂಬಲಿಗರು ಘೋಷಣೆಗಳನ್ನು ಕೂಗಿದರು. ಜಿಲ್ಲಾ ವಾಲ್ಮೀಕಿ ಸಮಾಜದ ಅಧ್ಯಕ್ಷ ರಾಜಶೇಖರ ತಳವಾರ, 'ಜಾರಕಿಹೊಳಿ ಮುಖ್ಯಮಂತ್ರಿ ಆಗಲಿ ಎಂಬ ನಿರ್ಣಯವನ್ನು ಅಂಗೀಕರಿಸಲಾಗಿದೆ' ಎಂದರು.

ಸತೀಶ ಜಾರಕಿಹೊಳಿ ಅವರು ತುಮಕೂರಿನಲ್ಲಿ ವೇದಿಕೆಗೆ ಆಗಮಿಸುತ್ತಿದ್ದಂತೆ ವೇದಿಕೆಯಲ್ಲಿದ್ದವರು 'ಮುಂದಿನ ಮುಖ್ಯಮಂತ್ರಿ' ಎಂದು ಘೋಷಣೆ ಕೂಗಿದರು. ಕಾರ್ಯಕರ್ತರು, ಪ್ರೇಕ್ಷಕರು ಇದಕ್ಕೆ ಧ್ವನಿಗೂಡಿಸಿದರು.

YAMAHA RACING
The call of the BLUE
ದಸರಾ ವೈಭವ
SCENE FESTIVE ಮಗಾ
FZ-S FI VERSION 4.0
CASHBACK UP TO ₹5000*
LOW DOWN PAYMENT STARTING FROM ₹7999*
fascino 125 Fi HYBRID
CASHBACK UP TO ₹4000*
LOW DOWN PAYMENT STARTING FROM ₹2999*
*Offer applicable on select variants. Limited period Offer. T&C Apply
FZ-FI: STARTING FROM ₹1 06 000* (Ex-Showroom Price in Karnataka)
FASCINO: STARTING FROM ₹81 870* (Ex-Showroom Price in Karnataka for Drum)
Garuda Wheels, Hoskote, Ph: 9035040171; Whitefield Yamaha, Whitefield, Ph: 9606061054; Mahadevapura, Ph: 9148086668; Motoworld: Bommanahalli, Ph: 080-69643030; Chandapura, Ph: 080-69643030; Bangalore Wheels: Rajajinagar, Ph: 9964156618; Vijayanagar, Ph: 9611920002; Malathahalli, Ph: 9916610017; Kengeri, Ph: 9916610022; Perfect Riders: Lalbagh Road, Ph: 8497816000; Jayanagar, Ph: 8497816000; Pacer Yamaha: Hebbal, Ph: 6360237411; Kalyan Nagar, Ph: 9902607629; RR Nagar, Ph: 7624818307; Vidyaranyapura, Ph: 9036690334; Vinayak Motors: Domlur, Ph: 9591072222; Kormangala, Ph: 9035961010; Laxmi International, Bannerghatta Road, Ph: 9739364819; Chandan Motors, Banashankari, Ph: 9606861911; Geetha Motors: Nelamangala, Ph: 7619628882, Peenya, Ph: 8951954565; Panache Enterprises: Indiranagar, Ph: 9844011961; Marathahalli, Ph: 9844011961; I Yamaha Automotives, K R Puram, Ph: 8088448844; Srijaya Motors, Yalahanka, Ph: 7406622213, 7406622218; Sree Geetha Motors, Tumkur, Ph: 6364885726; Sri RV Advent Ride, Kolar, Ph: 9071374827; Xtreme Motors, Chikkaballapur, Ph: 9353279001; Yamaha Bike Corner: Varthur: Touch Yamaha, Ph: 9986547353; Anekal: Anekal Yamaha Motors, Ph: 9972909455; Devanahalli: Nandi Bikes, Ph: 9739030606; Magadi: Sri Narashima Motors, Ph: 9482090890; Tiptur: Jenukallu Yamaha, Ph: 7892862641; Mulbagal: Sri RV Advent Ride, Ph: 9071374830; Kunigal: Manjunathaswamy Yamaha, Ph: 7411979755; Chintamani: Xtreme Motors, Ph: 9353279001; Attibele: Moto World, Ph: 8884452700; Dommasandra: Moto World, Ph: 8884452899.

ರಾಜ್ಯ ಒಕ್ಕಲಿಗರ ಸಂಘ
ಕೃಷ್ಣರಾಜೇಂದ್ರ ರಸ್ತೆ, ವಿಶ್ವೇಶ್ವರಪುರ, ಬೆಂಗಳೂರು–560 004.
ಅಭಿನಂದನೆಗಳು
ಕೆಂಪೇಗೌಡ ವೈದ್ಯಕೀಯ ಮಹಾವಿದ್ಯಾಲಯದ (ಕಿಮ್ಸ್)
ಎಂ.ಬಿ.ಬಿ.ಎಸ್ ನ 150 ಸೀಟುಗಳಿಂದ 250 ಸೀಟುಗಳಿಗೆ
(100) ಹೆಚ್ಚಳವಾಗಲು ಸಹಕರಿಸಿರುವ
ಭಾರತದ ಪ್ರಧಾನಮಂತ್ರಿಗಳಾದ ಸನ್ಮಾನ್ಯ ಶ್ರೀ ನರೇಂದ್ರ ಮೋದಿ ಜೀ ಅವರಿಗೆ,
ಮಾಜಿ ಪ್ರಧಾನಮಂತ್ರಿಗಳು ಹಾಗೂ ರಾಜ್ಯಸಭಾ ಸದಸ್ಯರಾದ
ಸನ್ಮಾನ್ಯ ಶ್ರೀ ಹೆಚ್.ಡಿ.ದೇವೇಗೌಡರಿಗೆ,
ಭಾರತ ಸರ್ಕಾರದ ಬೃಹತ್ ಕೈಗಾರಿಕೆ ಹಾಗೂ ಉಕ್ಕು ಖಾತೆ ಸಚಿವರಾದ
ಸನ್ಮಾನ್ಯ ಶ್ರೀ ಹೆಚ್.ಡಿ.ಕುಮಾರಸ್ವಾಮಿ ಅವರಿಗೆ
ಮತ್ತು ಭಾರತ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಖಾತೆ ಸಚಿವರಾದ
ಸನ್ಮಾನ್ಯ ಶ್ರೀ ಜೆ.ಪಿ.ನಡ್ಡಾ ಅವರಿಗೆ
ರಾಜ್ಯ ಒಕ್ಕಲಿಗರ ಸಂಘದ ವತಿಯಿಂದ
ತುಂಬು ಹೃದಯದ ಅಭಿನಂದನೆಗಳು
ಶ್ರೀ ಸಿ.ಎನ್.ಬಾಲಕೃಷ್ಣ
ಅಧ್ಯಕ್ಷರು, ರಾಜ್ಯ ಒಕ್ಕಲಿಗರ ಸಂಘ
ಹಾಗೂ ಶಾಸಕರು, ಶ್ರವಣಬೆಳಗೊಳ ವಿಕ್ಷೇತ್ರ
: ಸಂಘದ ನಿರ್ದೇಶಕರು :
ಶುಭಕೋರುವವರು: ರಾಜ್ಯ ಒಕ್ಕಲಿಗರ ಸಂಘದ ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿ ಸದಸ್ಯರುಗಳು,
ಕೆಂಪೇಗೌಡ ಮಹಾವಿದ್ಯಾಲಯದ ಅಧಿಕಾರಿಗಳು, ರಾ.ಒ.ಸಂಘದ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರು.

60 Years of Excellence 1962-2022 Margadarsi
RAMOJI GROUP
ನಂಬಿಕೆಯಲ್ಲಿ ಬೇರೂರಿದೆ.
ಒಟ್ಟಿಗೆ ಬೆಳೆಯುವುದು.
ಕರ್ನಾಟಕದ ಚಿಕ್ಕಬಳ್ಳಾಪುರದಲ್ಲಿ ನಮ್ಮ
115 ನೇ
ಶಾಖೆಯ ಉದ್ಘಾಟನೆಗೆ ಸುಸ್ವಾಗತ
ಚಿಕ್ಕಬಳ್ಳಾಪುರದಲ್ಲಿರುವ ನಮ್ಮ ಹೊಸ ಶಾಖೆಯು ನಿಮ್ಮ ಆರ್ಥಿಕ ಮೈಲಿಗಲ್ಲುಗಳನ್ನು ಸಾಧಿಸಲು ನಿಮಗೆ ಸಹಾಯ ಮಾಡುವ ನಮ್ಮ ಅಚಲ ಬದ್ಧತೆಯನ್ನು ಸಂಕೇತಿಸುತ್ತದೆ. ನಮ್ಮನ್ನು ಭೇಟಿ ಮಾಡಿ ಮತ್ತು ನಿಮಗೆ ಉಳಿಸಲು, ಲಾಭಾಂಶಗಳನ್ನು ಗಳಿಸಲು ಮತ್ತು ಅಗತ್ಯವಿರುವ ಸಮಯದಲ್ಲಿ ಒಂದು ದೊಡ್ಡ ಮೊತ್ತವನ್ನು ಹಿಂಪಡೆಯುವಂತಹ ಸ್ವಾತಂತ್ರ್ಯವನ್ನು ಒದಗಿಸಲು ಸಹಾಯ ಮಾಡುವಂತೆ ವಿನ್ಯಾಸಗೊಳಿಸಲಾದ ನಮ್ಮ ವೈವಿಧ್ಯಮಯ ಚಿಟ್ ಯೋಜನೆಗಳೊಂದಿಗೆ ಸಾಧ್ಯತೆಗಳ ಜಗತ್ತನ್ನು ಅನ್ವೇಷಿಸಿ. ಮಾರ್ಗದರ್ಶಿ ಚಿಟ್‌ಗೆ ಚಂದಾದಾರರಾಗಿರಿ ಮತ್ತು ಜೀವನವನ್ನು ಹೆಚ್ಚು ಸುಲಭಗೊಳಿಸಿರಿ.
ಮಾರ್ಗದರ್ಶಿ
ಚಿಟ್ಸ್ (ಕರ್ನಾಟಕ) ಪ್ರೈವೇಟ್ ಲಿಮಿಟೆಡ್
ಮಾರ್ಗದರ್ಶಿಯೊಂದಿಗೆ ನಿಮ್ಮ ಯೋಜನೆಗಳು ಜೀವನ ಸರಳ
www.margadarsi.com
ಶ್ರೀ ಲಕ್ಷ್ಮೀ ವೆಂಕಟೇಶ್ವರ ಕಾಂಪ್ಲೆಕ್ಸ್, ಶ್ರೀ ಶನಿ ಮಹಾತ್ಮ
ಸ್ವಾಮಿ ದೇವಸ್ಥಾನದ ಎದುರು, ಬಿ.ಬಿ.ರಸ್ತೆ, ಚಿಕ್ಕಬಳ್ಳಾಪುರ – 562 101.
Manager Cell No. 87469 43777 | CUG No. 76187 94467
For more details scan this QR-Code
Scan QR for direction
1962ರಲ್ಲಿ ಸ್ಥಾಪಿತವಾಗಿದೆ
60ಲಕ್ಷಕ್ಕಿಂತ ಹೆಚ್ಚಿನ ಚಂದಾದಾರರಿಗೆ ಸೇವೆ ಸಲ್ಲಿಸಿದ್ದೇವೆ
ಕ್ಯುಮುಲೇಟಿವ್ ಆಕ್ಷನ್ ಟರ್ನೋವರ್ ₹9,396 ಕೋಟಿ
ಕರ್ನಾಟಕ, ತೆಲಂಗಾಣ, ಆಂಧ್ರಪ್ರದೇಶ್ ಮತ್ತು ತಮಿಳುನಾಡುಗಳಲ್ಲಿ 115 ಶಾಖೆಗಳು

Conquer every journey with Kia.
Bring home a Kia this Dussehra and get a chance to win Kia Seltos.
Carens
Sonet
Seltos
KIA
Movement that inspires
Make the choice this Dussehra and avail irresistible privileges and benefits on your favorite Kia. Visit your nearest dealership today to start your victory lap.
Scratch the card to get an assured gift*
Bumper Prize Kia Seltos
Couple's trip to Dubai (up to ₹1 Lakh*)
iPhone 15 128GB
Air Purifier
Smart Speaker
Air Fryer
Car Vacuum Cleaner
Cash Back of ₹5 000*/-
Choose Your Gift
Benefit Voucher up to ₹2 000*/-
Exclusive ownership benefits
Exchange & Loyalty Benefits~ up to ₹60 000 (On Seltos)
Extended Warranty** up to ₹26 500 (On Seltos and Carens)
Additional Benefits^ up to ₹54 000 (On Seltos, Sonet and Carens)
Hassle-free exchange services
New car with old EMI*- packaged exchange deal on your new car
Car evaluation at your convenience
Best price for your old car
Hassle-free transfer of ownership
Complete assurance of your car going into the right hands
Additional benefits for select corporates (consumer, accessory, extended warranty and maintenance package benefits).
Kia cars are now available through Canteen Stores Department (CSD) & Kendriya Police Kalyan Bhandar (KPKB).
For more information, visit our dealership or contact:
1800 108 5000 | 093195 91407 | www.kia.com/in | Book Kia | kiacare@kiaindia.net | Look for "Kia India"
Advaith Kia: Lalbagh Main Road | Banashankari | Basaveshwar Nagar | Magadi Road, Tel: 9611006006 Epitome Kia: Whitefield, Tel: 9606970216; Yelahanka, Tel: 7406343309; Kolar, Tel: 8951903224; Avalahalli, Tel: 7022317666 JSP Kia: Hosur Road, Tel: 9606011244; Bellandur, Tel: 9071077717; Sarjapur, Tel: 9513138856 Naara Kia: J.P Nagar, Tel: 7406528200; Kanakapura Road, Bangalore, Tel: 9071010099 PPS Kia: Mysore Road, Tel: 6309990010; Tumkur, Tel: 6303622210 Taapasi Kia: Kalyan Nagar, Tel: 8095537777; Kormangala, Tel: 9071177333 VST Kia: Palace Road: Tel: 9606988123; Yeshwanthpur: Tel: 9606988124

ಶಿಕ್ಷಣ

ಈ ವರ್ಷಾಂತ್ಯದಿಂದಲೇ ಓದನ್ನು ಯೋಜಿತಗೊಳಿಸಿ, ಪರೀಕ್ಷಾ ತಯಾರಿಗೆ ಸಿದ್ಧರಾಗಿ. ಕೊನೆಗಳಿಗೆಯ ಪರಿಶ್ರಮಕ್ಕಿಂತಲೂ ಯೋಜಿತ ಅಧ್ಯಯನ ಹೆಚ್ಚು ಫಲಕಾರಿ



ಕಲಿಕೆಯಲ್ಲಿರಲಿ ಕೃಷಿಯ ಒಡನಾಟ

ಭಾರತಿ. ಎ. ಕೊಪ್ಪ

ಶಿಕ್ಷಣದಲ್ಲಿ ಕೃಷಿಯನ್ನು ಕಲಿಯಬೇಕು ಎಂದರೆ ಮಕ್ಕಳು ಪದವಿವರೆಗೂ ಕಾಯಬೇಕು. ಅದರ ಬದಲು ಶಾಲಾ ದಿನಗಳಲ್ಲಿಯೇ ಕೈತೋಟದ ಜೊತೆಗೆ ಕೃಷಿಯನ್ನೂ ಹೇಳಿಕೊಟ್ಟರೆ ಮಣ್ಣಿನೊಂದಿಗೆ ಅವರ ಸಂಬಂಧ ಗಟ್ಟಿಯಾಗಿ ಬೇರೂರುತ್ತದೆ. ಪ್ರಾಥಮಿಕ, ಪ್ರೌಢ ಹಂತದಲ್ಲಿಯೇ ಕೃಷಿ ಶಿಕ್ಷಣದಲ್ಲಿರಬೇಕು ಯಾಕೆ..? ಇಲ್ಲಿದೆ ವಿವರ

ಅಂದು ಮಕ್ಕಳ ಬಳಿ ಪಾಠ ನಡುವೆ ಎಷ್ಟು ಮಂದಿ ಭತ್ತದ ಗದ್ದೆ ನಾಟಿ ನೋಡಿದ್ದೀರಿ? ಎಂದಾಗ, ತರಗತಿಯಲ್ಲಿ ಅರ್ಧಭಾಗದಷ್ಟು ಮಕ್ಕಳಿಂದ ನಾವು ನೋಡಿಲ್ಲ ಎಂಬ ಉತ್ತರ ಬಂದಿತು.ಇಂದಿನ ಆಧುನಿಕ ಶಿಕ್ಷಣದಲ್ಲಿ ಕೃಷಿ ಚಟುವಟಿಕೆಗಳ ಬಗ್ಗೆ ಪಠ್ಯ ಪುಸ್ತಕದ ಜ್ಞಾನವನ್ನು ಕಂಠಪಾಠ ಮಾಡಿಯೋ,ಸ್ಮಾರ್ಟ್ ಕ್ಲಾಸ್ ತರಗತಿಯಲ್ಲಿ ನೋಡಿಯೋ ಮಾತ್ರ ಮಕ್ಕಳು ತಿಳಿಯುತ್ತಾರೆ.ಅದರ ಹೊರತಾಗಿ ಕೃಷಿ ಚಟುವಟಿಕೆಗಳನ್ನು ಖುದ್ದಾಗಿ ವೀಕ್ಷಿಸಿ ಪ್ರಾಯೋಗಿಕ ಕಲಿಕೆಗೆ ತೆರೆದುಕೊಂಡರೆ ಕಲಿಕೆ ಹೆಚ್ಚು ಫಲಪ್ರದವಾಗುತ್ತದೆ.

ಭತ್ತದ ಗದ್ದೆಯ ಬಿತ್ತನೆ, ನಾಟಿ,ಪೈರು ಕಟಾವುಯೆಂಬುದು ಕೃಷಿ ಸಂಸ್ಕೃತಿಯ ಹೆಗ್ಗುರುತಾಗಿದೆ.ಆಯಾ ಪ್ರದೇಶದ ಆಹಾರ ಪದ್ಧತಿಗೆ ಅನುಗುಣವಾಗಿ ಜೋಳ,ಗೋಧಿ,ರಾಗಿ ಈ ಎಲ್ಲಾ ಬೆಳೆಗಳನ್ನು ಬೆಳೆಯುವ ವಿಧಾನ ಮಕ್ಕಳಿಗೆ ಅರಿವು ಮೂಡಬೇಕು.ಭತ್ತದ ಬೆಳೆ ಪ್ರಧಾನವಾಗಿರುವಲ್ಲಿ ಮಕ್ಕಳು ಗದ್ದೆಗಳಲ್ಲಿ ರೈತರ ಜೊತೆಗೆ ಕನಿಷ್ಠ ಒಂದು ದಿನವಾದರೂ ಭಾಗಿಯಾಗಲು ಶಿಕ್ಷಕರು ಅವಕಾಶ ಮಾಡಿಕೊಡಬೇಕಿದೆ.ಇದರಿಂದಾಗಿ ಮಕ್ಕಳಿಗೆ ಗ್ರಾಮೀಣ ಬದುಕಿನ ಕೆಲಸ ಕಾರ್ಯಗಳ ಬಗ್ಗೆ ಗೌರವ ಬೆಳೆಯುತ್ತದೆ.ಅದಲ್ಲದೇ ಆಯಾ ಕಾಲಘಟ್ಟಗಳಲ್ಲಿ ಭತ್ತದ ಬೆಳೆ ಬೆಳೆಯುವಲ್ಲಿ ಸಾಂಪ್ರದಾಯಿಕ ಪದ್ಧತಿ ಹಾಗೂ ಯಾಂತ್ರೀಕೃತ ಪದ್ಧತಿಗಳ ಪ್ರಾಮುಖ್ಯತೆ ತಿಳಿಯುತ್ತದೆ. ಬಿತ್ತನೆ,ನಾಟಿ,ಕಳೆ ತೆಗೆಯುವುದು, ಕಟಾವು,ಧಾನ್ಯ ಬೇರ್ಪಡಿಸುವಿಕೆ ಈ ಎಲ್ಲ ಹಂತಗಳ ವೀಕ್ಷಣೆ ಮಕ್ಕಳಿಗೆ ಋತುಮಾನಕ್ಕನುಗುವಾಗಿ ಕೃಷಿ ಚಟುವಟಿಕೆ ಸಾಗುವ ಬಗೆಯನ್ನು ತಿಳಿಸಿಕೊಡುತ್ತದೆ.ಮಕ್ಕಳು ಪ್ರಾಯೋಗಿಕವಾಗಿ ಕಲಿಯುವ ಈ ಚಟುವಟಿಕೆ ಕೇವಲ ಭತ್ತದ ಬೆಳೆಗೆ ಸೀಮಿತವಾಗಿರದೆ ಆಯಾ ಭೌಗೋಳಿಕ ಪರಿಸರದ ಎಲ್ಲಾ ಆಹಾರ ಬೆಳೆಗಳ ಬಗೆಗಿನ ತಿಳುವಳಿಕೆ ಬೆಳೆಸಿಕೊಳ್ಳಲು ಸಹಕಾರಿಯಾಗಿದೆ.

ವಾಣಿಜ್ಯ ಬೆಳೆಗಳನ್ನು ಬೆಳೆಯುವ,ಅದನ್ನು ಮಾರುಕಟ್ಟೆಗೆ ಸಾಗಿಸುವ, ವ್ಯಾಪಾರ ಮಾಡುವ ವಿಧಾನವು ಆಹಾರ ಬೆಳೆಗಳಿಗಿಂತ ಭಿನ್ನವಾಗಿರುತ್ತದೆ.ಲವಂಗ, ಏಲಕ್ಕಿ, ಅರಶಿನ ,ಕಾಫಿ,ಟೀ,ಇಂತಹ ಬೆಳೆಗಳನ್ನು ಬೆಳೆಯುವ ವಿಧಾನವನ್ನು ಮಕ್ಕಳಿಗೆ ಪರಿಚಯ ಮಾಡಿಕೊಡಬೇಕಿದೆ.ಅಡಿಕೆ,ಕಾಳು ಮೆಣಸಿನಂತಹ ಬೆಳೆಗಳು ಅತಿವೃಷ್ಟಿಯಿಂದ ಕೊಳೆರೋಗಕ್ಕೆ ತುತ್ತಾಗದಂತೆ ತಡೆಯಲು ರೈತರು ಸಾಮಾನ್ಯವಾಗಿ ಮೈಲುತುತ್ತದ ದ್ರಾವಣ ಬಳಸುತ್ತಾರೆ.ಮೈಲು ತುತ್ತ(ಕಾಪರ್ ಸಲ್ಫೇಟ್), ಸುಣ್ಣ ಮತ್ತು ರಾಳವನ್ನು (ಅಂಟು ಪದಾರ್ಥ) ಸರಿಯಾದ ಪ್ರಮಾಣದಲ್ಲಿ ಮಿಶ್ರ ಮಾಡಿ ದ್ರಾವಣ ತಯಾರಿಸುವ ವಿಧಾನ ಮತ್ತು ಮರದ ತುತ್ತ ತುದಿಗೆ ಆ ದ್ರಾವಣವನ್ನು ಸಿಂಪಡಿಸುವ ರೀತಿಯನ್ನು ಮಕ್ಕಳು ವೀಕ್ಷಣೆ ಮಾಡಲು ಅವಕಾಶ ನೀಡಿದಾಗ ಗಣಿತ ಮತ್ತು ವಿಜ್ಞಾನ ಎರಡೂ ವಿಷಯಗಳ ಪ್ರಾಯೋಗಿಕ ಕಲಿಕೆಯಾದಂತಾಗುತ್ತದೆ.ಕೃಷಿ ಪರಿಕರಗಳನ್ನು ಕೇವಲ ವಸ್ತು ಸಂಗ್ರಹಾಲಯಗಳಲ್ಲಿ ನೋಡದೆ ಆ ಪರಿಕರಗಳನ್ನು ನೈಜವಾಗಿ ನೋಡಿ,ಅದರ ನಿರ್ದಿಷ್ಟ ಉಪಯೋಗ ತಿಳಿಯುವುದು ಮಕ್ಕಳಿಗೆ ಒಂದು ವಿಶೇಷ ಅನುಭವ ನೀಡುತ್ತದೆ.

ತೋಟ ವೀಕ್ಷಣೆ ಕೇವಲ ಪ್ರಾಯೋಗಿಕ ಕಲಿಕೆಗೆ ನೆರವು ನೀಡುವುದಲ್ಲದೆ,ತೋಟದಲ್ಲಿ ಕಾಣಸಿಗುವ ಬಗೆ ಬಗೆಯ ಕೀಟಗಳು,ಹಳ್ಳ-ತೊರೆಯಂಚಿನಲ್ಲಿ ಕಾಣ ಸಿಗುವ ಏಡಿ ,ಕಪ್ಪೆಯಂತಹ ಜಲಚರಗಳನ್ನು ಮಕ್ಕಳು ಕುತೂಹಲದಿಂದ ವೀಕ್ಷಿಸುತ್ತಾರೆ. ಪ್ರಶ್ನಿಸುವ,ತರ್ಕಿಸುವ ಕೌಶಲಗಳನ್ನು ಪಡೆಯುತ್ತಾರೆ. ನೀರಿನ ಸದುಪಯೋಗ, ಸಂರಕ್ಷಣೆ, ನೀರಾವರಿ ವಿಧಾನಗಳ ಬಗ್ಗೆ ತಿಳಿಯುವುದರ ಮೂಲಕ ನೀರಿನ ಸಂರಕ್ಷಣೆಯ ಪ್ರಾಮುಖ್ಯತೆಯನ್ನು ತಿಳಿಸಿಕೊಡಲು ಶಾಲೆಯ ಹೊರಗೆ ನಡೆಯುವ ಈ ಕಲಿಕೆ ಸಹಾಯಕವಾಗುತ್ತದೆ.

ಕೃಷಿ ಭೂಮಿಗೆ ತೆರಳುವ ಕಾಲುದಾರಿ, ಬೇಲಿ, ಮಲೆನಾಡಿನ ಭಾಗದ ಹಳ್ಳಗಳ ಕಾಲು ಸಂಕ (ಮರದ ಸಹಾಯದಿಂದ ನಿರ್ಮಿಸಿದ ಕಿರು ಸೇತುವೆ),ಗದ್ದೆಯಂಚಿನಲ್ಲಿ ಕೆಸರಿನ ದಾರಿಯ ಹೆಜ್ಜೆಗಳು ಮಕ್ಕಳ ಬಾಲ್ಯಕ್ಕೊಂದು ಅದ್ಭುತವಾದ ನೆನಪಿನ ಬುತ್ತಿಯನ್ನು ಕಟ್ಟಿಕೊಡುತ್ತವೆ. ಕೆಲವೆಡೆ ತೋಟಗಳಲ್ಲಿ ಕಾಣಸಿಗುವ ತಿಗಣೆ(ಇಂಬಳ) ದಂತಹ ಹುಳುಗಳು ರಕ್ತ ಹೀರುವುದು,ಮುಟ್ಟಿದರೆ ಮುನಿಯಂತಹ ಸಣ್ಣ ಜಾತಿಯ ಮುಳ್ಳುಗಳು ಕಾಲಿಗೆ ತಾಗುವುದು ಇವೆಲ್ಲವೂ ರೈತಾಪಿ ಜನಗಳ ಜೀವನದ ದೈನಂದಿನ ಜೀವನದ ಭಾಗವೇ ಆಗಿದೆ ಎಂಬುದನ್ನು ಮಕ್ಕಳ ಅರಿವಿಗೆ ತರಲು ಈ ರೀತಿಯ ಕೃಷಿ ದರ್ಶನ ಚಟುವಟಿಕೆ ಸಹಾಯಕವಾಗುತ್ತದೆ.

ರೈತರು ಮತ್ತು ಕೃಷಿ ಕಾರ್ಮಿಕರ ಜೊತೆಗೆ ಮುಕ್ತವಾಗಿ ಮಾತನಾಡುವ ಅವಕಾಶ ನೀಡಿದಾಗ,ಮಕ್ಕಳ ಕುತೂಹಲಗಳಿಗೆ ಉತ್ತರ ಸಿಕ್ಕಂತಾಗುತ್ತದೆ.ಪಠ್ಯದಲ್ಲಿ ಕೇವಲ ನಿರ್ದಿಷ್ಟ ಸಾಲುಗಳಲ್ಲಿ ಕಲಿಯುವ ,ಅದರಿಂದ ಪಡೆಯುವ ಮಾಹಿತಿಗಿಂತ ರೈತರ ಸ್ವ ಅನುಭವದ ಮಾತುಗಳು ಮಕ್ಕಳ ಯೋಚನೆಯ ಹರಿವನ್ನು ಇನ್ನಷ್ಟು ವಿಶಾಲಗೊಳಿಸುತ್ತವೆ."ಕೈ ಕೆಸರಾದರೆ ಬಾಯಿ ಮೊಸರು" ಎಂಬ ನೈಜ ಜೀವನದ ಚಿತ್ರಣ ಮಕ್ಕಳಿಗೆ ಸಿಗಲು ಇಂತಹ ಕೃಷಿಯೊಂದಿಗಿನ ಒಡನಾಟದ ಪೂರಕ ಚಟುವಟಿಕೆಗಳನ್ನು ಶಿಕ್ಷಕರು ಹಮ್ಮಿಕೊಳ್ಳುವಂತಾಗಬೇಕು. ಪೋಷಕರು ಕೂಡ ಮಕ್ಕಳ ರಜಾ ದಿನಗಳಲ್ಲಿ ಕೃಷಿ ಕಾಯಕದ ವೀಕ್ಷಣೆಗೆ ಅವಕಾಶ ಸಿಕ್ಕಾಗ ಸದುಪಯೋಗಪಡಿಸಿಕೊಳ್ಳುವಂತೆ ಪ್ರೋತ್ಸಾಹಿಸುವುದು ಸೂಕ್ತ.

ವಿದ್ಯಾರ್ಥಿ ವೇತನ ಕೈಪಿಡಿ

ಟಾಟಾ ಕ್ಯಾಪಿಟಲ್ ಪಂಖ್ ಸ್ಕಾಲರ್‌ಷಿಪ್

ಟಾಟಾ ಕ್ಯಾಪಿಟಲ್ ಲಿಮಿಟೆಡ್‌ನ ಉಪಕ್ರಮವಾಗಿದ್ದು, ಸಮಾಜದಲ್ಲಿ ಆರ್ಥಿಕವಾಗಿ ಹಿಂದುಳಿದ ವರ್ಗಕ್ಕೆ ಸೇರಿದ ವಿದ್ಯಾರ್ಥಿಗಳಿಗೆ ನೆರವು ನೀಡಲಿದೆ.

ಅರ್ಹತೆ: ಪ್ರಸ್ತುತ 11, 12ನೇ ತರಗತಿಗಳಲ್ಲಿರುವ, ಸಾಮಾನ್ಯ ಗ್ರಾಜುಯೇಶನ್ (ಬಿ.ಕಾಂ., ಬಿ.ಎಸ್‌ಸಿ, ಬಿಎ ಇತ್ಯಾದಿ), ಡಿಪ್ಲೊಮಾ ಮತ್ತು ಐಟಿಐ ಕೋರ್ಸ್‌ಗಳನ್ನು ಅಭ್ಯಾಸ ಮಾಡುತ್ತಿರುವ ಭಾರತೀಯ ವಿದ್ಯಾರ್ಥಿಗಳು ಅರ್ಹರಾಗಿರುತ್ತಾರೆ. ಅರ್ಜಿದಾರರು ತಮ್ಮ ಹಿಂದಿನ ತರಗತಿಯಲ್ಲಿ ಕನಿಷ್ಠ ಶೇ 60 ಅಂಕಗಳನ್ನು ಗಳಿಸಿರಬೇಕು. ಅರ್ಜಿದಾರರ ಕುಟುಂಬದ ವಾರ್ಷಿಕ ಆದಾಯವು ಎಲ್ಲಾ ಮೂಲಗಳಿಂದ ₹2.5 ಲಕ್ಷ ಅಥವಾ ಅದಕ್ಕಿಂತ ಕಡಿಮೆ ಇರಬೇಕು.

ಆರ್ಥಿಕ ಸಹಾಯ: ₹10,000ದಿಂದ ರೂ.12,000ದ ವರೆಗಿನ ಮೊತ್ತ ಅಥವಾ ಕೋರ್ಸ್ ಶುಲ್ಕದ ಶೇ 80(ಯಾವುದು ಕಡಿಮೆಯೋ ಅದು).

ಅರ್ಜಿ ಸಲ್ಲಿಸಲು ಕೊನೆ ದಿನ: 15-10-2024

ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನಲ್ಲಿ ಅರ್ಜಿ ಹಾಕಿ.

ಹೆಚ್ಚಿನ ಮಾಹಿತಿಗೆ: Short Url: www.b4s.in/praja/TCPS27

ಸಂತೂರ್ ಸ್ಕಾಲರ್‌ಷಿಪ್

ಹಿಂದುಳಿದ ಹಿನ್ನೆಲೆಗೆ ಸೇರಿದ ಯುವತಿಯರಿಗೆ ನೆರವು ನೀಡಲಿದೆ.

ಅರ್ಹತೆ: ಹಿಂದುಳಿದ ಹಿನ್ನೆಲೆಗೆ ಸೇರಿದ ಯುವತಿಯರಿಗೆ ಲಭ್ಯವಿರುತ್ತದೆ. ಸ್ಥಳೀಯ ಸರ್ಕಾರಿ ಶಾಲೆಯಿಂದ 10ನೇ ತರಗತಿಯಲ್ಲಿ ಉತ್ತೀರ್ಣರಾಗಿರಬೇಕು. 2023-24ರ ಶೈಕ್ಷಣಿಕ ವರ್ಷದಲ್ಲಿ ಸರ್ಕಾರಿ ಶಾಲೆ ಅಥವಾ ಜೂನಿಯರ್ ಕಾಲೇಜಿನಿಂದ 12ನೇ ತರಗತಿಯಲ್ಲಿ ಉತ್ತೀರ್ಣರಾಗಿರಬೇಕು. ಹ್ಯುಮಾನಿಟೀಸ್, ಲಿಬರಲ್ ಆರ್ಟ್ಸ್ ಅಂಡ್ ಸೈನ್ಸ್‌ನಲ್ಲಿ ಉನ್ನತ ಶಿಕ್ಷಣವನ್ನು ಪಡೆಯಲು ಅತ್ಯಂತ ಆಸಕ್ತರಾಗಿರುವ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು.

ಆರ್ಥಿಕ ಸಹಾಯ: ₹ 24,000

ಅರ್ಜಿ ಸಲ್ಲಿಸಲು ಕೊನೆ ದಿನ: 15-10-2024

ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನ್ ಅರ್ಜಿಗಳು ಮಾತ್ರ! ವಿದ್ಯಾರ್ಥಿಗಳು ಆನ್‌ಲೈನ್‌ನಲ್ಲಿ ಬಡ್ಡಿ4ಸ್ಟಡಿಯಲ್ಲಿ ಅರ್ಜಿ ಸಲ್ಲಿಸಬಹುದು ಅಥವಾwww.santoorscholarship.com ನಿಂದ ಅರ್ಜಿಯನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು.

ಹೆಚ್ಚಿನ ಮಾಹಿತಿಗೆ: Short Url: www.b4s.in/praja/SWS7

ಪಿಯುಸಿ ನಂತರದ ಅವಕಾಶಗಳೇನು?

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

1.ಸರ್, ನಾನು ಪಿಯುಸಿ ಮಾಡುತ್ತಿದ್ದು ಮುಂದೆ ಬಿಟೆಕ್ (ಆಹಾರ ತಂತ್ರಜ್ಞಾನ) ಮಾಡಬೇಕು. ಈ ಕೋರ್ಸ್ ಮಾಹಿತಿ, ನಂತರದ ಅವಕಾಶಗಳೇನು?

ಹೆಸರು, ಊರು ತಿಳಿಸಿಲ್ಲ.

ಆಹಾರ ತಂತ್ರಜ್ಞಾನ ಕ್ಷೇತ್ರದ ಪದವೀಧರರಿಗೂ ಹೆಚ್ಚಿನ ಬೇಡಿಕೆಯಿದೆ. ಈ ಕ್ಷೇತ್ರದಲ್ಲಿ ಆಸಕ್ತಿಯಿದ್ದರೆ, ಬಿಟೆಕ್ (ಆಹಾರ ತಂತ್ರಜ್ಞಾನ) ಕೋರ್ಸ್ ಮಾಡಿ, ವೃತ್ತಿಜೀವನವನ್ನು ರೂಪಿಸಿಕೊಳ್ಳಬಹುದು.

ಈ ಕೋರ್ಸ್ ನಂತರ, ಸರ್ಕಾರಿ ಮತ್ತು ಖಾಸಗಿ ಕ್ಷೇತ್ರದ ಆಹಾರ ಪದಾರ್ಥ ಮತ್ತು ಪಾನೀಯ ತಯಾರಿಕಾ ಉದ್ದಿಮೆಗಳು, ಆಹಾರ ಸಂಬಂಧಿತ (ಕೃತಕ ಮತ್ತು ನೈಸರ್ಗಿಕ ಸಂರಕ್ಷಕಗಳು, ಬಣ್ಣಗಳು, ಸ್ವಾದಗಳು ಇತ್ಯಾದಿ) ಉದ್ದಿಮೆಗಳು, ಕೃಷಿ ಉದ್ದಿಮೆಗಳು, ಸಾವಯವ ಉದ್ದಿಮೆಗಳು, ಹೋಟೆಲ್ಸ್ ಮತ್ತು ರೆಸ್ಟೋರೆಂಟ್ಸ್, ಆಸ್ಪತ್ರೆಗಳು, ಶಿಕ್ಷಣ ಸಂಸ್ಥೆಗಳು, ಫಾರ್ಮಾ ಉದ್ದಿಮೆಗಳು, ಸಂಶೋಧನಾ ಸಂಸ್ಥೆಗಳು, ಆಹಾರ ಪರೀಕ್ಷಾ ಪ್ರಯೋಗಾಲಯಗಳು ಸೇರಿದಂತೆ ಹಲವಾರು ಕ್ಷೇತ್ರಗಳಲ್ಲಿ ವಿಪುಲವಾದ ಉದ್ಯೋಗಾವಕಾಶಗಳಿವೆ. ಬಿಟೆಕ್ ನಂತರ ಎಂಟೆಕ್ ಮಾಡಿ, ಈ ಕ್ಷೇತ್ರದಲ್ಲಿ ಹೆಚ್ಚಿನ ತಜ್ಞತೆಯನ್ನು ಪಡೆಯಬಹುದು. ವೃತ್ತಿಯ ಅನುಭವದ ನಂತರ ಸ್ವಂತ ಉದ್ದಿಮೆಯನ್ನೂ ಪ್ರಾರಂಭಿಸಬಹುದು. ಹೆಚ್ಚಿನ ಮಾರ್ಗದರ್ಶನಕ್ಕಾಗಿ ಈ ವಿಡಿಯೊ ವೀಕ್ಷಿಸಿ: https://www.youtube.com/watch?v=r6vHcwlCiY8

2.ನನ್ನ ಮಗ ಮೊದಲ ವರ್ಷದ ಪಿಯುಸಿ (ಪಿಸಿಎಂಐ) ಓದುತ್ತಿದ್ದು, ದ್ವಿತೀಯ ಪಿಯುಸಿ ನಂತರ, ಯಾವ ಕೋರ್ಸ್‌ಗೆ ಹೆಚ್ಚಿನ ಉದ್ಯೋಗಾವಕಾಶಗಳಿವೆ?

ಹೆಸರು, ಊರು ತಿಳಿಸಿಲ್ಲ.

ಪಿಯುಸಿ ನಂತರದ ಕೋರ್ಸ್ ಆಯ್ಕೆಗಳಲ್ಲಿ ಈಗ ವಿಪುಲತೆಯೂ ವೈವಿಧ್ಯತೆಯೂ ಇದೆ. ಯಾವುದೇ ಕೋರ್ಸ್ನ ಫಲಿತಾಂಶ ಉತ್ಕೃಷ್ಟವಾಗಿದ್ದರೆ ಆಕರ್ಷಕವಾದ ಉದ್ಯೋಗಾವಕಾಶಗಳಿವೆ. ಹಾಗಾಗಿ, ವಿದ್ಯಾರ್ಥಿಗಳ ಆಸಕ್ತಿ, ಅಭಿರುಚಿ ಮತ್ತು ಸ್ವಾಭಾವಿಕ ಪ್ರತಿಭೆಯಂತೆ ವೃತ್ತಿಯೋಜನೆಯನ್ನು ಮಾಡಿ ಅದಕ್ಕೆ ಅನುಗುಣವಾಗಿ ಕೋರ್ಸ್ ಆಯ್ಕೆ ಮಾಡುವುದು ಸೂಕ್ತ..

ಹೆಚ್ಚಿನ ಮಾರ್ಗದರ್ಶನಕ್ಕಾಗಿ ಈ ವಿಡಿಯೊ ವೀಕ್ಷಿಸಿ: https://www.youtube.com/watch?v=AwlDno1YduQ

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ಇತಿಹಾಸ

ಅಧ್ಯಾಯ – 3 ಭಾರತದಲ್ಲಿ ಬ್ರಿಟಿಷ್ ಆಳ್ವಿಕೆಯ ಪರಿಣಾಮಗಳು

2) ಬ್ರಿಟಿಷ್ ಕಾಲದಲ್ಲಿ ಪೊಲೀಸ್ ವ್ಯವಸ್ಥೆಯಲ್ಲಿ ಆದ ಬದಲಾವಣೆಗಳ ಕುರಿತು ಬರೆಯಿರಿ

ಉತ್ತರ:– (.........ಹಿಂದಿನ ಸಂಚಿಕೆಯಿಂದ)

1793ರಲ್ಲಿ ಪ್ರತಿ ಜಿಲ್ಲೆಯನ್ನು 'ಠಾಣೆ'ಗಳನ್ನಾಗಿ ವಿಭಜಿಸಿ ಪ್ರತಿ ಠಾಣೆಯನ್ನು 'ಕೊತ್ವಾಲ'ರ ಅಧೀನದಲ್ಲೂ, ಹಳ್ಳಿಗಳು 'ಚೌಕಿದಾರ'ರ ಅಧೀನದಲ್ಲೂ ಇರುವಂತೆ ಮಾಡಿದನು. ಕೊತ್ವಾಲರುಗಳು ಹಳ್ಳಿಗಳ ಮಟ್ಟದಲ್ಲಿ ಕಳ್ಳತನ, ಅಪರಾಧಗಳು, ದರೋಡೆಗಳ ನಿಯಂತ್ರಣದ ಜವಾಬ್ದಾರಿಯನ್ನು ಹೊತ್ತಿದ್ದರು. 1770ರ ದಶಕದಲ್ಲಿ ಭೀಕರ ಕ್ಷಾಮಭೀತಿಯಿಂದ ಕಾನೂನು ಸುವ್ಯವಸ್ಥೆಯ ಸಮಸ್ಯೆ ವಿಷಮಗೊಳ್ಳತೊಡಗಿತು. ಇದರ ಪರಿಣಾಮವಾಗಿ ಇಡೀ ಪೊಲೀಸ್ ವ್ಯವಸ್ಥೆಯನ್ನು ಬ್ರಿಟಿಷ್ ಅಧಿಕಾರಿಗಳ ಅಧೀನಕ್ಕೊಳಪಡಿಸಲಾಯಿತು. 1781ರಲ್ಲಿ ಬ್ರಿಟಿಷ್ ಮ್ಯಾಜಿಸ್ಟ್ರೇಟ್‌ಗಳನ್ನು ನೇಮಕ ಮಾಡುವ ಪದ್ಧತಿ ಜಾರಿಗೊಂಡಿತು. ಪೊಲೀಸ್ ಅಧಿಕಾರಿಗಳು ಮ್ಯಾಜಿಸ್ಟ್ರೇಟ್‌ಗಳ ಅಧೀನಕ್ಕೊಳಪಟ್ಟರು. ಪೊಲೀಸ್ ವ್ಯವಸ್ಥೆಯು ನಿರಂತರ ಬದಲಾವಣೆಗೆ ಒಳಗಾಯಿತು. 1861ರಲ್ಲಿ 'ಪೊಲೀಸ್ ಕಾಯ್ದೆ'ಯನ್ನು ಜಾರಿಗೊಳಿಸಲಾಯಿತು. ಈ ಕಾಯ್ದೆಯೆ ಕಾನೂನು ಮತ್ತು ಸುವ್ಯವಸ್ಥೆ ಆಡಳಿತಕ್ಕೆ ಮುಖ್ಯ ಅಡಿಪಾಯವಾಯಿತು. ಆದರೆ ಅಧಿಕಾರಿಗಳ ನೇಮಕಾತಿಯಲ್ಲಿ ಭಾರತೀಯರಿಗೆ ಅವಕಾಶವಿರಲಿಲ್ಲ. 1902ರ ಪೊಲೀಸ್ ಕಮಿಷನ್ ಕಾಯ್ದೆಯು ವಿದ್ಯಾರ್ಹತೆಯನ್ನು ಪಡೆದವರನ್ನು ಅಧಿಕಾರಿ ಹುದ್ದೆಗೆ ನೇಮಿಸುವ ಅವಕಾಶವನ್ನು ಕಲ್ಪಿಸಿತು. ಇಷ್ಟಾದರೂ ಭಾರತೀಯರ ಬಗೆಗೆ ಇದ್ದ ತಾರತಮ್ಯ ಕಡಿಮೆಯಾಗಲಿಲ್ಲ.

3) ಬ್ರಿಟಿಷ್ ಕಾಲದ ಸೈನಿಕ ವ್ಯವಸ್ಥೆಯ ಬಗ್ಗೆ ಬರೆಯಿರಿ.

ಉತ್ತರ: ಬ್ರಿಟಿಷರ ಕಾಲದ ಆಡಳಿತ ವ್ಯವಸ್ಥೆಯಲ್ಲಿ ಸೈನ್ಯವು ಆಧಾರ ಸ್ತಂಭವಾಗಿತ್ತು. ಭಾರತೀಯರನ್ನೇ ಸೈನ್ಯದಲ್ಲಿ ಸೇರಿಸಿಕೊಂಡು ಅವರ ನೆರವಿನಿಂದಲೇ ಭಾರತವನ್ನು ತಮ್ಮ ಅಧೀನಕ್ಕೆ ತೆಗೆದುಕೊಂಡರು. ಸೈನ್ಯದ ಶಕ್ತಿಯನ್ನು ಬಳಸಿಕೊಂಡು ಭಾರತದ ಒಳಗಡೆಯ ತಮ್ಮ ವಿರೋಧ ಶಕ್ತಿಗಳಿಂದ ತಮ್ಮ ಸಾಮ್ರಾಜ್ಯವನ್ನು ರಕ್ಷಿಸಿಕೊಂಡರು. ಅಧಿಕಾರಿಗಳು ಬ್ರಿಟಿಷರೇ ಆಗಿದ್ದರು. ಭಾರತೀಯರಿಗೆ ಲಭಿಸುತ್ತಿದ್ದ ಅತ್ಯುನ್ನತ ಹುದ್ದೆಯೆಂದರೆ ಸುಬೇದಾರ್ ಸ್ಥಾನ. ಬಹುತೇಕ ಭಾರತೀಯ ಸೈನಿಕರು ಕೂಲಿ ಸೈನಿಕರಾಗಿದ್ದರು. 1857ರ ಘಟನೆಯ ನಂತರ ಪೀಲ್ ನೇತೃತ್ವದಲ್ಲಿ ಸಮಿತಿಯೊಂದನ್ನು ರಚಿಸಿ ಶಿಫಾರಸ್ಸುಗಳನ್ನು ಪಡೆಯಿತು. ಈ ಶಿಫಾರಸ್ಸಿ ಆಧಾರದ ಮೇಲೆ ಸೈನಿಕ ವ್ಯವಸ್ಥೆಯನ್ನು ಮರು ವಿನ್ಯಾಸಗೊಳಿಸಿತು

4) ಜಮೀನ್ದಾರಿ ಪದ್ಧತಿ ಬಗ್ಗೆ ಬರೆಯಿರಿ

ಉತ್ತರ:– ವಾರ್ಷಿಕವಾಗಿ ನಿರ್ದಿಷ್ಟ ಕಂದಾಯದ ಹಣವನ್ನು ಪಡೆಯಲು ಲಾರ್ಡ್ ಕಾರ್ನ್‌ವಾಲೀಸನು 1793ರಲ್ಲಿ ಬಂಗಾಳ ಮತ್ತು ಬಿಹಾರ ಪ್ರಾಂತ್ಯಗಳಲ್ಲಿ ಹೊಸ ಕಂದಾಯ ಪದ್ಧತಿಯನ್ನು ಜಾರಿಗೊಳಿಸಿದನು. ಇದನ್ನು ಖಾಯಂ ಜಮೀನ್ದಾರಿ ಪದ್ಧತಿ ಎಂದು ಕರೆಯಲಾಯಿತು. ಈ ಪದ್ಧತಿಯಲ್ಲಿ ಜಮೀನ್ದಾರನು ಭೂಮಾಲೀಕನಾದನು. ಈ ಹೊಸ ಯೋಜನೆಯ ಪ್ರಕಾರ ಜಮೀನ್ದಾರನು ಪ್ರತಿವರ್ಷವೂ ನಿರ್ದಿಷ್ಟ ದಿನಕ್ಕೆ ಮೊದಲೇ ಅವನು ಒಪ್ಪಿಕೊಂಡಿದ್ದ ಕಂದಾಯದ ಮೊತ್ತವನ್ನು ಸರಕಾರಕ್ಕೆ ಸಲ್ಲಿಸಬೇಕಿತ್ತು. ಭೂಮಾಲೀಕನಿಗೆ ಈ ಪದ್ಧತಿಯಿಂದ ಹೆಚ್ಚಿನ ಲಾಭವಾಯಿತು.

5) ಜಮೀನ್ದಾರಿ ಪದ್ಧತಿಯಿಂದ ಭೂಮಾಲೀಕನಿಗೆ ಯಾವ ಕಾರಣಕ್ಕಾಗಿ ಹೆಚ್ಚಿನ ಲಾಭವಾಯಿತು?

ಉತ್ತರ:– ಜಮೀನ್ದಾರಿ ಪದ್ಧತಿಯಿಂದ ಭೂಮಾಲೀಕನಿಗೆ ಹೆಚ್ಚಿನ ಲಾಭವಾಯಿತು ಏಕೆಂದರೆ ಸರಕಾರಕ್ಕೆ ಸಲ್ಲಿಸಬೇಕಾದ ಹಣದ ಮೊತ್ತಕ್ಕಿಂತ ಹೆಚ್ಚಿಗೆ ವಸೂಲು ಮಾಡಿದ ಹಣವನ್ನು ಅವನೇ ಇಟ್ಟುಕೊಳ್ಳಬಹುದಾಗಿತ್ತು.

6) ಜಮೀನ್ದಾರಿ ಪದ್ಧತಿ ಜಾರಿಯಾದ ಪ್ರದೇಶಗಳಲ್ಲಿ ಬರಗಾಲ (ಅನಾವೃಷ್ಟಿ) ಅಥವಾ ವಿಪರೀತ ಮಳೆ ಅತಿವೃಷ್ಟಿಯ ಸಂದರ್ಭದಲ್ಲಿ ರೈತನಿಗೆ ಯಾವ ತರಹದ ತೊಂದರೆ ಆಗುತಿತ್ತು?

ಉತ್ತರ:– ಬರಗಾಲ(ಅನಾವೃಷ್ಟಿ) ಅಥವಾ ವಿಪರೀತ ಮಳೆ ಅತಿವೃಷ್ಟಿಯ ಕಾರಣದಿಂದ ಕಂದಾಯವನ್ನು ವಸೂಲಿ ಮಾಡಲು ಸಾಧ್ಯವಾಗದೆ ಸರಕಾರಕ್ಕೆ ಸಲ್ಲಿಸಬೇಕಾದ ಹಣದ ಮೊತ್ತವನ್ನು ಸಲ್ಲಿಸಲಾಗದಿದ್ದರೆ, ಬ್ರಿಟಿಷ್ ಸರಕಾರವೂ ಭೂಮಿಯ ಒಡೆತನವನ್ನು ಅವನಿಂದ ಕಸಿದುಕೊಳ್ಳುತ್ತಿತ್ತು. ಈ ಪದ್ಧತಿಯಿಂದ ಬ್ರಿಟಿಷರಿಗೆ ಮತ್ತು ಜಮೀನ್ದಾರರಿಗೆ ಲಾಭವಾಯಿತೇ ವಿನಾ ರೈತರಿಗಾಗಲಿಲ್ಲ.

7) ಜಮೀನ್ದಾರಿ ಪದ್ಧತಿ ಜಾರಿಯಾದ ಪ್ರದೇಶಗಳಲ್ಲಿ ರೈತರು, ರೈತ ಕೂಲಿಕಾರ್ಮಿಕರ ಸ್ಥಿತಿಗತಿ ಹೇಗಿತ್ತು?

ಉತ್ತರ:– ರೈತರು, ರೈತ ಕೂಲಿಕಾರ್ಮಿಕರು ಜಮೀನ್ದಾರರ ಭೂಮಿಯಲ್ಲಿ ಕೆಲಸ ಮಾಡಲು ನಿರಂತರ ಅವಕಾಶಗಳೂ ಸಿಗದೆ ಬಹುಮುಖಿ ಶೋಷಣೆಗೆ ಒಳಗಾದರು ಅತಂತ್ರ ಸ್ಥಿತಿಯಲ್ಲೇ ಬದುಕನ್ನು ಕಳೆಯತೊಡಗಿದರು.

8) ಜಮೀನ್ದಾರಿ ಪದ್ದತಿ ಕಾಲ ಕ್ರಮೇಣ ಎಲ್ಲೆಲ್ಲಿ ವಿಸ್ತರಣೆಗೆ ಒಳಗಾಯಿತು?

ಉತ್ತರ:– ಈ ಪದ್ಧತಿಯು ಕ್ರಮೇಣ ಒಡಿಶಾ, ಆಂಧ್ರ ಮತ್ತು ವಾರಣಾಸಿ ಪ್ರಾಂತ್ಯಗಳಿಗೆ ವಿಸ್ತರಣೆಯಾಯಿತು.

9) ಬ್ರಿಟಿಷ್ ಭೂಕಂದಾಯ ನೀತಿ ಬಗ್ಗೆ ಚಾರ್ಲ್ಸ್ ಮೆಟಕಾಫ್ ಏನೆಂದು ಹೇಳಿದ್ದಾನೆ?

ಉತ್ತರ:– ಬ್ರಿಟಿಷ್ ಭೂಕಂದಾಯ ನೀತಿಗಳಿಂದ "ಭಾರತದ ರೈತರು ಸಾಲದಲ್ಲೇ ಹುಟ್ಟಿ, ಸಾಲದಲ್ಲೇ ಬದುಕಿ, ಸಾಲದಲ್ಲೇ ಸತ್ತರು". ಎಂದು ಚಾರ್ಲ್ಸ್ ಮೆಟಕಾಫ್ ಹೇಳಿದ್ದಾನೆ.

10) ಮಹಲ್ವಾರಿ ಪದ್ಧತಿ ಪದ್ದತಿ ಬಗ್ಗೆ ವಿವರವಾಗಿ ವಿವರಿಸಿ

ಉತ್ತರ:– ಉತ್ತರ ಪ್ರದೇಶ, ಮಧ್ಯಪ್ರದೇಶದ ಅನೇಕ ಭಾಗಗಳಲ್ಲಿ, ಪಂಜಾಬ್ ಮತ್ತು ದೆಹಲಿ ಪ್ರಾಂತ್ಯಗಳಲ್ಲಿ ಮಹಲ್ಲುಗಳೇ ಸಾಮೂಹಿಕ ಒಪ್ಪಂದಗಳನ್ನು ಮಾಡಿಕೊಂಡು, ಸರಕಾರಕ್ಕೆ ತೆರಿಗೆಯನ್ನು ಸಲ್ಲಿಸುವ ಪದ್ಧತಿಯನ್ನು ಜಾರಿಗೆ ತರಲಾಯಿತು. ಈ ಪದ್ಧತಿಯನ್ನು ಆರ್. ಎಂ. ಬರ್ಡ್ ಮತ್ತು ಜೇಮ್ಸ್ ಥಾಮ್ಸನ್ ಪ್ರಯೋಗಿಸಿದರು. 'ಮಹಲ್' ಎಂದರೆ ತಾಲ್ಲೂಕು ಎಂದರ್ಥ. ಪ್ರಾಂತ್ಯದಿಂದ ಪ್ರಾಂತ್ಯಕ್ಕೆ ಈ ಪದ್ಧತಿಯ ಅನುಷ್ಠಾನದಲ್ಲಿ ವ್ಯತ್ಯಾಸಗಳಿದ್ದವು. ದೊಡ್ಡ ಮತ್ತು ಸಣ್ಣ ಪ್ರಮಾಣದ ಜಮೀನ್ದಾರರು ಈ ಪದ್ಧತಿಯ ಭಾಗವಾಗಿದ್ದರು. ಕಂಪನಿಯ ಸರ್ಕಾರದ ಅಧಿಕಾರಿಗಳು ಜಮೀನಿನಲ್ಲಿ ಆಗುವ ಉತ್ಪಾದನೆಗಿಂತಲೂ ಹೆಚ್ಚಿನ ಮೊತ್ತದ ವಾರ್ಷಿಕ ಪಾವತಿಗಳನ್ನು ನಿರ್ಧರಿಸಿದ್ದರಿಂದ ಅನೇಕ ಜಮೀನ್ದಾರರು ತಮ್ಮ ಭೂಮಾಲಿಕತ್ವವನ್ನು ಕಳೆದುಕೊಂಡರು. ಅವರನ್ನೇ ನೆಚ್ಚಿ ಬದುಕುತ್ತಿದ್ದ ಸಣ್ಣ ಕೃಷಿಕರು, ಕೃಷಿ ಕೂಲಿಕಾರರು ನಿರ್ಗತಿಕರಾದರು.

11) ರೈತವಾರಿ ಪದ್ಧತಿಯನ್ನು ವಿವರಿಸಿ ಬರೆಯಿರಿ

ಉತ್ತರ: ರೈತವಾರಿ ಪದ್ಧತಿಯನ್ನು ಮೊದಲಿಗೆ ಒಂದು ಪ್ರಯೋಗವಾಗಿ ಬಾರಮಹಲ್ ಪ್ರಾಂತ್ಯದಲ್ಲಿ 1792ರಲ್ಲಿ ಅಲೆಕ್ಸಾಂಡರ್ ರೀಡ್ ಎನ್ನುವವನು ಜಾರಿಗೊಳಿಸಿದನು. ಈ ಪದ್ಧತಿಯನ್ನು ಥಾಮಸ್ ಮನ್ರೊ ಮದರಾಸು ಮತ್ತು ಮೈಸೂರು ಪ್ರಾಂತ್ಯಗಳಲ್ಲಿ 1801ರ ನಂತರ ಜಾರಿಗೊಳಿಸಿದನು. ಈ ಕಾಲಘಟ್ಟದಲ್ಲಿಯೇ ಈ ಪ್ರಾಂತ್ಯಗಳ ಬಹುತೇಕ ಭಾಗಗಳು ಕಂಪನಿಯ ಆಡಳಿತಕ್ಕೆ ಒಳಪಟ್ಟಿದ್ದು ಮುಖ್ಯ ಕಾರಣವಾಗಿತ್ತು. ಈ ಪದ್ಧತಿಯ ಪ್ರಕಾರ ಸರಕಾರ ಮತ್ತು ರೈತನ ನಡುವೆ ನೇರ ಸಂಪರ್ಕವನ್ನು ಕಲ್ಪಿಸಲಾಯಿತು. ಭೂಮಿ ಉಳುಮೆ ಮಾಡುತ್ತಿದ್ದವನನ್ನು ಅದರ ಮಾಲೀಕನೆಂದು ಸರ್ಕಾರ ಮಾನ್ಯ ಮಾಡಿತು. ಅವನೇ ನೇರವಾಗಿ ತಾನು ಕೃಷಿ ಭೂಮಿಯಲ್ಲಿ ಪಡೆದ ಉತ್ಪನ್ನದ ಶೇಕಡ 50ರಷ್ಟು ಭಾಗವನ್ನು ಕಂದಾಯದ ರೂಪದಲ್ಲಿ ಸರ್ಕಾರಕ್ಕೆ ಸಲ್ಲಿಸಬೇಕಾಯಿತು. ಕಂದಾಯವನ್ನು 30 ವರ್ಷಗಳ ಅವಧಿಗೆ ಎಂದು ನಿರ್ಧರಿಸಲಾಯಿತು. (ಮುಂದುವರಿಯುವುದು)

ಎಸ್ಸೆಸ್ಸೆಲ್ಸಿ ಸಮಾಜ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ, ಕೇಂದ್ರ

II PUC - Mathematics

INTEGRALS

More Problems:-

1. Explain that method of finding Definite Integral as the limit of a sum.

Ans:- (..........Contd)

Now the following sums are formed -

$$s_n = h[f(x_0)+.......+f(x_{n-1})] = h\sum_{r=0}^{n-1} f(x_r) \text{ and} \quad ....(2)$$

$$S_n = h[f(x_1)+f(x_2)+....+f(x_n)] = h\sum_{r=1}^{n-1} f(x_r) \quad ....(3)$$

Here, s_n and S_n denote the sum of areas of all lower rectangles and upper rectangles raised over subintervals $[x_{r-1}, x_r]$ for r = 1, 2, 3,……n, respectively.

In view of the inequality (1) for an arbitrary subinterval $[x_{r-1}, x_r]$ we have

$s_n <$ area of the region PRSQP $< S_n$

As $n \to \infty$ strips become narrow and narrower, it is assumed that the limiting values of (2) and (3) are the same in both cases and the common limiting value is the required area under the curve. The above written symbolically is –

$$\lim_{n\to\infty} S_n = \lim_{n\to\infty} s_n = \text{area of the region PRSQP}$$

$$= \int_a^b f(x)dx \quad ....(5)$$

It follows that this area is also the limiting value of any area which is between that of the rectangles below the curve and that of the rectangles above the curve. For the sake of convenience, we shall take rectangles with height equal to that of the curve at the left hand edge of each subinterval. Thus, we rewrite (5) as

$$\int_a^b f(x)dx = \lim_{h\to 0} h[f(a)+f(a+h) +.....+f(a+(n-1)h)]$$

$$\text{(or)} \int_a^b f(x)dx = \left\{ (b-a)\lim_{n\to\infty}\frac{1}{n}[f(a)+f(a+h) +......+f(a+(n-1)h)] \right\}$$

Contd/-

where, $h = \frac{b-a}{n} \to 0$ as $n \to \infty$

$$\int_a^b f(x)dx = \left\{ (b-a)\lim_{n\to\infty}\frac{1}{n}[f(a)+f(a+h) +......+f(a+(n-1)h)] \right\}$$

where, $h = \frac{b-a}{n} \to 0$ as $n \to \infty$

is known as the definition of definite integral as the *limit* of *sum*.

Inference - The value of the definite integral of a function over any particular interval depends on the function and the interval, but not on the variable of integration that we choose to represent the independent variable. If the independent variable is denoted by *t* or *u* instead of *x*, we simply write the integral as

$$\int_a^b f(t)\,dt \text{ (or) } \int_a^b f(u)\,du$$

instead of $\int_a^b f(x)\,dx$

Hence, the variable of integration is called a *dummy variable.*

Problems:-

1. Find $\int_0^2 (x^2+1)dx$ as the limit of a sum.

Soln:- We know that

$$\int_a^b f(x)dx = \left\{ (b-a)\lim_{n\to\infty}\frac{1}{n}[f(a)+f(a+h) +......+f(a+(n-1)h)] \right\}$$

where, $h = \frac{b-a}{n} \to 0$ as $n \to \infty$ by definition.

In the above

$$a=0,\ b=2,\ f(x)=x^2+1,\ h=\frac{2-0}{n}=\frac{2}{n}$$

$$\therefore \int_0^2 (x^2+1)dx$$

$$= 2\lim_{n\to\infty}\frac{1}{n}\left[f(0)+f\left(\frac{2}{n}\right)+f\left(\frac{4}{n}\right)+...+f\left(\frac{2(n-1)}{n}\right)\right]$$

$$\Rightarrow 2\lim_{n\to\infty}\frac{1}{n}\left[1+\left(\frac{2^2}{n^2}+1\right)+\left(\frac{4^2}{n^2}+1\right)+...+\left(\frac{2(n-2)^2}{n^2}+1\right)\right]$$

$$\Rightarrow 2\lim_{n\to\infty}\frac{1}{n}\left[\underbrace{(1+1+.......+1)}_{n \text{ terms}}+\frac{1}{n^2}(2^2+4^2+......+(2n-2)^2\right]$$

$$\Rightarrow 2\lim_{n\to\infty}\frac{1}{n}\left[n+\frac{2^2}{n^2}(1^1+2^2+.........+(n-1)^2\right]$$

$$\Rightarrow 2\lim_{n\to\infty}\frac{1}{n}\left[n+\frac{4}{n^2}\frac{(n-1)n(2n-1)}{6}\right]$$

$$\Rightarrow 2\lim_{n\to\infty}\frac{1}{n}\left[n+\frac{2}{3}\frac{(n-1)(2n-1)}{n}\right]$$

$$\Rightarrow 2\lim_{n\to\infty}\left[1+\frac{2}{3}\left(1-\frac{1}{n}\right)\left(2-\frac{1}{n}\right)\right]=2\left(1+\frac{4}{3}\right)=\frac{14}{3}$$

2. Evaluate $\int_0^2 e^2\,dx$ as the limit of a sum. **Soln:-**

We know that

$$\int_a^b f(x)dx = \left\{ (b-a)\lim_{n\to\infty}\frac{1}{n}[f(a)+f(a+h) +......+f(a+(n-1)h)] \right\}$$

where, $h = \frac{b-a}{n} \to 0$ as $n \to \infty$ by definition.

Hence the above eqn becomes

$$\int_0^2 e^x\,dx = (2-0)\lim_{n\to\infty}\frac{1}{n}\left[e^0+e^{\frac{2}{n}}+e^{\frac{4}{n}}+.......+e^{\frac{2n-2}{n}}\right]$$

Using the sum to n terms of a G.P.,

where $a=1,\ r=e^{\frac{2}{n}}$, we have

$$\int_0^2 e^x\,dx = 2\lim_{n\to\infty}\frac{1}{n}\left[\frac{e^{\frac{2n}{n}}-1}{e^{\frac{2}{n}}-1}\right] = 2\lim_{n\to\infty}\frac{1}{n}\left[\frac{e^2-1}{e^{\frac{2}{n}}-1}\right]$$

(Contd…..)

ಸಂಕ್ಷಿಪ್ತ ಸುದ್ದಿ

ದಸರಾ ಕವಿಗೋಷ್ಠಿ ಹಿಂದೆ ಸರಿದ ಬಾನು ಮುಷ್ತಾಕ್

ಮೈಸೂರು: 'ಈ ಬಾರಿಯ ದಸರಾ ಪ್ರಧಾನ (ಸಮೃದ್ಧ) ಕವಿಗೋಷ್ಠಿಯಲ್ಲಿ ಭಾಗವಹಿಸದಿರಲು ತೀರ್ಮಾನಿಸಿದ್ದೇನೆ' ಎಂದು ಲೇಖಕಿ ಬಾನು ಮುಷ್ತಾಕ್ ತಿಳಿಸಿದ್ದಾರೆ.

ಈ ಬಗ್ಗೆ ಫೇಸ್‌ಬುಕ್ ಖಾತೆಯಲ್ಲಿ ಭಾನುವಾರ ಪೋಸ್ಟ್ ಹಾಕಿರುವ ಅವರು, 'ನಾನು ದಸರಾ ಕವಿಗೋಷ್ಠಿಯಲ್ಲಿ ಭಾಗವಹಿಸಲು ಒಪ್ಪಿದ್ದೆ. ಈ ಹಿಂದೆ ನಾನು ದಸರಾ ಕವಿಗೋಷ್ಠಿಯಲ್ಲಿ ಭಾಗವಹಿಸಿದ್ದೆ. ಆದರೆ, ಇತ್ತೀಚಿಗಿನ ಕೆಲವು ಸಂವಾದಗಳನ್ನು ಗಮನಿಸಿದಾಗ, ಬೇರೆಯವರಿಗೆ ಅವಕಾಶಗಳನ್ನು ಕೊಡುವುದು ಕೂಡ ಅಗತ್ಯವೆಂದು ಅನಿಸಿದೆ. ಆದ್ದರಿಂದ ನಾನು 2024ರ ದಸರಾ ಕವಿಗೋಷ್ಠಿಯಲ್ಲಿ ಭಾಗವಹಿಸದೇ ಇರಲು ನಿರ್ಧರಿಸಿದ್ದೇನೆ. ನಿಮಗೆ ಉಂಟಾಗಿರುವ ಅನಾನುಕೂಲಕ್ಕೆ ಕ್ಷಮೆ ಇರಲಿ' ಎಂದು ಬರೆದಿದ್ದಾರೆ.

ಕವಿಗೋಷ್ಠಿಯಲ್ಲಿ ಈ ಹಿಂದೆ ಪಾಲ್ಗೊಂಡಿದ್ದವರಿಗೇ ಮತ್ತೆ ಅವಕಾಶ ಕೊಟ್ಟಿರುವುದು, ದಕ್ಷಿಣ ಕರ್ನಾಟಕದವರಿಗೇ ಹೆಚ್ಚಿನ ಆದ್ಯತೆ ನೀಡಿರುವ ಉಪಸಮಿತಿಯ ನಡೆಯ ಬಗ್ಗೆ ಸಾಮಾಜಿಕ ಜಾಲತಾಣದಲ್ಲಿ ತೀವ್ರ ಆಕ್ಷೇಪ ವ್ಯಕ್ತವಾದ ಕಾರಣದಿಂದ ಅವರು ದೂರ ಉಳಿಯಲು ನಿರ್ಧರಿಸಿದ್ದಾರೆ ಎನ್ನಲಾಗಿದೆ.

'ಕವಿಗೋಷ್ಠಿಯಲ್ಲಿ ಪಾಲ್ಗೊಳ್ಳದಿರಲು ನಿರ್ಧರಿಸಿದ್ದೇನೆ' ಎಂದು ಕವಿ ಆರಿಫ್ ರಾಜಾ ಶನಿವಾರ ತಿಳಿಸಿದ್ದರು. ಸಮೃದ್ಧ ಕವಿಗೋಷ್ಠಿ ಅ.9ರಂದು ನಡೆಯಲಿದೆ

ಸಂಸದ ಕೋಟ ಹೆಸರಿನಲ್ಲಿ ನಕಲಿ ಫೇಸ್‌ಬುಕ್ ಖಾತೆ

ಉಡುಪಿ: ಉಡುಪಿ–ಚಿಕ್ಕಮಗಳೂರು ಲೋಕಸಭಾ ಕ್ಷೇತ್ರದ ಸಂಸದ ಕೋಟ ಶ್ರೀನಿವಾಸ ಪೂಜಾರಿ ಅವರ ಹೆಸರಿನಲ್ಲಿ ಅಪರಿಚಿತರು ನಕಲಿ ಫೇಸ್‌ಬುಕ್ ಖಾತೆ ತೆರೆದು ಹಣಕ್ಕೆ ಬೇಡಿಕೆ ಇಟ್ಟಿರುವ ಕುರಿತು ಉಡುಪಿಯ ಸೆನ್ ಅಪರಾಧ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಶ್ರೀನಿವಾಸ ಪೂಜಾರಿ' ಎಂಬ ಹೆಸರಿನಲ್ಲಿ ನಕಲಿ ಖಾತೆ ಸೃಷ್ಟಿಸಿ, ಅದರ ಪ್ರೊಫೈಲ್ ಚಿತ್ರವಾಗಿ ಸಂಸದರ ಚಿತ್ರವನ್ನು ಬಳಸಿ ವೈಯಕ್ತಿಕ ಗೌರವಕ್ಕೆ ಧಕ್ಕೆ ಉಂಟು ಮಾಡಲಾಗಿದೆ. ಆರೋಪಿಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಸಂಸದರ ಪರ ವಕೀಲ ಶ್ಯಾಮಸುಂದರ ನಾಯರಿ ಎಂಬುವರು ದೂರಿನಲ್ಲಿ ಒತ್ತಾಯಿಸಿದ್ದಾರೆ.

ದಸರಾ: ಈಗಾಗಲೇ ಶೇ 95ರಷ್ಟು ಕೊಠಡಿಗಳ ಬುಕ್ಕಿಂಗ್ • ಪ್ರವಾಸಿ ವಾಹನಗಳಿಗೆ ಪ್ರವೇಶ ತೆರಿಗೆ ವಿನಾಯಿತಿ

ಮೈಸೂರಲ್ಲಿ ಹೋಟೆಲ್ ದರ ದುಬಾರಿ

• ಎಂ. ಮಹೇಶ

ಮುಖ್ಯಾಂಶಗಳು

- ನಗರದಲ್ಲಿವೆ ಕೊಠಡಿಯುಳ್ಳ 400ಕ್ಕೂ ಹೆಚ್ಚು ಹೋಟೆಲ್
- 10,500 ಕೊಠಡಿಗಳಿವೆ
- ಅ.10, 11, 12ರ ದಿನಕ್ಕಾಗಿ ಬಹುತೇಕ ಬುಕ್ಕಿಂಗ್

ಮೈಸೂರು: ನಾಡಹಬ್ಬ ಮೈಸೂರು ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳಲು ಪ್ರವಾಸಿಗರು ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಿರುವ ಕಾರಣ ನಗರ ಮತ್ತು ಹೊರವಲಯದ ಹೋಟೆಲ್, ಲಾಡ್ಜ್‌ಗಳಲ್ಲಿ ಕೊಠಡಿಗಳಿಗೆ ಬೇಡಿಕೆ ಜಾಸ್ತಿಯಾಗಿದೆ. ಅದರಲ್ಲೂ ಉತ್ಸವದ ಪ್ರಮುಖ ಆಕರ್ಷಣೆಯಾದ ವಿಜಯ ದಶಮಿ ಮೆರವಣಿಗೆ (ಜಂಬೂಸವಾರಿ) ನಡೆಯುವ ಅ.12 ಹಾಗೂ ಹಿಂದಿನ ದಿನಕ್ಕೆ ಶೇ 95ರಷ್ಟು ಕೊಠಡಿಗಳು ಈಗಾಗಲೇ ಬುಕ್ ಆಗಿವೆ.

ಪ್ರವಾಸಿಗರು ಕೊಠಡಿಗಳನ್ನು ಮುಂಗಡ ಕಾಯ್ದಿರಿಸುತ್ತಿದ್ದಾರೆ. ಇದರಿಂದಾಗಿ ಹೋಟೆಲ್‌ಗಳಲ್ಲಿ ಕೊಠಡಿಗಳ ಬಾಡಿಗೆ ದರವನ್ನು ಸರಾಸರಿ ಶೇ 10ರಿಂದ ಶೇ 30ರವರೆಗೆ ಹೆಚ್ಚಿಸಲಾಗಿದೆ. ಕೆಲವೇ ದಿನಗಳಲ್ಲಿ ಹೋಟೆಲ್ ಕೊಠಡಿಗಳು ಸಂಪೂರ್ಣ ಭರ್ತಿಯಾಗುವ ನಿರೀಕ್ಷೆ ಇದೆ.

ವಾರಾಂತ್ಯದಲ್ಲಿ ಅಂದರೆ ಶನಿವಾರ ಜಂಬೂಸವಾರಿ ನಡೆಯಲಿದೆ. ಅ.11ರಂದು ಆಯುಧಪೂಜೆ ಹಬ್ಬದ ಅಂಗವಾಗಿ ರಜೆ ಇದೆ. ಜಂಬೂಸವಾರಿ ಮುಗಿದ ಮರುದಿನ ಅಂದರೆ ಅ.13ರಂದು ಭಾನುವಾರವೂ ರಜೆ. ಪ್ರವಾಸಿಗರು ಮೂರು ದಿನಗಳವರೆಗೆ ಮೈಸೂರು ಪ್ರವಾಸಕ್ಕೆ ಪ್ಲಾನ್ ಮಾಡಿಕೊಂಡು ಬರುತ್ತಿದ್ದಾರೆ. ಹೀಗಾಗಿ, ಪ್ರವಾಸೋದ್ಯಮ ಹಾಗೂ ಆತಿಥ್ಯ ಕ್ಷೇತ್ರ ಗರಿಗೆದರಿದೆ. ಕೊಠಡಿಗಳಿಗೆ ಬಹಳಷ್ಟು ವಿಚಾರಣೆಗಳು ಬರುತ್ತಿವೆ ಎಂದು ಆ ಉದ್ಯಮದವರು ತಿಳಿಸಿದರು.

ರಜೆಯ ಕಾರಣ: ನಗರ ಕೇಂದ್ರವೊಂದರಲ್ಲೇ ವಾಸ್ತವ್ಯದ ಕೊಠಡಿಗಳನ್ನು ಹೊಂದಿರುವಂತಹ ಸ್ಟಾರ್ ಹೋಟೆಲ್‌ಗಳು ಸೇರಿದಂತೆ 400ಕ್ಕೂ ಹೆಚ್ಚು ಹೋಟೆಲ್‌ಗಳಿವೆ. ಇವುಗಳಲ್ಲಿ 10,500 ಕೊಠಡಿಗಳು ಲಭ್ಯ ಇವೆ.

ನಾಡಹಬ್ಬ ಮೈಸೂರು ದಸರಾ ಅಂಗವಾಗಿ ಕೆ.ಆರ್. ವೃತ್ತ ವಿದ್ಯುತ್ ದೀಪಾಲಂಕಾರದಿಂದ ಕಂಗೊಳಿಸಿತು ಪ್ರಜಾವಾಣಿ ಚಿತ್ರ: ಅನೂಪ್ ರಾಘ.ಟಿ.

'ನಗರದ ಹೋಟೆಲ್‌ಗಳಲ್ಲಿ, ಜಂಬೂಸವಾರಿ ದಿನ, ಹಿಂದಿನ ದಿನ ಹಾಗೂ ಮುಂದಿನ ದಿನಕ್ಕೆ ರೂಂಗಳು ಈಗಾಗಲೇ ಶೇ 95ರಷ್ಟು ಬುಕ್ ಆಗಿವೆ. ಸಾಲು ಸಾಲು ರಜೆಯ ಕಾರಣದಿಂದಾಗಿ ಇದೇ ಬುಧವಾರವರೆಗೆ ಶೇ 50ರಷ್ಟು ಬುಕ್ ಆಗಿವೆ. ನಂತರದ ದಿನಗಳಲ್ಲಿ ಶೇ 70ರಷ್ಟು ಕೊಠಡಿಗಳನ್ನು ಮುಂಗಡ ಕಾಯ್ದಿರಿಸಲಾಗಿದೆ. ಅ.10ರವರೆಗೆ ನಗರದ ಕೇಂದ್ರದಲ್ಲಿರುವ ಹೋಟೆಲ್‌ಗಳ ಕೊಠಡಿಗಳೆಲ್ಲವೂ ಭರ್ತಿಯಾಗಲಿದೆ' ಎಂದು ಜಿಲ್ಲಾ ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ 'ಪ್ರಜಾವಾಣಿ'ಗೆ ತಿಳಿಸಿದರು.

'ಈ ಬಾರಿ ನಾಡಹಬ್ಬವನ್ನು ಅದ್ದೂರಿಯಾಗಿ ಮಾಡುತ್ತಿರುವುದು, ಕಾರ್ಯಕ್ರಮಗಳನ್ನು ಚೆನ್ನಾಗಿ ನಡೆಸುತ್ತಿರುವುದು, ರಜೆಗಳ ಕಾರಣದಿಂದಾಗಿ ಪ್ರವಾಸಿಗರು ಮೈಸೂರಿನತ್ತ ಬರುತ್ತಿದ್ದಾರೆ.

ಹಿಂದೆ ದಸರಾ ಸಂದರ್ಭದಲ್ಲಿ ಕೇರಳ ಪ್ರವಾಸಿಗರು ಹೆಚ್ಚಿರುತ್ತಿದ್ದರು. ಆದರೆ, ಈ ಬಾರಿ ವಯನಾಡ್ ಭೂಕುಸಿತ ದುರಂತದ ಕಾರಣದಿಂದಾಗಿ ಅಲ್ಲಿನ ಪ್ರವಾಸಿಗರ ಸಂಖ್ಯೆ ಕ್ಷೀಣಿಸಿದೆ

ಸಿ.ನಾರಾಯಣಗೌಡ, ಅಧ್ಯಕ್ಷ, ಜಿಲ್ಲಾ ಹೋಟೆಲ್ ಮಾಲೀಕರ ಸಂಘ

ವಾರಾಂತ್ಯದಲ್ಲಿ ಅವರ ಪ್ರಮಾಣ ಜಾಸ್ತಿ ಕಂಡುಬರುತ್ತಿದೆ. ನೆರೆಯ ತಮಿಳುನಾಡು ಜೊತೆಗೆ, ಆಂಧ್ರ, ತೆಲಂಗಾಣ, ಮಹಾರಾಷ್ಟ್ರ ಮೊದಲಾದ ರಾಜ್ಯಗಳಿಂದ ಪ್ರವಾಸಿಗರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುತ್ತಿದ್ದಾರೆ. ಜಂಬೂಸವಾರಿಗೆ ವಿದೇಶಿ ಪ್ರವಾಸಿಗರನ್ನೂ ನಿರೀಕ್ಷಿಸಲಾಗುತ್ತಿದೆ. ದಸರೆಯೊಂದಿಗೆ ಪ್ರವಾಸಿ ತಾಣಗಳನ್ನು ವೀಕ್ಷಿಸಲು ಪ್ರವಾಸಿಗರು ಕುಟುಂಬ ಸಮೇತ ಬರುತ್ತಿದ್ದಾರೆ' ಎಂದು ಮಾಹಿತಿ ನೀಡಿದರು.

ಸರ್ಕಾರವು, ಪ್ರತಿ ವರ್ಷದಂತೆ ಈ ಬಾರಿಯೂ ಅ.4ರಿಂದ ಅ.12ರವರೆಗೆ ಪ್ರವಾಸಿ ವಾಹನಗಳಿಗೆ ಪ್ರವೇಶ ತೆರಿಗೆ ವಿನಾಯಿತಿ ನೀಡಿರುವುದು ಹೋಟೆಲ್ ಉದ್ಯಮಕ್ಕೆ ಚೈತನ್ಯ ನೀಡಿದೆ ಎನ್ನುತ್ತಾರೆ ಉದ್ಯಮಿಗಳು.

ದಸರಾ ವೇಳೆ ವಿದ್ಯುತ್ ದೀಪಾಲಂಕಾರದಿಂದ ಕಂಗೊಳಿಸುವ ಸಾಂಸ್ಕೃತಿಕ ನಗರಿ ಕಣ್ತುಂಬಿಕೊಳ್ಳಲು ದೇಶ–ವಿದೇಶಗಳ ಪ್ರವಾಸಿಗರು ಬರುತ್ತಿದ್ದಾರೆ. ಫಲಪುಷ್ಪ ಪ್ರದರ್ಶನ, ಆಹಾರ ಮೇಳ, ಕುಸ್ತಿ, ಕ್ರೀಡಾಕೂಟ, ಚಲನಚಿತ್ರೋತ್ಸವ, ಕವಿಗೋಷ್ಠಿ, ಪುಸ್ತಕ ಪ್ರದರ್ಶನ, ವಸ್ತುಪ್ರದರ್ಶನ, ಯುವದಸರಾ ಸಂಗೀತ ಕಾರ್ಯಕ್ರಮ ಮೊದಲಾದವು ಜನಾಕರ್ಷಿಸುತ್ತಿವೆ. ಜಂಬೂಸವಾರಿ ಸಂದರ್ಭದಲ್ಲಿ ತಂಗಲು ಪ್ರವಾಸಿಗರು ನಗರದ ಹೋಟೆಲ್‌ಗಳಲ್ಲಿ ಸಾಕಷ್ಟು ಮುಂಚೆಯೇ ಕೊಠಡಿ ಕಾಯ್ದಿರಿಸುತ್ತಾರೆ. ಹೋಟೆಲ್ ಉದ್ಯಮಕ್ಕೆ ದಸರೆ ಉತ್ತಮ ವ್ಯಾಪಾರ ಮತ್ತು ಆದಾಯದ ಮೂಲವಾಗಿದೆ.

'ಒಕ್ಕೂಟ ವ್ಯವಸ್ಥೆಗೆ ರಾಜ್ಯಪಾಲರೇ ಕಂಟಕ'

ಮೈಸೂರು: 'ರಾಜ್ಯಪಾಲರ ನೇಮಕ ಹಾಗೂ ಜಿಎಸ್‌ಟಿ ದೇಶದ ಒಕ್ಕೂಟ ವ್ಯವಸ್ಥೆಗೆ ಕಂಟಕವಾಗುತ್ತಿವೆ' ಎಂದು ವಕೀಲ ರವಿವರ್ಮ ಕುಮಾರ್ ದೂರಿದರು.

ದಸರಾ ರಾಷ್ಟ್ರೀಯ ಸಮ್ಮೇಳನ ಉಪ ಸಮಿತಿಯು ಭಾನುವಾರ ಇಲ್ಲಿನ ಮಾನಸ ಗಂಗೋತ್ರಿಯ ಸೆನೆಟ್ ಭವನದಲ್ಲಿ ಆಯೋಜಿಸಿದ್ದ 'ಪ್ರಭುತ್ವ ಮತ್ತು ಸಂವಿಧಾನ ಆಶಯ' ಕುರಿತ ರಾಷ್ಟ್ರೀಯ ಸಮ್ಮೇಳನದಲ್ಲಿ 'ಸಂವಿಧಾನ ಮತ್ತು ಒಕ್ಕೂಟ ವ್ಯವಸ್ಥೆಯ ಕಾರ್ಯನಿರ್ವಹಣೆ' ಕುರಿತು ಅವರು ಮಾತನಾಡಿದರು.

'ಈಚಿನ ದಿನಗಳಲ್ಲಿ ರಾಜ್ಯಪಾಲರ ಹುದ್ದೆ ಎಂಬುದು ರಾಜಕೀಯ ಪಕ್ಷಗಳಿಗೆ ಪುನರ್ವಸತಿ ಕೇಂದ್ರದಂತಾಗಿದೆ. ಸಚಿವರನ್ನಾಗಿ ಮಾಡಲಾಗದಿದ್ದವರನ್ನು, ವಿವಿಧ ರಾಜ್ಯಗಳಿಗೆ ರಾಜ್ಯಪಾಲರನ್ನಾಗಿ ನೇಮಿಸಲಾಗುತ್ತಿದೆ. ಹೀಗೆ ನೇಮಕಗೊಂಡವರು ಕೇಂದ್ರದಲ್ಲಿ ಅಧಿಕಾರದಲ್ಲಿರುವ ಪಕ್ಷದ ಅಣತಿಯಂತೆ ವರ್ತಿಸುತ್ತಿದ್ದು, ಯಾವ ರಾಜ್ಯಗಳಲ್ಲಿ ಆ ಪಕ್ಷ ಅಧಿಕಾರದಲ್ಲಿ ಇಲ್ಲವೋ ಅಂತಹ ರಾಜ್ಯಗಳಲ್ಲಿನ ಸರ್ಕಾರಗಳನ್ನು ಅಸ್ಥಿರಗೊಳಿಸುವ ಕೆಲಸ ಮಾಡುತ್ತಿದ್ದಾರೆ' ಎಂದು ಟೀಕಿಸಿದರು.

ಮನೆ ಜಲಾವೃತ, ಕೊಚ್ಚಿ ಹೋದ ವಾಹನ

ಪ್ರಜಾವಾಣಿ ವಾರ್ತೆ

ಹೆಬ್ರಿ (ಉಡುಪಿ): ತಾಲ್ಲೂಕಿನ ಮುದ್ರಾಡಿಯಲ್ಲಿ ಭಾನುವಾರ ಮಧ್ಯಾಹ್ನ ಸುರಿದ ಭಾರಿ ಮಳೆಗೆ ಅಪಾರ ಹಾನಿಯಾಗಿದೆ.

ಮಧ್ಯಾಹ್ನ 2.30ರಿಂದ 3.45ರವರೆಗೆ ಸುರಿದ ಬಿರುಸಿನ ಮಳೆಗೆ ಮುದ್ರಾಡಿಯ ಹೊಸ ಕಂಬ್ಳದಲ್ಲಿ 1, ಕಾಂತರಬೈಲಿನಲ್ಲಿ 4, ಕೆಲಕಿಲದಲ್ಲಿ 3 ಮನೆಗಳು ಅರ್ಧದಷ್ಟು ಮುಳುಗಿದ್ದವು. ಮನೆಮಂದಿಯನ್ನು ಹಗ್ಗಕಟ್ಟಿ ಏಣಿಯ ಸಹಾಯದಿಂದ ಹೊರ ಕರೆತರಲಾಗಿದೆ.

'ಭಾರೀ ಗುಡುಗು– ಸಿಡಿಲು ಸಹಿತ ಮಳೆಯಾಗಿದ್ದು, 2 ಕಾರುಗಳು ಮತ್ತು ಬೈಕ್‌ಗಳು ನೀರಿನಲ್ಲಿ ಕೊಚ್ಚಿ ಹೋಗಿವೆ. ಕಬ್ಬಿನಾಲೆಯ ಬೆಟ್ಟದ ಭಾಗದಿಂದ ಒಂದೇ ಸವನೆ ನೀರು ನುಗ್ಗಿ ಬಂದಿದೆ' ಎಂದು ಮುದ್ರಾಡಿ ಗ್ರಾಮ ಪಂಚಾಯಿತಿ ಸದಸ್ಯ ಗಣಪತಿ ಮುದ್ರಾಡಿ ಮಾಹಿತಿ ನೀಡಿದರು.

ಹೆಬ್ರಿಯ ವಿವಿಧೆಡೆ ಮಿಂಚು, ಗುಡುಗು ಸಹಿತ ಮಳೆಯಾಗಿದೆ .

ಮಂಗಳೂರು ನಗರದಲ್ಲಿ ಸಂಜೆ ಸುರಿದ ಧಾರಾಕಾರ ಮಳೆ ದಸರೆಯ ಸಂಭ್ರಮದಲ್ಲಿದ್ದ ಜನರಿಗೆ ಅಡಚಣೆ ಉಂಟುಮಾಡಿತು. ನಗರ ಹಾಗೂ ಜಿಲ್ಲೆಯ ವಿವಿಧ ಕಡೆ ಬೆಳಿಗ್ಗೆಯಿಂದಲೇ ಮೋಡ ಕವಿದ ವಾತಾವರಣ ಇತ್ತು. ಬಿಸಿಲಿನ ಝಳವೂ ಜೋರಾಗಿತ್ತು.

ಸಂಜೆ ಭಾರಿ ಗುಡುಗಿನೊಂದಿಗೆ ಧಾರಾಕಾರ ಮಳೆ ಸುರಿಯಿತು. ನಗರದಲ್ಲಿ ವಿದ್ಯುತ್ ದೀಪಾಲಂಕಾರ ವೀಕ್ಷಿಸಲು ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳ ರಸ ಸವಿಯಲು ಹೊರಟಿದ್ದವರು ಪರದಾಡಿದರು. ಸುಮಾರು ಮುಕ್ಕಾಲು ತಾಸು ಮಳೆ ಸುರಿಯಿತು.

ಹೆಬ್ರಿ ತಾಲ್ಲೂಕಿನ ಮುದ್ರಾಡಿಯಲ್ಲಿ ಮಳೆ ನೀರಲ್ಲಿ ಕೊಚ್ಚಿ ಹೋದ ಕಾರು

ಭಾರಿ ಮಳೆ ಮುಂದುವರಿಕೆ

ಬೆಂಗಳೂರು: ರಾಜ್ಯದ ವಿವಿಧೆಡೆ ಎರಡು ದಿನಗಳು ಭಾರಿ ಮಳೆ ಮುಂದುವರಿಯುವ ಸಾಧ್ಯತೆಯಿದ್ದು, ಹವಾಮಾನ ಇಲಾಖೆಯು ಸೋಮವಾರ ಏಳು ಜಿಲ್ಲೆಗಳಿಗೆ ಹಾಗೂ ಮಂಗಳವಾರ 17 ಜಿಲ್ಲೆಗಳಿಗೆ 'ಯೆಲ್ಲೊ ಅಲರ್ಟ್' ಘೋಷಿಸಿದೆ.

ಉತ್ತರ ಕನ್ನಡ, ಉಡುಪಿ, ದಕ್ಷಿಣ ಕನ್ನಡ, ಚಿಕ್ಕಮಗಳೂರು, ಹಾಸನ, ಕೊಡಗು ಹಾಗೂ ಮೈಸೂರು ಜಿಲ್ಲೆಗಳಿಗೆ ಸೋಮವಾರ 'ಯೆಲ್ಲೊ ಅಲರ್ಟ್' ನೀಡಲಾಗಿದೆ. ಈ ಜಿಲ್ಲೆಗಳ ಕೆಲವೆಡೆ ಗುಡುಗು ಸಹಿತ ಭಾರಿ ಮಳೆಯಾಗುವ ಸಾಧ್ಯತೆಯಿದೆ. ದಕ್ಷಿಣ ಒಳನಾಡಿನ ಉಳಿದ ಜಿಲ್ಲೆಗಳ ಅನೇಕ ಕಡೆ ಹಾಗೂ ಉತ್ತರ ಒಳನಾಡಿನ ಕೆಲವೆಡೆ ಗುಡುಗು ಸಹಿತ ಸಾಧಾರಣ ಮಳೆಯಾಗುವ ಸಂಭವವಿದೆ ಎಂದು ಇಲಾಖೆ ಮುನ್ಸೂಚನೆ ನೀಡಿದೆ.

ಕರಾವಳಿ ಹಾಗೂ ದಕ್ಷಿಣ ಒಳನಾಡಿನ ಬಹುತೇಕ ಎಲ್ಲ ಜಿಲ್ಲೆಗಳಲ್ಲಿ ಮಂಗಳವಾರ ಭಾರಿ ಮಳೆಯಾಗುವ ಸಂಭವವಿದ್ದು, 'ಯೆಲ್ಲೊ ಅಲರ್ಟ್' ಅನ್ನು ಇನ್ನಷ್ಟು ಜಿಲ್ಲೆಗಳಿಗೆ ವಿಸ್ತರಿಸಲಾಗಿದೆ. ಬಳ್ಳಾರಿ, ದಾವಣಗೆರೆ, ಚಿತ್ರದುರ್ಗ, ತುಮಕೂರು, ಚಾಮರಾಜನಗರ, ಮಂಡ್ಯ, ರಾಮನಗರ, ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆಗೂ ಇಲಾಖೆಯು ಗುಡುಗು ಸಹಿತ ಭಾರಿ ಮಳೆಯ ಮುನ್ಸೂಚನೆ ನೀಡಿದೆ. ಇದೇ 12ರವರೆಗೂ ಮಳೆ ಮುಂದುವರಿಯಲಿದೆ ಎಂದು ಇಲಾಖೆ ತಿಳಿಸಿದೆ.

ವಿವಿಧೆಡೆ ಮಳೆ: ದಾವಣಗೆರೆ ನಗರವೂ ಸೇರಿದಂತೆ ಜಿಲ್ಲೆಯ ವಿವಿಧೆಡೆ ಭಾನುವಾರ ಸಂಜೆ ಉತ್ತಮ ಮಳೆಯಾಯಿತು. ಚಿತ್ರದುರ್ಗ ಜಿಲ್ಲೆಯ ಹಿರಿಯೂರಿನಲ್ಲಿ ಶನಿವಾರ ರಾತ್ರಿ ಉತ್ತಮ ಮಳೆಯಾಗಿದೆ. ಹಾಸನ ಜಿಲ್ಲೆಯ ವಿವಿಧೆಡೆ ಭಾನುವಾರ ಉತ್ತಮ ಮಳೆಯಾಗಿದೆ. ಸಕಲೇಶಪುರ, ಆಲೂರು, ಹಾಸನ ನಗರದಲ್ಲಿ ಕೆಲಕಾಲ ಧಾರಾಕಾರ ಮಳೆ ಸುರಿಯಿತು.

ಸಿಡಿಲು ಬಡಿದು ಇಬ್ಬರು ಸಾವು

ಹಗರಿಬೊಮ್ಮನಹಳ್ಳಿ (ವಿಜಯನಗರ ಜಿಲ್ಲೆ): ತಾಲ್ಲೂಕಿನ ದಶಮಾಪುರ ಗ್ರಾಮದಲ್ಲಿ ಭಾನುವಾರ ಮಧ್ಯಾಹ್ನ ಮೆಕ್ಕೆಜೋಳ ಹೊಲದಲ್ಲಿ ಕೆಲಸ ಮಾಡುತ್ತಿದ್ದ ಸಂಬಂಧಿಕರಾದ ಬಣಕಾರ ನಾರಪ್ಪ(58) ಮತ್ತು ಬಣಕಾರ ಪ್ರಶಾಂತ (40) ಸಿಡಿಲು ಬಡಿದು ಮೃತಪಟ್ಟಿದ್ದಾರೆ.

ಹೊಸಪೇಟೆ ನಗರದಲ್ಲಿ ಮಧ್ಯಾಹ್ನ ಬಿರುಸಿನ ಮಳೆ ಸುರಿಯಿತು.

ಬಳ್ಳಾರಿ ಜಿಲ್ಲೆ ತೋರಣಗಲ್ಲು ಹೋಬಳಿಯ ಕೊಡಾಲು ಗ್ರಾಮದ ಹೊರ ವಲಯದ ಮಾರೆಮ್ಮ ದೇವಸ್ಥಾನ ಬಳಿಯ ಗುಡ್ಡದಲ್ಲಿ ಸಿಡಿಲು ಬಡಿದು 10 ಕುರಿಗಳು ಮೃತಪಟ್ಟು, ಇಬ್ಬರು ಕುರಿಗಾಹಿಗಳು ಗಾಯಗೊಂಡಿದ್ದಾರೆ.

ಬೆಳಗಾವಿ ವರದಿ: ಬೆಳಗಾವಿ ನಗರ ಮತ್ತು ಗೋಕಾಕ ತಾಲ್ಲೂಕಿನ ಭಾನುವಾರ ಮಧ್ಯಾಹ್ನ ಕೆಲಕಾಲ ಸಾಧಾರಣ ಮಳೆ ಸುರಿಯಿತು. ಉತ್ತರ ಕನ್ನಡ ಜಿಲ್ಲೆಯ ಕೆಲವೆಡೆ ನಸುಕಿನಲ್ಲಿ ಮಳೆಯಾಗಿದೆ.

ಕಪ್ಪತಗುಡ್ಡ: 28 ಪ್ರಸ್ತಾವಗಳು

2ನೇ ಮುಖಪುಟದಿಂದ

ಕಪ್ಪತಗುಡ್ಡ ಹಾಗೂ ಕಾವೇರಿ ವಿಸ್ತರಿತ ವನ್ಯಜೀವಿಧಾಮಗಳನ್ನು ಪರಿಸರ ಸೂಕ್ಷ್ಮ ವಲಯಗಳೆಂದು ಅಂತಿಮ ಅಧಿಸೂಚನೆ ಹೊರಡಿಸಬೇಕಾಗಿದೆ. ಅಲ್ಲದೇ, ಸುಪ್ರೀಂ ಕೋರ್ಟ್ ಆದೇಶದಂತೆ, 10 ಕಿ.ಮೀ ಪರಿಭಾವಿತ ಪರಿಸರ ಸೂಕ್ಷ್ಮ ವಲಯದಲ್ಲೇ ಬಹುತೇಕ ಗಣಿಗಾರಿಕೆ ಪ್ರಸ್ತಾವಗಳಿವೆ. ಹೀಗಾಗಿ ಅಂತಿಮ ಅಧಿಸೂಚನೆವರೆಗೆ ಗಣಿಗಾರಿಕೆ ಪ್ರಸ್ತಾವನೆಗಳನ್ನು ಮಂಡಳಿ ಮುಂದೂಡುವುದು ಒಳಿತು ಎಂದು ವನ್ಯಜೀವಿ ಸಂರಕ್ಷಣಾ ಕಾರ್ಯಕರ್ತ ಗಿರಿಧರ ಕುಲಕರ್ಣಿ ಅಭಿಪ್ರಾಯಪಡುತ್ತಾರೆ.

ವನ್ಯಜೀವಿ ಮಂಡಳಿಯ ಸಭೆಯಲ್ಲಿ ಚರ್ಚೆಯಾಗಲಿರುವ ಇತರ ಪ್ರಮುಖ ಪ್ರಸ್ತಾವಗಳು

- 1,500 ಮೆ.ವಾ ವಿದ್ಯುತ್ ಉತ್ಪಾದನಾ ಸಾಮರ್ಥ್ಯದ 'ವಾರಾಹಿ ಪಂಪ್ಡ್ ಸ್ಟೋರೇಜ್ ಯೋಜನೆ'. ಇದು ಮೂಕಾಂಬಿಕಾ ಮತ್ತು ಸೋಮೇಶ್ವರ ವನ್ಯಜೀವಿಧಾಮಗಳ ವ್ಯಾಪ್ತಿಯಲ್ಲಿ ಸ್ಥಾಪನೆಯಾಗಲಿದೆ. ಸುಮಾರು 82 ಹೆಕ್ಟೇರ್ ಅರಣ್ಯ ಪ್ರದೇಶ ಮುಳುಗಡೆ ಆಗಲಿದೆ
- ಭದ್ರಾವತಿ ವಿಭಾಗದ ಚೊರ್ಡೇನಹಳ್ಳಿ ಮತ್ತು ಕೈತೊಟ್ಲು ಪ್ರದೇಶಗಳನ್ನು ಭದ್ರಾ ಹುಲಿ ಸಂರಕ್ಷಿತ ಪ್ರದೇಶದ ಬಫರ್ ಪ್ರದೇಶಕ್ಕೆ ಸೇರ್ಪಡೆಗೊಳಿಸುವ ಪ್ರಸ್ತಾವ
- ಚಿತ್ರದುರ್ಗ ಜಿಲ್ಲೆಯ ಅರಣ್ಯ ಭೂಮಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಎರ್ನಿಕಾನ್ ಪವನ ವಿದ್ಯುತ್ ಕಂಪನಿಗೆ ನೀಡಿರುವ ಅನುಮತಿಯನ್ನು ನವೀಕರಿಸುವ ಪ್ರಸ್ತಾವ. ಕೆಆರ್‌ಇಡಿಎಲ್‌ನಿಂದ ಉಪಗುತ್ತಿಗೆ ಪಡೆದು ಎರ್ನಿಕಾನ್ ವಿದ್ಯುತ್ ಉತ್ಪಾದನೆ ಮಾಡುತ್ತಿದೆ
- ಕಾವೇರಿ ವಿಸ್ತರಿಸಿದ ವನ್ಯಜೀವಿ ಧಾಮದ 10 ಕಿ.ಮೀ ವ್ಯಾಪ್ತಿಯಲ್ಲಿ ಗಣಿಗಾರಿಕೆಗೆ ಅನುಮತಿ ಕೋರಿ ಪ್ರಸ್ತಾವ
- ಬೆಂಗಳೂರು ಅರಣ್ಯ ವೃತ್ತದ ರಾಮನಗರ ವಿಭಾಗದಲ್ಲಿರುವ ಹಂದಿಗುಂದಿ ಮೀಸಲು ಅರಣ್ಯ ಪ್ರದೇಶದ 4,167.94 ಹೆಕ್ಟೇರ್ ಅರಣ್ಯ ಪ್ರದೇಶವನ್ನು ಕರಡಿಧಾಮವೆಂದು ಘೋಷಿಸುವ ಪ್ರಸ್ತಾವ
- ಭದ್ರಾವತಿ ವಿಭಾಗದ ಕುಕ್ವಾಡ ಉಬ್ರಾಣಿ ರಾಜ್ಯ ಅರಣ್ಯ ಪ್ರದೇಶ ಮತ್ತು ಸುತ್ತಲಿನ ಮೀಸಲು ಅರಣ್ಯ ಪ್ರದೇಶಗಳ ಒಟ್ಟು 305.86 ಚ.ಕಿ.ಮೀ ಪ್ರದೇಶವನ್ನು 'ಕುಕ್ವಾಡ ಉಬ್ರಾಣಿ ವನ್ಯಜೀವಿಧಾಮ' ಎಂದು ಘೋಷಿಸುವ ಪ್ರಸ್ತಾವ
- ಬೆಂಗಳೂರಿನ ಹೆಸರಘಟ್ಟ ಪ್ರದೇಶವನ್ನು 'ಗ್ರೇಟರ್ ಹೆಸರಘಟ್ಟ ಹುಲ್ಲುಗಾವಲು ಸಂರಕ್ಷಣಾ ಮೀಸಲು ಪ್ರದೇಶ'ವಾಗಿ ಘೋಷಿಸುವ ಕುರಿತ ಪ್ರಸ್ತಾವ

ಪ್ರಸ್ತಾವ ಕೈಬಿಡುವಂತೆ ಆಗ್ರಹ

ಕಪ್ಪತಗುಡ್ಡ ಸಂರಕ್ಷಿತ ಅರಣ್ಯದಲ್ಲಿ 28 ಗಣಿಗಾರಿಕೆಗೆ ಅನುಮತಿ ನೀಡುವ ಪ್ರಸ್ತಾವವನ್ನು ರಾಜ್ಯ ವನ್ಯಜೀವಿ ಮಂಡಳಿ ಸಭೆಯಲ್ಲಿ ತಿರಸ್ಕರಿಸುವಂತೆ ನೈಸರ್ಗಿಕ ಸಂಪನ್ಮೂಲಗಳ ಸಂರಕ್ಷಣೆಗಾಗಿ ರಾಷ್ಟ್ರೀಯ ಸಮಿತಿ ಅಧ್ಯಕ್ಷ ಎಸ್.ಆರ್. ಹಿರೇಮಠ ಒತ್ತಾಯಿಸಿದ್ದಾರೆ.

ಜನಸಂಗ್ರಾಮ ಪರಿಷತ್‌ನ ಸಂಸ್ಥಾಪಕ ಅಧ್ಯಕ್ಷ ರಾಘವೇಂದ್ರ ಕುಷ್ಟಗಿ, ಲಂಚ ಮುಕ್ತ ಕರ್ನಾಟಕ ನಿರ್ಮಾಣ ವೇದಿಕೆ ಸಂಸ್ಥಾಪಕ ಅಧ್ಯಕ್ಷ ರವಿಕೃಷ್ಣಾ ರೆಡ್ಡಿ ಮತ್ತು ಸಮಾಜ ಪರಿವರ್ತನಾ ಸಮುದಾಯದ ಸದಸ್ಯ ದೀಪಕ್ ಸಿ.ಎನ್. ಅವರ ಜೊತೆಗೂಡಿ ಮುಖ್ಯಮಂತ್ರಿಯವರಿಗೆ ಪತ್ರ ಬರೆದಿದ್ದಾರೆ.

'ಸೋಮವಾರ ನಿಗದಿಯಾಗಿರುವ ವನ್ಯಜೀವಿ ಮಂಡಳಿ ಸಭೆಯಲ್ಲಿ ಅರಣ್ಯ ಪ್ರದೇಶದಲ್ಲಿ 28 ಗಣಿಗಳಿಗೆ ಒಪ್ಪಿಗೆ ನೀಡುವ ಪ್ರಸ್ತಾವಗಳಿವೆ. ಎಲ್ಲವನ್ನೂ ತಿರಸ್ಕರಿಸಬೇಕು' ಎಂದು ಒತ್ತಾಯಿಸಿದ್ದಾರೆ. 'ರಾಜ್ಯದಲ್ಲಿ 40 ವರ್ಷಗಳಿಂದ ಅರಣ್ಯ ಪ್ರದೇಶ ವಿಸ್ತರಣೆಯಾಗಿಲ್ಲ ಎಂದು ಇತ್ತೀಚೆಗೆ ನಡೆದ ಅರಣ್ಯ ಹುತಾತ್ಮರ ದಿನಾಚರಣೆಯಲ್ಲಿ ಹೇಳಿದ್ದೀರಿ. ಮತ್ತೊಂದೆಡೆ, ವ್ಯಾಪಕ ಪ್ರಮಾಣದಲ್ಲಿ ಅರಣ್ಯ ನಾಶಕ್ಕೆ ಕಾರಣವಾಗುವ ಗಣಿಗಾರಿಕೆಗೆ ಅವಕಾಶ ಕಲ್ಪಿಸುವ ಪ್ರಸ್ತಾವಗಳನ್ನೂ ಸ್ವೀಕರಿಸಿರುವುದು ಕಳವಳಕಾರಿ ಸಂಗತಿ' ಎಂದು ಪತ್ರದಲ್ಲಿ ಹೇಳಿದ್ದಾರೆ.

2017ರಲ್ಲಿ ಕಪ್ಪತಗುಡ್ಡವನ್ನು ಸಂರಕ್ಷಿತ ಅರಣ್ಯವೆಂದು ಮರು ಘೋಷಿಸಿದ ನಂತರ 2019ರಲ್ಲಿ ವನ್ಯಜೀವಿಧಾಮವೆಂದು ಘೋಷಿಸಲಾಗಿದೆ. ಇದರ ವ್ಯಾಪ್ತಿ 250 ಕಿಲೋ ಮೀಟರ್ ಇದ್ದು, ಸುತ್ತಮುತ್ತ ಅರಣ್ಯ ಪ್ರದೇಶವಿದೆ. ಗಣಿಗಾರಿಕೆಗೆ ಅವಕಾಶ ನೀಡಿದರೆ ಅರಣ್ಯ ಪ್ರದೇಶದ ಮೇಲೆ ಮತ್ತು ಸುತ್ತಮುತ್ತಲಿನ ಜನರ ಬದುಕಿನ ಮೇಲೆ ವ್ಯಾಪಕ ಪರಿಣಾಮ ಬೀರಲಿದೆ. ಮತ್ತೊಮ್ಮೆ ಇಲ್ಲಿ ಗಣಿಗಾರಿಕೆಗೆ ಅವಕಾಶ ನೀಡುವುದು ಕಪ್ಪತಗುಡ್ಡವನ್ನು ಸಂಪೂರ್ಣವಾಗಿ ನಾಶ ಮಾಡಲು ರಹದಾರಿ ಕೊಟ್ಟಂತೆ ಆಗುತ್ತದೆ ಎಂದೂ ಆತಂಕ ವ್ಯಕ್ತಪಡಿಸಿದ್ದಾರೆ.

ನವಬ್ರಾಹ್ಮಣರಂತೆ ವರ್ತಿಸುತ್ತಿರುವ ಹಿಂದುಳಿದವರು: ಬಿ.ಕೆ.ಹರಿಪ್ರಸಾದ್

'ಫಲಾನುಭವಿಗಳಿಂದಲೇ ವಿರೋಧ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮೀಸಲಾತಿಯ ಪ್ರಯೋಜನ ಪಡೆದು ಮುಂದೆ ಬಂದವರೇ ಈಗ ಮೀಸಲಾತಿ, ಒಳ ಮೀಸಲಾತಿಯನ್ನು ವಿರೋಧಿಸುತ್ತಿದ್ದಾರೆ. ಅಂತಹವರಲ್ಲಿ ಮೀಸಲಾತಿಯನ್ನು ಪ್ರಶ್ನಿಸುವವರೂ ಇದ್ದಾರೆ' ಎಂದು ವಿಧಾನ ಪರಿಷತ್ ಸದಸ್ಯ ಬಿ.ಕೆ.ಹರಿಪ್ರಸಾದ್ ಹೇಳಿದರು.

ಅಭಿರುಚಿ ಪ್ರಕಾಶನವು ನಗರದಲ್ಲಿ ಭಾನುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಕೆ.ಎನ್.ಲಿಂಗಪ್ಪ ಅವರ 'ಮೀಸಲಾತಿಯ ಒಳಮುಖ' ಪುಸ್ತಕ ಬಿಡುಗಡೆ ಮಾಡಿ ಅವರು ಮಾತನಾಡಿದರು.

'ಮೀಸಲಾತಿಯಿಂದ ಶಿಕ್ಷಣ, ಉದ್ಯೋಗ ಮತ್ತು ರಾಜಕೀಯ ವಾಗಿಯೂ ಪ್ರಾತಿನಿಧ್ಯ ಪಡೆದವರು ನವ ಬ್ರಾಹ್ಮಣರಂತೆ ವರ್ತಿಸುತ್ತಿದ್ದಾರೆ. ತಮ್ಮತನ ವನ್ನು ಮರೆತು, ಬ್ರಾಹ್ಮಣ ರನ್ನು ಅನುಸರಿಸುತ್ತಿದ್ದಾರೆ. ಹೀಗಾಗಿ ಮೀಸಲಾತಿ, ಒಳಮೀಸಲಾತಿ ಅಗತ್ಯವಿಲ್ಲ ಎನ್ನುವ ಅರ್ಥದಲ್ಲಿ ಮಾತನಾಡುತ್ತಾರೆ' ಎಂದು ಅಸಮಾಧಾನ ವ್ಯಕ್ತಪಡಿಸಿದರು.

'ಸ್ವಾತಂತ್ರ್ಯ ಪೂರ್ವದಲ್ಲಿಯೇ ಮೈಸೂರು ಸಂಸ್ಥಾನವು ಶೇ 75ರಷ್ಟು ಮೀಸಲಾತಿ ಜಾರಿಗೆ ತರಲು ಮುಂದಾಗಿತ್ತು. ಅಂದು ದಿವಾನರಾಗಿದ್ದ ವಿಶ್ವೇಶ್ವರಯ್ಯನವರು ಇದನ್ನು ವಿರೋಧಿ ಸಿದರು. ವಿರೋಧಿಸುವುದಿದ್ದರೆ ನೀವು ಹೊರಡಬಹುದು ಎಂದು ಒಡೆಯರು ಹೇಳಿದ್ದರು. ಈ ಕಾರಣದಿಂದಲೇ ವಿಶ್ವೇಶ್ವರಯ್ಯ ದಿವಾನ ಹುದ್ದೆಗೆ ರಾಜೀನಾಮೆ ನೀಡಿದ್ದು. ಅಂದು ಜಾರಿಗೆ ಬಂದ ಶೇ 75ರಷ್ಟು ಮೀಸಲಾತಿಯಿಂದ ಪ್ರಯೋಜನವಾಗಿದ್ದು ಲಿಂಗಾಯತರು ಮತ್ತು ಒಕ್ಕಲಿಗರಿಗೆ ಮಾತ್ರ. ಆದರೆ ಇಂದು ಈ ಸಮುದಾಯಗಳು ಮೀಸಲಾತಿ ಮತ್ತು ಒಳಮೀಸಲಾತಿಯನ್ನು ವಿರೋಧಿ ಸುತ್ತಿವೆ' ಎಂದರು.

'ಅರ್ಹತೆ ಬದಿಗಿಟ್ಟು ಮೀಸಲಾತಿ ಆಧಾರದಲ್ಲಿ ಉದ್ಯೋಗ ನೀಡಿದರೆ ಆಡಳಿತಕ್ಕೆ ತೊಡಕಾಗುತ್ತದೆ ಎಂದೇ ವಿಶ್ವೇಶ್ವರಯ್ಯ ವಾದಿಸಿದ್ದರು. ಈಗಲೂ ಇದೇ ವಾದ ಮುಂದಿಡಲಾಗುತ್ತಿದೆ. ಆದರೆ ಶೇ 69ರಷ್ಟು ಮೀಸಲಾತಿ ನೀಡುತ್ತಿರುವ ತಮಿಳುನಾಡು, ದೇಶದ ಅತ್ಯಂತ ಮುಂದುವರೆದ ರಾಜ್ಯಗಳಲ್ಲಿ ಒಂದಾಗಿದೆ. ಹಿಂದುಳಿದವರಿಗೆ ಶೇ 27ರಷ್ಟೇ ಮೀಸಲಾತಿ ನೀಡುತ್ತಿರುವ ಬಿಹಾರ, ಉತ್ತರ ಪ್ರದೇಶಗಳು ಈಗಲೂ ಹಿಂದುಳಿದ ರಾಜ್ಯಗಳೇ ಆಗಿವೆ' ಎಂದರು.

ಅಂಕಣಕಾರ ಎ.ನಾರಾಯಣ ಮಾತನಾಡಿ, 'ನಮ್ಮ ಜಾತಿಗಳಲ್ಲೂ ಬಡವರಿದ್ದಾರೆ. ಅವರಿಗೆ ಮೀಸಲಾತಿ ಬೇಕು ಎಂದು ಮುಂದುವರೆದ ಜಾತಿ ಗಳವರು ಕೇಳುತ್ತಾರೆ. ಆರ್ಥಿಕವಾಗಿ ದುರ್ಬಲ ವರ್ಗಗಳ ಮೀಸಲಾತಿ ಬಂದಿದ್ದು ಹೀಗೆಯೇ. ಆದರೆ ಮೀಸಲಾತಿ ಎಂಬುದು ಬಡತನ ನಿರ್ಮೂಲನೆಯ ಕಾರ್ಯಕ್ರಮವಲ್ಲ. ಬದಲಿಗೆ ಪ್ರಾತಿನಿ ಧ್ಯವಿಲ್ಲದ ಸಮುದಾಯಗಳಿಗೆ ಪ್ರಾತಿನಿಧ್ಯ ಒದಗಿಸುವ ವ್ಯವಸ್ಥೆ. ಇದನ್ನು ಲಿಂಗಪ್ಪನವರು ತಮ್ಮ ಈ ಪುಸ್ತಕದಲ್ಲಿ ವಿವರಿಸಿದ್ದಾರೆ' ಎಂದರು.

'ಒಬಿಸಿಗಳಿಗೆ ಹುನ್ನಾರ ಅರ್ಥವಾಗುತ್ತಿಲ್ಲ'

'ಇತರೆ ಹಿಂದುಳಿದ ವರ್ಗಗಳ (ಒಬಿಸಿ) ಜಾತಿಗಳವರಿಗೆ ತಾವು ಸಮಾನ ಶೋಷಿತರು ಎಂಬ ಪ್ರಜ್ಞೆ ಇಲ್ಲ. ಹೀಗಾಗಿಯೇ ಮೀಸಲಾತಿಯನ್ನು ಕಸಿದುಕೊಳ್ಳುವ ಹುನ್ನಾರಗಳು ಈ ಸಮುದಾಯದವರಿಗೆ ಅರ್ಥ ಆಗುತ್ತಿಲ್ಲ' ಎಂದು ಎ.ನಾರಾಯಣ ಹೇಳಿದರು. 'ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ರಾಜಕೀಯವಾಗಿ ಮುಂದುವರೆದ ಜಾತಿಗಳು ತಮ್ಮನ್ನು ಹಿಂದುಳಿದ ವರ್ಗಗಳಿಗೆ ಸೇರಿಸಬೇಕು ಎಂಬ ಹೋರಾಟ ನಡೆಸುತ್ತಿವೆ. ಆದರೆ ಈ ಬಗ್ಗೆ ನಿಜವಾದ ಒಬಿಸಿ ಸಮುದಾಯಗಳು ಚಕಾರ ಎತ್ತದಂತೆ ಮಾಡಲಾಗಿದೆ' ಎಂದರು.

329ಕ್ಕೆ ಅನುಮತಿ; 190 ಬಾಕಿ

ಒಂದನೇ ಪುಟದಿಂದ...

ರಾಜ್ಯಪಾಲರ ನಿರ್ದೇಶನವನ್ನು 'ತುರ್ತು' ಎಂದು ಪರಿಗಣಿಸಿ, ಅವರ ಪತ್ರದ ಜೊತೆ ನೀಡಿರುವ ನಮೂನೆಯಲ್ಲಿ ಎಲ್ಲ ಮಾಹಿತಿಯನ್ನು ಒದಗಿಸುವಂತೆ ಎಲ್ಲ ಇಲಾಖೆಗಳ ಮುಖ್ಯಸ್ಥರಿಗೆ ಮುಖ್ಯ ಕಾರ್ಯದರ್ಶಿ ಟಿಪ್ಪಣಿ ಹೊರಡಿಸಿದ್ದರು. ರಾಜ್ಯಪಾಲರ ಪತ್ರವನ್ನು ಉಲ್ಲೇಖಿಸಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ (ಜಾಗೃತ ವಿಭಾಗ) ಕಾರ್ಯದರ್ಶಿ ಸೆ. 10 ರಂದು ಲೋಕಾಯುಕ್ತಕ್ಕೆ ಪತ್ರ ಬರೆದಿದ್ದರು.

ವರದಿಯಲ್ಲಿ ಏನಿದೆ: ಪ್ರಾಸಿಕ್ಯೂಷನ್‌ಗೆ ಶಿಫಾರಸು ಮಾಡಿದ ವಿಷಯ, ಪ್ರಸ್ತಾವ ಸಲ್ಲಿಸಿದ್ದ ದಿನಾಂಕ, ಸಚಿವ ಸಂಪುಟ ಸಭೆಯಲ್ಲಿ ತೆಗೆದುಕೊಂಡ ತೀರ್ಮಾನ (ಪ್ರಸ್ತಾವವನ್ನು ತಿರಸ್ಕರಿಸಲಾಗಿದೆಯೇ? ಒಪ್ಪಲಾಗಿದೆಯೇ?), ಒಪ್ಪಿಗೆ ನೀಡಿದ್ದರೆ ಶಿಕ್ಷೆಯ ಸ್ವರೂಪ, ತಿರಸ್ಕರಿಸಿದ್ದರೆ ಅದಕ್ಕೆ ಕಾರಣ ಎಂಬ ಮಾಹಿತಿಯನ್ನು ಕ್ರಮಬದ್ಧವಾಗಿ ಪಟ್ಟಿ ಮಾಡಿ ಒದಗಿಸುವಂತೆ ರಾಜ್ಯಪಾಲರು ಸೂಚಿಸಿದ್ದರು.

ಭ್ರಷ್ಟಾಚಾರ ನಿಯಂತ್ರಣ ಕಾಯ್ದೆ –1988ರ ಯಾವುದೆಲ್ಲ ಸೆಕ್ಷನ್‌ಗಳ ಅಡಿಯಲ್ಲಿ ಯಾರೆಲ್ಲ ಜನಪ್ರತಿನಿಧಿಗಳು, ಅಧಿಕಾರಿಗಳು, ನೌಕರರ ಮೇಲೆ ಪ್ರಕರಣಗಳು ದಾಖಲಾಗಿವೆ ಎಂಬ ಸಮಗ್ರ ವಿವರಗಳ ಸಹಿತ ಎಲ್ಲ ಮಾಹಿತಿಗಳನ್ನು ಲೋಕಾಯುಕ್ತ ಒದಗಿಸಿದೆ. ಆದರೆ, ಪ್ರಾಸಿಕ್ಯೂಷನ್‌ಗೆ ಒಪ್ಪಿಗೆ ನೀಡಿರುವ ಪ್ರಸ್ತಾವಗಳಲ್ಲಿನ ಶಿಕ್ಷೆಯ ಸ್ವರೂಪ ತನಗೆ ಸಂಬಂಧಿಸಿಲ್ಲ ಎಂದೂ ತಿಳಿಸಿದೆ.

ನೇರವಾಗಿ ಉತ್ತರಿಸುವಂತಿಲ್ಲ: ಲೋಕಾಯುಕ್ತ ಪ್ರಾಸಿಕ್ಯೂಷನ್‌ಗೆ ಅನುಮತಿ ಕೋರಿದ್ದ ಪ್ರಸ್ತಾವಗಳಿಗೆ ಸಂಬಂಧಿಸಿದ ಮಾಹಿತಿಯೂ ಸೇರಿ ಹಲವು ವಿಚಾರಗಳಲ್ಲಿ ವಿವರಣೆ ಕೇಳಿ ರಾಜ್ಯ ಸರ್ಕಾರಕ್ಕೆ ರಾಜ್ಯಪಾಲರು ಇತ್ತೀಚೆಗೆ ಹಲವು ಪತ್ರ ಬರೆದಿದ್ದರು. ಇಲ್ಲಿಯವರೆಗೆ ಇಂತಹ ಪತ್ರಗಳಿಗೆ ಮುಖ್ಯ ಕಾರ್ಯದರ್ಶಿ ಅಥವಾ ಸಂಬಂಧಿಸಿದ ಅಧಿಕಾರಿಗಳೇ ನೇರವಾಗಿ ಉತ್ತರಿಸುತ್ತಿದ್ದರು. ಆದರೆ, ಇನ್ನು ಅಧಿಕಾರಿಗಳು ನೇರವಾಗಿ ಉತ್ತರಿಸುವಂತಿಲ್ಲ ಎಂದು ಸೆ. 26ರಂದು ನಡೆದಿದ್ದ ಸಚಿವ ಸಂಪುಟ ಸಭೆ ನಿರ್ಣಯ ಕೈಗೊಂಡಿದೆ.

ರೆಡ್ಡಿ ಪ್ರಕರಣ: ಭಾಷಾಂತರಿಸಲು ವಾಪಸ್

ಜನಾರ್ದನ ರೆಡ್ಡಿ ವಿರುದ್ಧ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯ ಸೆಕ್ಷನ್ 13(1)(ಇ), ಸೆಕ್ಷನ್ 13(2)– 1988ರಡಿ 2015ರಲ್ಲಿ ದಾಖಲಾಗಿರುವ ಪ್ರಕರಣದಲ್ಲಿ ಪ್ರಾಸಿಕ್ಯೂಷನ್‌ಗೆ ಮಂಜೂರಾತಿ ಕೋರಿ 2024ರ ಮೇ 15ರಂದು ಪ್ರಸ್ತಾವ ಸಲ್ಲಿಸಲಾಗಿತ್ತು. ಆದರೆ, ಸಕ್ಷಮ ಪ್ರಾಧಿಕಾರವಾಗಿರುವ ರಾಜ್ಯಪಾಲರು, ಅಂತಿಮ ವರದಿ ಮತ್ತು ಅದಕ್ಕೆ ಸಂಬಂಧಿಸಿದ ಎಲ್ಲ ದಾಖಲೆಗಳನ್ನು ಇಂಗ್ಲಿಷ್‌ಗೆ ಭಾಷಾಂತರಿಸಿ ನೀಡುವಂತೆ ವಾಪಸ್ ಕಳುಹಿಸಿದ್ದರು.

ಬಹುಕೋಟಿ ರೂಪಾಯಿ ಲಂಚ ಪ್ರಕರಣದಲ್ಲಿ ಮೊದಲ ಆರೋಪಿಯಾಗಿದ್ದ ಮಾಜಿ ಶಾಸಕ, ಕೆಎಸ್‌ಡಿಎಲ್ ಅಧ್ಯಕ್ಷರಾಗಿದ್ದ ಮಾಡಾಳ್ ವಿರೂಪಾಕ್ಷಪ್ಪ ಮತ್ತು ಅವರ ಪುತ್ರ, ಬೆಂಗಳೂರು ಜಲಮಂಡಳಿಯ ಹಿಂದಿನ ಮುಖ್ಯ ಲೆಕ್ಕಾಧಿಕಾರಿ ಎಂ.ವಿ.ಪ್ರಶಾಂತ್ ಮಾಡಾಳ್ ಅವರ ಮೇಲೆ ತನಿಖೆಗೆ ಅನುಮತಿ ಕೋರಿ ಜುಲೈ 27ರಂದು ಕೋರಿಕೆ ಸಲ್ಲಿಸಲಾಗಿತ್ತು. ಆದರೆ, ವಿರೂಪಾಕ್ಷಪ್ಪ ವಿರುದ್ಧ ದಾಖಲಾಗಿದ್ದ ಎಫ್‌ಐಆರ್ ಅನ್ನು ಹೈಕೋರ್ಟ್ ಡಿ. 20ರಂದು ವಜಾಗೊಳಿಸಿದೆ. ಪ್ರಶಾಂತ್ ಅವರ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿದೆ. ಅಲ್ಲದೆ, ಪ್ರಶಾಂತ್ ವಿರುದ್ಧ ಅನುಮತಿ ಕೋರಿ ಇದೇ ಏಪ್ರಿಲ್ 6ರಂದು ಮತ್ತೆ ಪ್ರಸ್ತಾವ ಸಲ್ಲಿಸಲಾಗಿದೆ. ಮಾಜಿ ಅಬಕಾರಿ ಸಚಿವ ಎಂ.ಪಿ. ರೇಣುಕಾಚಾರ್ಯ ಮತ್ತು ಅವರ ಸಹೋದರ ಎಂ.ಪಿ. ರಮೇಶ್ ವಿರುದ್ಧ 2015ರಲ್ಲಿ ದಾಖಲಾಗಿದ್ದ ಪ್ರಕರಣದಲ್ಲಿ 2023ರ ಡಿ.30ರಂದು ಪ್ರಾಸಿಕ್ಯೂಷನ್‌ಗೆ ಅನುಮತಿ ಕೋರಲಾಗಿದೆ ಎಂದು ಲೋಕಾಯುಕ್ತ ತಿಳಿಸಿದೆ.

ವಕ್ಫ್ ತಿದ್ದುಪಡಿ ಮಸೂದೆ: ಸೈಯದ್ ನಾಸೀರ್ ಹುಸೇನ್ ಆತಂಕ

'ದೇಶದಲ್ಲಿ ದಂಗೆ ಎಬ್ಬಿಸುವ ಹುನ್ನಾರ'

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: 'ದೇಶದ ಪ್ರತಿ ಬೀದಿ, ಗಲ್ಲಿಗಳಲ್ಲಿ ದಂಗೆ ಎಬ್ಬಿಸುವ ಎಲ್ಲ ಸಾಧ್ಯತೆಗಳು ವಕ್ಫ್ ತಿದ್ದುಪಡಿ ಮಸೂದೆಯಲ್ಲಿ ಇವೆ' ಎಂದು ರಾಜ್ಯಸಭಾ ಸದಸ್ಯ ಸೈಯದ್ ನಾಸೀರ್ ಹುಸೇನ್ ಹೇಳಿದರು.

ನಗರದಲ್ಲಿ ಭಾನುವಾರ ನಡೆದ ರಾಜ್ಯಮಟ್ಟದ ಮುಸ್ಲಿಂ ವಕೀಲರ ಪ್ರಥಮ ಸಮ್ಮೇಳನದಲ್ಲಿ ಮಾತನಾಡಿದ ಅವರು, 'ಬಾಬರಿ ಮಸೀದಿಯಂತಹ ವಿವಾದಿತ ಪ್ರಕರಣಗಳು ಇತ್ಯರ್ಥಗೊಂಡ ಬಳಿಕ ಬಿಜೆಪಿಗೆ ಮುಂದಿನ ಚುನಾವಣೆಯಲ್ಲಿ ಬಳಸಿಕೊಳ್ಳಲು ಬೇರೆ ವಿಚಾರಗಳಿಲ್ಲ. ಹೀಗಾಗಿ ಈ ವಿಷಯವನ್ನು ಮುನ್ನೆಲೆಗೆ ತಂದಿದ್ದಾರೆ' ಎಂದು ಆರೋಪಿಸಿದರು.

'ವಕ್ಫ್ ಕಾಯಿದೆ ವಿರುದ್ಧ ತಪ್ಪು ಮಾಹಿತಿಗಳನ್ನು ಹರಡಲಾಗುತ್ತಿದೆ. ಕೆಲವು ಪ್ರಮುಖ ಮಾಧ್ಯಮಗಳ ಜನಪ್ರಿಯ ನಿರೂಪಕರೂ ಇದೇ ಕಾರ್ಯದಲ್ಲಿ ತೊಡಗಿದ್ದಾರೆ. ಉದ್ದೇಶಿತ ಮಸೂದೆಗೆ ವಿರುದ್ಧವಾಗಿ ಹೆಚ್ಚಿನ ಅಭಿಪ್ರಾಯಗಳು ವ್ಯಕ್ತವಾಗಿರುವುದರಿಂದ ಕೇಂದ್ರ ಸರ್ಕಾರಕ್ಕೆ ಆತಂಕ ಉಂಟಾಗಿದೆ. ಆದ್ದರಿಂದ ಮುಸ್ಲಿಮರಲ್ಲಿಯೇ ಇರುವ ಒಂದಿಷ್ಟು ಸಮಯ ಸಾಧಕರನ್ನು ಮಸೂದೆ ಪರ ಮಾತನಾಡುವಂತೆ ಕುತಂತ್ರ ರೂಪಿಸುತ್ತಿದ್ದಾರೆ' ಎಂದು ಜಂಟಿ ಸದನ ಸಮಿತಿ ಸದಸ್ಯರೂ ಆಗಿರುವ ಅವರು ದೂರಿದರು.

ಸುಪ್ರೀಂ ಕೋರ್ಟ್ ವಕೀಲ ಮೆಹಮೂದ್ ಎಸ್. ಪ್ರಾಚಾ ಮಾತನಾಡಿ, 'ಅಲ್ಪಸಂಖ್ಯಾತರು ಎಂದರೆ ಕೇವಲ ಮುಸ್ಲಿಮರಲ್ಲ, ಆರ್‌ಎಸ್‌ಎಸ್ ಪ್ರೇರಿತ ವಕ್ಫ್ ತಿದ್ದುಪಡಿ ಕಾಯಿದೆಯಿಂದ ಮುಸ್ಲಿಮರಿಗೆ ತೊಂದರೆ ಆಗುವುದು ಮಾತ್ರವಲ್ಲ, ಈ ಕಾಯಿದೆ ಮಾದರಿ ಇಟ್ಟು ಕೊಂಡು ಉಳಿದ ಸಮುದಾಯಗಳಿಗೂ ಸಂಬಂಧಿಸಿ ಮುಂದಿನ ದಿನಗಳಲ್ಲಿ ಕಾಯಿದೆ ಬರಲಿದೆ' ಎಂದು ಎಚ್ಚರಿಸಿದರು.

'ಅಲ್ಪಸಂಖ್ಯಾತರಿಗೆ ಸಂಬಂಧಿಸಿದ ಪ್ರತಿ ಯೊಂದು ಮಾಹಿತಿಯೂ ಆರ್‌ಎಸ್‌ಎಸ್ ಬಳಿ ಇದೆ. ಅವರ ಸುಳ್ಳಿನ ವಿರುದ್ಧ ಎಲ್ಲ ಅಲ್ಪಸಂಖ್ಯಾತ ಸಮುದಾಯಗಳು ಒಗ್ಗೂಡಿ ಹೋರಾಡದೇ ಹೋದಲ್ಲಿ ನ್ಯಾಯ ಸಿಗುವುದು ಸಾಧ್ಯವಿಲ್ಲ' ಎಂದರು.



ಹುಬ್ಬಳ್ಳಿಯಲ್ಲಿ ಭಾನುವಾರ ನಡೆದ ರಾಜ್ಯಮಟ್ಟದ ಮುಸ್ಲಿಂ ವಕೀಲರ ಪ್ರಥಮ ಸಮ್ಮೇಳನದಲ್ಲಿ ರಾಜ್ಯಸಭಾ ಸದಸ್ಯ ಸೈಯದ್ ನಾಸೀರ್ ಹುಸೇನ್ ಮಾತನಾಡಿದರು. ಬಾಂಬೆ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಬಿ.ಜಿ. ಕೋಲ್ಸೆ ಪಾಟೀಲ್, ಸುಪ್ರೀಂಕೋರ್ಟ್ ವಕೀಲ ಮೆಹಮೂದ್ ಪ್ರಾಚಾ, ರಾಜ್ಯ ವಕೀಲರ ಪರಿಷತ್ ಸದಸ್ಯ ಆಸೀಫ್ ಅಲಿ ಶೇಖ್ ಹುಸೇನ್ ಹಾಜರಿದ್ದರು

ಮುಸ್ಲಿಂ ಮುಖಂಡ ನಾಪತ್ತೆ

ಪ್ರಜಾವಾಣಿ ವಾರ್ತೆ

ಮಂಗಳೂರು: ಮುಸ್ಲಿಂ ಮುಖಂಡ, ಇಲ್ಲಿನ ಸೆಂಟ್ರಲ್ ಕಮಿಟಿಯ ಉಪಾಧ್ಯಕ್ಷ ಬಿ.ಎಂ. ಮುಮ್ತಾಜ್ ಅಲಿ (52) ಅವರು ಭಾನುವಾರ ಮುಂಜಾನೆಯಿಂದ ನಾಪತ್ತೆಯಾಗಿದ್ದಾರೆ. ಅವರ ಬಿಎಂಡಬ್ಲ್ಯು ಕಾರು ನಗರದ ಹೊರವಲಯದ ಕೂಳೂರು ಸೇತುವೆಯಲ್ಲಿ ಪತ್ತೆಯಾಗಿದೆ.

ಅಲಿಯವರು ಭಾನುವಾರ ನಸುಕಿನ 3 ಗಂಟೆ ಸುಮಾರಿಗೆ ನಗರದ ಕದ್ರಿಯ ಮನೆಯಿಂದ ಹೊರಟಿದ್ದರು. ಮುಂಜಾನೆ 3.30ರ ಸುಮಾರಿಗೆ ಅವರ ಕುಟುಂಬದ ಸದಸ್ಯರ ವಾಟ್ಸ್‌ಆ್ಯಪ್ ಗ್ರೂಪ್‌ಗೆ ಧ್ವನಿಮುದ್ರಿತ ಸಂದೇಶವನ್ನು ಕಳುಹಿಸಿದ್ದರು. ಬೆಳಿಗ್ಗೆ 4.40ರ ಸುಮಾರಿಗೆ ಆ ಸಂದೇಶವನ್ನು ಮಗಳು ನೋಡಿದ್ದು ತಕ್ಷಣವೇ ತಂದೆಯನ್ನು ಹುಡುಕಲಾರಂಭಿಸಿದ್ದರು ಕೂಳೂರು ಸೇತುವೆಯಲ್ಲಿ ಅವರ ಕಪ್ಪು ಬಣ್ಣದಬಿಎಂಡಬ್ಲ್ಯುಕಾರುಪತ್ತೆಯಾಗಿತ್ತು. ಅಪಘಾತಕ್ಕೊಳಗಾದಸ್ಥಿತಿಯಲ್ಲಿದ್ದಕಾರಿನ ಮುಂಭಾಗ ನಜ್ಜುಗುಜ್ಜಾಗಿತ್ತು ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಕಾರು ಬೈಕಂಪಾಡಿಯಲ್ಲಿ ಖಾಸಗಿ ಬಸ್‌ಗೆ (ಮಹೇಶ್) ಡಿಕ್ಕಿ ಹೊಡೆದಿತ್ತು. ಕಾರಿನ ನಂಬರ್ ಪ್ಲೇಟ್ ಅಲ್ಲೇ ಕಳಚಿ ಬಿದ್ದಿತ್ತು. ಆ ಬಳಿಕವೂ ಮುಮ್ತಾಜ್ ಅಲಿ ಕಾರನ್ನು ನಿಲ್ಲಿಸದೇ ಸಾಗಿದ್ದರು ಎಂದು ಬಸ್ ಚಾಲಕ ತಿಳಿಸಿದ್ದಾರೆ.ರಾಜ್ಯ ವಿಪತ್ತು ನಿರ್ವಹಣಾ ಪಡೆ, ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆ, ಕರಾವಳಿ ರಕ್ಷಣಾ ಪಡೆ, ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ತಂಡಗಳು ಫಲ್ಗುಣಿ ನದಿಯಲ್ಲಿ ಶೋಧ ನಡೆಸಿದವು. ಮುಳುಗು ತಜ್ಞ ಈಶ್ವರ್ ಮಲ್ಪೆ ಅವರೂ ಪಾಲ್ಗೊಂಡಿದ್ದರು. 'ಶೋಧಕಾರ್ಯ ಮುಂದುವರಿಯಲಿದೆ' ಎಂದು ನಗರ ಪೊಲೀಸ್ ಕಮಿಷನರ್ ಅನುಪಮ್‌ಅಗರ್ವಾಲ್ ತಿಳಿಸಿದರು.

ಮಾಜಿ ಶಾಸಕ ಬಿ.ಎ. ಮೊಹಿಯುದ್ದೀನ್ ಬಾವ ಹಾಗೂ ವಿಧಾನ ಪರಿಷತ್ತಿನ ಮಾಜಿ ಸದಸ್ಯ ಬಿ.ಎಂ. ಫಾರೂಕ್ ಅವರು ಮುಮ್ತಾಜ್ ಅಲಿ ಅವರ ಅಣ್ಣಂದಿರು. ಅವರಿಗೆ ಇಬ್ಬರು ಪುತ್ರಿಯರು, ಒಬ್ಬ ಮಗ ಹಾಗೂ ಪತ್ನಿ ಇದ್ದಾರೆ.

ಸಂಕ್ಷಿಪ್ತ ಸುದ್ದಿ

ಲಡಾಕ್ ಭವನದಲ್ಲೇ ಧರಣಿ ಆರಂಭಿಸಿದ ವಾಂಗ್ಚುಕ್

ನವದೆಹಲಿ (ಪಿಟಿಐ): ಪರಿಸರ ಹೋರಾಟಗಾರ ಸೋನಮ್ ವಾಂಗ್ಚುಕ್ ಅವರಿಗೆ ಜಂತರ್ ಮಂತರ್‌ನಲ್ಲಿ ಧರಣಿ ನಡೆಸಲು ಅವಕಾಶ ನಿರಾಕರಿಸಿದ ಹಿಂದೆಯೇ, ವಾಸ್ತವ್ಯ ಹೂಡಿದ್ದ ಲಡಾಕ್ ಭವನದಲ್ಲಿಯೇ ಭಾನುವಾರ ಧರಣಿ ಆರಂಭಿಸಿದರು.

ಸೋನಮ್ ವಾಂಗ್ಚುಕ್

'ಜಂತರ್ ಮಂತರ್‌ನಲ್ಲಿ ಧರಣಿ ನಡೆಸಲು ನನಗೆ ಅವಕಾಶವನ್ನು ನಿರಾಕರಿಸಲಾಯಿತು. ಇದರಿಂದ ಅನಿವಾರ್ಯವಾಗಿ ಲಡಾಕ್ ಭವನದಲ್ಲಿಯೇ ಧರಣಿ ಕೂರಬೇಕಾಯಿತು' ಎಂದು ಅವರು 'ಎಕ್ಸ್'ನಲ್ಲಿ ಮಾಹಿತಿ ಹಂಚಿಕೊಂಡಿದ್ದಾರೆ.

ಸಂವಿಧಾನದ 6ನೇ ಪರಿಚ್ಛೇದದಲ್ಲಿ ಲಡಾಕ್ ಸೇರ್ಪಡೆಗೆ ಒತ್ತಾಯಿಸಿ ವಾಂಗ್ಚುಕ್ ಪ್ರತಿಭಟಿಸುತ್ತಿದ್ದಾರೆ. ಅವರೊಂದಿಗೆ 18 ಜನರು ಧರಣಿ ಕುಳಿತಿದ್ದು, 'ಭಾರತ್ ಮಾತಾ ಕೀ ಜೈ', 'ಜೈ ಲಡಾಕ್', 'ಸೇವ್ ಲಡಾಕ್, ಸೇವ್ ಹಿಮಾಲಯ' ಘೋಷಣೆಗಳನ್ನು ಕೂಗಿದರು. 'ಮತ್ತೊಂದು ನಿರಾಕರಣೆ, ಮತ್ತೆ ಜಿಗುಪ್ಸೆ. ಧರಣಿ ಪ್ರತಿಭಟನೆಗೆ ನಿಯೋಜಿಸಲಾದ ಸ್ಥಳದಲ್ಲಿಯೂ ಪ್ರತಿಭಟನೆಗೆ ಅವಕಾಶ ನಿರಾಕರಿಸಿ ಬೆಳಿಗ್ಗೆ ಪತ್ರ ನೀಡಲಾಗಿದೆ' ಎಂದು ಅವರು ಪ್ರತಿಕ್ರಿಯಿಸಿದರು.

ಮಹಿಳೆ ಹೊಟ್ಟೆಯಲ್ಲಿ 2 ಕೆ.ಜಿ ಕೂದಲು

ಲಖನೌ (ಪಿಟಿಐ): ಕೂದಲು ತಿನ್ನುವ ಅಭ್ಯಾಸ ಹೊಂದಿದ್ದ 21 ವರ್ಷದ ಮಹಿಳೆಯ ಹೊಟ್ಟೆಯಲ್ಲಿ ಶೇಖರಣೆಯಾಗಿದ್ದ 2 ಕೆ.ಜಿ ಕೂದಲನ್ನು ಬರೇಲಿಯಲ್ಲಿ ವೈದ್ಯರು ಹೊರತೆಗೆದಿದ್ದಾರೆ.

ತಮ್ಮದೇ ಕೂದಲನ್ನು ಕಿತ್ತು ತಿನ್ನುವ ಮನೋರೋಗವನ್ನು ವೈದ್ಯಕೀಯ ಭಾಷೆಯಲ್ಲಿ 'ಟ್ರೈಕೋಫಾಜಿಯಾ' ಅಥವಾ 'ರುಪುಂಜೆಲ್ ಸಿಂಡ್ರೋಮ್' ಎಂದು ಕರೆಯಲಾಗುತ್ತದೆ.



ಹೊಟ್ಟೆನೋವು, ವಾಂತಿ ಕಾಣಿಸಿಕೊಂಡ ನಂತರ ಮಹಿಳೆ ಆಸ್ಪತ್ರೆಗೆ ದಾಖಲಾಗಿದ್ದರು. ಸಿ.ಟಿ ಸ್ಕ್ಯಾನ್‌ನಲ್ಲಿ ಹೊಟ್ಟೆಯೊಳಗೆ ಕೂದಲು ಪತ್ತೆಯಾಗಿತ್ತು. ನಂತರ ಮಹಿಳೆಯೊಂದಿಗೆ ಸಮಾಲೋಚನೆ ನಡೆಸಿದಾಗ 16 ವರ್ಷದಿಂದ ಕೂದಲು ತಿನ್ನುವ ಅಭ್ಯಾಸ ಇರುವುದಾಗಿ ಹೇಳಿಕೊಂಡಿದ್ದರು. ಸೆಪ್ಟೆಂಬರ್ 26ರಂದು ಶಸ್ತ್ರಚಿಕಿತ್ಸೆ ಮೂಲಕ ಕೂದಲನ್ನು ಹೊರತೆಗೆಯಲಾಗಿದೆ.

'ತನಿಖಾ ಸಂಸ್ಥೆಗಳು 'ಡಿಜಿಟಲ್ ಅರೆಸ್ಟ್' ಮಾಡುವುದಿಲ್ಲ..'

ನವದೆಹಲಿ (ಪಿಟಿಐ): ಸಿಬಿಐ, ಪೊಲೀಸ್, ಕಸ್ಟಮ್ಸ್ ಮತ್ತು ಜಾರಿ ನಿರ್ದೇಶನಾಲಯದ ಅಧಿಕಾರಿಗಳು ತನಿಖೆಯ ಭಾಗವಾಗಿ ವಿಡಿಯೊ ಕರೆ ಮೂಲಕ 'ಡಿಜಿಟಲ್ ಅರೆಸ್ಟ್' ಮಾಡುವುದಿಲ್ಲ ಎಂದು ಭಾರತೀಯ ಸೈಬರ್ ಕ್ರೈಂ ಸಮನ್ವಯ ಕೇಂದ್ರ (ಐ4ಸಿ) ಸ್ಪಷ್ಟನೆ ನೀಡಿದೆ.

'ಡಿಜಿಟಲ್ ಅರೆಸ್ಟ್' ಅಪರಾಧ ಕೃತ್ಯಗಳು ಗಣನೀಯವಾಗಿ ಏರುತ್ತಿರುವುದರಿಂದ ಈ ಸ್ಪಷ್ಟನೆ ನೀಡಿದೆ. 'ಡಿಜಿಟಲ್ ಅರೆಸ್ಟ್' ವಂಚನೆ ಪ್ರಕರಣ ಎಂದು ಹೇಳೀರುವ ಐ4ಸಿ, ಇಂಟರ್‌ನೆಟ್ ಮೂಲಕ ನಡೆಯುವ ಇವುಗಳ ಬಗ್ಗೆ ಜಾಗೃತರಾಗಿರಬೇಕು ಎಂದು ಸಲಹೆ ಮಾಡಿದೆ.

'ಆತಂಕಗೊಳ್ಳಬೇಡಿ, ಜಾಗ್ರತೆಯಿಂದಿರಿ. ವಿಡಿಯೊ ಕರೆ ಮಾಡುವ ಮೂಲಕ ಸಿಬಿಐ, ಪೊಲೀಸ್, ಕಸ್ಟಮ್ಸ್ ಮತ್ತು ಇ.ಡಿ ಅಧಿಕಾರಿಗಳು ಎಂದಿಗೂ ಡಿಜಿಟಲ್ ಅರೆಸ್ಟ್ ಮಾಡುವುದಿಲ್ಲ' ಎಂದು ಈ ಕುರಿತು ಹೇಳಿಕೆ ನೀಡಿದೆ.

ಒಂದು ವರ್ಷದಿಂದ ಬಳಕೆಯಾಗದೆ 6.65 ಲಕ್ಷ ಕಂಟೇನರ್‌ಗಳಲ್ಲಿ ಉಳಿದಿರುವ 'ಅರವಣ'

ಗೊಬ್ಬರವಾಗಲಿದೆ ಶಬರಿಮಲೆ ಪ್ರಸಾದ

ಪ್ರಜಾವಾಣಿ ವಾರ್ತೆ

ತಿರುವನಂತಪುರ: ದಕ್ಷಿಣ ಭಾರತದ ಖ್ಯಾತ ದೇವಸ್ಥಾನಗಳಲ್ಲಿ ಒಂದಾಗಿರುವ ಶಬರಿಮಲೆಯ ಅಯ್ಯಪ್ಪ ದೇವಸ್ಥಾನದ ಪ್ರಸಾದ 'ಅರವಣ'ವನ್ನು ವೈಜ್ಞಾನಿಕವಾಗಿ ಗೊಬ್ಬರವನ್ನಾಗಿ ಪರಿವರ್ತಿಸಲು ದೇವಸ್ಥಾನದ ಆಡಳಿತದ ಹೊಣೆ ಹೊತ್ತಿರುವ ತಿರುವಾಂಕೂರು ದೇವಸ್ವಂ ಮಂಡಳಿ (ಟಿಡಿಬಿ) ಮುಂದಾಗಿದೆ.

ಈ ಪ್ರಸಾದದಲ್ಲಿ ಬಳಸಿದ ಏಲಕ್ಕಿಯಲ್ಲಿ ಕೀಟನಾಶಕದ ಪ್ರಮಾಣವು ಅನುಮತಿಗಿಂತ ಹೆಚ್ಚಿತ್ತು ಎಂಬ ದೂರು ಕಳೆದ ವರ್ಷ ದಾಖಲಾದ ಕಾರಣಕ್ಕೆ, 6.65 ಲಕ್ಷ ಕಂಟೇನರ್‌ಗಳಲ್ಲಿ ಇರುವ ಅರವಣ ಪ್ರಸಾದವನ್ನು ಶಬರಿಮಲೆ ದೇವಸ್ಥಾನದಲ್ಲಿ ಒಂದು ವರ್ಷದಿಂದ ಬಳಸದೆ ಹಾಗೇ ಇರಿಸಲಾಗಿದೆ.

ಅರವಣ ಬಳಕೆಗೆ ಯೋಗ್ಯವಾಗಿದೆ ಎಂಬುದು ನಂತರದ ದಿನಗಳಲ್ಲಿ ಖಚಿತವಾದರೂ ₹5.5 ಕೋಟಿ ಮೌಲ್ಯದ ಪ್ರಸಾದವನ್ನು ಬಳಸದೆ ಇರಲು ಟಿಡಿಬಿ ತೀರ್ಮಾನಿಸಿತ್ತು. ಆದರೆ ಈ ಪ್ರಸಾದವನ್ನು ವಿಲೇವಾರಿ ಮಾಡುವುದು ಮಂಡಳಿಗೆ ಸವಾಲಾಗಿತ್ತು. ಅದನ್ನು ಅರಣ್ಯ ಪ್ರದೇಶದಲ್ಲಿ ವಿಲೇವಾರಿ ಮಾಡುವ ಪ್ರಸ್ತಾವ ಇತ್ತಾದರೂ ಅದಕ್ಕೆ ಅರಣ್ಯ ಅಧಿಕಾರಿಗಳಿಂದ ವಿರೋಧ ವ್ಯಕ್ತವಾಯಿತು.

ಬೇರೆ ಬೇರೆ ಆಯ್ಕೆಗಳನ್ನು ಪರಿಶೀಲಿಸಲಾಗಿತ್ತಾದರೂ ಭಕ್ತರ ಭಾವನೆಗಳಿಗೆ ಧಕ್ಕೆ ಆಗದ ರೀತಿಯಲ್ಲಿ ಪ್ರಸಾದವನ್ನು ವಿಲೇವಾರಿ ಮಾಡಬೇಕು ಎಂಬುದು ಮಂಡಳಿಯ ಬಯಕೆ ಆಗಿತ್ತು. ಹೀಗಾಗಿ, 'ಅರವಣ'ವನ್ನು ವೈಜ್ಞಾನಿಕವಾಗಿ ವಿಲೇವಾರಿ ಮಾಡಲು ಟೆಂಡರ್ ಕರೆಯಲಾಗಿತ್ತು.

ಕೇರಳದ 'ಇಂಡಿಯನ್ ಸೆಂಟ್ರಿಫ್ಯೂಗ್ ಎಂಜಿನಿಯರಿಂಗ್ ಸಲ್ಯೂಷನ್ಸ್' (ಐಸಿಇಎಸ್) ಹೆಸರಿನ ಕಂಪನಿಯು ಟೆಂಡರ್ ಪಡೆದುಕೊಂಡಿದೆ ಎಂದು ಮಂಡಳಿಯ ಅಧ್ಯಕ್ಷ ಪಿ.ಎಸ್. ಪ್ರಶಾಂತ್ 'ಪ್ರಜಾವಾಣಿ'ಗೆ ತಿಳಿಸಿದರು. 'ಅರವಣ'ವನ್ನು ಹೈದರಾಬಾದ್‌ನಲ್ಲಿ ಇರುವ ತನ್ನ ಘಟಕಕ್ಕೆ ಒಯ್ದು, ಅದನ್ನು ವೈಜ್ಞಾನಿಕವಾಗಿ ಗೊಬ್ಬರವನ್ನಾಗಿ ಪರಿವರ್ತಿಸಲಾಗುತ್ತದೆ ಎಂದು ಕಂಪನಿ ಹೇಳಿದೆ.

ಅಕ್ಕಿ ಮತ್ತು ಬೆಲ್ಲವನ್ನು ಬಳಸಿ 'ಅರವಣ' ಸಿದ್ಧಪಡಿಸಲಾಗುತ್ತದೆ. ಇದು ಶಬರಿಮಲೆ ದೇವಸ್ಥಾನಕ್ಕೆ ಆದಾಯದ ಒಂದು ಪ್ರಮುಖ ಮೂಲ ಕೂಡ ಹೌದು. ಕಳೆದ ವರ್ಷದ ಯಾತ್ರೆಯ ಸಂದರ್ಭದಲ್ಲಿ ಈ ಪ್ರಸಾದ ಮಾರಾಟದಿಂದ ₹147 ಕೋಟಿ ವರಮಾನ ಬಂದಿತ್ತು. ಇದು ದೇವಸ್ಥಾನದ ಒಟ್ಟು ವರಮಾನದ ಶೇಕಡ 40ರಷ್ಟು.

ಮಹಾರಾಷ್ಟ್ರದ ಪ್ರಕರಣ: ಹಗುರವಾಗಿ ತೆಗೆದುಕೊಳ್ಳದಂತೆ 'ಸುಪ್ರೀಂ' ಚಾಟಿ

'ಮಹಿಳಾ ಜನಪ್ರತಿನಿಧಿಗಳ ವಜಾ ಸಲ್ಲ'

ನವದೆಹಲಿ (ಪಿಟಿಐ): ಚುನಾಯಿತ ಮಹಿಳಾ ಜನಪ್ರತಿನಿಧಿಗಳನ್ನು, ಅದರಲ್ಲೂ ಮುಖ್ಯವಾಗಿ ಗ್ರಾಮಾಂತರ ಪ್ರದೇಶಗಳಿಗೆ ಸೇರಿದ ಮಹಿಳಾ ಜನಪ್ರತಿನಿಧಿಗಳನ್ನು ಅವರ ಸ್ಥಾನದಿಂದ ತೆಗೆಯುವುದನ್ನು ಹಗುರವಾಗಿ ತೆಗೆದುಕೊಳ್ಳಬಾರದು ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ಮಹಾರಾಷ್ಟ್ರದ ಗ್ರಾಮವೊಂದರ ಮಹಿಳೆಯನ್ನು ಸರಪಂಚ ಸ್ಥಾನದಿಂದ ತೆಗೆದುಹಾಕಿದ ಕ್ರಮವನ್ನು ಕೋರ್ಟ್ ರದ್ದುಪಡಿಸಿದೆ.

ಮಹಿಳೆಯೊಬ್ಬರು ಸರಪಂಚ ಹುದ್ದೆಗೆ ಏರಿದ್ದನ್ನು ಗ್ರಾಮಸ್ಥರಿಗೆ ಒಪ್ಪಿಕೊಳ್ಳಲು ಆಗದಿದ್ದುದಕ್ಕೆ ಈ ಪ್ರಕರಣವು ಒಳ್ಳೆಯ ಉದಾಹರಣೆ ಎಂದು ನ್ಯಾಯಮೂರ್ತಿಗಳಾದ ಸೂರ್ಯಕಾಂತ್ ಮತ್ತು ಉಜ್ವಲ್ ಭುಯಾನ್ ಅವರು ಇದ್ದ ವಿಭಾಗೀಯ ಪೀಠವು ಹೇಳಿದೆ.

ತಮ್ಮ ಪರವಾಗಿ ಮಹಿಳಾ ಸರಪಂಚರೊಬ್ಬರು ತೀರ್ಮಾನಗಳನ್ನು ಕೈಗೊಳ್ಳುವುದನ್ನು, ಅವರು ನೀಡುವ ಸೂಚನೆಗಳನ್ನು ತಾವು ಪಾಲಿಸಬೇಕಿರುವುದನ್ನು ಒಪ್ಪಿಕೊಳ್ಳುವುದಕ್ಕೆ ಗ್ರಾಮಸ್ಥರಿಗೆ ಆಗಿಲ್ಲದ ಪ್ರಕರಣ ಇದು ಎಂದು ಪೀಠವು ಹೇಳಿದೆ.

'ಲಿಂಗ ಸಮಾನತೆ, ಎಲ್ಲ ವಲಯಗಳಲ್ಲಿ ಮಹಿಳಾ ಸಬಲೀಕರಣ, ಚುನಾಯಿತ ಸಂಸ್ಥೆಗಳಲ್ಲಿ ಮಹಿಳೆಯರಿಗೆ ಸಮರ್ಪಕವಾದ ಪ್ರಾತಿನಿಧ್ಯದಂತಹ ಗುರಿಗಳನ್ನು ಈಡೇರಿಸಲು ಒಂದು ದೇಶವಾಗಿ ನಾವು ಯತ್ನ ನಡೆಸುತ್ತಿರುವಾಗ, ತಳಮಟ್ಟದಲ್ಲಿ ನಡೆಯುವ ಇಂತಹ ಪ್ರಕರಣಗಳು ನಾವು ಸಾಧಿಸಿರಬಹುದಾದ ಒಂದಿಷ್ಟು ಮುನ್ನಡೆಯ ಮೇಲೆ ಕರಿನೆರಳು ಬೀಳುವಂತೆ ಮಾಡುತ್ತವೆ' ಎಂದು ಸೆಪ್ಟೆಂಬರ್ 27ರಂದು ನೀಡಿರುವ ತೀರ್ಪಿನಲ್ಲಿ ಪೀಠ ಹೇಳಿದೆ.

ಸಾರ್ವಜನಿಕ ಹುದ್ದೆಗಳಿಗೆ ಬರುವ ಮಹಿಳೆಯರು ಗಣನೀಯ ಪ್ರಮಾಣದಲ್ಲಿ ಹೋರಾಟ ನಡೆಸಿದ ನಂತರವೇ ಅಲ್ಲಿಗೆ ಬಂದಿರುತ್ತಾರೆ ಎಂಬುದನ್ನು ಅರ್ಥಮಾಡಿಕೊಳ್ಳಬೇಕು ಎಂದು ಪೀಠ ಹೇಳಿದೆ.

ಮಹಾರಾಷ್ಟ್ರದ ಜಲಗಾಂವ್ ಜಿಲ್ಲೆಯ ವಿಚ್ಖೇಡಾ ಗ್ರಾಮದ ಸರಪಂಚ ಸ್ಥಾನದಿಂದ ತಮ್ಮ ತೆಗೆದುಹಾಕಬೇಕು ಎಂದು ಆದೇಶ ಹೊರಡಿಸಿದ್ದನ್ನು ಪ್ರಶ್ನಿಸಿ ಮನೀಶ್ ರವೀಂದ್ರ ಪನಪಾಟೀಲ ಅವರು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿ, ಪೀಠವು ಈ ತೀರ್ಪು ನೀಡಿದೆ. ಮನೀಶ್ ಅವರು ತಮ್ಮ ಅತ್ತೆಯ ಜೊತೆ ಸರ್ಕಾರಿ ಜಾಗದಲ್ಲಿ ನಿರ್ಮಿಸಿದ ಮನೆಯಲ್ಲಿ ವಾಸಿಸುತ್ತಿದ್ದಾರೆ ಎಂಬ ದೂರು ದಾಖಲಾದ ನಂತರ, ಅವರನ್ನು ಸರಪಂಚ ಸ್ಥಾನದಿಂದ ತೆಗೆಯುವಂತೆ ಆದೇಶಿಸಲಾಗಿತ್ತು. ಆರೋಪವನ್ನು ನಿರಾಕರಿಸಿದ್ದ ಮನೀಶ್, ತಾವು ತಮ್ಮ ಪತಿ ಮತ್ತು ಮಕ್ಕಳ ಜೊತೆ ಬಾಡಿಗೆ ಮನೆಯೊಂದರಲ್ಲಿ ವಾಸಿಸುತ್ತಿರುವುದಾಗಿ ಹೇಳಿದ್ದರು.

ಹೀಗಿದ್ದರೂ, ಕಲೆಕ್ಟರ್ ಅವರು ಈ ಆದೇಶ ಹೊರಡಿಸಿದ್ದರು. ಇದನ್ನು ವಿಭಾಗೀಯ ಆಯುಕ್ತರು ಎತ್ತಿ ಹಿಡಿದಿದ್ದರು. ಆಯುಕ್ತರ ಆದೇಶವನ್ನು ಪ್ರಶ್ನಿಸಿ ಸಲ್ಲಿಸಿದ್ದ ಅರ್ಜಿಯನ್ನು ಬಾಂಬೆ ಹೈಕೋರ್ಟ್ ವಜಾಗೊಳಿಸಿತ್ತು.

ಮನೀಶ್ ಅವರು ಸರ್ಕಾರಿ ಜಮೀನನ್ನು ಕಬಳಿಸಿದ್ದಾರೆ ಎಂಬ ಆರೋಪವು ಸತ್ಯವೇ ಎನ್ನುವುದನ್ನು ಪರಿಶೀಲಿಸುವ ಯತ್ನವನ್ನೇ ನಡೆಸದೆ, ಅವರನ್ನು ಹುದ್ದೆಯಿಂದ ಕೆಳಗಿಳಿಯುವಂತೆ ಆದೇಶ ಹೊರಡಿಸಲಾಗಿತ್ತು ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ಮೇಘಾಲಯ ಪ್ರವಾಹದಲ್ಲಿ 10 ಮಂದಿ ಸಾವು

ಶಿಲ್ಲಾಂಗ್ (ಪಿಟಿಐ): ಮೇಘಾಲಯದ ದಕ್ಷಿಣ ಗಾರೋ ಪರ್ವತ ಜಿಲ್ಲೆಯಲ್ಲಿ ಸುರಿದ ಭಾರಿ ಮಳೆಯಿಂದ ಉಂಟಾದ ದಿಢೀರ್ ಪ್ರವಾಹದಲ್ಲಿ ಸಿಲುಕಿ ಒಂದೇ ಕುಟುಂಬದ ಏಳು ಮಂದಿ ಸೇರಿ ಹತ್ತು ಜನರು ಮೃತಪಟ್ಟಿದ್ದಾರೆ.

ಎಡಬಿಡದ ಮಳೆ ಸುರಿದ ಪರಿಣಾಮ ಗಾಸುವಾಪಾರ ಪ್ರದೇಶದಲ್ಲಿ ಭೂಕುಸಿತ ಸಂಭವಿಸಿದೆ. ಭೂಕುಸಿತ ಸಂದರ್ಭದಲ್ಲಿ ಕುಟುಂಬದ ಏಳು ಮಂದಿ ಮನೆಯೊಳಗೆ ಇದ್ದರು. ಮೃತರ ಪೈಕಿ ಮೂವರು ಅಪ್ರಾಪ್ತರು ಇದ್ದಾರೆ.

ಪ್ರವಾಹಪೀಡಿತ ಪ್ರದೇಶಗಳಲ್ಲಿ ರಕ್ಷಣಾ ಕಾರ್ಯಾಚರಣೆಗಾಗಿ ರಾಷ್ಟ್ರೀಯ ವಿಪತ್ತು ನಿರ್ವಹಣೆ ದಳ ಮತ್ತು ರಾಜ್ಯ ವಿಪತ್ತು ನಿರ್ವಹಣೆ ದಳ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ.

ಸುದ್ದಿ 2 ನಿಮಿಷ

ರಾಷ್ಟ್ರೀಯ ಪ್ರಶಸ್ತಿ ಅಮಾನತುಗೊಳಿಸಿದ ಐ.ಬಿ

ನವದೆಹಲಿ (ಪಿಟಿಐ): ಲೈಂಗಿಕ ಕಿರುಕುಳದ ಆರೋಪ ಎದುರಿಸುತ್ತಿರುವ ನೃತ್ಯ ಸಂಯೋಜಕ ಜಾನಿ ಮಾಸ್ಟರ್‌ಗೆ ಘೋಷಿಸಲಾಗಿದ್ದ ರಾಷ್ಟ್ರೀಯ ಪ್ರಶಸ್ತಿಯನ್ನು ಅಮಾನತ್ತಿನಲ್ಲಿರಿಸಿ ವಾರ್ತಾ ಹಾಗೂ ಪ್ರಸಾರ ಖಾತೆ ಸಚಿವಾಲಯದ ರಾಷ್ಟ್ರೀಯ ಪ್ರಶಸ್ತಿ ಘಟಕವು ನಿರ್ಧಾರ ತೆಗೆದುಕೊಂಡಿದೆ.

70ನೇ ರಾಷ್ಟ್ರೀಯ ಸಿನಿಮಾ ಪ್ರಶಸ್ತಿ ಪ್ರದಾನ ಸಮಾರಂಭವು ನವದೆಹಲಿಯ ವಿಜ್ಞಾನ ಭವನದಲ್ಲಿ ಮಂಗಳವಾರ ನಡೆಯಲಿದೆ. ಅದಕ್ಕೂ ಎರಡು ದಿನಗಳ ಮುಂಚೆಯೇ, ಜಾನಿ ಮಾಸ್ಟರ್‌ಗೆ ನೀಡಿದ್ದ ಆಹ್ವಾನವನ್ನು ಇಲಾಖೆಯ ಅಧಿಕಾರಿಗಳು ಹಿಂದಕ್ಕೆ ಪಡೆದಿದ್ದಾರೆ.

'ತಿರುಚಿತ್ರಂಬಲಂ'ನ ಚಿತ್ರದ 'ಮೇಘಮ್ ಕರುಕ್ಕಥಾ' ಹಾಡಿಗೆ ಅತ್ಯುತ್ತಮ ನೃತ್ಯ ಸಂಯೋಜನೆಗಾಗಿ ರಾಷ್ಟ್ರೀಯ ಪ್ರಶಸ್ತಿಯನ್ನು ಘೋಷಿಸಲಾಗಿತ್ತು. ನೃತ್ಯ ನಿರ್ದೇಶಕ ಸತೀಶ್ ಕೃಷ್ಣನ್ ಅವರೊಂದಿಗೆ ಜಾನಿ ಮಾಸ್ಟರ್ ಪ್ರಶಸ್ತಿ ಹಂಚಿಕೊಂಡಿದ್ದರು.

ಆರೋಪ ಏನು..?: ಜತೆಯಲ್ಲಿ ಕೆಲಸ ಮಾಡುತ್ತಿದ್ದ ಯುವತಿ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪದಡಿ ಸೆ.15ರಂದು ಜಾನಿ ಮಾಸ್ಟರ್ ವಿರುದ್ಧ ಪ್ರಕರಣ ದಾಖಲಾಗಿತ್ತು. ಸೆ. 19ರಂದು ಅವರನ್ನು ಸೈಬರಾಬಾದ್ ಪೊಲೀಸರು ಗೋವಾದಲ್ಲಿ ಬಂಧಿಸಿ, ನ್ಯಾಯಾಲಯದ ಮುಂದೆ ಹಾಜರುಪಡಿಸಿದ್ದರು. ನ್ಯಾಯಾಲಯವು 14 ದಿನಗಳ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿತ್ತು. ಆದರೆ, ಅವರಿಗೆ ರಾಷ್ಟ್ರೀಯ ಪ್ರಶಸ್ತಿ ಬಂದಿದ್ದು, ಸ್ವೀಕಾರ ಸಮಾರಂಭಕ್ಕೆ ತೆರಳಲು ಅವಕಾಶ ನೀಡುವಂತೆ ಕೋರಿ ಜಾನಿ ಮಾಸ್ಟರ್ ಸಲ್ಲಿಸಿದ್ದ ಅರ್ಜಿ ಪರಿಗಣಿಸಿದ್ದ ಸ್ಥಳೀಯ ನ್ಯಾಯಾಲಯ ಮಧ್ಯಂತರ ಜಾಮೀನು ನೀಡಿತ್ತು.

ಎರಡನೆಯ ಬಾರಿಗೆ ಮರಣೋತ್ತರ ಪರೀಕ್ಷೆಗೆ ಸೂಚನೆ

ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳದ ದಕ್ಷಿಣ 24 ಪರಗಣ ಜಿಲ್ಲೆಯಲ್ಲಿ ಸಾಮೂಹಿಕ ಅತ್ಯಾಚಾರಕ್ಕೆ ಒಳಗಾಗಿ, ಹತ್ಯೆಯಾದ 10 ವರ್ಷದ ಬಾಲಕಿಯ ಮರಣೋತ್ತರ ಪರೀಕ್ಷೆಯನ್ನು ಇನ್ನೊಮ್ಮೆ ನಡೆಸಲು ಕಲ್ಕತ್ತ ಹೈಕೋರ್ಟ್ ಭಾನುವಾರ ಆದೇಶಿಸಿದೆ.

ಟ್ಯೂಷನ್ ಕ್ಲಾಸ್ ಮುಗಿಸಿ ಮನೆಗೆ ಮರಳುತ್ತಿದ್ದ ಬಾಲಕಿಯ ಮೇಲೆ ಸಾಮೂಹಿಕ ಅತ್ಯಾಚಾರ ನಡೆಸಿ, ಹತ್ಯೆಗೈದಿದ್ದಾರೆ ಎನ್ನಲಾಗಿದೆ.

ಬಾಲಕಿಯ ಪಾಲಕರು ಸಲ್ಲಿಸಿರುವ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ತೀರ್ಥಂಕರ ಘೋಷ್ ಅವರು, ಏಮ್ಸ್ ಆಸ್ಪತ್ರೆಯಲ್ಲಿ ಎರಡನೆಯ ಬಾರಿಗೆ ಮರಣೋತ್ತರ ಪರೀಕ್ಷೆ ನಡೆಸಬೇಕು. ಪರೀಕ್ಷೆ ವೇಳೆ ಬರೂಈಪುರದ ಹೆಚ್ಚುವರಿ ಮುಖ್ಯ ನ್ಯಾಯಾಂಗ ಮ್ಯಾಜಿಸ್ಟ್ರೇಟರು ಹಾಜರಿರಬೇಕು. ಪೋಕ್ಸೊ ಕಾಯ್ದೆಯಡಿ ಈ ಪ್ರಕರಣ ದಾಖಲಿಸಿಕೊಳ್ಳಬೇಕು ಎಂದು ಆದೇಶ ನೀಡಿದ್ದಾರೆ.

ಮರಣೋತ್ತರ ಪರೀಕ್ಷೆಯನ್ನು ರಾಜ್ಯ ಸರ್ಕಾರದ ಆಸ್ಪತ್ರೆಗಳಲ್ಲಿ ಕೆಲಸ ಮಾಡುವ ವೈದ್ಯರು ನಡೆಸುವಂತಿಲ್ಲ; ಏಮ್ಸ್‌ನ ವೈದ್ಯರೇ ಪರೀಕ್ಷೆ ನಡೆಸಬೇಕು ಎಂದೂ ನ್ಯಾಯಮೂರ್ತಿಗಳು ಸ್ಪಷ್ಟವಾಗಿ ಹೇಳಿದ್ದಾರೆ. ಈ ಪ್ರಕರಣ ಸಂಬಂಧ ವ್ಯಕ್ತಿಯನ್ನು ಬಂಧಿಸಲಾಗಿದೆ.

ಕೋಲ್ಕತ್ತ: ವೈದ್ಯರ ಉಪವಾಸ ಸತ್ಯಾಗ್ರಹ

ಕೋಲ್ಕತ್ತ (ಪಿಟಿಐ): ಆರ್.ಜಿ. ಕರ್ ಆಸ್ಪತ್ರೆ ಮತ್ತು ವೈದ್ಯಕೀಯ ಕಾಲೇಜಿನ ವೈದ್ಯೆಯ ಹತ್ಯೆ ಪ್ರಕರಣದಲ್ಲಿ ನ್ಯಾಯ ಒದಗಿಸುವಂತೆ ಮತ್ತು ಕೆಲಸದ ಸ್ಥಳದಲ್ಲಿ ಸುರಕ್ಷತೆಗೆ ಆಗ್ರಹಿಸಿ ಕಿರಿಯ ವೈದ್ಯರು, ನಗರದ ಧರ್ಮತಲಾ ಪ್ರದೇಶದ ಕೇಂದ್ರ ಭಾಗದಲ್ಲಿ ಭಾನುವಾರವೂ ಆಮರಣಾಂತ ಉಪವಾಸ ಸತ್ಯಾಗ್ರಹ ಮುಂದುವರಿಸಿದರು.

ವೈದ್ಯರು ನೀಡಿದ್ದ ಗಡುವನ್ನು ರಾಜ್ಯ ಸರ್ಕಾರ ತಿರಸ್ಕರಿಸಿದ ನಂತರ ಕಿರಿಯ ವೈದ್ಯಾಧಿಕಾರಿಗಳು ಶನಿವಾರ ರಾತ್ರಿ ಆಮರಣಾಂತ ಉಪವಾಸ ಸತ್ಯಾಗ್ರಹ ಪ್ರಾರಂಭಿಸಿದರು.

ಲೋಹದ ಹಕ್ಕಿಗಳ ಕಸರತ್ತು... ಭಾರತೀಯ ವಾಯುಪಡೆಯ 92ನೆಯ ವರ್ಷಾಚರಣೆಯ ಭಾಗವಾಗಿ ಚೆನ್ನೈನ ಮರೀನಾ ಬೀಚ್‌ನಲ್ಲಿ ಭಾನುವಾರ ನಡೆದ ಏರ್ ಶೋ ಕಾರ್ಯಕ್ರಮದಲ್ಲಿ ವಾಯುಪಡೆಯ 'ಸಾರಂಗ್' ತಂಡವು ವೈಮಾನಿಕ ಕಸರತ್ತು ಪ್ರದರ್ಶಿಸಿತು –ಪಿಟಿಐ ಚಿತ್ರ

ಏರ್ ಶೋ: ಐವರು ವೀಕ್ಷಕರ ಸಾವು

ಪ್ರಜಾವಾಣಿ ವಾರ್ತೆ/ಪಿಟಿಐ

ಚೆನ್ನೈ: ಭಾರತೀಯ ವಾಯುಪಡೆಯ (ಐಎಎಫ್) 92ನೇ ವಾರ್ಷಿಕೋತ್ಸವದ ಅಂಗವಾಗಿ ಇಲ್ಲಿನ ಮರೀನಾ ಬೀಚ್‌ನಲ್ಲಿ ಭಾನುವಾರ ನಡೆಸಿದ ವೈಮಾನಿಕ ಪ್ರದರ್ಶನ ವೀಕ್ಷಿಸಲು ಬಂದಿದ್ದ ಐವರು ಅಸ್ವಸ್ಥಗೊಂಡು ಮೃತಪಟ್ಟಿದ್ದಾರೆ. 40 ಮಂದಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಭಾರತೀಯ ಸೇನೆಯ ಕಸರತ್ತು ವೀಕ್ಷಿಸಲು 10 ಲಕ್ಷಕ್ಕೂ ಹೆಚ್ಚು ಜನರು ಏಷ್ಯಾದ ಅತಿ ಉದ್ದದ ಕಡಲತೀರ ಮರೀನಾ ಬೀಚ್ ಬಳಿ ಸೇರಿದ್ದರು. ಸುಡುವ ಬಿಸಿಲಿನಲ್ಲಿ ಸರಿಯಾದ ಸಾರಿಗೆ ವ್ಯವಸ್ಥೆ ಸೇರಿ ಅಗತ್ಯ ಸೌಲಭ್ಯಗಳು ಇಲ್ಲದ ಕಾರಣ ಜನರು ಕಿಲೋಮೀಟರ್ ಗಟ್ಟಲೆ ನಡೆಯಬೇಕಾದ ಅನಿವಾರ್ಯತೆಗೆ ಸಿಲುಕಿದರು. ಕುಡಿಯುವ ನೀರಿನ ವ್ಯವಸ್ಥೆಯೂ ಇರಲಿಲ್ಲ.

ನಿರ್ಜಲೀಕರಣ, ಬಳಲಿಕೆಯಿಂದಾಗಿ ಅಸ್ವಸ್ಥಗೊಂಡು ಐವರು ಮರೀನಾ ಬೀಚ್ ಸಮೀಪದ ಅಣ್ಣಾ ಸಲೈ ರಸ್ತೆಯಲ್ಲಿ ಮೃತಪಟ್ಟಿದ್ದಾರೆ. ನಗರದಾದ್ಯಂತ ಆಸ್ಪತ್ರೆಗಳಲ್ಲಿ 150ಕ್ಕೂ ಹೆಚ್ಚು ಜನರಿಗೆ ಚಿಕಿತ್ಸೆ ನೀಡಿ ಕಳುಹಿಸಲಾಗಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಲೋಹದ ಹಕ್ಕಿಗಳ ರೋಮಾಂಚನಕಾರಿ ಕಸರತ್ತು ವೀಕ್ಷಿಸುವಾಗ ಮರೀನಾ ಬೀಚ್‌ನಲ್ಲಿ ಪ್ರೇಕ್ಷಕರ ದಟ್ಟಣೆಯಿಂದ ಸಾವು ಸಂಭವಿಸಿವೆ. ವೈಮಾನಿಕ ಪ್ರದರ್ಶನದಲ್ಲಿನ ವೀಕ್ಷಕರ ಹಾಜರಾತಿ ಲಿಮ್ಕಾ ಬುಕ್ ಆಫ್ ರೆಕಾರ್ಡ್ಸ್‌ನಲ್ಲಿ ಸ್ಥಾನ ಪಡೆಯಿತು. ಆದರೆ, ಸಾವು–ನೋವಿನ ಪ್ರಕರಣಗಳು ಕಾರ್ಯಕ್ರಮದ ಹೊಳಪನ್ನು ಕುಗ್ಗಿಸಿದವು.

ವೈಮಾನಿಕ ಪ್ರದರ್ಶನದ ಬಗ್ಗೆ ಐಎಎಫ್ ಮತ್ತು ರಾಜ್ಯ ಸರ್ಕಾರವು ವ್ಯಾಪಕವಾಗಿ ಪ್ರಚಾರ ಮಾಡಿದ್ದವು. ಸೇರಿದ್ದ 10 ಲಕ್ಷಕ್ಕೂ ಹೆಚ್ಚು ಜನರನ್ನು ನಿಭಾಯಿಸಲು ಮಾಡಿಕೊಂಡಿದ್ದ ವ್ಯವಸ್ಥೆಗಳು ಮಾತ್ರ ಅಸಮರ್ಪಕವಾಗಿದ್ದವು. ಬೆಳಿಗ್ಗೆ 11 ರಿಂದ ಮಧ್ಯಾಹ್ನ 1ರ ವರೆಗೆ ನಡೆದ ಏರ್ ಶೋಗಾಗಿ ಮರೀನಾ ಬೀಚ್‌ನಲ್ಲಿ ಬೆಳಿಗ್ಗೆ 7 ಗಂಟೆಯಿಂದಲೇ ಜನರು ಸೇರಲು ಪ್ರಾರಂಭಿಸಿದ್ದರು. ನಗರದಾದ್ಯಂತ ಭಾರಿ ಸಂಚಾರ ದಟ್ಟಣೆ ಕೂಡ ಕಂಡುಬಂದಿತು.

'ಸಂಚಾರ ದಟ್ಟಣೆ ನಿಭಾಯಿಸಲು ಯಾವುದೇ ಕ್ರಮ ತೆಗೆದುಕೊಂಡಿರಲಿಲ್ಲ. ಜನರು ಕಿಲೋಮೀಟರ್‌ಗಟ್ಟಲೆ ಕಾಲ್ನಡಿಯಲ್ಲೇ ಸಾಗಬೇಕಾಗಿ ಬಂದಿದೆ. ನನ್ನ ಕಣ್ಣೆದುರಲ್ಲೇ ಕೆಲವರು ಪ್ರಜ್ಞೆ ಕಳೆದುಕೊಂಡು ಬಿದ್ದರು' ಎಂದು ಆನಂದಿ ಎಂಬವರು 'ಪ್ರಜಾವಾಣಿ'ಗೆ ತಿಳಿಸಿದರು.

ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ವಾಗ್ದಾಳಿ

'ಬಿಜೆಪಿಯಿಂದ ಕೋಮು ಪ್ರಚೋದನೆ'

ಮುಂಬೈ: ಬಿಜೆಪಿ ಮತ್ತು ಸಂಘ ಪರಿವಾರವು (ಆರ್‌ಎಸ್‌ಎಸ್) ಗೋವಾದಲ್ಲಿ ಉದ್ದೇಶಪೂರ್ವಕವಾಗಿ ಕೋಮು ಉದ್ವಿಗ್ನತೆ ಪ್ರಚೋದಿಸುತ್ತಿವೆ ಎಂದು ಲೋಕಸಭೆ ನಾಯಕ ರಾಹುಲ್ ಗಾಂಧಿ ಭಾನುವಾರ ವಾಗ್ದಾಳಿ ನಡೆಸಿದ್ದಾರೆ.

ಕ್ಯಾಥೋಲಿಕ್ ಮಿಷನರಿ ಸೇಂಟ್ ಫ್ರಾನ್ಸಿಸ್ ಕ್ಸೇವಿಯರ್ ಅವರಿಗೆ ನೀಡಿರುವ ಸಂತ ಪದವಿ ಮತ್ತು ಗೋವಾ ರಕ್ಷಕ (ಗೋಯೆಂಕೊ ಸಾಹಿಬ್) ಗೌರವವನ್ನು ಪ್ರಶ್ನಿಸಿ, ಅವರ ಅಸ್ಥಿಯನ್ನು ಡಿಎನ್‌ಎ ಪರೀಕ್ಷೆಗೆ ಒಳಪಡಿಸಬೇಕು ಎಂದು ಆರ್‌ಎಸ್‌ಎಸ್‌ನ ಗೋವಾ ಘಟಕದ ಮಾಜಿ ಮುಖ್ಯಸ್ಥ ಸುಭಾಷ್ ವೆಲಿಂಗ್‌ಕರ್ ಹೇಳಿಕೆ ನೀಡಿರುವುದು ವಿವಾದ ಹುಟ್ಟು ಹಾಕಿದೆ. ಈ ಹೇಳಿಕೆ ವಿರುದ್ಧ ಗೋವಾದಲ್ಲಿ ಕ್ರೈಸ್ತರು ಪ್ರತಿಭಟನೆ ನಡೆಸುತ್ತಿದ್ದಾರೆ.

ಇದರ ಬೆನ್ನಲ್ಲೇ, ಡಾ. ಪ್ರಮೋದ್ ಸಾವಂತ್ ನೇತೃತ್ವದ ಸರ್ಕಾರವನ್ನು ಟೀಕಿಸಿರುವ ರಾಹುಲ್ ಗಾಂಧಿ, 'ಗೋವಾದ ಆಕರ್ಷಣೆಯು ಅದರ ನೈಸರ್ಗಿಕ ಸೌಂದರ್ಯ, ಅದರ ವೈವಿಧ್ಯಮಯ ಮತ್ತು ಸಾಮರಸ್ಯದಿಂದ ಕೂಡಿದ ಜನರ ಪ್ರೀತಿ ಹಾಗೂ ಆತಿಥ್ಯದಲ್ಲಿದೆ. ಆದರೆ, ದುರದೃಷ್ಟವಶಾತ್, ಬಿಜೆಪಿ ಆಡಳಿತದಲ್ಲಿ, ಈ ಸಾಮರಸ್ಯವು ದಾಳಿಗೆ ಒಳಗಾಗುತ್ತಿದೆ' ಎಂದಿದ್ದಾರೆ.

'ಗೋವಾದಲ್ಲಿ ಬಿಜೆಪಿ ತಂತ್ರ ಸ್ಪಷ್ಟವಾಗಿದೆ; ಜನರನ್ನು ವಿಭಜಿಸಿ-ಗೋವಾದ ನೈಸರ್ಗಿಕ ಹಾಗೂ ಸಾಮಾಜಿಕ ಪರಂಪರೆಯ ಮೇಲೆ ದಾಳಿ ನಡೆಸಲಾಗುತ್ತಿದೆ. ಗೋವಾ ಜನರರು ಮತ್ತು ಇಡೀ ದೇಶವು ಈ ವಿಭಜಕ ಕಾರ್ಯಸೂಚಿಯನ್ನು ನೋಡುತ್ತಿದೆ. ಇದರ ವಿರುದ್ಧ ಎಲ್ಲರೂ ಒಗ್ಗಟ್ಟಿನಿಂದ ನಿಂತಿದ್ದಾರೆ' ಎಂದು ರಾಹುಲ್ ಹೇಳಿದರು.

ಶಾಂತಿ ಕಾಪಾಡಿ: ಸಿಎಸ್‌ಜೆಪಿ

ಸುಭಾಷ್ ವೆಲಿಂಗ್‌ಕರ್ ವಿರುದ್ಧ ಪ್ರತಿಭಟನೆ ನಡೆಯುತ್ತಿರುವ ಮಧ್ಯೆ, ಗೋವಾ ಚರ್ಚ್‌ನ ಪ್ರಮುಖರು ರಾಜ್ಯದಲ್ಲಿ ಶಾಂತಿ ಮತ್ತು ಸಂಯಮ ಕಾಯ್ದುಕೊಳ್ಳುವಂತೆ ಕರೆ ನೀಡಿದ್ದಾರೆ.

ಗೋವಾ ಚರ್ಚ್‌ನ ಅಂಗವಾಗಿರುವ ಕೌನ್ಸಿಲ್ ಫಾರ್ ಸೋಶಿಯಲ್ ಜಸ್ಟೀಸ್ ಅಂಡ್ ಪೀಸ್ (ಸಿಎಸ್‌ಜೆಪಿ), ಶಾಂತಿ ಕಾಪಾಡುವಂತೆ ಮನವಿ ಮಾಡಿದೆ.

ಸಿಎಸ್‌ಜೆಪಿ ಕಾರ್ಯಕಾರಿ ಕಾರ್ಯದರ್ಶಿ ಫಾದರ್ ಸವಿಯೋ ಫೆರ್ನಾಂಡಿಸ್ ಅವರು, ವೆಲಿಂಗ್‌ಕರ್ ನೀಡಿರುವ ಅವಹೇಳನಕಾರಿ ಹೇಳಿಕೆಗಳನ್ನು ಕ್ಯಾಥೋಲಿಕ್ ಸಮುದಾಯ ಖಂಡಿಸುತ್ತದೆ ಎಂದಿದ್ದಾರೆ.

ವೆಲಿಂಗ್‌ಕರ್ ಬಂಧನಕ್ಕೆ ಒತ್ತಾಯಿಸಿ ರಸ್ತೆ ತಡೆದ ನಂತರ ಶನಿವಾರ ತಡರಾತ್ರಿ ದಕ್ಷಿಣ ಗೋವಾದ ಮರ್ಗೋವಾ ನಗರದಲ್ಲಿ ಪೊಲೀಸರು ಪ್ರತಿಭಟನಕಾರರ ಗುಂಪಿನ ಮೇಲೆ ಲಾಠಿ ಪ್ರಹಾರ ನಡೆಸಿ, ಅವರಲ್ಲಿ ಐವರನ್ನು ಬಂಧಿಸಿದರು ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ವೆಲಿಂಗ್‌ಕರ್ ವಿರುದ್ಧ ಪ್ರತಿಭಟನೆ

ಪಣಜಿ (ಪಿಟಿಐ): ಸಂತ ಫ್ರಾನ್ಸಿಸ್ ಕ್ಸೇವಿಯರ್ ಅವರ ಬಗ್ಗೆ ಅಗೌರವದ ಹೇಳಿಕೆ ನೀಡಿರುವ ಆರ್‌ಎಸ್‌ಎಸ್ ರಾಜ್ಯ ಘಟಕದ ಮಾಜಿ ಮುಖ್ಯಸ್ಥ ಸುಭಾಷ್ ವೆಲಿಂಗ್‌ಕರ್ ವಿರುದ್ಧ ಸ್ಥಳೀಯರು ಹಳೆ ಗೋವಾದಲ್ಲಿ ಭಾನುವಾರ ಪ್ರತಿಭಟನೆ ನಡೆಸಿದರು.

ಸಮಾನ ಮನಸ್ಕರು ಬೆಳಿಗ್ಗೆ ಪ್ರತಿಭಟನೆ ನಡೆಸಿ, ಸೇಂಟ್ ಫ್ರಾನ್ಸಿಸ್ ಕ್ಸೇವಿಯರ್ ಅವರ ದಶವಾರ್ಷಿಕ ಪ್ರದರ್ಶನ ಪೂರ್ಣಗೊಳ್ಳುವವರೆಗೆ ವೆಲಿಂಗ್‌ಕರ್ ಅವರನ್ನು ಗೋವಾದಿಂದ ಹೊರಹಾಕಬೇಕು ಎಂದು ಒತ್ತಾಯಿಸಿ, ಸ್ಥಳೀಯ ಪೊಲೀಸ್ ಠಾಣೆಗೆ ಮನವಿ ಸಲ್ಲಿಸಿದರು.

ಸೇಂಟ್ ಫ್ರಾನ್ಸಿಸ್ ಕ್ಸೇವಿಯರ್ ಅವರ ಅಸ್ಥಿಯ ಪ್ರದರ್ಶನವು ಇದೇ ನವೆಂಬರ್‌ನಿಂದ 2025ರ ಜನವರಿವರೆಗೆ ನಡೆಯಲಿದೆ.

₹1,841 ಕೋಟಿ ಮೌಲ್ಯದ ಡ್ರಗ್ಸ್ ವಶ

ಒಂದನೇ ಪುಟದಿಂದ...

ಆತನಿಗೆ ಐದು ವರ್ಷ ಜೈಲು ಶಿಕ್ಷೆಯೂ ಆಗಿತ್ತು. ಬಿಡುಗಡೆಯ ಬಳಿಕ ಚತುರ್ವೇದಿ ಜತೆಗೆ ಸೇರಿಕೊಂಡು, ಮೆಫೆಡ್ರೋನ್ ತಯಾರಿಸಿ, ಮಾರಾಟದಲ್ಲಿ ತೊಡಗಿದ್ದ.

ಬಗ್ರೋಡಾ ಕಾರ್ಖಾನೆಯನ್ನು 6ರಿಂದ 7 ತಿಂಗಳ ಹಿಂದೆ ಬಾಡಿಗೆಗೆ ಪಡೆದುಕೊಂಡಿದ್ದು, ಮಾದಕದ್ರವ್ಯ ತಯಾರಿಕೆಯಲ್ಲಿ ತೊಡಗಿರುವುದು ಕಂಡುಬಂದಿದೆ.

ಆಗಸ್ಟ್ ತಿಂಗಳಲ್ಲಿ ಮಹಾರಾಷ್ಟ್ರದ ಠಾಣೆ ಜಿಲ್ಲೆಯ ಭಿವಂಡಿ ಪಟ್ಟಣದ ವಸತಿ ಗೃಹದಲ್ಲಿ ಮೆಫೆಡ್ರೋನ್ ತಯಾರಿಸುತ್ತಿದ್ದ ಮುಂಬೈನ ಡೊಂಗ್ರಿ ನಿವಾಸಿಗಳಾದ ಎಂ.ಡಿ ಯೂನುಸ್ ಅಲಿಯಾಸ್ ಐಜಾಜ್ (41), ಎಂ.ಡಿ. ಆದಿಲ್ ಶೇಕ್ (34) ಅವರನ್ನು ಬಂಧಿಸಿದ್ದರು. ಈ ವೇಳೆ ₹800 ಕೋಟಿ ಮೌಲ್ಯದ 793 ಕೆ.ಜಿ. ದ್ರವರೂಪದ 'ಮೆಫೆಡ್ರೋನ್' ವಶಪಡಿಸಿಕೊಂಡಿದ್ದರು. ಜೂನ್ ತಿಂಗಳಲ್ಲಿ ಇದೇ ಮಾದರಿಯಲ್ಲಿ ಸೂರತ್‌ನ ಪಲ್ಸಾನಾದಲ್ಲಿ ಕಾರ್ಖಾನೆ ನಡೆಸುತ್ತಿದ್ದ ಸುನಿಲ್ ಯಾದವ್, ವಿಜಯ್ ಹಜೆರಾ, ಹರೀಶ್ ಕೊರಟ್ ಅವರನ್ನು ಎಟಿಎಸ್ ಅಧಿಕಾರಿಗಳು ಬಂಧಿಸಿದ್ದರು.

'ಚಿನ್ನ ಕಳ್ಳಸಾಗಣೆದಾರರಲ್ಲಿ ಬಹುತೇಕರು ಮುಸ್ಲಿಮರು'

ಎಡಪಕ್ಷ ಶಾಸಕ ಕೆ.ಟಿ. ಜಲೀಲ್ ಹೇಳಿಕೆ: ವ್ಯಾಪಕ ಆಕ್ರೋಶ

ತಿರುವನಂತಪುರ (ಪಿಟಿಐ): 'ಮಲಪ್ಪುರದ ಕರಿಪ್ಪೂರ್ ವಿಮಾನ ನಿಲ್ದಾಣದಲ್ಲಿ ಕಳ್ಳಸಾಗಣೆಯಲ್ಲಿ ಭಾಗಿಯಾಗುವವರ ಪೈಕಿ ಬಹುತೇಕ ಮಂದಿ ಮುಸ್ಲಿಂ ಸಮುದಾಯಕ್ಕೆ ಸೇರಿದವರು' ಎಂದು ಎಡಪಕ್ಷದ ಶಾಸಕ ಕೆ. ಟಿ. ಜಲೀಲ್ ಭಾನುವಾರ ಸಾಮಾಜಿಕ ಜಾಲತಾಣದಲ್ಲಿ ಬರೆದಿದ್ದಾರೆ.

ಎಡಪಕ್ಷದ ಬಂಡಾಯ ಶಾಸಕ ಪಿ.ವಿ.ಅನ್ವರ್ ಈ ಹೇಳಿಕೆಗೆ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಇಂಡಿಯನ್ ಯೂನಿಯನ್ ಮುಸ್ಲಿಂ ಲೀಗ್ (ಐಯುಎಂಎಲ್) ಕೂಡ ಹೇಳಿಕೆಯನ್ನು ಟೀಕಿಸಿದೆ.

ಫೇಸ್‌ಬುಕ್‌ನಲ್ಲಿ ವಿವರವಾಗಿ ಬರೆದಿರುವ ಜಲೀಲ್ ಅವರು, 'ಚಿನ್ನ ಕಳ್ಳಸಾಗಣೆ ಹಾಗೂ ಹವಾಲಾ ಅಪರಾಧದಲ್ಲಿ ಭಾಗಿಯಾಗುವವರಲ್ಲಿ ಬಹುಪಾಲು ಮಂದಿ ಮುಸ್ಲಿಂ ಸಮುದಾಯದವರು. ಇಂತಹ ಯಾವುದೇ ಚಟುವಟಿಕೆ ಕೂಡ 'ಧಾರ್ಮಿಕವಲ್ಲ'. ಈ ವಿಚಾರದಲ್ಲಿ ಸಮುದಾಯದ ಮುಖಂಡರು ಮಧ್ಯಪ್ರವೇಶಿಸಿ, ಇಂತಹ ಕೃತ್ಯದಲ್ಲಿ ಭಾಗಿಯಾದವರಲ್ಲಿ ಜಾಗೃತಿ ಮೂಡಿಸಬೇಕು' ಎಂದು ಸಲಹೆ ನೀಡಿದ್ದಾರೆ.

ಕೆ.ಟಿ.ಜಲೀಲ್

'ಯಾವುದೇ ಸಮುದಾಯದವರು ತಪ್ಪು ಮಾಡಿದ್ದರೆ, ಸಮುದಾಯದ ಸದಸ್ಯರು ಕಟುವಾಗಿ ವಿರೋಧಿಸಬೇಕು. ಕ್ರೈಸ್ತರು ತಪ್ಪು ಮಾಡಿದರೆ, ಆ ಸಮುದಾಯದವರು ವಿರೋಧಿಸಬೇಕು. ಮುಸಲ್ಮಾನರು ತಪ್ಪು ಮಾಡಿದ ವೇಳೆ ಸಮುದಾಯದವರು ಖಂಡಿಸಬೇಕು. ಹಿಂದೂ ಸಮುದಾಯದಲ್ಲಿ ತಪ್ಪುಗಳು ನಡೆದಾಗ, ಅದನ್ನು ಆ ಸಮುದಾಯವರು ಅದನ್ನು ಬಗೆಹರಿಸಿಕೊಳ್ಳಬೇಕು. ಇಲ್ಲದಿದ್ದರೆ, ಇತರೆ ಧರ್ಮಗಳನ್ನು ಕೀಳುಮಟ್ಟದಲ್ಲಿ ನೋಡುವ ಪ್ರಯತ್ನಗಳು ನಡೆಯುತ್ತವೆ' ಎಂದಿದ್ದಾರೆ.

'ಇಂತಹ ಸಮಸ್ಯೆಗಳನ್ನು ಬಗೆಹರಿಸದಿದ್ದರೆ, ಮಲಪ್ಪುರ ಕುರಿತು ಸದಭಿಪ್ರಾಯ ಹೊಂದಲು ಹೇಗೆ ಸಾಧ್ಯ? ಇಂತಹ ವಿಚಾರ ಹೇಳಿದ ತಕ್ಷಣ ಕೆಲವರು ಏಕೆ ಹತಾಶೆಗೊಳ್ಳುತ್ತಾರೆ ಎಂದು ಅರ್ಥವಾಗುತ್ತಿಲ್ಲ' ಎಂದು ಹೇಳಿದ್ದಾರೆ.

ಖಂಡನೆ: ಜಲೀಲ್ ಹೇಳಿಕೆಯು 'ಅತ್ಯಂತ ಅವಹೇಳನಕಾರಿಯಾದುದು' ಎಂದು ಐಯುಎಂಎಲ್ ಪ್ರತಿಕ್ರಿಯಿಸಿದೆ.

'ಮುಸ್ಲಿಂ ಸಮುದಾಯದವರು ಕಳ್ಳಸಾಗಣೆ ಮಾಡುತ್ತಿದ್ದಾರೆ ಎಂಬ ಮಾಹಿತಿ ಎಲ್ಲಿಂದ ಸಿಕ್ಕಿತು? ಯಾವ ಆಧಾರದ ಮೇಲೆ ಈ ರೀತಿ ಹೇಳುತ್ತಿದ್ದಾರೆ. ಜಲೀಲ್ ಹತಾಶೆಗೊಂಡಿರಬಹುದು. ಆದರೆ, ಇಡೀ ಸಮುದಾಯಕ್ಕೆ ಕಳಂಕ ತರುವ ಪ್ರಯತ್ನವನ್ನು ಮಾಡಬಾರದು' ಎಂದು ಮುಖಂಡ ಪಿ.ಎಂ.ಎ. ಸಲಾಂ ಹೇಳಿದ್ದಾರೆ. ಜಲೀಲ್ ಹೇಳಿಕೆಯು ಸಾರ್ವಜನಿಕ ಜೀವನದಲ್ಲಿ 'ಅತ್ಯಂತ ಕೆಟ್ಟ ನಡೆ' ಎಂದು ಎಡಪಕ್ಷ ಬಂಡಾಯ ಶಾಸಕ ಅನ್ವರ್ ಹೇಳಿದ್ದಾರೆ.

ಪೂರ್ವಿಕರಿಂದ ಶಸ್ತ್ರಾಸ್ತ್ರ ತಯಾರಿಕೆ ಕಲಿಕೆ: ಕುಕಿಗಳ ಹೇಳಿಕೆ

ಕುಕಿಗಳಿಗೆ ಶಸ್ತ್ರಾಸ್ತ್ರ ತಯಾರಿಕೆ ಕಲಿಸಿದ ಯುದ್ಧದ ಅನುಭವ

• ಸುಮೀರ್ ಕರ್ಮಾಕರ್

ಚುರಾಚಾಂದ್‌ಪುರ/ಗುವಾಹಟಿ: ಮೈತೇಯಿ ಸಮುದಾಯದ ಪ್ರಾಬಲ್ಯವಿರುವ ಬಿಷ್ಣುಪುರ ಕಡೆಗೆ ಒಂದು ಸುತ್ತಿನ ತುಪಾಕಿಯ ಗುರಿ ಇರಿಸಿದ್ದ 21 ವರ್ಷ ವಯಸ್ಸಿನ ಆಲ್ಬರ್ಟ್, ಕುಕಿ ಸಮುದಾಯದ ಪ್ರಾಬಲ್ಯವಿರುವ ಚುರಾಚಾಂದ್‌ಪುರ ಜಿಲ್ಲೆಯ ಮೊಯಿವಾಂ ಗ್ರಾಮದಲ್ಲಿನ ಒಂದು ಬಂಕರ್‌ನ ಒಳಗೆ ಬಹಳ ವಿಶ್ವಾಸದಿಂದ ಕುಳಿತಿದ್ದರು.

'ಮೈತೇಯಿ ಸಮುದಾಯದ ದುಷ್ಕರ್ಮಿಗಳು' ಬಳಸುತ್ತಿದ್ದಾರೆ ಎನ್ನಲಾದ ಸ್ವಯಂಚಾಲಿತ ಶಸ್ತ್ರಾಸ್ತ್ರಗಳಿಗೆ ಹೋಲಿಸಿದರೆ ಈ ತುಪಾಕಿ ನಗಣ್ಯವಾಗಿದ್ದರೂ, ತಡೆಗೋಡೆಯೊಂದರ ಹಿಂದೆ ಇರಿಸಿದ್ದ 'ಪಂಪಿ' ಹೆಸರಿನ ಫಿರಂಗಿಯ ಕಾರಣದಿಂದಾಗಿ ಕುಕಿ 'ಗ್ರಾಮ ಸ್ವಯಂಸೇವಕ'ರಲ್ಲಿ ವಿಶ್ವಾಸ ಮೂಡಿತ್ತು.

ಮೈತೇಯಿಗಳನ್ನು ದೂರ ಓಡಿಸುವಲ್ಲಿ ಪಂಪಿಗಳು ಬಹಳ ನೆರವಿಗೆ ಬಂದಿವೆ ಎಂದು ಆಲ್ಬರ್ಟ್ ಹೇಳಿದರು. 12ನೇ ತರಗತಿವರೆಗೆ ಓದಿರುವ ಕುಕಿ ಯುವಕ ಆಲ್ಬರ್ಟ್, ಕಳೆದ ವರ್ಷದ ಮೇ ತಿಂಗಳಲ್ಲಿ ಮೈತೇಯಿ ಮತ್ತು ಕುಕಿ ಸಮುದಾಯಗಳ ನಡುವೆ ಸಂಘರ್ಷ ಆರಂಭವಾದ ನಂತರದಲ್ಲಿ ತಮ್ಮ ಹಳ್ಳಿಯನ್ನು ರಕ್ಷಿಸಲು ಶಸ್ತ್ರಾಸ್ತ್ರ ಕೈಗೆತ್ತಿಕೊಂಡಿದ್ದಾರೆ. 'ಕೆಲವು ಪಂಪಿಗಳು ಮೂರು ಕಿಲೊ ಮೀಟರ್‌ವರೆಗೂ ದಾಳಿ ನಡೆಸಬಲ್ಲವು, ಭಾರಿ ಪ್ರಮಾಣದಲ್ಲಿ ಹಾನಿ ಉಂಟುಮಾಡಬಲ್ಲವು' ಎಂದು ಅವರು ಹೇಳಿದರು.

ಚುರಾಚಾಂದ್‌ಪುರ ಜಿಲ್ಲೆಯಲ್ಲಿ ವಶಪಡಿಸಿಕೊಳ್ಳಲಾದ ಪಂಪಿ ಹಾಗೂ ಇತರ ಶಸ್ತ್ರಾಸ್ತ್ರಗಳು –ಚಿತ್ರ: ಅಸ್ಸಾಂ ರೈಫಲ್ಸ್

ಗನ್‌ಪೌಡರ್ ಮತ್ತು ಸ್ಫೋಟಕಗಳನ್ನು ತುಂಬಿಸಿದ ಕಬ್ಬಿಣದ ಕೊಳವೆಗಳನ್ನು ಬಳಸಿ ಪಂಪಿಗಳನ್ನು ಸಿದ್ಧಪಡಿಸಲಾಗುತ್ತದೆ. ಅದರಲ್ಲಿ ಬಳಕೆ ಮಾಡಿರುವ ಗನ್‌ಪೌಡರ್‌ನ ಗುಣಮಟ್ಟ ಹಾಗೂ ಪ್ರಮಾಣವನ್ನು ಆಧರಿಸಿ ಪಂಪಿಗಳ ಕಾರ್ಯಕ್ಷಮತೆ ತೀರ್ಮಾನವಾಗುತ್ತದೆ ಎಂದು ಕುಕಿ ಸಮುದಾಯದವರ ಪರಮೋಚ್ಛ ಸಂಘಟನೆಯಾದ ಕುಕಿ ಇನ್‌ಪಿನ ಪ್ರಚಾರ ಕಾರ್ಯದರ್ಶಿ ಜಂಘಾಲುನ್ ಹಾವೊಕಿಪ್ ಅವರು ಈಚೆಗೆ 'ಪ್ರಜಾವಾಣಿ' ಬಳಿ ಹೇಳಿದ್ದರು.

'ನಮ್ಮಲ್ಲಿ ಬೇರೆ ಬೇರೆ ಬಗೆಯ ಪಂಪಿಗಳು ಇವೆ. ನಿರಂತರವಾಗಿ ದಾಳಿ ನಡೆಸಲು ಸಾಧ್ಯವಾಗುವ ಪಂಪಿಗಳೂ ನಮ್ಮಲ್ಲಿ ಇವೆ. ಇದನ್ನೇ ಮೈತೇಯಿ ಕಡೆಯವರು ರಾಕೆಟ್ ಎನ್ನುತ್ತಾರೆ' ಎಂದು ಅವರು ತಿಳಿಸಿದರು. ಆದರೆ ತಾವು ಡ್ರೋನ್ ಮತ್ತು ರಾಕೆಟ್ ಬಳಸಿಲ್ಲ ಎಂದು ತಿಳಿಸಿದರು.

ಕುಕಿ ಮತ್ತು ಮೈತೇಯಿ ಸಮುದಾಯದ ಪ್ರಾಬಲ್ಯವಿರುವ ಪ್ರದೇಶಗಳನ್ನು ಪ್ರತ್ಯೇಕಿಸುವ ಬಫರ್ ವಲಯದಲ್ಲಿನ ಬಂಕರ್‌ಗಳನ್ನು ಗ್ರಾಮ ಸ್ವಯಂಸೇವಕರು ಕಾಯುತ್ತಿರುತ್ತಾರೆ. ಇಲ್ಲಿ ಪಂಪಿಗಳನ್ನು ಇರಿಸಲಾಗಿದೆ. ತಮ್ಮ ಗ್ರಾಮಗಳನ್ನು ರಕ್ಷಿಸಿಕೊಳ್ಳಲು ನೇಮಿಸಿರುವ ಶಸ್ತ್ರಸಜ್ಜಿತ ವ್ಯಕ್ತಿಗಳನ್ನು ಎರಡೂ ಸಮುದಾಯದವರು ಗ್ರಾಮ ಸ್ವಯಂಸೇವಕರು ಎಂದು ಕರೆಯುತ್ತಿದ್ದಾರೆ.

ಮಣಿಪುರದಲ್ಲಿನ ಸಂಘರ್ಷಕ್ಕೆ ಕೊನೆ ಕಾಣುತ್ತಿಲ್ಲವಾದ ಕಾರಣ ಕುಕಿ ಸಮುದಾಯದವರು ಪಿಸ್ತೂಲು, ರೈಫಲ್‌ಗಳು, ಗ್ರನೇಡ್‌ಗಳನ್ನು ಕೂಡ ಸಿದ್ಧಪಡಿಸುತ್ತಿದ್ದಾರೆ. 'ಕುಕಿ ಸಮುದಾಯದವರು ಇಂತಹ ಶಸ್ತ್ರಾಸ್ತ್ರಗಳನ್ನು ಮಾಡುವುದನ್ನು ವ್ಯಾಪಾರವನ್ನಾಗಿಸಿಕೊಂಡಿದ್ದಾರೆ. ಕಳೆದ ವರ್ಷ ಸಂಘರ್ಷ ಆರಂಭವಾಗುವವರೆಗೆ, ಅವರು ಇಂಥವುಗಳನ್ನು ಮೈತೇಯಿ ಸಮುದಾಯದವರಿಗೂ ಪೂರೈಸುತ್ತಿದ್ದರು. ಈಗ ಅವುಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ, ಮೈತೇಯಿ ಸಮುದಾಯದವರ ವಿರುದ್ಧ ಬಳಸುವುದಕ್ಕೆ ಸಿದ್ಧಪಡಿಸುತ್ತಿದ್ದಾರೆ' ಎಂದು ಅಸ್ಸಾಂ ರೈಫಲ್ಸ್‌ನ ಅಧಿಕಾರಿಯೊಬ್ಬರು ಹೇಳಿದರು.

ಆದರೆ ಕುಕಿ ಸಮುದಾಯದವರಿಂದ ಸ್ವಯಂಚಾಲಿತ ಶಸ್ತ್ರಾಸ್ತ್ರಗಳನ್ನು ಕೂಡ ವಶಪಡಿಸಿಕೊಳ್ಳಲಾಗಿದೆ ಎಂದು ಅವರು ತಿಳಿಸಿದರು. ಇಂತಹ ಶಸ್ತ್ರಾಸ್ತ್ರಗಳನ್ನು ಯಾರು ಪೂರೈಸುತ್ತಾರೆ ಎಂಬ ಪ್ರಶ್ನೆಗೆ ಹಾವೊಕಿಪ್ ಅವರು, 'ಇಂಥವುಗಳನ್ನು ಮಾಡುವುದು ಹೇಗೆ ಎಂಬುದು ನಮ್ಮ ಗ್ರಾಮಸ್ಥರಲ್ಲಿ ಹಲವರಿಗೆ ಈಗ ಗೊತ್ತಿದೆ. ನಮ್ಮ ಹಿರಿಯರು, ಪೂರ್ವಿಕರು 1917ರಿಂದ 1919ರವರೆಗೆ ನಡೆದ ಆಂಗ್ಲೊ–ಕುಕಿ ಯುದ್ಧದಲ್ಲಿ ಬಳಸಲು ಇಂಥವುಗಳನ್ನು ಸಿದ್ಧಪಡಿಸಲು ಕಲಿತಿದ್ದರು. ಅವರಿಂದ ನಾವು ಇದನ್ನು ಕಲಿತಿದ್ದೇವೆ' ಎಂದು ಹೇಳಿದರು.

ಗೃಹ ಸಾಲ ಇರಲಿ ಲೆಕ್ಕಾಚಾರ

ಬಂಡವಾಳ ಮಾರುಕಟ್ಟೆ

ಕಾವ್ಯ ಡಿ.

ಸ್ವಂತಕ್ಕೊಂದು ಸೂರು ಬೇಕು ಎಂದು ಎಲ್ಲರೂ ಕನಸು ಕಾಣುತ್ತಾರೆ. ಆದರೆ, ಬಹುಪಾಲು ಜನರಿಗೆ ಗೃಹ ಸಾಲವೊಂದಿಲ್ಲದೆ ಮನೆ ಖರೀದಿಯ ಕನಸು ನನಸಾಗುವುದಿಲ್ಲ. ಗೃಹ ಸಾಲ ಪಡೆಯುವಾಗ ಬಹಳ ಲೆಕ್ಕಾಚಾರ ಮತ್ತು ಎಚ್ಚರದಿಂದ ಇರಬೇಕು.

ಸಾಲ ನೀಡುವಾಗ ಬ್ಯಾಂಕ್‌ಗಳು, ಬ್ಯಾಂಕೇತರ ಹಣಕಾಸು ಸಂಸ್ಥೆಗಳು (ಎನ್‌ಬಿಎಫ್‌ಸಿ) ನಿಮಗೆ ಅನುಕೂಲವಾಗುವ ರೀತಿಯಲ್ಲೇ ಸಾಲ ಒದಗಿಸುತ್ತವೆ ಎಂದು ಕಣ್ಣುಮುಚ್ಚಿ ನಂಬಲು ಸಾಧ್ಯವಿಲ್ಲ. ಗೃಹ ಸಾಲ ಪಡೆಯುವಾಗ ಬಹುತೇಕರು ಬಡ್ಡಿದರ ಎಷ್ಟು ಎನ್ನುವ ವಿಷಯಕ್ಕೆ ಮಾತ್ರ ಹೆಚ್ಚು ಒತ್ತು ನೀಡುತ್ತಾರೆ.

ಸಾಲದ ಷರತ್ತುಗಳು ಮತ್ತು ಗೋಪ್ಯ ಶುಲ್ಕಗಳನ್ನು ಗಣನೆಗೆ ತೆಗೆದುಕೊಳ್ಳುವುದೇ ಇಲ್ಲ. ಆದರೆ, ಇಂತಹ ತಪ್ಪು ನಿಮಗೆ ದುಬಾರಿ ಆಗಬಹುದು. ಬನ್ನಿ, ಸಾಲ ಪಡೆಯುವಾಗ ಏನೆಲ್ಲಾ ವಿಷಯಗಳ ಬಗ್ಗೆ ಎಚ್ಚರವಹಿಸ-ಬೇಕು ಎಂಬ ಬಗ್ಗೆ ತಿಳಿಯೋಣ.

ಬಡ್ಡಿದರ ಎಲ್ಲಿ ಕಡಿಮೆ?: ಗೃಹ ಸಾಲಕ್ಕಾಗಿ ಅರ್ಜಿ ಸಲ್ಲಿಸಿದಾಗ ಬ್ಯಾಂಕ್‌ಗಳು ಮತ್ತು ಬ್ಯಾಂಕೇತರ ಹಣಕಾಸು ಸಂಸ್ಥೆಗಳು ನಿಮಗೆ ಸಾಲ ನೀಡಲು ಮುಂದೆ ಬರುತ್ತವೆ. ಆದರೆ, ಬ್ಯಾಂಕ್‌ಗಳಿಗಿಂತ ಬ್ಯಾಂಕೇತರ ಹಣಕಾಸು ಸಂಸ್ಥೆಗಳಲ್ಲಿ ಬಡ್ಡಿದರ ಹೆಚ್ಚಿಗೆ ಇರುತ್ತದೆ ಎನ್ನುವುದು ನಿಮಗೆ ಗೊತ್ತಿರಬೇಕು. ಕೆಲವು ಸಂದರ್ಭದಲ್ಲಿ ಈ ಸಂಸ್ಥೆಗಳು ಕಡಿಮೆ ಬಡ್ಡಿದರಕ್ಕೆ ಸಾಲ ಕೊಡುವುದಾಗಿ ಹೇಳಿದರೂ ಕ್ರಮೇಣ ಹೆಚ್ಚಿಸಿ ಬಿಡುತ್ತವೆ.

ಗೃಹ ಸಾಲ ಅಂತ ಬಂದಾಗ ಬ್ಯಾಂಕ್‌ಗಳು, ಈ ಹಣಕಾಸು ಸಂಸ್ಥೆಗಳಿಗಿಂತ ಪಾರದರ್ಶಕವಾಗಿವೆ. ಬ್ಯಾಂಕ್‌ಗಳು ಸಾಲ ಕೊಡುವಾಗ ಬಡ್ಡಿದರ ನಿಗದಿ ಮಾಡಲು ರೆಪೊ ದರವನ್ನು ಮಾನದಂಡವಾಗಿ ಪರಿಗಣಿಸಿದರೆ, ಬ್ಯಾಂಕೇತರ ಹಣಕಾಸು ಸಂಸ್ಥೆಗಳು ಪ್ರೈಮ್ ಲೆಂಡಿಂಗ್ ರೇಟ್ ಅನ್ನು ಮಾನದಂಡವಾಗಿ ತೆಗೆದುಕೊಳ್ಳುತ್ತವೆ. ಎಲ್ಲಿಂದ ಸಾಲ ಪಡೆಯಬೇಕು ಎನ್ನುವಾಗ ಈ ವಿಚಾರಗಳು ನಿಮಗೆ ಗೊತ್ತಿರಬೇಕು.

ವಿಮೆ ಖರೀದಿಸಬೇಕೇ?: ಗೃಹ ಸಾಲ ಪಡೆಯುವಾಗ ಮಧ್ಯವರ್ತಿಗಳು ಅಥವಾ ಬ್ಯಾಂಕ್ ಅಧಿಕಾರಿಗಳು ಗೃಹ ವಿಮೆ ಜೊತೆಗೆ ಜೀವ ವಿಮೆ ಖರೀದಿಸುವಂತೆ ಒತ್ತಾಯಿಸುತ್ತಾರೆ. ಆದರೆ, ಗೃಹ ಸಾಲದ ಜೊತೆಗೆ ಬ್ಯಾಂಕ್ ಅಥವಾ ಎನ್‌ಬಿಎಫ್‌ಸಿಗಳು ಒದಗಿಸುವ ಗೃಹ ವಿಮೆ ಮತ್ತು ಜೀವ ವಿಮೆ ಖರೀದಿಯನ್ನು ನೀವು ಪರಿಗಣಿಸಬೇಕೇ? ವಾಸ್ತವದಲ್ಲಿ ಮನೆ ಸಾಲ ಪಡೆದವರಿಗೆ ಖಂಡಿತವಾಗಿಯೂ ಗೃಹ ಮತ್ತು ಜೀವ ವಿಮೆಯ ಅಗತ್ಯವಿದೆ. ಏಕೆಂದರೆ ಗೃಹ ವಿಮೆ ಮನೆಗೆ ಹಣಕಾಸಿನ ಭದ್ರತೆ ಒದಗಿಸುತ್ತದೆ. ಪ್ರವಾಹ, ಭೂಕಂಪ, ಅಗ್ನಿ ಅವಘಡದಂತಹ ನೈಸರ್ಗಿಕ ವಿಕೋಪಗಳು ಸಂಭವಿಸಿದ ಸಂದರ್ಭದಲ್ಲಿ ಗೃಹ ವಿಮೆ ಆಪ್ತರಕ್ಷಕನಂತೆ ಕೆಲಸ ಮಾಡುತ್ತದೆ.

ಇನ್ನು ಜೀವ ವಿಮೆ ಬ್ಯಾಂಕ್ ಕೊಟ್ಟಿರುವ ಸಾಲದ ಮೊತ್ತಕ್ಕೆ ಖಾತರಿ ಒದಗಿಸುತ್ತದೆ. ಸಾಲ ಪಡೆದಿರುವ ವ್ಯಕ್ತಿಯ ಜೀವಕ್ಕೆ ಹಾನಿಯಾದರೆ ಜೀವ ವಿಮೆಯ ಮೊತ್ತದಿಂದ, ಬ್ಯಾಂಕ್ ತನ್ನ ಸಾಲದ ನಷ್ಟವನ್ನು ಭರಿಸಿಕೊಳ್ಳುತ್ತದೆ. ಆದರೆ, ನೆನಪಿರಲಿ. ಗೃಹ ಸಾಲ ಪಡೆಯುವಾಗ ಸಾಲ ನೀಡುವ ಸಂಸ್ಥೆಯಿಂದಲೇ 'ಹೋಮ್ ಲೋನ್ ಪ್ರೊಟೆಕ್ಷನ್ ಪ್ಲಾನ್' ಪಡೆಯಬೇಕು ಎಂಬ ಯಾವುದೇ ನಿಯಮವಿಲ್ಲ.

ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಅಥವಾ ಭಾರತೀಯ ವಿಮಾ ನಿಯಂತ್ರಣ ಪ್ರಾಧಿಕಾರ (ಐಆರ್‌ಡಿಎಐ) ಕೂಡ ಇಂತಹ ಯಾವುದೇ ನಿಯಮ ಮಾಡಿಲ್ಲ. ನೀವು ಯಾರ ಬಳಿಯಾದರೂ ಗೃಹ ಮತ್ತು ಜೀವ ವಿಮೆ ಪಡೆಯಬಹುದು. ಸಾಮಾನ್ಯವಾಗಿ ಗೃಹ ಸಾಲದ ಜೊತೆಗೆ ಕೊಡುವ ಗೃಹ ಮತ್ತು ಜೀವ ವಿಮೆಗಳು ದುಬಾರಿಯಾಗಿರುತ್ತವೆ. ಒಂದೇ ಬಾರಿಗೆ ಪ್ರೀಮಿಯಂ ಪಾವತಿಸಬೇಕಾಗುವ ಇಂತಹ ವಿಮೆಗಳನ್ನು ಬ್ಯಾಂಕ್‌ನವರು 'ಹೋಮ್ ಲೋನ್ ಪ್ರೊಟೆಕ್ಷನ್ ಪ್ಲಾನ್' ಎಂಬ ಹೆಸರಿನಲ್ಲಿ ಮಾರಾಟ ಮಾಡುತ್ತಾರೆ.

'ಹೋಮ್ ಲೋನ್ ಪ್ರೊಟೆಕ್ಷನ್ ಪ್ಲಾನ್'ನ ಪ್ರೀಮಿಯಂ ಮೊತ್ತವನ್ನು ಬ್ಯಾಂಕ್ ಅಥವಾ ಇನ್ನಿತರೆ ಹಣಕಾಸು ಸಂಸ್ಥೆಗಳು ಸಾಲದ ಮೊತ್ತದ ಜೊತೆಗೆ ಸೇರಿಸಿ ಬಿಡುತ್ತವೆ. ಹೀಗೆ ಮಾಡಿದಾಗ ನಿಮ್ಮ ಸಾಲದ ಇಎಂಐ (ಸಾಲದ ಮಾಸಿಕ ಕಂತು) ಹೆಚ್ಚಳವಾಗುವ ಜೊತೆಗೆ ವಿಮೆಗೆ ಕಟ್ಟುವ ಮೊತ್ತವೂ ಜಾಸ್ತಿಯಾಗುತ್ತದೆ.

ಗೃಹ ಸಾಲದ ವರ್ಗಾವಣೆ: ಒಂದು ಬ್ಯಾಂಕ್‌ನಿಂದ ಗೃಹ ಸಾಲ ಪಡೆದಿರುತ್ತೀರಿ. ಮತ್ತೊಂದು ಬ್ಯಾಂಕ್‌ನ ಪ್ರತಿನಿಧಿಗಳು ಬಂದು ನೀವು ಈಗಾಗಲೇ ಮನೆ ಸಾಲ ಪಡೆದಿರುವ ಬ್ಯಾಂಕ್‌ನ ಬಡ್ಡಿ ದರಕ್ಕಿಂತ ಕಡಿಮೆ ಬಡ್ಡಿದರಕ್ಕೆ ಗೃಹ ಸಾಲ ಒದಗಿಸುವುದಾಗಿ ಹೇಳುತ್ತಾರೆ. ಇಂತಹ ಸಂದರ್ಭದಲ್ಲಿ ಹೋಮ್ ಲೋನ್ ಸ್ವಿಚ್ ಅಥವಾ ಗೃಹ ಸಾಲ ವರ್ಗಾವಣೆಗೆ ಅವಕಾಶ ಇರುತ್ತದೆ.

ಸರಳವಾಗಿ ಹೇಳುವುದಾದರೆ ಗೃಹ ಸಾಲದ ಬಾಕಿ ಮೊತ್ತವನ್ನು ಜಾಸ್ತಿ ಬಡ್ಡಿದರವಿರುವ ಬ್ಯಾಂಕ್‌ನಿಂದ ಕಡಿಮೆ ಬಡ್ಡಿದರವಿರುವ ಬ್ಯಾಂಕ್‌ಗೆ ವರ್ಗಾಯಿಸುವ ಪ್ರಕ್ರಿಯೆಯೇ ಹೋಮ್ ಲೋನ್ ಸ್ವಿಚ್. ಆದರೆ, ಎಲ್ಲ ಸಂದರ್ಭದಲ್ಲೂ ಹೋಮ್ ಲೋನ್ ಸ್ವಿಚ್, ಸಾಲ ಪಡೆದ ವ್ಯಕ್ತಿಗೆ ಅನುಕೂಲಕರವಾಗಿರುವುದಿಲ್ಲ. ನಿಮ್ಮ ಗೃಹ ಸಾಲದ ಅವಧಿ 15 ವರ್ಷಕ್ಕಿಂತ ಜಾಸ್ತಿ ಇದ್ದು, ಈಗಾಗಲೇ ಸಾಲ ಪಡೆದಿರುವ ಬ್ಯಾಂಕ್‌ನ ಬಡ್ಡಿಗಿಂತ ಸಾಲದ ಬಡ್ಡಿದರ ಶೇ 0.25ರಷ್ಟು ಕಡಿಮೆಯಾದರೆ ಮಾತ್ರ ಹೋಮ್ ಲೋನ್ ಸ್ವಿಚ್ ಪರಿಗಣಿಸಬೇಕು.

ಇದೇ ರೀತಿ 10ರಿಂದ 15 ವರ್ಷಗಳ ಸಾಲದ ಅವಧಿ ಹೊಂದಿರುವವರು ಸಾಲದ ಬಡ್ಡಿದರವು ಶೇ 0.50ರಷ್ಟು ಕಡಿಮೆಯಾದರೆ ಮಾತ್ರ ಹೋಮ್ ಲೋನ್ ಸ್ವಿಚ್ ಅನ್ನು ಗಣನೆಗೆ ತೆಗೆದುಕೊಳ್ಳಬೇಕು. ಸಾಲದ ಅವಧಿ 10 ವರ್ಷಕ್ಕಿಂತ ಕಡಿಮೆ ಇದ್ದರೆ ಹೋಮ್ ಲೋನ್ ಸ್ವಿಚ್‌ನಿಂದ ಅನುಕೂಲವಿದೆಯೋ, ಇಲ್ಲವೋ ಎನ್ನುವುದನ್ನು ಪರಾಮರ್ಶಿಸಬೇಕು. ಹೋಮ್ ಲೋನ್ ಸ್ವಿಚ್ ಮಾಡುವಾಗ ಏನಾದರೂ ಶುಲ್ಕಗಳಿವೆಯಾ, ಸಾಲ ವರ್ಗಾವಣೆ ನಂತರ ಹೊಸ ಬ್ಯಾಂಕ್ ಎಷ್ಟು ಅವಧಿಗೆ ಕಡಿಮೆ ಬಡ್ಡಿಗೆ ಸಾಲ ಒದಗಿಸಬಹುದು ಎಂಬ ಪೂರಕ ಅಂಶಗಳನ್ನು ಅರಿತು ಮುನ್ನಡೆಯಬೇಕು.

(ಲೇಖಕಿ: ಚಾರ್ಟರ್ಡ್ ಅಕೌಂಟೆಂಟ್)

ಕರಡಿ ಕುಣಿತಕ್ಕೆ ಮುಗ್ಗರಿಸಿದ ಸೂಚ್ಯಂಕಗಳು

ಷೇರುಪೇಟೆ

ಅಕ್ಟೋಬರ್ 4ಕ್ಕೆ ಕೊನೆಗೊಂಡ ವಾರದಲ್ಲಿ ಷೇರುಪೇಟೆ ಸೂಚ್ಯಂಕಗಳು ಭಾರಿ ಕುಸಿತ ಕಂಡಿವೆ. ಕರಡಿ ಕುಣಿತಕ್ಕೆ ಸೆನ್ಸೆಕ್ಸ್ ಮತ್ತು ನಿಫ್ಟಿ ಸೂಚ್ಯಂಕಗಳು ಕುಸಿದಿವೆ. 81,688 ಅಂಶದಲ್ಲಿ ವಹಿವಾಟು ಪೂರ್ಣಗೊಳಿಸಿದ ಸೆನ್ಸೆಕ್ಸ್, ವಾರದ ಅವಧಿಯಲ್ಲಿ ಶೇ 4.54ರಷ್ಟು ಕುಸಿತ ಕಂಡಿದೆ. 25,014 ಅಂಶದಲ್ಲಿ ವಹಿವಾಟು ಮುಗಿಸಿದ ನಿಫ್ಟಿ ಶೇ 4.45ರಷ್ಟು ಇಳಿಕೆಯಾಗಿದೆ.

ಕಳೆದ ಎರಡು ವರ್ಷದ ಅವಧಿಯಲ್ಲಿ ವಾರವೊಂದರಲ್ಲಿ ಸೂಚ್ಯಂಕಗಳು ಕಂಡಿರುವ ತೀವ್ರ ಇಳಿಕೆ ಇದಾಗಿದೆ. ಮಧ್ಯಪ್ರಾಚ್ಯ ಬಿಕ್ಕಟ್ಟು, ಚೀನಾ ಮಾರುಕಟ್ಟೆಗೆ ಹೂಡಿಕೆ ವರ್ಗಾವಣೆ, ತೈಲ ಬೆಲೆ ಹೆಚ್ಚಳ, ಹೂಡಿಕೆದಾರರಿಂದ ಷೇರುಗಳ ಮಾರಾಟದ ಒತ್ತಡ ಸೇರಿ ಹಲವು ಅಂಶಗಳು ಷೇರು ಮಾರುಕಟ್ಟೆಯ ಕುಸಿತಕ್ಕೆ ಕಾರಣವಾಗಿವೆ.

ವಲಯವಾರು ಪ್ರಗತಿಯಲ್ಲಿ ನಿಫ್ಟಿ ರಿಯಲ್ ಎಸ್ಟೇಟ್ ಅತಿಹೆಚ್ಚು ಅಂದರೆ ಶೇ 7.77ರಷ್ಟು ಕುಸಿದಿದೆ. ಆಟೊ ವಲಯ ಶೇ 5.98, ಎನರ್ಜಿ ಶೇ 5.49, ಅನಿಲ ಮತ್ತು ತೈಲ ಶೇ 5.11, ಫೈನಾನ್ಸ್ ಶೇ 5.01, ಬ್ಯಾಂಕ್ ಶೇ 4.23, ಎಫ್‌ಎಂಸಿಜಿ ಶೇ 3.62, ಮಾಧ್ಯಮ ಶೇ 2, ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಶೇ 1.96, ಫಾರ್ಮಾ ಶೇ 1.82 ಮತ್ತು ಮಾಹಿತಿ ತಂತ್ರಜ್ಞಾನ ವಲಯ ಶೇ 0.85ರಷ್ಟು ಕುಸಿದಿದೆ. ಲೋಹ ವಲಯ ಮಾತ್ರ ಶೇ 0.51ರಷ್ಟು ಜಿಗಿದಿದೆ.

ಏರಿಕೆ–ಇಳಿಕೆ: ಈ ವಾರ ನಿಫ್ಟಿಯಲ್ಲಿ ಜೆಎಸ್‌ಡಬ್ಲ್ಯು ಸ್ಟೀಲ್ ಶೇ 3.28, ಟೆಕ್ ಮಹೀಂದ್ರ ಶೇ 0.65, ಇನ್ಫೊಸಿಸ್ ಶೇ 0.58, ಟಾಟಾ ಸ್ಟೀಲ್ ಶೇ 0.15 ಮತ್ತು ಹಿಂಡಾಲ್ಕೊ ಇಂಡಸ್ಟ್ರೀಸ್ ಶೇ 0.07ರಷ್ಟು ಗಳಿಸಿಕೊಂಡಿವೆ.

ರಿಲಯನ್ಸ್ ಶೇ 9.13, ಶ್ರೀರಾಮ್ ಫೈನಾನ್ಸ್ ಶೇ 7.49, ಹೀರೊ ಮೋಟೊಕಾರ್ಪ್ ಶೇ 7.39, ಎಕ್ಸಿಸ್ ಬ್ಯಾಂಕ್ ಶೇ 7.14, ಬಜಾಜ್ ಆಟೊ ಶೇ 7.13, ಏಷ್ಯನ್ ಪೇಂಟ್ಸ್ ಶೇ 7.1, ಬಿಪಿಸಿಎಲ್ ಶೇ 7.05, ಬಜಾಜ್ ಫೈನಾನ್ಸ್ ಶೇ 6.97, ಪವರ್ ಗ್ರಿಡ್ ಶೇ 6.81, ಅಪೋಲೊ ಹಾಸ್ಪಿಟಲ್ ಶೇ 6.45 ಮತ್ತು ಮಾರುತಿ ಸುಜುಕಿ ಶೇ 6.3ರಷ್ಟು ಕುಸಿದಿವೆ.

ಮುನ್ನೋಟ: ಕಚ್ಚಾ ತೈಲ ಬೆಲೆ ಹೆಚ್ಚಳದ ಜೊತೆಗೆ ಚೀನಾ ಮಾರುಕಟ್ಟೆಯತ್ತ ಜಾಗತಿಕ ಹೂಡಿಕೆದಾರರು ಚಿತ್ತ ಹರಿಸಿದ್ದಾರೆ. ಇದರಿಂದ ಮಾರುಕಟ್ಟೆಯಲ್ಲಿ ನಕಾರಾತ್ಮಕ ವಾತಾವರಣ ಮುಂದುವರಿಯಲಿದೆ. ಅಕ್ಟೋಬರ್ 7ರಿಂದ 9ರ ವರೆಗೆ ಆರ್‌ಬಿಐ ಹಣಕಾಸು ನೀತಿ ಸಮಿತಿ ಸಭೆ ನಡೆಯಲಿದ್ದು, ಬಡ್ಡಿದರ ಇಳಿಕೆಯ ಬಗ್ಗೆ ಒಂದಷ್ಟು ಸ್ಪಷ್ಟತೆ ಸಿಗುವ ಸಾಧ್ಯತೆಯಿದೆ.

ಅಕ್ಟೋಬರ್ 15ರ ನಂತರದಲ್ಲಿ ಕಂಪನಿಗಳ ಎರಡನೇ ತ್ರೈಮಾಸಿಕ ಅವಧಿಯ ಫಲಿತಾಂಶಗಳು ಹೊರಬೀಳಲಿದ್ದು, ಮಾರುಕಟ್ಟೆ ಮೇಲೆ ಪ್ರಭಾವ ಬೀರಲಿವೆ. ಉಳಿದಂತೆ ಜಾಗತಿಕ ವಿದ್ಯಮಾನಗಳು, ಮಧ್ಯಪ್ರಾಚ್ಯ ಬಿಕ್ಕಟ್ಟು ಸೇರಿ ಹಲವು ಅಂಶಗಳು ಮಾರುಕಟ್ಟೆಯ ಮೇಲೆ ಪರಿಣಾಮ ಬೀರುತ್ತವೆ.

ರೆಪೊ ದರ ಯಥಾಸ್ಥಿತಿ?: ಆರ್ಥಿಕ ತಜ್ಞರ ಅಭಿಮತ

ಆರ್‌ಬಿಐ ಎಂಪಿಸಿ ಸಭೆ ಇಂದಿನಿಂದ

ಮುಂಬೈ (ಪಿಟಿಐ): ಭಾರತೀಯ ರಿಸರ್ವ್ ಬ್ಯಾಂಕ್ ಅಧ್ಯಕ್ಷ ಶಕ್ತಿಕಾಂತ ದಾಸ್ ಅವರ ಅಧ್ಯಕ್ಷತೆಯಲ್ಲಿ ಸೋಮವಾರದಿಂದ ಹಣಕಾಸು ನೀತಿ ಸಮಿತಿ ಸಭೆ (ಎಂಪಿಸಿ) ಆರಂಭವಾಗಲಿದೆ. ಈ ಬಾರಿಯೂ ರೆಪೊ ದರದಲ್ಲಿ ಯಥಾಸ್ಥಿತಿ ಕಾಯ್ದುಕೊಳ್ಳುವ ನಿರೀಕ್ಷೆಯಿದೆ ಎಂದು ಆರ್ಥಿಕ ತಜ್ಞರು ಹೇಳಿದ್ದಾರೆ.

ಇಸ್ರೇಲ್ ಮತ್ತು ಇರಾನ್ ನಡುವಿನ ಸಂಘರ್ಷ ತೀವ್ರಗೊಂಡಿದೆ. ಇದು ಕಚ್ಚಾ ತೈಲ ಮತ್ತು ಸರಕುಗಳ ಬೆಲೆ ಹೆಚ್ಚಳಕ್ಕೆ ಕಾರಣವಾಗಲಿದೆ. ಇದರಿಂದ ಚಿಲ್ಲರೆ ಹಣದುಬ್ಬರ ಏರಿಕೆಯಾಗುವ ಆತಂಕವಿದ್ದು, ಬಡ್ಡಿದರ ಇಳಿಕೆ ಮಾಡುವ ಸಾಧ್ಯತೆ ಕಡಿಮೆ ಎಂದು ವಿವರಿಸಿದ್ದಾರೆ.

ಇತ್ತೀಚೆಗೆ ಹಣಕಾಸು ನೀತಿ ಸಮಿತಿಯನ್ನು ಪುನರ್ ರಚಿಸಲಾಗಿದ್ದು, ಹೊಸದಾಗಿ ಮೂವರು ಬಾಹ್ಯ ಸದಸ್ಯರು ನೇಮಕಗೊಂಡಿ-ದ್ದಾರೆ. ಅವರಿಗೆ ಇದು ಮೊದಲ ಸಭೆಯಾಗಿದೆ. ಸಭೆಯಲ್ಲಿ ಕೈಗೊಳ್ಳುವ ನಿರ್ಣಯಗಳನ್ನು ಬುಧವಾರದಂದು ಶಕ್ತಿಕಾಂತ ದಾಸ್ ಪ್ರಕಟಿಸಲಿದ್ದಾರೆ.

ಕಳೆದ ವರ್ಷದ ಫೆಬ್ರುವರಿಯಲ್ಲಿ ರೆಪೊ ದರವನ್ನು ಶೇ 6.5ಕ್ಕೆ ಹೆಚ್ಚಿಸಲಾಗಿತ್ತು. ಇಲ್ಲಿಯವರೆಗೂ ಪರಿಷ್ಕರಣೆ ಮಾಡಿಲ್ಲ. ಡಿಸೆಂಬರ್‌ನಲ್ಲಿ ನಡೆಯಲಿರುವ ಸಭೆಯಲ್ಲಿ ಬಡ್ಡಿದರ ಕಡಿಮೆ ಮಾಡುವ ಸಾಧ್ಯತೆಯಿದೆ ಎಂದು ಆರ್ಥಿಕ ತಜ್ಞರು ಹೇಳಿದ್ದಾರೆ.

ಗ್ರಾಹಕ ಬೆಲೆ ಸೂಚ್ಯಂಕ ಆಧಾರಿತ (ಸಿಪಿಐ) ಹಣದುಬ್ಬರವನ್ನು ಶೇ 4ರ ಮಿತಿಯಲ್ಲಿ ಕಾಯ್ದುಕೊಳ್ಳುವುದು ಆರ್‌ಬಿಐನ ಗುರಿಯಾಗಿದೆ. ಜುಲೈ ಮತ್ತು ಆಗಸ್ಟ್‌ನಲ್ಲಿ ನಿಗದಿಪಡಿಸಿರುವ ಈ ಮಿತಿಯೊಳಗೆ ಹಣದುಬ್ಬರ ದಾಖಲಾಗಿದೆ.

ಅಮೆರಿಕದ ಕೇಂದ್ರೀಯ ಬ್ಯಾಂಕ್ ಆದ ಫೆಡರಲ್ ರಿಸರ್ವ್ ಇತ್ತೀಚೆಗೆ ಬಡ್ಡಿದರದಲ್ಲಿ ಶೇ 0.50ರಷ್ಟು ಕಡಿತಗೊಳಿಸಿದೆ. ಅಲ್ಲದೆ, ಅಭಿವೃದ್ಧಿ ಹೊಂದಿದ ಕೆಲವು ದೇಶದ ಕೇಂದ್ರೀಯ ಬ್ಯಾಂಕ್‌ಗಳು ಕೂಡ ಬಡ್ಡಿದರ ಇಳಿಕೆ ಮಾಡಿವೆ. ಆದರೆ, ಭಾರತೀಯ ರಿಸರ್ವ್ ಬ್ಯಾಂಕ್, ಫೆಡರಲ್ ರಿಸರ್ವ್ ನೀತಿಯನ್ನು ಅನುಸರಿಸುವುದಿಲ್ಲ ಎಂದು ತಜ್ಞರು ಹೇಳಿದ್ದಾರೆ.

'ಸರಕು ಮತ್ತು ಸೇವೆಗಳ ವೆಚ್ಚದಲ್ಲಿನ ಬದಲಾವಣೆಯ ಸೂಚಕವಾದ ಕೋರ್ ಹಣದುಬ್ಬರ ಏರಿಕೆಯ ಪಥದಲ್ಲಿದೆ. ಇದರ ಪರಿಣಾಮ ಅಕ್ಟೋಬರ್‌ನಲ್ಲಿ ಚಿಲ್ಲರೆ ಹಣದುಬ್ಬರವು ಶೇ 5ಕ್ಕಿಂತ ಹೆಚ್ಚು ದಾಖಲಾಗುವ ನಿರೀಕ್ಷೆಯಿದೆ. ಹಾಗಾಗಿ, ಎಂಪಿಸಿ ಸಭೆಯು ತನ್ನ ನಿಲುವು ಸಡಿಲಿಸುವ ಸಾಧ್ಯತೆ ತೀರಾ ಕಡಿಮೆ' ಎಂದು ಬ್ಯಾಂಕ್ ಆಫ್ ಬರೋಡಾದ ಮುಖ್ಯ ಅರ್ಥಶಾಸ್ತ್ರಜ್ಞ ಮದನ್ ಸಬ್ನವಿಸ್ ಹೇಳಿದ್ದಾರೆ.

'ಈಗಿನ ಸಭೆಯಲ್ಲಿ ರೆಪೊ ದರ ಕಡಿಮೆ ಮಾಡುವುದಿಲ್ಲ. ಆದರೆ, ಡಿಸೆಂಬರ್ ಮತ್ತು ಮುಂದಿನ ವರ್ಷದ ಫೆಬ್ರುವರಿಯಲ್ಲಿ ನಡೆಯುವ ಎಂಪಿಸಿ ಸಭೆಯಲ್ಲಿ ತಲಾ ಶೇ 25ರಷ್ಟು ಬಡ್ಡಿದರ ಕಡಿತಗೊಳಿಸುವ ಸಾಧ್ಯತೆಯಿದೆ' ಎಂದು ಐಸಿಆರ್‌ಎ ಮುಖ್ಯ ಅರ್ಥಶಾಸ್ತ್ರಜ್ಞೆ ಅದಿತಿ ನಾಯರ್ ಅಭಿಪ್ರಾಯಪಟ್ಟಿದ್ದಾರೆ.

ಬೆಳೆ ಹಾನಿ ಪಂಜಾಬ್‌ನ ಅಮೃತಸರ ಬಳಿಯ ಗ್ರಾಮವೊಂದರಲ್ಲಿ ಧಾರಾಕಾರ ಮಳೆಯಿಂದ ಹಾನಿಗೀಡಾದ ಬೆಳೆಯನ್ನು ರೈತರೊಬ್ಬರು ಪರಿಶೀಲಿಸಿದರು –ಪಿಟಿಐ ಚಿತ್ರ

ಐರೋಪ್ಯ ಮಾರುಕಟ್ಟೆ ಪ್ರವೇಶಕ್ಕೆ ಅಮೂಲ್ ಸಿದ್ಧತೆ

ಜೆಮ್‌ಶೆಡ್‌ಪುರ (ಪಿಟಿಐ): 'ಈಗಾಗಲೇ, ಅಮೆರಿಕದ ಮಾರುಕಟ್ಟೆಗೆ ಅಮೂಲ್ ಪ್ರವೇಶಿಸಿದ್ದು, ಯಶಸ್ವಿಯಾಗಿದೆ. ಶೀಘ್ರವೇ, ಐರೋಪ್ಯ ದೇಶಗಳ ಮಾರುಕಟ್ಟೆ ಪ್ರವೇಶಕ್ಕೆ ಸಿದ್ಧತೆ ನಡೆಸಿದೆ' ಎಂದು ಗುಜರಾತ್ ಸಹಕಾರ ಹಾಲು ಮಾರುಕಟ್ಟೆ ಒಕ್ಕೂಟದ (ಜಿಸಿಎಂಎಂಎಫ್) ವ್ಯವಸ್ಥಾಪಕ ನಿರ್ದೇಶಕ ಜಯನ್ ಮೆಹ್ತಾ ಹೇಳಿದ್ದಾರೆ.

ಕ್ಷೀರ ಕ್ರಾಂತಿ ಹರಿಕಾರ ಡಾ.ವರ್ಗೀಸ್ ಕುರಿಯನ್ ಅವರ 11ನೇ ಸ್ಮರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಪ್ರಸ್ತುತ ಜಾಗತಿಕ ಮಟ್ಟದಲ್ಲಿ ಭಾರತವು ಅತಿಹೆಚ್ಚು ಹಾಲು ಉತ್ಪಾದಿಸುವ ರಾಷ್ಟ್ರವಾಗಿದೆ. ಮುಂದಿನ ವರ್ಷಗಳಲ್ಲಿ ವಿಶ್ವದ ಮೂರನೇ ಒಂದು ಭಾಗದಷ್ಟು ಹಾಲನ್ನು ಉತ್ಪಾದಿಸಲಿದೆ ಎಂದರು.

'ಡೇರಿ ಎನ್ನುವುದು ಕೇವಲ ವ್ಯಾಪಾರವಲ್ಲ. ಅದು ಗ್ರಾಮೀಣ ಭಾರತದ ಜೀವನಾಡಿ' ಎಂದು ಹೇಳಿದರು.

ಅಮೂಲ್ ಪ್ರತಿನಿತ್ಯ 310 ಲಕ್ಷಕ್ಕೂ ಹೆಚ್ಚು ಲೀಟರ್ ಹಾಲನ್ನು ರೈತರಿಂದ ಸಂಗ್ರಹಿಸುತ್ತದೆ. ದೇಶದಾದ್ಯಂತ 107 ಡೇರಿ ಘಟಕ ಮತ್ತು 50ಕ್ಕೂ ಹೆಚ್ಚು ಉತ್ಪನ್ನಗಳನ್ನು ಹೊಂದಿದೆ. ವಾರ್ಷಿಕ ವಹಿವಾಟು ₹80 ಸಾವಿರ ಕೋಟಿ ದಾಟಿದೆ. ಒಕ್ಕೂಟದ ವ್ಯಾಪ್ತಿಯಲ್ಲಿ 36 ಲಕ್ಷ ರೈತರು ಇದ್ದಾರೆ. ವಾರ್ಷಿಕವಾಗಿ 2,200 ಕೋಟಿ ಹಾಲಿನ ಪ್ಯಾಕೆಟ್‌ಗಳು ಮಾರಾಟವಾಗುತ್ತವೆ.

ಅಭಿಯಾನ ನಿರ್ದೇಶಕರ ಕಛೇರಿ, ರಾಷ್ಟ್ರೀಯ ಜೀವನೋಪಾಯ ಅಭಿಯಾನ
ಕೌಶಲ್ಯಾಭಿವೃದ್ಧಿ, ಉದ್ಯಮಶೀಲತ ಮತ್ತು ಜೀವನೋಪಾಯ ಇಲಾಖೆ.
4, ಮೈಶುಗರ್ ಕಟ್ಟಡ, ಜೆ.ಸಿ. ರಸ್ತೆ, ಟೌನ್ ಹಾಲ್ ಹತ್ತಿರ, ಬೆಂಗಳೂರು–560002.
ಇ-ಮೇಲ್: nrlmkarnataka@gmail.com

ಸಂಖ್ಯೆ: KSRLPS/LS/MF/2/2024-LS ದಿನಾಂಕ: 05–10–2024

ಟೆಂಡರ್ ಪ್ರಕಟಣೆ

ಸಂಜೀವಿನಿ, ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಸಂವರ್ಧನ ಸಂಸ್ಥೆಯು ಕರ್ನಾಟಕದ ಉತ್ತರ ಕನ್ನಡ ಜಿಲ್ಲೆಯಲ್ಲಿ ಉತ್ಪಾದಕ ಉತ್ತೇಜನದ ಮೂಲಕ ಮೀನುಗಾರಿಕೆ ಮೌಲ್ಯ ಸರಪಳಿ ಅಭಿವೃದ್ಧಿ ಯೋಜನೆ ಮಾಡಲು ತಾಂತ್ರಿಕ ಬೆಂಬಲ ಸಂಸ್ಥೆಯ ಸೇವೆಗಾಗಿ ಆಸಕ್ತ ಸಂಸ್ಥೆಗಳಿಂದ ಪ್ರಸ್ತಾವನೆಯನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನ ಮೂಲಕ ದಿನಾಂಕ: 05.10.2024 ರಂದು ಆಹ್ವಾನಿಸಿದ್ದು, ಆಸಕ್ತ ಸಂಸ್ಥೆಗಳು / ಬಿಡ್ಡುದಾರರು http://www.kppp.karnataka.gov.in ವೆಬ್‌ಸೈಟ್ ಮೂಲಕ ಟೆಂಡರ್‌ಗಳನ್ನು **ದಿನಾಂಕ: 16.10.2024ರ ಸಂಜೆ 5.00ರೊಳಗಾಗಿ** ಸಲ್ಲಿಸಲು ತಿಳಿಸಲಾಗಿದೆ. ಟೆಂಡರ್‌ನ ವೇಳಾಪಟ್ಟಿ ಹಾಗೂ ಹೆಚ್ಚಿನ ವಿವರಗಳನ್ನು ಟೆಂಡರ್ ದಸ್ತಾವೇಜಿನಲ್ಲಿ ನೀಡಲಾಗಿದೆ. Tender Reference No: KSRLPS/2024-25/SE0026/CALL-2 ಇಲ್ಲಿಂದ ಪಡೆಯಬಹುದಾಗಿದೆ.

ಸಹಿ/–
ಅಪರ ಅಭಿಯಾನ ನಿರ್ದೇಶಕರು
ಸಂಜೀವಿನಿ–ಕೆಎಸ್‌ಆರ್‌ಎಲ್‌ಪಿಎಸ್, ಬೆಂಗಳೂರು.
ವಾ.ಸಾ.ಸಂ.ಇ/ವಾಪ್ರ/2371/ಆಕಾರ್/2024–25

ತೋಟಗಾರಿಕೆ ಇಲಾಖೆ
ತೋಟಗಾರಿಕೆ ನಿರ್ದೇಶನಾಲಯ, ಲಾಲ್‌ಬಾಗ್, ಬೆಂಗಳೂರು – 04

ಸಂಖ್ಯೆ: ತೋಇ/ತೋಜಂನಿ(ಬಟೆ)/ಸತೋನಿ(ಸಾಕೃ)/PKVY/15/2024–25 ದಿನಾಂಕ: 05.10.2024

ಅಧಿಸೂಚನೆ

ವಿಷಯ: ಕೇಂದ್ರ ಪುರಸ್ಕೃತ ಪರಂಪರಾಗತ ಕೃಷಿ ವಿಕಾಸ ಯೋಜನೆಯ ಅನುಷ್ಠಾನ ಮಾಡಲು ಕರ್ನಾಟಕ ರಾಜ್ಯದಲ್ಲಿ ನೋಂದಾಯಿಸಲ್ಪಟ್ಟ / ಬ್ರಾಂಚ್ ಕಛೇರಿಯನ್ನು ಹೊಂದಿರುವ ಬೆಂಬಲ ಸಂಸ್ಥೆಗಳಿಂದ ಆಸಕ್ತಿ ಅಭಿವ್ಯಕ್ತ (EoI) ಪ್ರಸ್ತಾವನೆಯನ್ನು HASIRU Portal ಮುಖಾಂತರ ಆಹ್ವಾನಿಸುವ ಬಗ್ಗೆ.

ರಾಜ್ಯ ಸರ್ಕಾರದ ತೋಟಗಾರಿಕೆ ಇಲಾಖೆ ವತಿಯಿಂದ 2024–25 ರಿಂದ 2026–27 ನೇ ಸಾಲಿನವರೆಗೆ ಅನುಷ್ಠಾನಿಸಲಾಗುವ ಪರಂಪರಾಗತ ಕೃಷಿ ವಿಕಾಸ ಯೋಜನೆ ಅನುಷ್ಠಾನಗೊಳಿಸಲು ಬೆಂಬಲ ಸಂಸ್ಥೆಗಳಾಗಿ ಕಾರ್ಯನಿರ್ವಹಿಸಲು ಇಚ್ಛಿಸುವ ಕರ್ನಾಟಕ ರಾಜ್ಯದಲ್ಲಿ ನೋಂದಾಯಿಸಲ್ಪಟ್ಟ / ಬ್ರಾಂಚ್ ಕಛೇರಿಯನ್ನು ಹೊಂದಿರುವ ಪ್ರಸಿದ್ಧ/ಪ–ರಿಣಿತ/ಅನುಭವಿ ಸರ್ಕಾರೇತರ ಸಂಸ್ಥೆಗಳು / ಏಜೆನ್ಸಿಗಳ ವತಿಯಿಂದ ಆಸಕ್ತಿ ಅಭಿವ್ಯಕ್ತ (EoI) ಪ್ರಸ್ತಾವನೆಯನ್ನು ಆಹ್ವಾನಿಸಲಾಗಿದೆ. ಇದರಲ್ಲಿ ಪ್ರಸ್ತಾವನೆಯ ನಮೂನೆ, ಲಗತ್ತಿಸಬೇಕಾದ ದಾಖಲಾತಿಗಳು, ಪ್ರಸ್ತಾವನೆ ಸಲ್ಲಿಸುವ ವಿಧಾನ, ಅರ್ಹತೆ, ಪರಂಪರಾಗತ ಕೃಷಿ ವಿಕಾಸ ಯೋಜನೆಯ ವಿವರಗಳು, ಬೆಂಬಲ ಸಂಸ್ಥೆಯ ಕರ್ತವ್ಯ ಮತ್ತು ಜವಾಬ್ದಾರಿಗಳು, ನಿಬಂಧನೆಗಳು, ಇತ್ಯಾದಿ ವಿವರಗಳನ್ನು ಹೊಂದಿರುತ್ತದೆ. ಇಲಾಖೆಯ **https://hasiru.karnataka.gov.in** ವೆಬ್‌ಸೈಟ್‌ನಲ್ಲಿ EoI ದಾಖಲಾತಿಗಳನ್ನು ಪಡೆದುಕೊಂಡು ಸಂಸ್ಥೆಯ ವಿವರಗಳಾದ company registration certificate, Logo, GST certificate ಅನ್ನು **pmu.heg@gmail.com** ಗೆ ಸಲ್ಲಿಸಿ, Login Credentials (User ID & Password) ಅನ್ನು ಪಡೆದು ನೋಂದಾಯಿಸಿಕೊಳ್ಳುವುದು. ನೋಂದಣಿ ಶುಲ್ಕವಾದ ರೂ. 5,000/– (Non refundable) ಗಳನ್ನು KSHDA A/c No. 64037414538, IFSC Code: SBIN0040277 ಗೆ ಪಾವತಿಸಿ, ಚಲನ್ ಪ್ರತಿಯೊಂದಿಗೆ EoI ದಾಖಲಾತಿಗಳು / ದಸ್ತಾವೇಜುಗಳನ್ನು HASIRU ತಂತ್ರಾಂಶದಲ್ಲಿ ದಿನಾಂಕ 07.10.2024 ರಿಂದ 28.10.2024 ರ ಸಂಜೆ 5.00 ಗಂಟೆಯ ಒಳಗೆ ಅಪ್‌ಲೋಡ್ ಮಾಡಬಹುದಾಗಿರುತ್ತದೆ. ಈ ಸಂಬಂಧ ಪ್ರಸ್ತಾವನೆಯನ್ನು ಸಲ್ಲಿಸುವ ಪೂರ್ವಭಾವಿ ಸಭೆಯನ್ನು ದಿನಾಂಕ 15.10.2024 ರಂದು ಬೆಳಿಗ್ಗೆ 11.00 ಗಂಟೆಗೆ ತೋಟಗಾರಿಕೆ ನಿರ್ದೇಶನಾಲಯ, ಕಿರುಸಭಾಂಗಣ, ಲಾಲ್‌ಬಾಗ್, ಬೆಂಗಳೂರು ಇಲ್ಲಿ ಆಯೋಜಿಸಲಾಗಿರುತ್ತದೆ.

ಹೆಚ್ಚಿನ ಮಾಹಿತಿಗಾಗಿ ತೋಟಗಾರಿಕೆ ಜಂಟಿ ನಿರ್ದೇಶಕರು (ಬಯೋಟೆಕ್ನಾಲಜಿ), ಜೈವಿಕ ಕೇಂದ್ರ, ಹುಳಿಮಾವು, ಬನ್ನೇರುಘಟ್ಟ ರಸ್ತೆ, ಬೆಂಗಳೂರು – 76, ಮೊ: 9448999205 ಹಾಗೂ ಸಹಾಯಕ ತೋಟಗಾರಿಕೆ ನಿರ್ದೇಶಕರು, PKVY ಮೊ: 9108591917 **jaivikakendra.hulimavu@gmail.com** ಇಲ್ಲಿ ಸಂಪರ್ಕಿಸಬಹುದಾಗಿರುತ್ತದೆ.

ಸಹಿ/–
ತೋಟಗಾರಿಕೆ ನಿರ್ದೇಶಕರು
ಲಾಲ್‌ಬಾಗ್, ಬೆಂಗಳೂರು – 04
ವಾಸಸಂಇ/ಸಿಪಿ/ಎಎಎ/2377/2024–25

ಒಲಾ ಇ–ಸ್ಕೂಟರ್ ಗುಣಮಟ್ಟ ಭವೀಶ್- ಕಾಮ್ರಾ ವಾಕ್ಸಮರ

ನವದೆಹಲಿ (ಪಿಟಿಐ): ಓಲಾ ಕಂಪನಿಯ ಇ–ಸ್ಕೂಟರ್ ಸೇವೆಗೆ ಸಂಬಂಧಿಸಿದಂತೆ ಕಂಪನಿಯ ಸಂಸ್ಥಾಪಕ ಭವೀಶ್ ಅಗರ್ವಾಲ್ ಮತ್ತು ಸ್ಟ್ಯಾಂಡ್‌ಅಪ್ ಕಾಮಿಡಿಯನ್ ಕುನಾಲ್ ಕಾಮ್ರಾ ನಡುವೆ 'ಎಕ್ಸ್'ನಲ್ಲಿ ಭಾನುವಾರ ವಾಕ್ಸಮರ ನಡೆದಿದೆ.

ಓಲಾದ ಗಿಗಾ ಫ್ಯಾಕ್ಟರಿ ಮುಂದೆ ರಿಪೇರಿಗಾಗಿ ನಿಲುಗಡೆಯಾಗಿರುವ ಇ–ಸ್ಕೂಟರ್‌ಗಳ ಫೋಟೊವೊಂದನ್ನು ಭವೀಶ್ ಅವರು, ತಮ್ಮ 'ಎಕ್ಸ್' ಖಾತೆಯಲ್ಲಿ ಪೋಸ್ಟ್ ಮಾಡಿದ್ದರು.

ಇದಕ್ಕೆ ಪ್ರತಿಕ್ರಿಯಿಸಿದ್ದ ಕಾಮ್ರಾ, 'ದ್ವಿಚಕ್ರ ವಾಹನಗಳು ದಿನಗೂಲಿ ಕಾರ್ಮಿಕರ ಬದುಕಿನ ಅವಿಭಾಜ್ಯ ಅಂಗವಾಗಿವೆ. ಕಂಪನಿಯು ಕಳಪೆ ಗುಣಮಟ್ಟದ ಸ್ಕೂಟರ್‌ಗಳನ್ನು ಒದಗಿಸುತ್ತಿದೆ. ದೇಶದ ಗ್ರಾಹಕರಿಗೆ ಧ್ವನಿ ಇಲ್ಲವೇ? ಇಂತಹ ಸಮಸ್ಯೆ ಎದುರಿಸುತ್ತಿದ್ದರೆ ಪ್ರತಿಕ್ರಿಯಿಸಬೇಕು' ಎಂದು ಕೋರಿದ್ದರು.

ಈ ಪೋಸ್ಟ್ ಅನ್ನು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಅವರ ಅಧಿಕೃತ 'ಎಕ್ಸ್' ಖಾತೆಗೂ ಟ್ಯಾಗ್ ಮಾಡಿದ್ದರು. 'ಇಂತಹ ಸ್ಕೂಟರ್‌ಗಳನ್ನು ಭಾರತೀಯರು ಬಳಸಲು ಸಾಧ್ಯವೇ? ಎಂದು ಪ್ರಶ್ನಿಸಿದ್ದರು.

ಕೇಂದ್ರ ಗ್ರಾಹಕ ವ್ಯವಹಾರಗಳ ಸಚಿವಾಲಯದ 'ಎಕ್ಸ್' ಖಾತೆಗೂ ಟ್ಯಾಗ್ ಮಾಡಿದ್ದ ಅವರು, 'ಇದಕ್ಕೆ ನಿಮ್ಮ ಉತ್ತರ ಏನು' ಎಂದು ಕೇಳಿದ್ದರು.

ಕಾಮ್ರಾ ಅವರ ಪೋಸ್ಟ್‌ಗೆ ಪ್ರತಿಕ್ರಿಯಿಸಿರುವ ಭವೀಶ್, 'ನಿಮ್ಮ ಕಾಳಜಿಗೆ ಧನ್ಯವಾದಗಳು. ನೀವು ಬಂದು ನಮಗೆ ಸಹಾಯ ಮಾಡಿ. ನೀವು ದುಡ್ಡಿಗಾಗಿ ಈ ಪ್ರತಿಕ್ರಿಯೆ ನೀಡಿದ್ದೀರಿ' ಎಂದು ದೂರಿದ್ದಾರೆ.

'ಜನರನ್ನು ರಂಜಿಸಲು ವಿಫಲವಾಗಿರುವ ನಿಮ್ಮ ಹಾಸ್ಯ ಕಾರ್ಯಕ್ರಮಗಳಿಗಿಂತಲೂ ನಾನು ಹೆಚ್ಚು ಹಣ ಪಾವತಿಸುತ್ತೇನೆ. ಇಲ್ಲವಾದರೆ ನೀವು ಸುಮ್ಮನೆ ಇರಿ. ಗ್ರಾಹಕರ ಸಮಸ್ಯೆ ಪರಿಹರಿಸುವತ್ತ ಗಮನಹರಿಸೋಣ. ನಾವು ತ್ವರಿತಗತಿಯಲ್ಲಿ ಸೇವಾ ಜಾಲ ವಿಸ್ತರಿಸುತ್ತಿದ್ದು, ಗ್ರಾಹಕರ ಸಮಸ್ಯೆ ಬಗೆಹರಿಸಲು ಒತ್ತು ನೀಡಿದ್ದೇವೆ' ಎಂದು ಹೇಳಿದ್ದಾರೆ.

ಸಹಜ ಸ್ಥಿತಿಗೆ ಮರಳಿದ ಇಂಡಿಗೊ ಸೇವೆ

ನವದೆಹಲಿ (ಪಿಟಿಐ): ಸರ್ವರ್‌ನಲ್ಲಿ ಕಾಣಿಸಿಕೊಂಡಿದ್ದ ತಾಂತ್ರಿಕ ದೋಷವನ್ನು ಸರಿಪಡಿಸಲಾಗಿದ್ದು, ವಿಮಾನ ಸೇವೆಯು ಭಾನುವಾರ ಸಹಜ ಸ್ಥಿತಿಗೆ ಮರಳಿದೆ ಎಂದು ಇಂಡಿಗೊ ಕಂಪನಿ ತಿಳಿಸಿದೆ.

ತಾಂತ್ರಿಕ ದೋಷದಿಂದಾಗಿ ಶನಿವಾರ ಕಂಪನಿಯ ನೆಟ್‌ವರ್ಕ್‌ನಲ್ಲಿ ಅಡಚಣೆಯಾಗಿತ್ತು. ಇದರಿಂದ ವೆಬ್‌ಸೈಟ್ ಮತ್ತು ಟಿಕೆಟ್ ಬುಕಿಂಗ್‌ಗೆ ತೊಂದರೆಯಾಗಿತ್ತು. ಕೆಲವು ವಿಮಾನಗಳ ಸಂಚಾರದಲ್ಲಿ ವಿಳಂಬವಾಗಿತ್ತು. ದೇಶೀಯ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ಸಾವಿರಾರು ಪ್ರಯಾಣಿಕರು ಸಂಕಷ್ಟಕ್ಕೆ ಸಿಲುಕಿದ್ದರು.

'ಪ್ರಸ್ತುತ ನೆಟ್‌ವರ್ಕ್ ಸಮರ್ಪಕವಾಗಿ ಕಾರ್ಯ ನಿರ್ವಹಿಸುತ್ತಿದೆ. ಪ್ರಯಾಣಿಕರಿಗೆ ಆಗಿರುವ ತೊಂದರೆಗೆ ವಿಷಾದ ವ್ಯಕ್ತಪಡಿಸುತ್ತೇವೆ' ಎಂದು ಕಂಪನಿಯು 'ಎಕ್ಸ್'ನಲ್ಲಿ ತಿಳಿಸಿದೆ.

ನೌಕರರ ಹೋರಾಟ ಸ್ಯಾಮ್ಸಂಗ್ ಜೊತೆಗೆ ಸರ್ಕಾರ ಚರ್ಚೆ

ಚೆನ್ನೈ (ಪಿಟಿಐ): ಶ್ರೀಪೆರಂಬದೂರು ಘಟಕದಲ್ಲಿ ಪ್ರತಿಭಟನನಿರತ ಉದ್ಯೋಗಿಗಳ ಸಮಸ್ಯೆ ಬಗೆಹರಿಸುವ ಸಂಬಂಧ ಸ್ಯಾಮ್ಸಂಗ್ ಕಂಪನಿಯ ಹಿರಿಯ ಅಧಿಕಾರಿಗಳು ಮತ್ತು ತಮಿಳುನಾಡಿನ ಕೈಗಾರಿಕಾ ಸಚಿವ ಟಿ.ಆರ್.ಬಿ. ರಾಜಾ ಭಾನುವಾರ ಚರ್ಚೆ ನಡೆಸಿದರು.

ವೇತನ ಹೆಚ್ಚಳ ಸೇರಿ ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಸ್ಯಾಮ್ಸಂಗ್ ಘಟಕದಲ್ಲಿ ಕಾರ್ಯನಿರ್ವಹಿಸುವ 1,100ಕ್ಕೂ ಹೆಚ್ಚು ಉದ್ಯೋಗಿಗಳು ಸೆಪ್ಟೆಂಬರ್ 9ರಿಂದ ಹೋರಾಟ ನಡೆಸುತ್ತಿದ್ದಾರೆ. ಸಿ.ಎಂ ಎಂ.ಕೆ. ಸ್ಟಾಲಿನ್ ಅವರು, ಉದ್ಯೋಗಿಗಳ ಸಮಸ್ಯೆ ಬಗೆಹರಿಸಲು ಮೂವರು ಸಚಿವರಿಗೆ ಜವಾಬ್ದಾರಿ ನೀಡಿದ್ದಾರೆ.

'ಮುಖ್ಯಮಂತ್ರಿ ಅವರ ಸಲಹೆ ಮೇರೆಗೆ ಸ್ಯಾಮ್ಸಂಗ್ ಆಡಳಿತ ಮಂಡಳಿಯ ನಿರ್ದೇಶಕರನ್ನು ಭೇಟಿ ಮಾಡಿದ್ದೇನೆ. ತ್ವರಿತವಾಗಿ ಸಮಸ್ಯೆ ಬಗೆಹರಿಸುವ ಬಗ್ಗೆ ಚರ್ಚಿಸಲಾಗಿದೆ' ಎಂದು ಸಚಿವ ರಾಜಾ ಸಾಮಾಜಿಕ ಜಾಲತಾಣದಲ್ಲಿ ತಿಳಿಸಿದ್ದಾರೆ. 'ಆಡಳಿತ ಮಂಡಳಿ, ಉದ್ಯೋಗಿಗಳು ಒಗ್ಗೂಡಿ ಸೌಹಾರ್ದಯುತವಾಗಿ ಸಮಸ್ಯೆ ಬಗೆಹರಿಸಿಕೊಳ್ಳುವ ವಿಶ್ವಾಸವಿದೆ' ಎಂದಿದ್ದಾರೆ.

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ) ₹300-518

ದ್ವಿತಳಿ (ಬಿ.ವಿ) ₹281-679

9 ಕಂಪನಿ ಎಂ–ಕ್ಯಾಪ್ ₹4.74 ಲಕ್ಷ ಕೋಟಿ ಇಳಿಕೆ

ನವದೆಹಲಿ (ಪಿಟಿಐ): ಕಳೆದ ವಾರ ನಡೆದ ವಹಿವಾಟಿನಲ್ಲಿ ಷೇರು ಸೂಚ್ಯಂಕಗಳ ಇಳಿಕೆಯಿಂದಾಗಿ ಪ್ರಮುಖ 10 ಕಂಪನಿಗಳ ಪೈಕಿ 9 ಕಂಪನಿಗಳ ಸಂಯೋಜಿತ ಮಾರುಕಟ್ಟೆ ಮೌಲ್ಯವು (ಎಂ–ಕ್ಯಾಪ್) ₹4.74 ಲಕ್ಷ ಕೋಟಿ ಕರಗಿದೆ.

ರಿಲಯನ್ಸ್ ಇಂಡಸ್ಟ್ರೀಸ್ ಎಂ–ಕ್ಯಾಪ್ ಅತಿಹೆಚ್ಚು ಕರಗಿದ್ದು, ₹1.88 ಲಕ್ಷ ಕೋಟಿ ಕಡಿಮೆಯಾಗಿದೆ. ಒಟ್ಟು ಮಾರುಕಟ್ಟೆ ಮೌಲ್ಯ ₹18.76 ಲಕ್ಷ ಕೋಟಿ ಆಗಿದೆ.

ಎಚ್‌ಡಿಎಫ್‌ಸಿ ಬ್ಯಾಂಕ್ ₹72,919 ಕೋಟಿ, ಭಾರ್ತಿ ಏರ್‌ಟೆಲ್ ₹53,800 ಕೋಟಿ, ಐಸಿಐಸಿಐ ಬ್ಯಾಂಕ್ ₹47,461 ಕೋಟಿ, ಎಲ್‌ಐಸಿ ₹33,490 ಕೋಟಿ, ಹಿಂದುಸ್ತಾನ್ ಯೂನಿಲಿವರ್ ₹27,525 ಕೋಟಿ, ಐಟಿಸಿ ₹24,139 ಕೋಟಿ, ಟಿಸಿಎಸ್ ₹21,690 ಕೋಟಿ ಮತ್ತು ಎಸ್‌ಬಿಐ ಮಾರುಕಟ್ಟೆ ಮೌಲ್ಯವು ₹5,339 ಕೋಟಿ ಕರಗಿದೆ.

ಇನ್ಫೊಸಿಸ್ ಎಂ–ಕ್ಯಾಪ್‌ನಲ್ಲಿ ₹4,629 ಕೋಟಿ ಏರಿಕೆಯಾಗಿದೆ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹550
12 ಕ್ಕೆ	₹75
ಮೈಸೂರು	
100ಕ್ಕೆ	₹555

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಟೆಂಡರ್ ಪ್ರಕಟಣೆ (ಕೆ.ಪಿ.ಪಿ ಪೋರ್ಟಲ್ ಮೂಲಕ ಮಾತ್ರ)

ಬೆಂಗಳೂರು ಜಲಮಂಡಳಿಯು ಕೆಳಕಂಡ ಕಾಮಗಾರಿಗಳಿಗಾಗಿ ನೋಂದಾಯಿತ ಏಜೆನ್ಸಿಗಳಿಂದ ಟೆಂಡರ್‌ಗಳನ್ನು ಆಹ್ವಾನಿಸಿದೆ.

ಕ್ರ ಸಂ.	ವಿಭಾಗ	ಐಎಫ್‌ಟಿ ಸಂಖ್ಯೆ	ಟೆಂಡರ್‌ಗಿಟ್ಟ ಮೊತ್ತ ಇಎಂಡಿ (ರೂ. ಗಳಲ್ಲಿ)	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ	ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ
ಮುಖ್ಯ ಅಭಿಯಂತರರ ಕಛೇರಿ (ಉತ್ತರ), 2ನೇ ಮಹಡಿ, ಕಾವೇರಿ ಭವನ, ಕೆ.ಜಿ ರಸ್ತೆ, ಬೆಂಗಳೂರು–560009.					
1	(ಉತ್ತರ ಪೂರ್ವ)	ಬೆಂಜಮಂ/ಕಾನಿಅ(ಉ–ಪೂ)/ತಾಂಅ/ಪಿಬಿ/2062/2024–25 ದಿನಾಂಕ: 04.10.2024 (ಪರಿಶಿಷ್ಟ ಜಾತಿಗೆ ಮೀಸಲಿರಿಸಿದೆ)	ರೂ. 15,37,107/– ರೂ. 19,250/–	22.10.2024ರ ಸಂಜೆ 4.00 ಗಂಟೆಯವರೆಗೆ	24.10.2024ರ ಮಧ್ಯಾಹ್ನ 3.00 ಗಂಟೆಯ ನಂತರ
2		ಬೆಂಜಮಂ/ಕಾನಿಅ(ಉ–ಪೂ)/ತಾಂಅ/ಪಿಬಿ/2064/2024–25 ದಿನಾಂಕ: 04.10.2024	ರೂ. 23,53,242/– ರೂ. 50,000/–		
3		ಬೆಂಜಮಂ/ಕಾನಿಅ(ಉ–ಪೂ)/ತಾಂಅ/ಪಿಬಿ/2066/2024–25 ದಿನಾಂಕ: 04.10.2024	ರೂ. 9,92,981/– ರೂ. 24,850/–		
4		ಬೆಂಜಮಂ/ಕಾನಿಅ(ಉ–ಪೂ)/ತಾಂಅ/ಪಿಬಿ/2068/2024–25 ದಿನಾಂಕ: 04.10.2024	ರೂ. 12,17,111/– ರೂ. 30,450/–		
5		ಬೆಂಜಮಂ/ಕಾನಿಅ(ಉ–ಪೂ)/ತಾಂಅ/ಪಿಬಿ/2070/2024–25 ದಿನಾಂಕ: 04.10.2024	ರೂ. 17,15,608/– ರೂ. 42,900/–		
6		ಬೆಂಜಮಂ/ಕಾನಿಅ(ಉ–ಪೂ)/ತಾಂಅ/ಪಿಬಿ/2072/2024–25 ದಿನಾಂಕ: 04.10.2024 (ಪರಿಶಿಷ್ಟ ಪಂಗಡಕ್ಕೆ ಮೀಸಲಿರಿಸಿದೆ)	ರೂ. 10,03,072/– ರೂ. 12,600/–		
ಸಹಿ/– ಕಾರ್ಯನಿರ್ವಾಹಕ ಅಭಿಯಂತರರು (ಉತ್ತರ–ಪೂರ್ವ)					
ಮುಖ್ಯ ಅಭಿಯಂತರರ ಕಛೇರಿ (ಪಶ್ಚಿಮ), 6ನೇ ಮಹಡಿ, ಕಾವೇರಿ ಭವನ, ಕೆ.ಜಿ ರಸ್ತೆ, ಬೆಂಗಳೂರು–560009.					
7	ಪಶ್ಚಿಮ –1	ಬೆಂಜಮಂ/ಕಾನಿಅ(ಪ)–1/ಪಿಬಿ/2776/2024–25 ದಿನಾಂಕ: 05.10.2024 (ಪರಿಶಿಷ್ಟ ಜಾತಿಗೆ ಮೀಸಲಿರಿಸಿದೆ)	ರೂ. 61,23,099/– ರೂ. 61,300/–	24.10.2024ರ ಸಂಜೆ 4.00 ಗಂಟೆಯವರೆಗೆ	25.10.2024 ರ ಸಂಜೆ 4.30 ಗಂಟೆಯ ನಂತರ
8		ಬೆಂಜಮಂ/ಕಾನಿಅ(ಪ)–1/ಪಿಬಿ/2775/2024–25 ದಿನಾಂಕ: 05.10.2024	ರೂ. 73,05,366/– ರೂ. 1,46,200/–		
9		ಬೆಂಜಮಂ/ಕಾನಿಅ(ಪ)–1/ಪಿಬಿ/2774/2024–25 ದಿನಾಂಕ: 05.10.2024 (ಪರಿಶಿಷ್ಟ ಪಂಗಡಕ್ಕೆ ಮೀಸಲಿರಿಸಿದೆ)	ರೂ. 25,03,242/– ರೂ. 25,100/–		
10		ಬೆಂಜಮಂ/ಕಾನಿಅ(ಪ)–1/ಪಿಬಿ/2773/2024–25 ದಿನಾಂಕ: 05.10.2024	ರೂ. 23,00,488/– ರೂ. 50,000/–		
11		ಬೆಂಜಮಂ/ಕಾನಿಅ(ಪ)–1/ಪಿಬಿ/2772/2024–25 ದಿನಾಂಕ: 05.10.2024	ರೂ. 60,38,879/– ರೂ. 1,20,800/–		
12		ಬೆಂಜಮಂ/ಕಾನಿಅ(ಪ)–1/ಪಿಬಿ/2771/2024–25 ದಿನಾಂಕ: 05.10.2024	ರೂ. 38,62,968/– ರೂ. 77,300/–		
13		ಬೆಂಜಮಂ/ಕಾನಿಅ(ಪ)–1/ಪಿಬಿ/2770/2024–25 ದಿನಾಂಕ: 05.10.2024	ರೂ. 54,94,721/– ರೂ. 1,09,900/–		
ಸಹಿ/– ಕಾರ್ಯನಿರ್ವಾಹಕ ಅಭಿಯಂತರರು (ಪಶ್ಚಿಮ–1)					

ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತು ಮಾಹಿತಿಯನ್ನು https://kppp.karnataka.gov.in ಗೆ ಲಾಗಿನ್ ಆಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಮೇಲಿನ ಸಹಿದಾರರ ಕಛೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.

DIPR/CP/2398/Zen/2024-25

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಟೆಂಡರ್‌ಗಾಗಿ ಆಹ್ವಾನ (ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಬೆಂಗಳೂರು ಜಲಮಂಡಳಿಯು ಕೆಳಕಂಡ ಕಾಮಗಾರಿಗಳಿಗಾಗಿ ಅರ್ಹ ಗುತ್ತಿಗೆದಾರರಿಂದ ದ್ವಿ–ಹಂತದ ಟೆಂಡರ್ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಿದೆ.

ಕ್ರ.ಸಂ.	ಕಾಮಗಾರಿಗಳ ವಿವರ	ಕಾಮಗಾರಿಗಿಟ್ಟ ಮೊತ್ತ ಇಎಂಡಿ ಮೊತ್ತ
ಮುಖ್ಯ ಅಭಿಯಂತರರ ಕಛೇರಿ (ತ್ಯಾನೀನಿ–ಪಶ್ಚಿಮ), 6ನೇ ಮಹಡಿ, ಕಾವೇರಿ ಭವನ, ಕೆ. ಜಿ. ರಸ್ತೆ, ಬೆಂಗಳೂರು – 560 009		
ಸಂ: ಬೆಂ.ಜ.ಮಂ/ಮುಅ(ತ್ಯಾನೀನಿ–ಪ)/ಅಮುಅ(ತ್ಯಾನೀನಿ–ಎನ್–ಪ)/ಉಮುಅ(ತ್ಯಾನೀನಿ–ಪೂ&ಪ)/ತಾಂಸ–2/863/2024–25 ದಿನಾಂಕ:03.10.2024		
1	ಬೆಂಗಳೂರಿನ ದ್ವಾರಕಾನಗರದ ಪಿಇಎಸ್ ಕಾಲೇಜು ಬಳಿ ಎಸ್4ಡಿ ಅಡಿಯಲ್ಲಿ ಡಾ. ಪುನೀತ್ ರಾಜ್‌ಕುಮಾರ್ ರಸ್ತೆಯಲ್ಲಿ 600/700/800ಮಿಮೀ ವ್ಯಾಸದ ಆರ್‌ಸಿಸಿ ಎನ್‌ಪಿ–3 ದರ್ಜೆಯ ಒಳಚರಂಡಿ ಕೊಳವೆಮಾರ್ಗವನ್ನು ಒದಗಿಸುವುದು ಮತ್ತು ಅಳವಡಿಸುವುದು ಹಾಗೂ 1200ಮಿಮೀ ವ್ಯಾಸದ ಆರ್‌ಸಿಸಿ ಒಳಚರಂಡಿ ಮಾರ್ಗಕ್ಕೆ ಸಂಪಕಿಸುವುದು.	ರೂ. 240.32 ಲಕ್ಷಗಳು ರೂ. 3.61 ಲಕ್ಷಗಳು
ಸಂ: ಬೆಂ.ಜ.ಮಂ/ಮುಅ(ತ್ಯಾನೀನಿ–ಪ)/ಅಮುಅ(ತ್ಯಾನೀನಿ–ಎನ್–ಪ)/ಉಮುಅ(ತ್ಯಾನೀನಿ–ಪೂ&ಪ)/ತಾಂಸ–2/864/2024–25 ದಿನಾಂಕ:03.10.2024		
2	ಬೆಂಗಳೂರು, ಮಹದೇಶ್ವರ ಮುಖ್ಯರಸ್ತೆಯ ಶನಿಮಹಾತ್ಮ ದೇವಸ್ಥಾನದಿಂದ ಲಕ್ಷ್ಮಣನಗರ, ಹೇರೋಹಳ್ಳಿ, ಬಾಲ್ಡ್‌ವಿನ್ ಶಾಲೆಯವರೆಗೆ 500ಮಿಮೀ ವ್ಯಾಸದ ಡಿಡಬ್ಲ್ಯೂಸಿ ಎಸ್‌ಎನ್–8 ದರ್ಜೆಯ ಕೊಳವೆಮಾರ್ಗವನ್ನು ಒದಗಿಸುವುದು ಮತ್ತು ಅಳವಡಿಸುವುದು.	ರೂ. 179.42 ಲಕ್ಷಗಳು ರೂ. 2.69 ಲಕ್ಷಗಳು
ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : **21.10.2024ರ ಸಂಜೆ 5.00 ಗಂಟೆಯವರೆಗೆ.** ತಾಂತ್ರಿಕ ಟೆಂಡರ್‌ಗಳನ್ನು ತೆರೆಯುವ ದಿನಾಂಕ:**22.10.2024 ರ ಸಂಜೆ 5.30 ಗಂಟೆಗೆ.**		
ಸಂ: ಬೆಂ.ಜ.ಮಂ/ಮುಅ(ತ್ಯಾನೀನಿ–ಪ)/ಅಮುಅ(ತ್ಯಾನೀನಿ–ಎನ್–ಪ)/ಉಮುಅ(ತ್ಯಾನೀನಿ–ಪೂ&ಪ)/ತಾಂಸ–2/866/2024–25 ದಿನಾಂಕ:03.10.2024		
3	ಬೆಂಗಳೂರು, ಕೆಂಪಾಪುರ ಅಗ್ರಹಾರ, ಮಾಗಡಿ ರಸ್ತೆಯ 5ನೇ ಅಡ್ಡರಸ್ತೆಯ ಭುವನೇಶ್ವರಿ ನಗರದಿಂದ ಎಸ್‌ಡಬ್ಲ್ಯೂಡಿ (ವಿ100) ವರೆಗೆ 600ಮಿಮೀ ವ್ಯಾಸದ ಡಿಡಬ್ಲ್ಯೂಸಿ ಎಸ್‌ಎನ್–8 ದರ್ಜೆಯ ಕೊಳವೆಮಾರ್ಗವನ್ನು ಒದಗಿಸುವುದು ಮತ್ತು ಅಳವಡಿಸುವುದು.	ರೂ. 207.09 ಲಕ್ಷಗಳು ರೂ. 3.11 ಲಕ್ಷಗಳು
ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **05.11.2024ರ ಬೆಳಿಗ್ಗೆ 11.00 ಗಂಟೆಯವರೆಗೆ.** ತಾಂತ್ರಿಕ ಟೆಂಡರ್‌ಗಳನ್ನು ತೆರೆಯುವ ದಿನಾಂಕ: **06.11.2024 ರ ಬೆಳಿಗ್ಗೆ 11.30 ಗಂಟೆಗೆ.** ಸಹಿ/– ಮುಖ್ಯ ಅಭಿಯಂತರರು((ತ್ಯಾನೀನಿ–ಪಶ್ಚಿಮ)		
ಪ್ರಧಾನ ಮುಖ್ಯ ಅಭಿಯಂತರರ ಕಛೇರಿ, 2ನೇ ಮಹಡಿ, ಕಾವೇರಿ ಭವನ, ಕೆ. ಜಿ. ರಸ್ತೆ, ಬೆಂಗಳೂರು – 560 009		
ಸಂ: ಬೆಂ.ಜ.ಮಂ/ಪ್ರಮುಅ/ಅಮುಅ(ಯುಎಫ್‌ಡಬ್ಲ್ಯೂ)/ತಾಂಸ/5382/2024–25 ದಿನಾಂಕ: 04.10.2024		
4	ಸಕಾನಿಅ(ಯುಎಫ್‌ಡಬ್ಲ್ಯೂ–2) ಉಪ ವಿಭಾಗದದಲ್ಲಿ ಡಿ1ಎ ಯೋಜನೆಯಡಿಯಲ್ಲಿ ಸ್ಥಾಪಿಸಲಾದ ಎಬಿಬಿ ತಯಾರಿಕೆಯ ಇಎಂಎಫ್ ಫ್ಲೋಮೀಟರ್‌ಗಳನ್ನು ದುರಸ್ತಿ ಮತ್ತು ನಿರ್ವಹಣೆ ಮತ್ತು ಸಂಬಂಧಿತ ಕಾಮಗಾರಿಗಳು (3 ನೇ ಕರೆ).	ರೂ. 151.76 ಲಕ್ಷಗಳು ರೂ. 2.3 ಲಕ್ಷಗಳು
ಸಂ: ಬೆಂ.ಜ.ಮಂ/ಪ್ರಮುಅ/ಅಮುಅ(ಯುಎಫ್‌ಡಬ್ಲ್ಯೂ)/ತಾಂಸ/5384/2024–25 ದಿನಾಂಕ: 04.10.2024		
5	ಸಕಾನಿಅ(ಯುಎಫ್‌ಡಬ್ಲ್ಯೂ–2) ಉಪ ವಿಭಾಗದದಲ್ಲಿ 110ವಿ ವಿವಿಧ ಪ್ಯಾಕೇಜ್‌ನಡಿಯಲ್ಲಿ ಸ್ಥಾಪಿಸಲಾದ ಇಎಂಎಫ್ ಫ್ಲೋಮೀಟರ್‌ಗಳನ್ನು ದುರಸ್ತಿ ಮತ್ತು ನಿರ್ವಹಣೆ ಮತ್ತು ಸಂಬಂಧಿತ ಕಾಮಗಾರಿಗಳು (3 ನೇ ಕರೆ).	ರೂ. 163.69 ಲಕ್ಷಗಳು ರೂ. 2.5 ಲಕ್ಷಗಳು
ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **14.10.2024ರ ಸಂಜೆ 4.00 ಗಂಟೆಯವರೆಗೆ.** ತಾಂತ್ರಿಕ ಟೆಂಡರ್‌ಗಳನ್ನು ತೆರೆಯುವ ದಿನಾಂಕ: **15.10.2024 ರ ಸಂಜೆ 4.05 ಗಂಟೆಗೆ.** ಸಹಿ/– ಮುಖ್ಯ ಪ್ರಧಾನ ಅಭಿಯಂತರರು		
ಮುಖ್ಯ ಅಭಿಯಂತರರ ಕಛೇರಿ ((ವಿನ್ಯಾಸ & ಗುಅ), 9ನೇ ಮಹಡಿ, ಕಾವೇರಿ ಭವನ, ಕೆ. ಜಿ. ರಸ್ತೆ, ಬೆಂಗಳೂರು – 560 009		
ಸಂ: ಬೆಂ.ಜ.ಮಂ/ಮುಅ(ವಿ&ಗುಅ)/ಅಮುಅ(ವಿ)/ತಾಂಸ/1748/2024–25 ದಿನಾಂಕ: 03.10.2024		
6	ಎ) ಐಡಿಯಲ್ ಹೋಮ್ಸ್, ಬಿ) ಪೀಣ್ಯ 2ನೇ ಹಂತ, ಮತ್ತು 3) ನಂದಿನಿ ಲೇಔಟ್ ನಲ್ಲಿ ಸರ್ವೀಸ್ ಸ್ಟೇಷನ್ ಕಟ್ಟಡ ನಿರ್ಮಾಣ ಕಾಮಗಾರಿ.	Rs. 2,03,11,533/- Rs.3,04,700/-
ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **23.10.2024ರ ಸಂಜೆ 4.00 ಗಂಟೆಯವರೆಗೆ.** ತಾಂತ್ರಿಕ ಟೆಂಡರ್‌ಗಳನ್ನು ತೆರೆಯುವ ದಿನಾಂಕ: **24.10.2024 ರ ಸಂಜೆ 4.00 ಗಂಟೆಗೆ.**		
ಸಂ: ಬೆಂ.ಜ.ಮಂ/ಮುಅ(ವಿ&ಗುಅ)/ಅಮುಅ(ವಿ)/ತಾಂಸ/1756/2024–25 ದಿನಾಂಕ: 03.10.2024		
7	ಬೆಂಗಳೂರಿನ ಮಲ್ಲೇಶ್ವರಂನ ಸಿಜೆಎಫ್ ಆವರಣದಲ್ಲಿ 12 ಮನೆಗಳ ಕ್ವಾರ್ಟರ್ಸ್ ಕಟ್ಟಡ (ಸ್ಟಿಲ್ಟ್+ಜಿಎಫ್+ಎಫ್‌ಎಫ್+ಎಸ್‌ಎಫ್) ನಿರ್ಮಾಣ ಕಾಮಗಾರಿ.	Rs. 3,87,36,028/- Rs.5,81,100/-
ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **23.10.2024ರ ಸಂಜೆ 4.00 ಗಂಟೆಯವರೆಗೆ.** ತಾಂತ್ರಿಕ ಟೆಂಡರ್‌ಗಳನ್ನು ತೆರೆಯುವ ದಿನಾಂಕ: **24.10.2024 ರ ಮಧ್ಯಾಹ್ನ 12.00 ಗಂಟೆಗೆ.** ಸಹಿ/– ಮುಖ್ಯ ಅಭಿಯಂತರರು(ವಿನ್ಯಾಸ & ಗುಅ)		

ಟೆಂಡರ್ ಹಾಗೂ ಇ–ಪ್ರೊಕ್ಯೂರ್‌ಮೆಂಟ್ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುವುದಕ್ಕೆ ಸಂಬಂಧಿಸಿದ ವಿವರಗಳನ್ನು https://kppp.karnataka.gov.in ಗೆ ಭೇಟಿ ನೀಡುವ ಮೂಲಕ ಪಡೆದುಕೊಳ್ಳಬಹುದು. ಹೆಚ್ಚಿನ ವಿವರಗಳಿಗಾಗಿ ಮೇಲಿನ ಸಹಿದಾರರ ಕಛೇರಿಯನ್ನು ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದು.

ವಾಸಾಸಂಇ/ವಾಪ್ರ/ಜಿಎ/2369/2024–25

❦ ಸುಭಾಷಿತ ❦

ಒಂದು ಅಗುಳು ಅನ್ನದ ಹಿಂದೆ ಹಲವರ ಪರಿಶ್ರಮ ಇರುತ್ತದೆ. ಆದ್ದರಿಂದ, ಆಹಾರ ಸೇವಿಸುವಾಗ ವ್ಯರ್ಥ ಮಾಡುವುದು ಶ್ರೇಯಸ್ಕರವಲ್ಲ. -ಶಿವಕುಮಾರ ಸ್ವಾಮೀಜಿ

ಜೈಲುಗಳಲ್ಲಿ ಜಾತಿ ತಾರತಮ್ಯ ಕೈಪಿಡಿ ಆಚೆಗೂ ಬದಲಾವಣೆ ಬೇಕು

ಕರ್ನಾಟಕ ಸೇರಿದಂತೆ ವಿವಿಧ ರಾಜ್ಯಗಳ ಜೈಲು ಕೈಪಿಡಿಗಳಲ್ಲಿ ಇದ್ದ ಜಾತಿ ಆಧಾರಿತ ತಾರತಮ್ಯದ ಕ್ರಮಗಳನ್ನು ರದ್ದುಗೊಳಿಸಿದ ಸುಪ್ರೀಂ ಕೋರ್ಟ್‌ನ ತೀರ್ಪು ಒಂದು ಮೈಲಿಗಲ್ಲು. ಇದು ಹಲವು ದಶಕಗಳಿಂದ ಜೈಲು ಕೈಪಿಡಿಗಳಿಗೆ ಅಂಟಿದ್ದ ಕಳಂಕವೊಂದನ್ನು ತೊಳೆಯುವ ಕೆಲಸ ಮಾಡಿದೆ. ಜಾತಿಯ ಆಧಾರದಲ್ಲಿ ಕೆಲಸಗಳನ್ನು ಹಂಚಿಕೆ ಮಾಡುವುದು ಸೇರಿದಂತೆ ಜಾತಿ ಆಧಾರಿತ ತಾರತಮ್ಯವನ್ನು ಕೊನೆಗೊಳಿಸಲು ಜೈಲು ಕೈಪಿಡಿಗಳಿಗೆ ಬದಲಾವಣೆ ತರಬೇಕು ಎಂದು ರಾಜ್ಯಗಳಿಗೆ ಹಾಗೂ ಕೇಂದ್ರಾಡಳಿತ ಪ್ರದೇಶಗಳಿಗೆ ಕೋರ್ಟ್ ಸೂಚಿಸಿದೆ. ಮಾದರಿ ಜೈಲು ಕೈಪಿಡಿಗೆ ಹಾಗೂ 'ಮಾದರಿ ಜೈಲು ಮತ್ತು ಸುಧಾರಣಾ ಸೇವೆಗಳ ಕಾಯ್ದೆ-2023'ರಲ್ಲಿ ಅಗತ್ಯ ಬದಲಾವಣೆಗಳನ್ನು ತರಲು ಕೇಂದ್ರ ಸರ್ಕಾರಕ್ಕೆ ಕೂಡ ಕೋರ್ಟ್ ಸೂಚನೆ ನೀಡಿದೆ. ಜಾತಿ ತಾರತಮ್ಯವು ಜೈಲು ಕೈಪಿಡಿಗಳಲ್ಲಿ ಇರುವುದನ್ನು ಸಾಮಾಜಿಕ ಕಾರ್ಯಕರ್ತರೊಬ್ಬರು ಕೋರ್ಟ್ ಗಮನಕ್ಕೆ ತಂದಿದ್ದರು. ಅದರ ಪರಿಣಾಮವಾಗಿ ಈ ತೀರ್ಪು ಬಂದಿದೆ. ಸಾಮಾಜಿಕವಾಗಿ ತೀರಾ ಹಿಂದುಳಿದಿರುವ ಹಾಗೂ ದುರ್ಬಲವಾಗಿರುವ ಜಾತಿಗಳಿಗೆ ಸೇರಿದ ಕೈದಿಗಳಿಗೆ ಕಸ ಗುಡಿಸುವ, ಸ್ವಚ್ಛಗೊಳಿಸುವ ಕೆಲಸಗಳನ್ನು ವಹಿಸಲಾಗುತ್ತಿದೆ, ಸಾಮಾಜಿಕವಾಗಿ ಮುಂದುವರಿದಿರುವ ಜಾತಿಗಳಿಗೆ ಸೇರಿದ ಕೈದಿಗಳಿಗೆ ಅಡುಗೆಯಂತಹ ಕೆಲಸಗಳನ್ನು ವಹಿಸಲಾಗುತ್ತಿದೆ ಎಂಬುದನ್ನು ಕೋರ್ಟ್ ಗಮನಕ್ಕೆ ತರಲಾಗಿತ್ತು. ಸಮಾಜದಲ್ಲಿ ಇರುವ ಜಾತಿ ತಾರತಮ್ಯದ ವ್ಯವಸ್ಥೆಯನ್ನೇ ಜೈಲುಗಳ ಒಳಗಡೆಯೂ ಪಾಲಿಸಲಾಗುತ್ತಿದೆ ಎಂದು ಹೇಳಲಾಗಿತ್ತು, ಕೆಲಸಗಳಲ್ಲಿ ಮಾತ್ರವೇ ಅಲ್ಲದೆ, ಕೈದಿಗಳ ವಾಸಕ್ಕೆ ಸ್ಥಳ ನಿಗದಿ ಮಾಡುವಲ್ಲಿಯೂ ತಾರತಮ್ಯ ಅನುಸರಿಸಲಾಗುತ್ತಿದೆ.

ಎದ್ದು ಕಾಣುವ ತಾರತಮ್ಯಕ್ಕೆ ದಾರಿ ಮಾಡಿಕೊಡುವಂತಹ ಅಂಶಗಳು ಜೈಲು ಕೈಪಿಡಿಗಳಲ್ಲಿ ಇದ್ದವು ಎಂಬುದು ವಿಷಾದಕರ

ಇಂತಹ ಆಚರಣೆಗಳು ತಾರತಮ್ಯದಿಂದ ಕೂಡಿವೆ, ಅವು ಅಸಾಂವಿಧಾನಿಕ ಎಂದು ಕೋರ್ಟ್ ಸ್ಪಷ್ಟಪಡಿಸಿದೆ. ಆದರೆ, ದೇಶದ ಎಲ್ಲ ರಂಗಗಳಲ್ಲಿಯೂ ಜಾತಿ ಆಧಾರಿತ ತಾರತಮ್ಯವನ್ನು ನಿಷೇಧಿಸಿದ ನಂತರದಲ್ಲಿ ಕೂಡ ಜೈಲಿನ ಕೈಪಿಡಿಗಳಲ್ಲಿ ಜಾತಿ ಆಧಾರಿತವಾದ ಇಂತಹ ತಾರತಮ್ಯಗಳು ಮುಂದುವರಿದಿದ್ದವು, ಇಷ್ಟು ವರ್ಷ ಅವು ಚಾಲ್ತಿಯಲ್ಲಿ ಇದ್ದವು ಎಂಬುದು ಆಶ್ಚರ್ಯ ಮೂಡಿಸುವಂತಹ ಸಂಗತಿ. ಇಂತಹ ಅಂಶಗಳು ಇದ್ದ ಜೈಲು ಕೈಪಿಡಿಗಳನ್ನು, ಮನುಷ್ಯರನ್ನು ಅವರ ಜಾತಿಯ ಆಧಾರದಲ್ಲಿ ಭಿನ್ನವಾಗಿ ಕಾಣಬೇಕು ಹಾಗೂ ಅವರ ವಿಚಾರವಾಗಿ ತಾರತಮ್ಯ ತೋರಬೇಕು ಎಂದು ಹೇಳಿದ ಮನುಸ್ಮೃತಿಯ ಜೊತೆ ಹೋಲಿಸಬೇಕಾಗುತ್ತದೆ. ಮಾನವ ಹಕ್ಕುಗಳು, ಸಾಂವಿಧಾನಿಕ ಆಶಯಗಳ ಆಧಾರದಲ್ಲಿ ವಿವಿಧ ಸಮಿತಿಗಳು ನೀಡಿದ ಶಿಫಾರಸುಗಳನ್ನು ಆಧರಿಸಿ ಜೈಲು ಕೈಪಿಡಿಗಳನ್ನು ಪರಿಷ್ಕರಿಸಲಾಗಿದೆ. ಹೀಗಿದ್ದರೂ, ಎದ್ದು ಕಾಣುವ ತಾರತಮ್ಯಕ್ಕೆ ದಾರಿ ಮಾಡಿಕೊಡುವಂತಹ ಈ ಅಂಶಗಳು ಕೈಪಿಡಿಗಳಲ್ಲಿ ಇದ್ದವು ಎಂಬುದು ವಿಷಾದಕರ. ದೇಶದ ಜೈಲುಗಳಲ್ಲಿ ಇನ್ನೂ ಹಲವು ಬಗೆಯ ತಾರತಮ್ಯಗಳು ಇವೆ. ಲಿಂಗ, ಹಣದ ಪ್ರಭಾವ, ರಾಜಕೀಯ ಅಧಿಕಾರ ಆಧರಿಸಿದ ತಾರತಮ್ಯ ಜೈಲುಗಳಲ್ಲಿದೆ. ಆದರೆ ಈ ಪ್ರಕರಣದಲ್ಲಿ, ಜಾತಿ ಆಧಾರಿತ ತಾರತಮ್ಯದ ಬಗ್ಗೆ ಮಾತ್ರ ಕೋರ್ಟ್ ಗಮನಹರಿಸಿತ್ತು.

ತನ್ನ ಆದೇಶದ ಪಾಲನೆಗೆ ವ್ಯವಸ್ಥೆಯೊಂದನ್ನು ಕೂಡ ಕೋರ್ಟ್ ಸೂಚಿಸಿದೆ. ಜೈಲುಗಳಲ್ಲಿ ಇರುವ ನೋಂದಣಿ ಪುಸ್ತಕದಲ್ಲಿನ 'ಜಾತಿ' ಕಲಂ ಅನ್ನು ತಕ್ಷಣವೇ ಅಳಿಸಬೇಕು ಎಂದು ಅದು ಸೂಚಿಸಿದೆ. ಹಾಗೆಯೇ, ಕೆಲವು ಬುಡಕಟ್ಟು ಸಮುದಾಯಗಳನ್ನು 'ಮತ್ತೆ ಮತ್ತೆ ಅಪರಾಧ ಎಸಗುವವರು' ಎಂದು ಗುರುತಿಸುವುದನ್ನು ನಿಲ್ಲಿಸಬೇಕು ಎಂದು ಕೂಡ ಸೂಚಿಸಿದೆ. ಸರ್ಕಾರಗಳ ಕಡೆಯಿಂದ ಆಗುವ ತಾರತಮ್ಯವು ಎಲ್ಲ ಬಗೆಯ ತಾರತಮ್ಯಗಳಿಗಿಂತ ಹೆಚ್ಚು ಕೆಟ್ಟದ್ದು, ಆ ತಾರತಮ್ಯವು ಸಾಂವಿಧಾನಿಕ ಹಕ್ಕುಗಳಿಗೆ ವಿರುದ್ಧ ಎಂದು ಕೋರ್ಟ್ ಹೇಳಿದೆ. ವಸಾಹತುಶಾಹಿ ಕಾಲದ ಕ್ರಿಮಿನಲ್ ಕಾನೂನುಗಳು ವಸಾಹತು ನಂತರದ ಕಾಲಘಟ್ಟದ ಮೇಲೆಯೂ ಪ್ರಭಾವ ಬೀರುತ್ತಿವೆ ಎಂದು ಅದು ಹೇಳಿದೆ. ಕಾನೂನುಗಳು ಹಾಗೂ ನಿಯಮಗಳು ವಸಾಹತು ಕಾಲದಲ್ಲಿ ರೂಪ ಪಡೆದವಾಗಿದ್ದರೂ, ಜಾತಿ ಆಧಾರಿತ ತಾರತಮ್ಯಕ್ಕೆ ದಾರಿ ಮಾಡಿಕೊಡುವ ಧೋರಣೆಗಳು ವಸಾಹತು ಕಾಲಕ್ಕಿಂತ ಬಹಳ ಹಿಂದಿನವು. ಸಮಾಜದಲ್ಲಿನ ಕೆಲವು ಸಮುದಾಯಗಳು ಮೇಲು, ಇನ್ನು ಕೆಲವು ಸಮುದಾಯಗಳು ಕೀಳು ಎಂಬ ಕೆಟ್ಟ ಗ್ರಹಿಕೆಯ ಆಧಾರದಲ್ಲಿ ಬೆಳೆದುಬಂದಿರುವ ಧೋರಣೆ ಬದಲಾವಣೆ ಕಾಣಬೇಕಿದೆ. ಸಮಾಜದಲ್ಲಿನ ನಂಬಿಕೆಗಳೇ ಜೈಲು ಕೈಪಿಡಿಗಳ ಒಳಕ್ಕೂ ನುಸುಳಿವೆ. ಬದಲಾವಣೆ ಜೈಲು ಕೈಪಿಡಿಗಳ ಆಚೆಗೂ ಆಗಬೇಕಿದೆ.

ಉದ್ಯೋಗದ ಸ್ಥಳದಲ್ಲಿ ಹಿತಕರ ಪರಿಸರವಿದ್ದಾಗ ಮಾತ್ರ ಉದ್ಯೋಗಿಗಳಿಂದ ಮೌಲಿಕ ಕೊಡುಗೆ ಸಾಧ್ಯ

ದುಡಿಮೆ, ಒತ್ತಡ ಮತ್ತು ಮನುಷ್ಯನ ಮಿತಿ

ವಿಶ್ಲೇಷಣೆ

ಗೀತಾ ಕೃಷ್ಣಮೂರ್ತಿ

ಅನ್ನಾ ಸೆಬಾಸ್ಟಿಯನ್ ಪೆರಯಿಲ್, 26ರ ಹರೆಯದ ಅದಮ್ಯ ಉತ್ಸಾಹದ ಪ್ರತಿಭಾವಂತ ಯುವತಿ. 2023ರ ನವೆಂಬರ್‌ನಲ್ಲಿ ಚಾರ್ಟರ್ಡ್ ಅಕೌಂಟೆಂಟ್ ಪರೀಕ್ಷೆಯಲ್ಲಿ ಉತ್ತಮ ಶ್ರೇಣಿಯಲ್ಲಿ ಉತ್ತೀರ್ಣಳಾದ ಅನ್ನಾ, 2024ರ ಮಾರ್ಚ್ ತಿಂಗಳಿನಲ್ಲಿ ಬಹುರಾಷ್ಟ್ರೀಯ ಲೆಕ್ಕ ಪರಿಶೋಧನಾ ಕಂಪನಿಯೊಂದರಲ್ಲಿ ಉದ್ಯೋಗಕ್ಕೆ ಸೇರಿದಳು. ಅದು ಆಕೆ ಬಯಸಿದ್ದ ಕನಸಿನ ಕಂಪನಿಯಾಗಿತ್ತು. ಆದರೆ ಮುಂದಿನ ನಾಲ್ಕೇ ತಿಂಗಳ ಅವಧಿಯಲ್ಲಿ ವಿಪರೀತ ಕೆಲಸ, ಸಹಿಸಲು ಸಾಧ್ಯವಾಗದಷ್ಟು ಒತ್ತಡ, ಅನುಕಂಪರಹಿತ ಅಹಿತಕರ ಪರಿಸರದಲ್ಲಿನ ಅವಿಶ್ರಾಂತ ದುಡಿಮೆ ಆಕೆಯನ್ನು ದೈಹಿಕವಾಗಿ, ಮಾನಸಿಕವಾಗಿ ಜರ್ಝರಿತಗೊಳಿಸಿ, ಜುಲೈ 21ರಂದು ಆಕೆಯ ಸಾವಿನಲ್ಲಿ ಪರಿಸಮಾಪ್ತಿಯಾಯಿತು.

ಈ ದುರಂತ ನಮ್ಮ ದೇಶದ ಕೆಲವು ಬೃಹತ್ ಕಂಪನಿಗಳ ದುಡಿಮೆ ಸಂಸ್ಕೃತಿಯ ಬಗ್ಗೆ ಹಲವಾರು ಮೂಲಭೂತ ಪ್ರಶ್ನೆಗಳನ್ನೆತ್ತಿ ವ್ಯಾಪಕವಾದ ಚರ್ಚೆಗೆ ದಾರಿ ಮಾಡಿಕೊಟ್ಟಿದೆ. ಅನ್ನಾಳ ಸಾವಿಗೆ ಕಾರಣವಾದ ಕಂಪನಿಯಲ್ಲಿನ ಕೆಲಸದ ವಿಷಮ ಪರಿಸ್ಥಿತಿಯ ಬಗ್ಗೆ ಆಕೆಯ ತಾಯಿಯು ಕಂಪನಿಯ ಅಧ್ಯಕ್ಷರಿಗೆ ಬರೆದ ಮನಕರಗಿಸುವ, ನೋವಿನ ಪತ್ರ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿದ್ದಂತೆ ಎಚ್ಚೆತ್ತ ಕೇಂದ್ರ ಸರ್ಕಾರದ ಕಾರ್ಮಿಕ ಸಚಿವಾಲಯವು ಅನ್ನಾಳ ಸಾವಿಗೆ ಕಾರಣವಾದ ಆ ಕಂಪನಿಯ ಕೆಲಸದ ಪರಿಸ್ಥಿತಿಯ ಬಗ್ಗೆ ವಿವರವಾದ ತನಿಖೆಗೆ ಆದೇಶ ನೀಡಿದೆ.

ನಮ್ಮ ದೇಶದ ಕಾರ್ಪೊರೇಟ್ ಕಂಪನಿಗಳ ಕೆಲಸದ ವೈಖರಿಗೆ 'ಹಸಲ್ ಕಲ್ಚರ್' (Hustle culture) ಎಂಬ ಹೆಸರಿದೆ. ಸ್ವಂತ ಹಿತವನ್ನು ತ್ಯಾಗ ಮಾಡಿ, ಬಿಡುವನ್ನು ಬಯಸದೆ, ಸದಾಕಾಲ ಕಂಪನಿಯ ಆರ್ಥಿಕ ಏಳಿಗೆಗೆ ಟೊಂಕಕಟ್ಟಿ, ಮುನ್ನುಗ್ಗಿ ದುಡಿಯುವುದೇ ಈ ಹಸಲ್ ಕಲ್ಚರ್‌ನ ಮೂಲ ತತ್ವ. ಈ ಸಂಸ್ಕೃತಿಯಲ್ಲಿ ಯಶಸ್ಸೊಂದೇ ಮುಖ್ಯ, ಉಳಿದೆಲ್ಲವೂ ಗೌಣ.

ಬ್ರಿಟನ್ ಮತ್ತು ಜರ್ಮನಿಯಂಥ ದೇಶಗಳೇ ವಾರಕ್ಕೆ ನಾಲ್ಕು ದಿನಗಳ ಕೆಲಸವನ್ನು ನಿಗದಿಪಡಿಸುವ ಬಗ್ಗೆ ಯೋಚಿಸುತ್ತಿರಬೇಕಾದರೆ, ಇಲ್ಲಿ ವಾರಕ್ಕೆ 70 ಗಂಟೆಗಳ ದುಡಿಮೆಯನ್ನು ವೈಭವೀಕರಿಸುತ್ತಾ ಅದನ್ನು ಸಮರ್ಥಿಸಿಕೊಳ್ಳುವ ಪ್ರಯತ್ನಗಳು ನಡೆದಿವೆ. ಉಸಿರುಗಟ್ಟಿಸುವ ಈ ರೀತಿಯ ದುಡಿಮೆ ಸಂಸ್ಕೃತಿಯ ವಕ್ತಾರರು ಬೃಹತ್ ಕಂಪನಿಗಳ ಪ್ರವರ್ತಕರು ಎಂಬುದನ್ನು ಗಮನಿಸಬೇಕು. ನಮ್ಮ ದೇಶದ ಉದ್ಯಮದ ನೇತಾರರೇ ಆಸ್ಥೆಯಿಂದ ರೂಪಿಸಿ, ಪೋಷಿಸಿ, ಬೆಳೆಸುತ್ತಿರುವ ಮಾದರಿ ಇದು.

ಅಂತರರಾಷ್ಟ್ರೀಯ ಕಾರ್ಮಿಕ ಸಂಘಟನೆಯ ಪ್ರಕಾರ, ಒಂದು ವಾರದ ದುಡಿಮೆಯ ಗಂಟೆಗಳ ಜಾಗತಿಕ ಸರಾಸರಿ 34ರಿಂದ 36 ಗಂಟೆಗಳು. ಆದರೆ ಈ ಸರಾಸರಿ ಪ್ರಮಾಣವು ಭಾರತದಲ್ಲಿ 48ರಿಂದ 50 ಗಂಟೆಗಳು. ಆಕೆ ಮಹಿಳೆಯಾದರೆ ಅವಳ ಮನೆಯ ದುಡಿಮೆಯ 6ರಿಂದ 7 ಗಂಟೆಗಳು ಹೆಚ್ಚುವರಿಯಾಗಿ ಸೇರಿಕೊಳ್ಳುತ್ತವೆ.

ಇಲ್ಲಿರುವ ಪ್ರಶ್ನೆ ಬರೀ ಹೆಚ್ಚಿನ ಅವಧಿಯವರೆಗೆ ಕೆಲಸ ಮಾಡುವುದಲ್ಲ. ಕೆಲಸ ಮಾಡುವ ಸ್ಥಳದಲ್ಲಿನ ಅಹಿತಕರ ಪರಿಸರವೂ ತೀವ್ರ ಒತ್ತಡಕ್ಕೆ ಕಾರಣವಾಗುತ್ತದೆ. ಕಾಲಮಿತಿಯಲ್ಲಿ ಗುರಿ ಮುಟ್ಟಲು ಸಾಧ್ಯವಾಗದ ಸಂದರ್ಭಗಳಲ್ಲಿ ಉದ್ಯೋಗಿಗಳ ತೇಜೋವಧೆ, ಹೀಗಳಿಕೆ, ನಿಂದನೆ, ಅಪಮಾನ ಬಹು ಸಾಮಾನ್ಯ. ಅನ್ನಾಳ ತಾಯಿ ಬರೆದ ಪತ್ರವನ್ನು ನೋಡಿದ ಸಾವಿರಾರು ನೆಟ್ಟಿಗರು, ಕೆಲಸದ ಸ್ಥಳದಲ್ಲಿನ ತಮ್ಮ ಕಹಿ ಅನುಭವಗಳನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಹಂಚಿಕೊಂಡಿದ್ದಾರೆ.

ಮಾಹಿತಿ ತಂತ್ರಜ್ಞಾನ, ಸಂವಹನ, ಬ್ಯಾಂಕಿಂಗ್, ವಿಮೆಯಂತಹವು ಒಂದು ಕಾಲದಲ್ಲಿ ಯುವಜನರ ಕನಸಿನ, ಉಜ್ವಲ ಭವಿಷ್ಯದ ಉದ್ಯೋಗ ಕ್ಷೇತ್ರಗಳಾಗಿದ್ದವು. ಇವು ಇದೀಗ ವಿಪರೀತ ಕೆಲಸದ, ಅತ್ಯಧಿಕ ಒತ್ತಡದ ಹಿಡಿತದಲ್ಲಿವೆ. ಈ ಕೆಲವು ಆಯ್ದ ಕ್ಷೇತ್ರಗಳನ್ನು 'ಕೀ ರಿಸಲ್ಟ್ ಏರಿಯಾ'ಗಳೆಂದು (ಕೆಆರ್‌ಎ) ಗುರುತಿಸುವುದು ವಾಡಿಕೆ. ಈ ಕ್ಷೇತ್ರಗಳಲ್ಲಿನ ಬೆಳವಣಿಗೆ ಉಳಿದ ಕ್ಷೇತ್ರಗಳ ಮೇಲೆ ಪ್ರಭಾವ ಬೀರುತ್ತದೆ. ಈ ಆಯ್ದ ಕ್ಷೇತ್ರಗಳಲ್ಲಿ ಅವಾಸ್ತವಿಕವಾದ ಬೆಳವಣಿಗೆಯ ಗುರಿಗಳನ್ನು ನಿಗದಿಪಡಿಸಿದಾಗ ಉದ್ಯೋಗಿಗಳ ಬದುಕು ದುಸ್ತರವಾಗುತ್ತದೆ. ಸ್ವಲ್ಪ ಸಮಯದ ಹಿಂದೆ ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿ (ಸೆಬಿ) ತನ್ನ ಕೆಲವು ಕೆಆರ್‌ಎ ವಿಭಾಗಗಳಲ್ಲಿ ವಾರ್ಷಿಕ ಗುರಿಯನ್ನು ವಿಪರೀತ ಏರಿಸಿದಾಗ, ಆ ಕ್ರಮವನ್ನು ಪ್ರತಿಭಟಿಸಿದ ಉದ್ಯೋಗಿಗಳು, ಕೇಂದ್ರ ಹಣಕಾಸು ಸಚಿವಾಲಯಕ್ಕೆ ಪತ್ರ ಬರೆದು 'ಉದ್ಯೋಗಿಗಳು ಯಂತ್ರಮಾನವರಲ್ಲ. ನಮ್ಮನ್ನು ಹಾಗೆ ಭಾವಿಸಬೇಡಿ' ಎಂದಿದ್ದಾರೆ. ಆದರೆ ಈ ಬಗೆಯ ಸ್ವಾತಂತ್ರ್ಯವು ಎಲ್ಲ ವಲಯಗಳ ಉದ್ಯೋಗಿಗಳಿಗೆ ಇಲ್ಲ. ಕೆಲಸಕ್ಕೆ ಸಂಚಕಾರ ಬರುವ ಸಾಧ್ಯತೆಯಿಂದ ಅಂತಹ ಸಾಹಸಕ್ಕೆ ಕೈಹಾಕುವವರ ಸಂಖ್ಯೆ ಸ್ವಾಭಾವಿಕವಾಗಿಯೇ ಬಹು ಕಡಿಮೆ.

ಅತೀವ ಒತ್ತಡದ ಪರಿಸರದಲ್ಲಿ, ವಿಪರೀತ ಕೆಲಸದ ಹೊರೆಯಿಂದ ಉಂಟಾಗುವ 'ಬರ್ನ್‌ಔಟ್' ಸ್ಥಿತಿಯನ್ನು, 'ಉದ್ಯೋಗಜನ್ಯ ಆರೋಗ್ಯದ ಸಮಸ್ಯೆ' ಎಂದು 2019ರಲ್ಲಿ ವಿಶ್ವ ಆರೋಗ್ಯ ಸಂಸ್ಥೆ ಅಂಗೀಕರಿಸಿತು. ಈ ಬರ್ನ್‌ಔಟ್ ಸ್ಥಿತಿಯ ಮೂರು ಮುಖ್ಯ ಲಕ್ಷಣಗಳೆಂದರೆ, ನಿರಂತರವಾದ ತೀವ್ರ ಬಳಲಿಕೆ, ಕೆಲಸಕ್ಕೆ ಸಂಬಂಧಿಸಿದಂತೆ ತೀವ್ರ ನಕಾರಾತ್ಮಕವಾದ ಭಾವನೆ ಮತ್ತು ಕಾರ್ಯಸಾಧನೆಯ ಸಾಮರ್ಥ್ಯದಲ್ಲಿ ಗಮನಾರ್ಹವಾದ ಇಳಿಕೆ.

2023ರಲ್ಲಿ ಮೆಕೆನ್ಸಿ ಸಂಸ್ಥೆಯು ಪ್ರಪಂಚದ 30 ದೇಶಗಳಲ್ಲಿ ನಡೆಸಿದ ಸಮೀಕ್ಷೆಯಲ್ಲಿ, ಬರ್ನ್‌ಔಟ್ ಗತಿ ಭಾರತದಲ್ಲಿ ಶೇ 60ರಷ್ಟಿದೆ. ಇದು ಇಡೀ ಪ್ರಪಂಚದಲ್ಲಿ ಅತಿ ಹೆಚ್ಚು. ಜಾಗತಿಕ ಮಟ್ಟದಲ್ಲಿ ಇದು ಸರಾಸರಿ ಶೇ 20ರಷ್ಟು. ಅತಿ ಹೆಚ್ಚಿನ ಕೆಲಸದ ಹೊರೆಯಿಂದ ಉಂಟಾಗುವ ಆರೋಗ್ಯ ಸಮಸ್ಯೆಗಳಿಂದ ಸಾಯುವವರ ಸಂಖ್ಯೆಯಲ್ಲಿ ಭಾರತ ಮೊದಲ ಸ್ಥಾನದಲ್ಲಿದೆ.



ಸದ್ಯದಲ್ಲಿ ಲಭ್ಯವಿರುವ ವಿಶ್ವ ಆರೋಗ್ಯ ಸಂಸ್ಥೆಯ ಅಂಕಿಅಂಶಗಳಂತೆ, 2016ರಲ್ಲಿ ದೀರ್ಘಕಾಲದ ಕೆಲಸದ ಅವಧಿ ತಂದ ಸಮಸ್ಯೆಯಿಂದ ಭಾರತದಲ್ಲಿ ಸತ್ತವರ ಸಂಖ್ಯೆ 2,01,840, ಚೀನಾದಲ್ಲಿ 1,60,331. ಜಪಾನ್, ಅಮೆರಿಕ, ಜರ್ಮನಿ ಮತ್ತು ಇಂಗ್ಲೆಂಡ್‌ನಲ್ಲಿ ಅನುಕ್ರಮವಾಗಿ 9,139, 7,382, 2,658 ಹಾಗೂ 1,831.

ಕೆಲಸದ ಅವಧಿಯನ್ನು ಹೆಚ್ಚಿಸಿದ ಮಾತ್ರಕ್ಕೆ ಉತ್ಪಾದಕತೆಯೂ ಹೆಚ್ಚುತ್ತದೆ ಎಂಬ ಕಲ್ಪನೆಯೇ ತಪ್ಪು ಎಂಬುದನ್ನು ಅನೇಕ ಅಧ್ಯಯನಗಳು ಸ್ಪಷ್ಟವಾಗಿ ತೋರಿಸಿಕೊಟ್ಟಿವೆ. ಜಪಾನ್‌ನಲ್ಲಿ ವಾರಕ್ಕೆ 60 ಗಂಟೆಗಳಿಗೂ ಹೆಚ್ಚು ಕಾಲ ಕೆಲಸ ಮಾಡುವ ಮಾದರಿಯಿದ್ದರೂ ಹಿಂದಿನ 50 ವರ್ಷಗಳಿಂದ ಅದರ ಉತ್ಪಾದಕತೆ ಜಿ-7 ದೇಶಗಳ ಗುಂಪಿನಲ್ಲಿ ಅತಿ ಕಡಿಮೆಯಿದೆ.

ಉದ್ಯೋಗದ ಸ್ಥಳದಲ್ಲಿ ಹಿತಕರ ಪರಿಸರವಿದ್ದಾಗ ಮಾತ್ರ ಉದ್ಯೋಗಿಗಳು ಸಂಸ್ಥೆಯ ಏಳಿಗೆಗೆ ಮೌಲಿಕ ಕೊಡುಗೆ ನೀಡಲು ಸಾಧ್ಯ. ಕೆಲಸದ ಸ್ಥಳದಲ್ಲಿ ಮುಕ್ತ ಮತ್ತು ಪಾರದರ್ಶಕ ಪರಿಸರವಿದ್ದು, ಉದ್ಯೋಗಿಗಳಿಗೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವ ಸ್ವಾತಂತ್ರ್ಯ ಇರಬೇಕು. ತಂಡದ ಮುಖ್ಯಸ್ಥರಿಗೆ ಈ ದಿಕ್ಕಿನಲ್ಲಿ ತರಬೇತಿ ನೀಡಬೇಕು. ಲೈಂಗಿಕ ಕಿರುಕುಳ ವಿರುದ್ಧದ ದೂರುಗಳನ್ನು ಪರಿಶೀಲಿಸಲು ಸಮಿತಿಗಳು ಇರುವಂತೆಯೇ ಅಹಿತಕರ ಪರಿಸರ ಮತ್ತು ಅವಹೇಳನಕಾರಿ ನಡವಳಿಕೆಗಳನ್ನು ಪರಿಶೀಲಿಸಲೂ ಸಮಿತಿಗಳು ಇರಬೇಕೆಂಬುದು ಉದ್ಯೋಗಿಗಳ ಬೇಡಿಕೆ. ಮಾಹಿತಿ ತಂತ್ರಜ್ಞಾನ ಉದ್ಯಮದಲ್ಲಿನ ಉದ್ಯೋಗಿಗಳ ಕ್ಷೇಮಾಭ್ಯುದಯಕ್ಕಾಗಿ ಶ್ರಮಿಸುತ್ತಿರುವ 'ನೇಸೆಂಟ್ ಐ.ಟಿ ಎಂಪ್ಲಾಯೀಸ್ ಸೆನೆಟ್', ಕೇಂದ್ರ ಸರ್ಕಾರದ ಕಾರ್ಮಿಕ ಹಾಗೂ ಗೃಹ ಸಚಿವಾಲಯಗಳಿಗೆ ಪತ್ರ ಬರೆದು, ಉದ್ಯೋಗಿಗಳ ಘನತೆ, ಗೌರವದ ಬಗ್ಗೆ ಕೆಲವು ಕಂಪನಿಗಳು ತೋರುತ್ತಿರುವ ಆಘಾತಕಾರಿ ಉಪೇಕ್ಷೆಯ ನಡವಳಿಕೆಗೆ ಸಂಬಂಧಿಸಿದಂತೆ ತನಿಖೆ ನಡೆಸಬೇಕೆಂದು ಕೋರಿದೆ.

ಫ್ರಾನ್ಸ್, ಬೆಲ್ಜಿಯಂ, ಇಟಲಿ ದೇಶಗಳ ಉದ್ಯೋಗಿಗಳಿಗೆ 'ರೈಟ್ ಟು ಡಿಸ್‌ಕನೆಕ್ಟ್' ಸೌಲಭ್ಯವಿದೆ. ಈ ಹಕ್ಕಿನ ಅಡಿಯಲ್ಲಿ, ಕೆಲಸದ ಅವಧಿಯ ನಂತರ ಉದ್ಯೋಗಿಗಳು ಕಂಪನಿಯ ಸಂದೇಶ, ಇ- ಮೇಲ್‌ಗಳಿಗೆ ಉತ್ತರ ನೀಡಬೇಕಿಲ್ಲ. ಕಚೇರಿಯ ಕೆಲಸ ಮಾಡಬೇಕಿಲ್ಲ. ಕಂಪನಿಗಳೂ ತೀರಾ ಅನಿವಾರ್ಯವಾದ ವಿನಾ ಉದ್ಯೋಗಿಗಳನ್ನು ಸಂಪರ್ಕಿಸುವಂತಿಲ್ಲ. ಈ ವರ್ಷ ಆಸ್ಟ್ರೇಲಿಯಾದಲ್ಲೂ ಉದ್ಯೋಗಿಗಳಿಗೆ ಈ ಹಕ್ಕು ದೊರೆತಿದೆ. ಭಾರತದಲ್ಲಿಯೂ ಇಂಥ ಸೌಲಭ್ಯವನ್ನು ವಿಸ್ತರಿಸುವ ಬಗ್ಗೆ ಚಿಂತನೆ ನಡೆಸುವುದು ಉದ್ಯೋಗಿಗಳ ಮಾನಸಿಕ ಮತ್ತು ದೈಹಿಕ ಆರೋಗ್ಯದ ದೃಷ್ಟಿಯಿಂದ ಸೂಕ್ತ.

ಅನ್ನಾ ಸೆಬಾಸ್ಟಿಯನ್ ದುರಂತದ ನಂತರ ನಡೆಯುತ್ತಿರುವ ಚರ್ಚೆಯ ಸಂದರ್ಭದಲ್ಲಿ, ಮಹಿಳೆಯರು ನಿರ್ವಹಿಸುವ ಹೆಚ್ಚುವರಿ ಕೌಟುಂಬಿಕ ಕರ್ತವ್ಯಗಳು, ಅವರ ಗರ್ಭಧಾರಣೆ ಮತ್ತು ಮಾಸಿಕ ಋತುಚಕ್ರಕ್ಕೆ ಸಂಬಂಧಿಸಿದಂತೆ ದೈಹಿಕ ಆರೋಗ್ಯವು ಆಕೆಯ ಮೇಲೆ ಹೇರುವ ಒತ್ತಡಗಳನ್ನೂ ಪರಿಗಣಿಸಬೇಕಾದ ಅಗತ್ಯವಿದೆ.

ಚುರುಮುರಿ

ಮ್ಯೂಸಿಕಲ್ ಚೇರ್

• ಸುಮಂಗಲಾ

ಬೆಕ್ಕಣ್ಣ ಬಿಟ್ಟೂಬಿಡದೆ ದಸರಾ ಕುಸ್ತಿ ಪಂದ್ಯಾವಳಿಯನ್ನು ನೋಡುತ್ತಿತ್ತು.

'ನಮ್ಮ ಮಂತ್ರಿ, ಶಾಸಕರಿಗೂ ದಸರಾ ಕುಸ್ತಿ ಪಂದ್ಯ ಇಡಬೇಕಿತ್ತು. ಬರೇ ಕುಸ್ತಿಪಟುಗಳೇ ಎದಕ್ಕ ಕುಸ್ತಿ ಆಡಬೇಕು?' ಎಂದಿತು.

'ಮಂತ್ರಿ, ಶಾಸಕರ ಅಖಾಡನೇ ಬೇರೆ. ಮೈಮಣ್ಣಾಗದೆ ಪ್ರತಿದಿನ ಕುಸ್ತಿ ಆಡೋ ಪಟುಗಳು ಅವರು' ಎಂದೆ.

'ಅದೂ ಖರೇ. ಯಾರು ಯಾವಾಗ ಯಾವ ಪಟ್ಟು ಹಾಕ್ತಾರಂತ ಆ ಚಾಮುಂಡೇಶ್ವರಿಗೂ ಗೊತ್ತಾಗಲ್ಲ' ಎಂದು ನಕ್ಕಿತು.

'ಆದ್ರೂ ಮಂತ್ರಿ, ಶಾಸಕರಿಗೆ ಏನರೆ ಒಂದು ದಸರಾ ಪಂದ್ಯ ಇಡಬಕು. ಅವರು ಜನಸಾಮಾನ್ಯರ ಪ್ರತಿನಿಧಿಗಳು. ಅವರು ದಸರಾ ಪಂದ್ಯದಲ್ಲಿ ಭಾಗವಹಿಸಿದರು ಅಂದ್ರೆ ಜನಸಾಮಾನ್ಯರೇ ಭಾಗವಹಿಸಿದಂಗೆ, ಹೌದಿಲ್ಲೋ' ಎಂಬ ವಾದ ಮುಂದಿಟ್ಟಿತು.

'ಮ್ಯೂಸಿಕಲ್ ಚೇರ್ ಸ್ಪರ್ಧೆ ಇಡಬೌದು. ಆದ್ರೆ ಕುರ್ಚಿ ಸ್ಪರ್ಧೆನೂ ಪ್ರತಿದಿನ ನಡೆದೈತಿ'.

'ಹೌದೌದು... ಪಾಪ... ನಮ್ ಸಿದ್ದು ಅಂಕಲ್ಲು ರಾತ್ರಿನೂ ಒಂದೋ ಕುರ್ಚಿವಳಗೆ ಕುಂತೇ ನಿದ್ದಿ ಮಾಡಬಕು, ಇಲ್ಲಾ ಕುರ್ಚಿ ಕಾಲಿಗೆ ಹಗ್ಗ ಕಟ್ಟಿ, ಕೈಯಾಗೆ ಹಗ್ಗ ಹಿಡದು ಮಲಗಬಕು ಅನ್ನೂ ಹಂಗೆ ಆಗ್ಯೈತಿ' ಎಂದು ನಿಟ್ಟುಸಿರುಬಿಟ್ಟಿತು.

'ಮುಖ್ಯಮಂತ್ರಿ ಕುರ್ಚಿ ಅಂದ್ರ ಅಂತಿಂಥಾ ಕುರ್ಚಿ ಅಲ್ಲಲೇ... ಅದೊಂಥರಾ ಮಾಯಾ ಕುರ್ಚಿ ಇದ್ದಂಗೆ. ಆ ಕುರ್ಚಿವಳಗೆ ಕೂರಬೇಕು ಅನ್ನೂದು ಎಲ್ಲ ಮಂತ್ರಿಗಳ ಕನಸುಮನಸಿನಾಗೆ ಇರತೈತಿ' ಎಂದೆ.

'ಅರಮನೆವಳಗೆ ಚಿನ್ನದ ಸಿಂಹಾಸನ ಐತಂತೆ, ವರ್ಷಕ್ಕೊಂದು ಸಲ ಖಾಸಗಿ ದರ್ಬಾರು ಮಾಡತಾರಂತೆ. ಸದ್ಯ... ನಮ್ಮ ಮಂತ್ರಿಗಳು ಆ ಸಿಂಹಾಸನದ ಮ್ಯಾಗೆ ಕೂರೋ ಕನಸು ಕಾಣತಾ ಇಲ್ಲ!'

'ಅದು ಒಡೆಯರ್ ಮನೆತನಕ್ಕೆ ಸೇರಿದ್ದು. ಹಿಂಗಾಗಿ ಆ ಸಿಂಹಾಸನದ ಕನಸು ಕಾಣೋ ಧೈರ್ಯ ಮಾಡಂಗಿಲ್ಲ'.

'ಹಂಗಾದ್ರೆ ಅದು ಪ್ರಧಾನಿ ಕುರ್ಚಿ ಇದ್ದಂಗೆ. ಸದ್ಯಕ್ಕೆ ಮೋದಿಮಾಮ ಬಿಟ್ಟರೆ ಮತ್ತ್ಯಾರೂ ಕೂರಂಗಿಲ್ಲ! ಮ್ಯೂಸಿಕಲ್ ಚೇರ್ ಆಟಕ್ಕೆ ಮುಖ್ಯಮಂತ್ರಿ ಕುರ್ಚಿ ಇಡಬೌದು, ಪ್ರಧಾನಿ ಕುರ್ಚಿ ಇಡಂಗಿಲ್ಲ!' ಎಂದು ಮುಸಿಮುಸಿ ನಕ್ಕಿತು.

ದಿನದ ಟ್ವೀಟ್

ನವರಾತ್ರಿ ವೈಭವ

ಗೋವಾದಲ್ಲಿ ನವರಾತ್ರಿ ಪ್ರಯುಕ್ತ ವಿಶಿಷ್ಟವಾದ ಸಂಪ್ರದಾಯವೊಂದು ಆಚರಣೆಯಲ್ಲಿದೆ. ಈ 9 ರಾತ್ರಿಗಳಲ್ಲಿ ದೇವತೆಯ ಉತ್ಸವಮೂರ್ತಿಯನ್ನು 'ಮಖರ್' ಎಂದು ಕರೆಯಲಾಗುವ ಮತ್ತು ತೂಗಾಡುವ ಸಾಲಂಕೃತ ಸಂಚಾರಿ ಮಂಟಪದಲ್ಲಿ ಪ್ರತಿಷ್ಠಾಪಿಸಲಾಗುತ್ತದೆ. ಮಂಟಪವು ನಿರಂತರವಾಗಿ ತೂಗಾಡುತ್ತಿರುವಾಗಲೇ ಪೂಜೆ ಮತ್ತು ಆರತಿ ನಡೆಯುತ್ತದೆ... ಗೋವಾದಲ್ಲಿನ ಪ್ರತಿ ದೇವಸ್ಥಾನವೂ ಈ ಸಂಪ್ರದಾಯವನ್ನು ಪಾಲಿಸುತ್ತದೆ.

ಶೆಫಾಲಿ ವೈದ್ಯ, ಲೇಖಕಿ

ಕಿಡಿನುಡಿ

ಕಬ್ಬನ್ನು ಮಿತಿಮೀರಿ ತುಂಬಿಸಿಕೊಂಡು ಹೋಗುತ್ತಿದ್ದ ಟ್ರ್ಯಾಕ್ಟರ್ ಕಿಕ್ಕೇರಿಯಲ್ಲಿ ಮಗುಚಿಬಿದ್ದು ಸಣ್ಣ ಮಗುವೊಂದು ಸಾವಿಗೀಡಾಗಿದೆ. ಕಬ್ಬನ್ನು ಹೀಗೆ ನಿಯಮಬಾಹಿರವಾಗಿ ತುಂಬಿಸಿಕೊಂಡು ಹೋಗುತ್ತಿದ್ದ ವಾಹನ ಮಾಲೀಕರ ವಿರುದ್ಧ ಕಠಿಣ ಕ್ರಮ ಜರುಗಿಸಬೇಕು.

ಕಶ್ಯಪ್ ನಂದನ್

25 ವರ್ಷಗಳ ಹಿಂದೆ

ಗುರುವಾರ, 7-10-1999

• **ರಾಜ್ಯದಲ್ಲಿ ಜಯಭೇರಿಯತ್ತ ಕಾಂಗ್ರೆಸ್**

ಬೆಂಗಳೂರು, ಅ. 6– ರಾಜ್ಯ ವಿಧಾನಸಭಾ ಮತ್ತು ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವು ಮೇಲುಗೈ ಸಾಧಿಸಿದ್ದು, ವಿಧಾನಸಭೆಯಲ್ಲಿ ಬಹುಮತ ಗಳಿಸಿ ಅಧಿಕಾರದ ಸೂತ್ರ ಹಿಡಿಯುವತ್ತ ದಾಪುಗಾಲು ಹಾಕಿ ಮುನ್ನಡೆದಿದೆ.

ಮತಗಟ್ಟೆ ಸಮೀಕ್ಷೆಗಳನ್ನು ತಲೆಕೆಳಗು ಮಾಡುವ ರೀತಿಯಲ್ಲಿ ರಾಜ್ಯದ ಮತದಾರರು ತೀರ್ಪು ನೀಡಿದ್ದು, ಅಧಿಕಾರಕ್ಕೆ ಬರುವ ಕನಸು ಕಾಣುತ್ತಿದ್ದ ಬಿಜೆಪಿಗೆ ಚುನಾವಣಾ ಫಲಿತಾಂಶದಿಂದ ಆಘಾತವಾಗಿದ್ದರೆ, ಜನತಾದಳ (ಯು) ಮತ್ತು ಜನತಾದಳ (ಎಸ್) ಚುನಾವಣೆಯಲ್ಲಿ ನೆಲಕಚ್ಚಿದ್ದರೆ ಆ ಪಕ್ಷದ ಘಟಾನುಘಟಿಗಳು ಧೂಳೀಪಟ ಆಗಿದ್ದಾರೆ.

• **ರಾಷ್ಟ್ರದಲ್ಲಿ ಬಿಜೆಪಿ ಮೈತ್ರಿಕೂಟಕ್ಕೆ ಸ್ಪಷ್ಟ ಮುನ್ನಡೆ**

ನವದೆಹಲಿ, ಅ. 6 (ಪಿಟಿಐ, ಯುಎನ್‌ಐ)– ಹದಿಮೂರನೇ ಲೋಕಸಭೆಗೆ ನಡೆದ ಸಾರ್ವತ್ರಿಕ ಚುನಾವಣೆಯಲ್ಲಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರ ನೇತೃತ್ವದಲ್ಲಿನ ರಾಷ್ಟ್ರೀಯ ಪ್ರಜಾಸತ್ತಾತ್ಮಕ ಮೈತ್ರಿಕೂಟವು (ಎನ್‌ಡಿಎ) ರಾಜಧಾನಿ ದೆಹಲಿಯಲ್ಲಿ ಏಕಸ್ವಾಮ್ಯ ಮೆರೆದು ರಾಷ್ಟ್ರದಲ್ಲಿ ಆರಂಭಿಕ ಮುನ್ನಡೆಯನ್ನು ಸಾಧಿಸಿದೆ. ಗೋವಾ ರಾಜ್ಯದಲ್ಲಿ ಇದೇ ಮೊದಲ ಬಾರಿಗೆ ಖಾತೆ ತೆರೆದು ಆಂಧ್ರಪ್ರದೇಶ, ಮಹಾರಾಷ್ಟ್ರ, ಹರಿಯಾಣ, ರಾಜಸ್ಥಾನ, ಗುಜರಾತ್ ಮತ್ತು ಪಶ್ಚಿಮ ಬಂಗಾಳದಲ್ಲಿ ಉತ್ತಮ ಸಾಧನೆ ತೋರಿಸಿದೆ.

ಸೋನಿಯಾ ಗಾಂಧಿ ಅವರ ನಾಯಕತ್ವದಲ್ಲಿ ಪುನಶ್ಚೇತನಗೊಂಡಿರುವ ಕಾಂಗ್ರೆಸ್ ಪಕ್ಷವು ಪಂಜಾಬ್‌ನಲ್ಲಿ ಅಭೂತಪೂರ್ವ ಜಯ ಸಾಧಿಸಿದೆ.

ಕರ್ನಾಟಕದಲ್ಲಿ ಎನ್‌ಡಿಎಗೆ ಕಾಂಗ್ರೆಸ್ ತೀವ್ರ ಮುಖಭಂಗ ಮಾಡಿದೆ. ಉಳಿದಂತೆ ಉತ್ತರಪ್ರದೇಶ, ಬಿಹಾರ, ಮಧ್ಯಪ್ರದೇಶ ಮತ್ತಿತರ ರಾಜ್ಯಗಳಲ್ಲಿ ಮತ ಎಣಿಕೆಯು ಮಂದಗತಿಯಲ್ಲಿ ಸಾಗಿದೆ.

50 ವರ್ಷಗಳ ಹಿಂದೆ

ಸೋಮವಾರ, 7-10-1974

• **ಇಂದಿರಾ ನಿವಾಸಕ್ಕೆ ಐವತ್ತು ಸಹಸ್ರ ಜನರ ಬೃಹತ್ ಮೆರವಣಿಗೆ**

ನವದೆಹಲಿ, ಅ. 6– ರಾಷ್ಟ್ರದ ಕಾಂಗ್ರೆಸ್ ದುರಾಡಳಿತದ ವಿರುದ್ಧ ಕಮ್ಯುನಿಸ್ಟೇತರ ವಿರೋಧ ಪಕ್ಷಗಳು ಆರಂಭಿಸಿರುವ ಚಳವಳಿ ಪ್ರಾರಂಭದ ಸಂಕೇತವಾಗಿ ಖ್ಯಾತ ಸ್ವಾತಂತ್ರ್ಯ ಹೋರಾಟಗಾರರಾದ ಜೆ.ಬಿ.ಕೃಪಲಾನಿ ಅವರು ಇಂದು ಇಲ್ಲಿ ಪ್ರಧಾನಮಂತ್ರಿ ಇಂದಿರಾ ಗಾಂಧಿ ಅವರ ನಿವಾಸಕ್ಕೆ ಭಾರಿ ಮೆರವಣಿಗೆ ಕೊಂಡೊಯ್ದರು.

ಸರ್ವೋದಯ ನಾಯಕ ಜಯಪ್ರಕಾಶ ನಾರಾಯಣ್ ಅವರ 50 ಸಾವಿರ ಮಂದಿ ಬೆಂಬಲಿಗರ ಮೆರವಣಿಗೆಯು ಬೆಳಿಗ್ಗೆ 10 ಗಂಟೆಗೆ ಸರಿಯಾಗಿ ರಾಮಲೀಲಾ ಮೈದಾನದಿಂದ ಆರಂಭವಾಯಿತು.

• **ಚಿನ್ನ: ಕೋಟಿಗಟ್ಟಲೆ ಕಪ್ಪುಹಣದ ಮೂಲ**

ಮುಂಬಯಿ, ಅ. 6– ಈ ವರ್ಷದ ಆದಿಯವರೆಗೆ ಕಳ್ಳಸಾಗಾಣಿಕೆದಾರರು ಬಂಗಾರದ ಕಳ್ಳಸಾಗಾಣಿಕೆ ಒಂದರಿಂದಲೇ ವರ್ಷಕ್ಕೆ ನೂರು ಕೋಟಿ ರೂಪಾಯಿ ಕಪ್ಪುಹಣ ಸಂಪಾದಿಸುತ್ತಿದ್ದರು ಎಂದು ಅಧಿಕೃತ ಮೂಲಗಳು ತಿಳಿಸಿವೆ.

ಈ ವರ್ಷದ ಆದಿಯಲ್ಲಿ ಸುಮಾರು ಎಪ್ಪತ್ತು ಸಾವಿರ ಕೆ.ಜಿ ಚಿನ್ನವನ್ನು ಅಕ್ರಮವಾಗಿ ತರಲಾಗಿದೆ ಎಂದು ಸರ್ಕಾರಕ್ಕೆ ಬಂದಿರುವ ರಹಸ್ಯ ವರದಿ ತಿಳಿಸಿದೆ.

ಸಂಗತ

ಪೇಜರ್ ದಾಳಿ: ಅಪಾಯಕಾರಿ ಬೆಳವಣಿಗೆ

ಪೇಜರ್‌ಗಳನ್ನು ಸಣ್ಣ ಸಣ್ಣ ಬಾಂಬುಗಳನ್ನಾಗಿ ಪರಿವರ್ತಿಸಿ, ಮತ್ತ್ಯಾವುದೋ ದೇಶದಲ್ಲಿ ಕೂತು ಅವನ್ನು ಸ್ಫೋಟಿಸಿರುವ ಬೆಳವಣಿಗೆಯು ಆಘಾತಕಾರಿಯಾದುದು

• ದೀಪಾ ಹಿರೇಗುತ್ತಿ

ಇಸ್ರೇಲ್‌ನ ಉತ್ತರದಲ್ಲಿರುವ ಪುಟ್ಟ ದೇಶ ಲೆಬನಾನ್‌ನಲ್ಲಿ ಇತ್ತೀಚೆಗೆ ಹಿಜ್ಬುಲ್ಲಾ ಸಂಘಟನೆಯ ಸುಮಾರು ಮೂರು ಸಾವಿರ ಸದಸ್ಯರ ಪೇಜರ್‌ಗಳು ಏಕಕಾಲಕ್ಕೆ ಸ್ಫೋಟಗೊಂಡವು. ಕೆಲವರು ಪೇಜರ್‌ಗಳನ್ನು ಜೇಬಿನಲ್ಲಿ ಇಟ್ಟುಕೊಂಡು ಗಾಡಿ ಓಡಿಸುತ್ತಿದ್ದರು, ಇನ್ನು ಕೆಲವರು ನಡೆದುಕೊಂಡು ಹೋಗುತ್ತಿದ್ದರು, ಮತ್ತೆ ಕೆಲವರು ಸದ್ದಾದ ಕೂಡಲೇ ಏನೋ ಮೆಸೇಜ್ ಬಂತೆಂದು ಓದಲು ಕಣ್ಣೆದುರು ಹಿಡಿದುಕೊಂಡಿದ್ದರು. ಸುಮಾರು ಹತ್ತು ಮಂದಿ ಗಂಭೀರವಾಗಿ ಗಾಯಗೊಂಡು ಮೃತಪಟ್ಟರು. ಕೆಲವರು ಕೈ, ಕಿಡ್ನಿ, ಕಣ್ಣು ಕಳೆದುಕೊಂಡರು. ಕೆಲವರ ಮುಖದ ಒಂದು ಭಾಗವೇ ಛಿದ್ರಗೊಂಡಿತು. ಸಾವಿರಾರು ಜನ ಗಾಯಗೊಂಡರು.

ಅರೇ! ಈ ಸ್ಮಾರ್ಟ್ ಮೊಬೈಲ್ ಕಾಲದಲ್ಲಿ ಯಾರಪ್ಪಾ ಪೇಜರ್ ಬಳಸುವವರು ಅನ್ನುವ ಅನುಮಾನ ಬರುವುದು ಸಹಜವೇ. ಮೊಬೈಲ್ ಆವಿಷ್ಕಾರಕ್ಕೂ ಮುನ್ನ ಸಂದೇಶ ಮಾತ್ರ ಕಳುಹಿಸಬಲ್ಲ ಬೀಪ್ ಸದ್ದಿನ ಪೇಜರ್ ಚಾಲ್ತಿಯಲ್ಲಿತ್ತು. ಮೊಬೈಲ್ ಬಂದಮೇಲೆ ಯಾರೂ ಇದನ್ನು ಬಳಸುವುದಿಲ್ಲ. ಯಾರಿಗೂ ತಾವಿರುವ ಜಾಗ ಗೊತ್ತಾಗಬಾರದೆಂದು ಕಾನೂನುಬಾಹಿರ ಕೆಲಸ ಮಾಡುವವರು ಇವುಗಳನ್ನು ಬಳಸುವುದನ್ನು 'ಪುಷ್ಪಾ'ದಂತಹ ಸಿನಿಮಾಗಳಲ್ಲಿ ನೋಡಿದ್ದೇವೆ. ಕಾರಣ, ಪೇಜರ್‌ಗೆ ನೆಟ್‌ವರ್ಕ್ ಬೇಡ, ಹಾಗೆಯೇ ಸಂದೇಶ ಕಳಿಸಬಹುದು. ಲೆಬನಾನಿನಲ್ಲಿ ಇದನ್ನು ಬಳಸುತ್ತಿದ್ದವರು ಹಿಜ್ಬುಲ್ಲಾ ಸಂಘಟನೆಯ ಸದಸ್ಯರು.

ಮಾಧ್ಯಮ ತನಿಖಾ ವರದಿಗಳ ಪ್ರಕಾರ, ಇಸ್ರೇಲ್‌ನ ಇಂಟೆಲಿಜೆನ್ಸ್ ಏಜೆನ್ಸಿ ಮೊಸಾದ್ ಏನು ಮಾಡುತ್ತಿತ್ತೆಂದರೆ, ಮೊಬೈಲ್ ಲೊಕೇಶನ್‌ನಿಂದ ಹಿಜ್ಬುಲ್ಲಾ ಸದಸ್ಯರ ಇರವನ್ನು ಕಂಡುಹಿಡಿದು ಆಕ್ರಮಣ ಮಾಡಿ ಸಾಯಿಸುತ್ತಿತ್ತು. ಹಾಗಾಗಿ, ಅವರೆಲ್ಲ ಮೊಬೈಲ್ ಅನ್ನು ತ್ಯಜಿಸಿ ಪೇಜರ್ ಬಳಸಲು ಶುರುಮಾಡಿದರು. ಒಂದೇ ಸಲ ಸುಮಾರು ಮೂರು ಸಾವಿರ ಪೇಜರ್‌ಗಳು ಬೇಕಾದ ಕಾರಣ, ಹಿಜ್ಬುಲ್ಲಾ ಅವನ್ನು ತಯಾರಿಸಲು ತೈವಾನ್‌ನ ಒಂದು ಕಂಪನಿಗೆ ಆರ್ಡರ್ ನೀಡಿತು. ಆ ಕಂಪನಿ ಹಂಗೇರಿಯ ಒಂದು ಕಂಪನಿಗೆ ಹೊರಗುತ್ತಿಗೆ ನೀಡಿತು. ಹಂಗೇರಿಯಲ್ಲಿ ಈ ಪೇಜರ್‌ಗಳು ತಯಾರಾಗುವಾಗಲೇ ಮೊಸಾದ್ ಮಧ್ಯಪ್ರವೇಶಿಸಿ ಆ ಎಲ್ಲ ಪೇಜರ್‌ಗಳ ಒಳಗೆ ಬ್ಯಾಟರಿಯ ಪಕ್ಕದಲ್ಲೇ ಮೂವತ್ತು ಗ್ರಾಮ್‌ಗಳ ಪುಟ್ಟ ವಿಸ್ಫೋಟಕವನ್ನು ಅಳವಡಿಸುವಂತೆ ನೋಡಿಕೊಂಡಿತು. ಜತೆಗೆ ಸಾಫ್ಟ್‌ವೇರ್ ಕೂಡ ಅಳವಡಿಸಲಾಯಿತು (ಆದರೆ, ಸಮಸ್ಯೆ ಪೇಜರ್ ತಯಾರಿಕೆಯಲ್ಲಲ್ಲ, ಸಾಗಣೆ ಸಂದರ್ಭದಲ್ಲಿ ಮೊಸಾದ್ ಪ್ರವೇಶಿಸಿ ಹೀಗೆ ಮಾಡಿದೆ ಎಂದು ಈಗ ಆ ಕಂಪನಿಗಳು ಹೇಳಿವೆ).

ಪೇಜರ್ ಖರೀದಿ ನಡೆದದ್ದು ಫೆಬ್ರುವರಿಯಲ್ಲಿ. ಎರಡು ವರ್ಷದ ನಂತರ ಸ್ಫೋಟಿಸಬೇಕೆಂದು ಇಸ್ರೇಲ್ ಯೋಜನೆ ಹಾಕಿಕೊಂಡಿದ್ದರೂ ಜುಲೈನಲ್ಲಿ ಹಿಜ್ಬುಲ್ಲಾದ ಒಬ್ಬ ಸದಸ್ಯನಿಗೆ ಈ ಪೇಜರ್‌ಗಳ ಮೇಲೆ ಅನುಮಾನ ಬಂದು ಅವನು ಹೋಗಿ ಮೇಲಧಿಕಾರಿಗೆ ಹೇಳಿದ. ಆದರೆ ಆತ ದೂರು ನೀಡಿದ ಮೇಲಧಿಕಾರಿ ಮೊಸಾದ್‌ನ ಏಜೆಂಟ್ ಆಗಿದ್ದ! ಅನುಮಾನ ವ್ಯಕ್ತಪಡಿಸಿದವನನ್ನು ಮುಗಿಸಲಾಯಿತು. ಬೇರೆಯವರಿಗೆ ಅನುಮಾನ ಬರಬಾರದೆಂದು ಸೆಪ್ಟೆಂಬರ್‌ನಲ್ಲೇ ಪೇಜರ್ ಸ್ಫೋಟಿಸುವ ಯೋಜನೆಯನ್ನು ಇಸ್ರೇಲ್ ಹಾಕಿಕೊಂಡಿತು ಎಂಬ ವರದಿಗಳಿವೆ.

ಹಿಜ್ಬುಲ್ಲಾ ತನ್ನ ಸದಸ್ಯರಿಗೆ ಇಸ್ರೇಲ್ ವಿರುದ್ಧದ ಕಾರ್ಯಾಚರಣೆ ಬಗ್ಗೆ ಮಧ್ಯಾಹ್ನ ಹನ್ನೆರಡರಿಂದ ಸಂಜೆ ನಾಲ್ಕರ ಒಳಗೆ ಸಂದೇಶ ಕಳುಹಿಸುತ್ತಿತ್ತು. ಹಾಗಾಗಿ, ಮೊಸಾದ್ ಮಧ್ಯಾಹ್ನ ಮೂರೂವರೆಯ ಸಮಯವನ್ನು ಆಯ್ಕೆ ಮಾಡಿಕೊಂಡಿತು. ಸಾಫ್ಟ್‌ವೇರ್ ಅನ್ನು ಆ್ಯಕ್ಟಿವೇಟ್ ಮಾಡಲಾಯಿತು. ಅಂದರೆ ಆ ಪೇಜರ್ ಅದನ್ನು ಉಪಯೋಗಿಸುವವನ ಹತ್ತಿರವೇ ಇರಬೇಕು. ಅಂತಹ ಸಮಯದಲ್ಲೇ ಈ ಸ್ಫೋಟವನ್ನು ಯೋಜಿಸಲಾಗಿತ್ತು.

ಮೊಸಾದ್ ಸದಸ್ಯರ ಬುದ್ಧಿವಂತಿಕೆಗೆ ಕೆಲವರಂತೂ ವಾಹ್ ವಾಹ್ ಎಂದಿರಬಹುದು. ಅರೆ, ಲೊಕೇಶನ್ ಕೂಡ ಇರದ ಪೇಜರ್‌ಗಳನ್ನು ಸಣ್ಣ ಸಣ್ಣ ಬಾಂಬುಗಳನ್ನಾಗಿ ಪರಿವರ್ತಿಸಿ ಮತ್ತ್ಯಾವುದೋ ದೇಶದಲ್ಲಿ ಕೂತು ಅವನ್ನು ಸ್ಫೋಟಿಸುವ ವಿಚಾರ ಅದ್ಭುತ ಎನ್ನಿಸಿರಬಹುದು. ಆದರೆ ಹೀಗೆ ಸಂಭ್ರಮಪಡುವ ವಿಚಾರವೇ ಮೂರ್ಖತನದ್ದು. ಬದಲಾಗಿ ಇದು ಆತಂಕಪಡುವ ವಿಷಯ. ಸೂಕ್ಷ್ಮವಾಗಿ ಯೋಚನೆ ಮಾಡಿದಾಗ ಈ ರೀತಿಯ ಆಕ್ರಮಣದ ಸಾಧ್ಯತೆಯೇ ನಡುಕ ಹುಟ್ಟಿಸುವಂತಹದ್ದು. ಏಕೆಂದರೆ ಯಾವ ದೇಶದವರೂ ತಮಗಾಗದ ಯಾವ ದೇಶದ ಮೇಲಾದರೂ ಹೀಗೆ ಆಕ್ರಮಣ ಮಾಡಬಹುದು! ಅಷ್ಟೇಅಲ್ಲ ಭಯೋತ್ಪಾದಕರು ಕೂಡ ಸಾಮಾನ್ಯ ಜನರ ಮೇಲೆ ಈ ಪ್ರಯೋಗ ಮಾಡಬಹುದು. ಬರೀ ಪೇಜರ್ ಅಲ್ಲ, ಮೊಬೈಲ್ ಮೂಲಕವೂ ಈ ರೀತಿಯ ಸ್ಫೋಟ ಸಂಭವಿಸಬಹುದು! ಬೇರೆ ದೇಶ ಬಿಡಿ, ನಮ್ಮ ದೇಶವನ್ನೇ ತೆಗೆದುಕೊಳ್ಳಿ. ಭಾರತದಲ್ಲಿ ಬಹುತೇಕರು ಉಪಯೋಗಿಸುವುದು ವಿದೇಶಿ ನಿರ್ಮಿತ ಮೊಬೈಲುಗಳನ್ನು!

ಹಾಗಾಗಿ, ಇದೀಗ ಲೆಬನಾನಿನಲ್ಲಿ ನಡೆದ ಪೇಜರ್, ವಾಕಿಟಾಕಿ ಸ್ಫೋಟದ ಸಮಸ್ಯೆ ಇಸ್ರೇಲ್ ಅಥವಾ ಲೆಬನಾನಿನ ಸಂಗತಿ ಮಾತ್ರವಲ್ಲ. ಅಲ್ಲಿ ಯುದ್ಧ ತೀವ್ರವಾದರೆ ನಮ್ಮ ದೇಶ ಮಾತ್ರವಲ್ಲ ಜಗತ್ತಿನ ಹಲವಾರು ದೇಶಗಳ ಆರ್ಥಿಕ ವ್ಯವಸ್ಥೆಗೆ ಪೆಟ್ಟು ಬೀಳಲಿದೆ. ಆದರೆ ಅದಕ್ಕಿಂತ ಅಪಾಯಕಾರಿಯಾದ ಸಂಗತಿಯೆಂದರೆ, ಈ ರೀತಿಯ ತಂತ್ರಜ್ಞಾನವನ್ನೇನಾದರೂ ದೇಶಗಳು ಬಳಸಲು ಶುರು ಮಾಡಿದರೆ ಮುಂಬರುವ ದಿನಗಳು ಕರಾಳವಾಗಲಿವೆ. ಆದರೆ ಬೆಕ್ಕಿಗೆ ಗಂಟೆ ಕಟ್ಟುವವರು ಯಾರು? ಉತ್ತರ ಸಿಗದ ಪ್ರಶ್ನೆ ಬೃಹದಾಕಾರವಾಗಿ ಕಾಡುತ್ತಿದೆ.

ವಾಚಕರ ವಾಣಿ

ಜೀರೊ ಟ್ರಾಫಿಕ್‌ಗೆ ಸಡ್ಡು: ದುರಹಂಕಾರದ ನಡೆ

ರಾಯಚೂರಿನಿಂದ ಜಿಂದಾಲ್ ವಿಮಾನ ನಿಲ್ದಾಣಕ್ಕೆ ಶನಿವಾರ ರಾತ್ರಿ ತೆರಳುತ್ತಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸಂಚಾರಕ್ಕೆ ಅನುವಾಗುವಂತೆ ಜೀರೊ ಟ್ರಾಫಿಕ್ ವ್ಯವಸ್ಥೆ ಮಾಡಿದ್ದ ಸಂದರ್ಭದಲ್ಲಿ, ಶಾಸಕ ಜನಾರ್ದನ ರೆಡ್ಡಿ ಅವರಿದ್ದ ಕಾರು ಡಿವೈಡರ್ ದಾಟಿ ಒನ್‌ವೇಯಲ್ಲಿ ವಿರುದ್ಧ ದಿಕ್ಕಿಗೆ ಸಂಚರಿಸಿರುವುದು ದುರಹಂಕಾರ ಮತ್ತು ಅವಿವೇಕದ ನಡೆಯಾಗಿದೆ. ಇವರ ವಿರುದ್ಧ ಪೊಲೀಸರು ಪ್ರಕರಣ ದಾಖಲಿಸಿರುವುದು ಸರಿಯಾಗಿದೆ.

ಬಳ್ಳಾರಿ ಪ್ರವೇಶಿಸಲು ರೆಡ್ಡಿ ಅವರಿಗೆ ಸುಪ್ರೀಂ ಕೋರ್ಟ್‌ನಿಂದ ಅನುಮತಿ ಸಿಕ್ಕಿ ಇನ್ನೂ ಕೆಲವು ದಿನಗಳಷ್ಟೇ ಆಗಿವೆ. ಆಗಲೇ ಇಂತಹ ಉದ್ಧಟತನದ ವರ್ತನೆ ಅಚ್ಚರಿ ಹುಟ್ಟಿಸುತ್ತದೆ. ಕೆಲವರಿಗೆ ಈ ಜನ್ಮದಲ್ಲಿ ಬುದ್ಧಿ ಬರುವುದಿಲ್ಲ ಎನಿಸುತ್ತದೆ. ಇಲ್ಲಿ, ಮುಖ್ಯಮಂತ್ರಿಯವರಿಗಾಗಿ ಶೂನ್ಯ ಸಂಚಾರದಂತಹ ವ್ಯವಸ್ಥೆ ಕಲ್ಪಿಸುವುದರ ಪರ, ವಿರುದ್ಧದ ಮಾತುಗಳು ಮುಖ್ಯವಲ್ಲ. ಆದರೆ, ಅಂತಹ ವ್ಯವಸ್ಥೆ ಜಾರಿಯಲ್ಲಿದ್ದಾಗ ಒಬ್ಬ ಜನಪ್ರತಿನಿಧಿ ಈ ರೀತಿ ವರ್ತಿಸುವುದು ಪ್ರಶ್ನಾರ್ಹ.

ಶ್ರೀಕೃಷ್ಣ, ಬೇಲೂರು

ಸಾಲ ವಸೂಲಿ: ಅಧಿಕಾರಿಗಳಿಗೆ ಬೇಕು ಭದ್ರತೆ

ಸಾಲ ವಸೂಲಿಗಾಗಿ ಮನೆಬಾಗಿಲಿಗೆ ಬಂದ ಬ್ಯಾಂಕ್ ಅಧಿಕಾರಿಗಳನ್ನು ಮನೆಯಲ್ಲಿ ಕೂಡಿಹಾಕಿ ಗನ್‌ಪಾಯಿಂಟ್‌ನಿಂದ ಬೆದರಿಸಿದ ಪ್ರಕರಣ ಪುತ್ತೂರು ಗ್ರಾಮಾಂತರ ಠಾಣೆ ವ್ಯಾಪ್ತಿಯಲ್ಲಿ ನಡೆದಿರುವುದಾಗಿ ಕೆಲವು ಮಾಧ್ಯಮಗಳಲ್ಲಿ ವರದಿಯಾಗಿದೆ. ಇದು ಸಾಲ ವಸೂಲಿಯಲ್ಲಿ ಬ್ಯಾಂಕ್ ಅಧಿಕಾರಿಗಳು ಎದುರಿಸುವ ಸಂಕಷ್ಟಕ್ಕೆ ಇನ್ನೊಂದು ಉದಾಹರಣೆ. ಸಾಲ ವಸೂಲಿಗೆ ಹೋದಾಗ 'ಟಿ.ವಿ ನ್ಯೂಸ್ ಚಾನೆಲ್‌ನವರನ್ನು ಕರೆಸುತ್ತೇವೆ', 'ಮೊದಲು ವಿಜಯ್ ಮಲ್ಯ, ನೀರವ್ ಮೋದಿ ಅಂತಹವರ ಬಾಕಿ ಸಾಲ ವಸೂಲು ಮಾಡಿಕೊಂಡು ಬನ್ನಿ' ಎನ್ನುವುದು, ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಳ್ಳುವುದು, ಲೇವಡಿ ಮಾಡುವುದು, ಅವರ ಮೇಲೆ ಹಲ್ಲೆ ನಡೆಸುವುದು ಸಾಮಾನ್ಯವಾಗಿದೆ. ಈಗ ಇದು ಕೂಡಿಹಾಕಿ ಗನ್ ತೋರಿಸುವ ಮಟ್ಟಕ್ಕೆ ಹೋಗಿರುವುದು ಆಘಾತಕಾರಿ ಬೆಳವಣಿಗೆ.

ಅಕಸ್ಮಾತ್ ಈ ಅಧಿಕಾರಿಗಳ ಜೀವಕ್ಕೆ ಸಂಚಕಾರ ಬಂದಿದ್ದರೆ ಅದಕ್ಕೆ ಯಾರು ಹೊಣೆ? ಕುಟುಂಬಗಳಿಗೆ ಬ್ಯಾಂಕ್ ಕೊಡಬಹುದಾದ ಪರಿಹಾರ ಈ ಅಧಿಕಾರಿಗಳ ಜೀವಕ್ಕೆ ಸಾಟಿಯಾಗಬಹುದೇ? ಬ್ಯಾಂಕ್ ಉದ್ಯೋಗಕ್ಕೆ ಸೇರಲು ಮೊದಲಿನಷ್ಟು ಉತ್ಸುಕತೆ ಜನರಲ್ಲಿ ಇಲ್ಲ ಎನ್ನುವುದಕ್ಕೆ, ಬ್ಯಾಂಕ್ ಉದ್ಯೋಗಿಗಳಿಗೆ ದೇಶದಾದ್ಯಂತ ನಡೆಸುವ ವರ್ಗಾವರ್ಗಿ, ದಿನನಿತ್ಯದ ಕೆಲಸದಲ್ಲಿ ಗುರಿ ನಿಗದಿ, ಕೆಲಸದ ಒತ್ತಡ ಕಾರಣ ಎಂದು ಹೇಳಲಾಗುತ್ತಿತ್ತು. ಈಗ ಈ ಪಟ್ಟಿಗೆ ಸಾಲ ವಸೂಲಿ ಪ್ರಕ್ರಿಯೆಯಲ್ಲಿ ಜೀವಭಯವೂ ಸೇರಿದಂತೆ ಕಾಣುತ್ತದೆ. ಇಂತಹ ಪ್ರಕರಣಗಳಿಂದ ಸಾಲ ವಸೂಲಿ ಪ್ರಕ್ರಿಯೆಗೆ ಹಿನ್ನಡೆಯಾಗಬಹುದು ಎನ್ನುವ ಮಾತು ಬ್ಯಾಂಕಿಂಗ್ ವಲಯದಲ್ಲಿ ಕೇಳಿಬರುತ್ತಿದೆ.

ರಮಾನಂದ ಶರ್ಮಾ, ಬೆಂಗಳೂರು

ಗುರ್ಮೀತ್‌ಗೂ ಸಿಗುತ್ತಿರಬಹುದೇ ರಾಜಾತಿಥ್ಯ?

ಡೇರಾ ಸಚ್ಚಾ ಸೌದಾ ಧಾರ್ಮಿಕ ಗುಂಪಿನ ಮುಖ್ಯಸ್ಥ ಗುರ್ಮೀತ್ ರಾಮ್ ರಹೀಂ ಸಿಂಗ್ ಎಂಬ ಅಪರಾಧಿಯು ಅತ್ಯಾಚಾರ ಹಾಗೂ ಕೊಲೆ ಪ್ರಕರಣದಲ್ಲಿ 20 ವರ್ಷಗಳ ಜೈಲು ಶಿಕ್ಷೆಗೆ ಒಳಗಾಗಿದ್ದರೂ ವಿಶೇಷವಾಗಿ ಪಂಜಾಬ್, ಹರಿಯಾಣದಲ್ಲಿನ ಚುನಾವಣಾ ಸಮಯದಲ್ಲಿ ಆತ ಪೆರೋಲ್ ಮೇಲೆ ಹೊರಬರುವಂತೆ ಮಾಡುವುದು ಅಕ್ಷಮ್ಯ ಅಪರಾಧ. ಇದರ ಬಗ್ಗೆ ಚುನಾವಣಾ ಆಯೋಗವು ಪದೇಪದೇ ನಿರ್ಲಕ್ಷ್ಯ ವಹಿಸುತ್ತಿರುವುದು ಆಯೋಗದ ಕಾರ್ಯವೈಖರಿಯ ಬಗ್ಗೆ ಪ್ರಶ್ನೆ ಮೂಡುವಂತೆ ಮಾಡುತ್ತಿದೆ.

ಒಬ್ಬ ಅಪರಾಧಿಯು ಪೆರೋಲ್ ಎಂಬ ಟ್ರಂಪ್ ಕಾರ್ಡ್ ಬಳಸಿ ಹೀಗೆ ಚುನಾವಣೆಯ ಸಮಯದಲ್ಲಿ ಹೊರಗೆ ಬಂದು ಚುನಾವಣೆ ಹಾಗೂ ರಾಜಕೀಯ ಚಟುವಟಿಕೆಯಲ್ಲಿ ಪರೋಕ್ಷವಾಗಿ ಭಾಗವಹಿಸಲು ಅನುವು ಮಾಡಿಕೊಡುತ್ತಿರುವ ವ್ಯವಸ್ಥೆ ಬಗ್ಗೆ ಏನು ಹೇಳುವುದು?! ಇದನ್ನೆಲ್ಲಾ ನೋಡುವಾಗ, ಆತನಿಗೆ ಜೈಲಿನೊಳಗೆ ರಾಜಾತಿಥ್ಯವನ್ನು ನೀಡದೆ ಇರುತ್ತಾರೆಯೇ ಎಂಬ ಪ್ರಶ್ನೆ ಮೂಡುತ್ತದೆ. ರಾಜಕೀಯ ಪಕ್ಷಗಳು ಚುನಾವಣೆಗೆ ಇಂತಹ ಕೈದಿಗಳ ಬೆಂಬಲ ಪಡೆಯುತ್ತಿರುವುದು ನಾಚಿಕೆಗೇಡು. ಪದೇ ಪದೇ ಹೀಗೆ ಪೆರೋಲ್‌ಗೆ ಅನುಮತಿ ನೀಡಿರುವುದರ ಬಗ್ಗೆ ಸೂಕ್ತ ತನಿಖೆ ನಡೆಸಿ ಸತ್ಯಾಂಶ ಹೊರಗೆಳೆಯಬೇಕು. ಇಲ್ಲದಿದ್ದರೆ ಅಪರಾಧಿಗೆ ಅಪರಾಧ ಭಾವನೆಯೇ ಇಲ್ಲದಂತೆ ಆಗುತ್ತದೆ.

ಸುರೇಂದ್ರ ಪೈ, ಭಟ್ಕಳ

ಮಹಾತ್ಮರ ವ್ಯಕ್ತಿತ್ವ ಅರ್ಥವಾಗುವುದು ಮಹಾತ್ಮರಿಗೇ

'ಗಾಂಧಿ ಎಂಬ ವರ್ತಮಾನದ ಜರೂರು' ಎಂಬ ಕಿರಣ್ ಎಂ. ಗಾಜನೂರು ಅವರ ಲೇಖನ (ಪ್ರ.ವಾ., ಅ. 2), ರಾಜೇಂದ್ರಕುಮಾರ್ ಡಿ. ಮುದ್ನಾಳ್ ಮತ್ತು ರೇವಣ್ಣ ಎಂ.ಜಿ. ಅವರ ಪತ್ರಗಳು (ವಾ.ವಾ., ಅ. 2, 3) ಗಾಂಧಿಯವರ ಚಾರಿತ್ರ್ಯಹನನ ಮಾಡುವವರ ಕುರಿತು ಆತಂಕ ವ್ಯಕ್ತಪಡಿಸಿವೆ. ಗಾಂಧೀಜಿ ಕುರಿತ ಕಪೋಲಕಲ್ಪಿತ ಅಸಹ್ಯ ವಿಚಾರಗಳಿಂದ ನಾನೂ ಗೊಂದಲಕ್ಕೀಡಾಗಿದ್ದೆ. ಆದರೆ ಇಬ್ಬರು ಮಹಾತ್ಮರು ಅವರ ಬಗೆಗೆ ವ್ಯಕ್ತಪಡಿಸಿದ ಅಭಿಪ್ರಾಯಗಳಿಂದ ನನ್ನಲ್ಲಿ ಉಂಟಾಗಿದ್ದ ತಪ್ಪುಕಲ್ಪನೆಯನ್ನು ಹೋಗಲಾಡಿಸಿಕೊಂಡೆ.

ಆತ್ಮಸಾಕ್ಷಾತ್ಕಾರದ ಅತ್ಯುನ್ನತ ನೆಲೆಗೇರಿದ್ದ ಮಹಾ ತಪಸ್ವಿ ರಮಣ ಮಹರ್ಷಿ ಹೀಗೆ ಹೇಳಿದ್ದಾರೆ: 'ಹನುಮಂತ ಅತ್ಯಂತ ವಿನಯವಂತ, ನಮ್ರಜೀವಿ. ಆದರೆ ಅಪಾರ ಶಕ್ತಿವಂತ. ಅವನು ಚಿರಂಜೀವಿ ಎಂದು ನಾವು ಹೇಳುತ್ತೇವಷ್ಟೆ. ಅಂದರೆ ಅಂಥ ಒಬ್ಬ ನಿರ್ದಿಷ್ಟ ವಾನರವೀರ ಎಂದೆಂದೂ ಬದುಕಿರುತ್ತಾನೆ ಎಂದರ್ಥವಲ್ಲ. ಎಲ್ಲ ಕಾಲದಲ್ಲೂ ರಾಮಶಕ್ತಿಯನ್ನು ಆರಾಧಿಸುವ ಅಂಥ ಒಬ್ಬ ಅಸಾಧಾರಣ ವ್ಯಕ್ತಿ ಇರುತ್ತಾನೆಂದು ಅರ್ಥ. ಗಾಂಧಿ ಅಂಥ ಒಬ್ಬ ವ್ಯಕ್ತಿ' ('ಅರುಣಾಚಲದ ಆತ್ಮಜ್ಯೋತಿ ರಮಣ ಮಹರ್ಷಿ'- ಎನ್.ಎಸ್.ಲಕ್ಷ್ಮೀನಾರಾಯಣ ಭಟ್ಟ). ನಡೆದಾಡುವ ದೇವರೆಂದು ಖ್ಯಾತಿ ಪಡೆದ ಸಿದ್ಧೇಶ್ವರ ಸ್ವಾಮಿ ತಮ್ಮ ಪ್ರವಚನದಲ್ಲಿ ಗಾಂಧಿಯವರ ಸತ್ಯ, ಅಹಿಂಸೆ, ತ್ಯಾಗದ ಗುಣಗಳನ್ನು ಕೊಂಡಾಡುತ್ತಿದ್ದರು. ಈ ಇಬ್ಬರು ಮಹಾತ್ಮರು ಆಸೆ ಅಳಿದ ಸರ್ವಸಂಗ ಪರಿತ್ಯಾಗಿಗಳಾಗಿದ್ದರು. ಮಹಾತ್ಮರ ವ್ಯಕ್ತಿತ್ವ ಮಹಾತ್ಮರಿಗೇ ಅರ್ಥವಾಗುತ್ತದೆ ವಿನಾ ದುರಾತ್ಮರಿಗಲ್ಲ! ಗಾಂಧೀಜಿಯ ಚಾರಿತ್ರ್ಯವಧೆ ಮಾಡುವ ವ್ಯಕ್ತಿಗಳ ಉದ್ದೇಶವು ವಿಕೃತ ಆನಂದ ಪಡೆಯುವುದಾಗಿರುತ್ತದೆಯೇ ವಿನಾ ಬೇರೇನೂ ಅಲ್ಲ.

ಶಿವಕುಮಾರ ಬಂಡೋಳಿ, ಹುಣಸಗಿ, ಯಾದಗಿರಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

‘ಕೇಂದ್ರ ಸರ್ಕಾರದ ಉದ್ಯೋಗಗಳಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಇತರೆ ಹಿಂದುಳಿದ ವರ್ಗಗಳಿಗೆ ಮೀಸಲಾತಿಯಲ್ಲಿ ನಿಗದಿ ಮಾಡಿದ್ದಕ್ಕಿಂತ ಹೆಚ್ಚು ಹುದ್ದೆಗಳನ್ನು ನೀಡಲಾಗಿದೆ’ ಎಂದು ಕೇಂದ್ರ ಸರ್ಕಾರವು ರಾಜ್ಯಸಭೆ ಮತ್ತು ಲೋಕಸಭೆಯಲ್ಲಿ ಪದೇ–ಪದೇ ಹೇಳುತ್ತಲೇ ಇರುತ್ತದೆ. ಕೇಂದ್ರ ಸರ್ಕಾರದ ಒಟ್ಟು ಉದ್ಯೋಗಿಗಳ ಸಂಖ್ಯೆಯನ್ನು ಗಮನಿಸಿದಾಗ ಕೇಂದ್ರ ಸರ್ಕಾರದ ಈ ಸಮರ್ಥನೆ ನಿಜ ಎನಿಸಿಬಿಡುತ್ತದೆ. ಆದರೆ ಎಂತಹ ಹುದ್ದೆಗಳಲ್ಲಿ ಈ ಸಮುದಾಯಗಳಿಗೆ ಮೀಸಲಾತಿ ದೊರೆತಿದೆ ಎಂಬುದನ್ನು ಪರಿಶೀಲಿಸಿ ನೋಡಿದಾಗಲಷ್ಟೇ, ಉನ್ನತ ಹುದ್ದೆಗಳಲ್ಲಿ ಮೀಸಲಾತಿಯನ್ನು ನಿರಾಕರಿಸಲಾಗುತ್ತಿದೆ ಎಂಬುದು ಗೊತ್ತಾಗುತ್ತದೆ. ಜತೆಗೆ ತಾಂತ್ರಿಕ ನೆಪಗಳನ್ನೊಡ್ಡಿ ಮೀಸಲಾತಿಯನ್ನು ಅನ್ವಯ ಮಾಡದೇ ಇರುವ ಹುನ್ನಾರಗಳೂ ಗೊತ್ತಾಗುತ್ತವೆ

ಉನ್ನತ ಹುದ್ದೆ: ಮೀಸಲಾತಿ ನಿರಾಕರಣೆಯ ಹುನ್ನಾರ

● ಜಯಸಿಂಹ ಆರ್.

ಸಂಪುಟ ಸಚಿವಾಲಯದಲ್ಲಿ ಅತ್ಯಂತ ಕಡಿಮೆ ಪ್ರಾತಿನಿಧ್ಯ

ಕೇಂದ್ರ ಸಚಿವ ಸಂಪುಟ ಸಚಿವಾಲಯವನ್ನು ಅತ್ಯಂತ ಪ್ರಬಲ ವಿಭಾಗ ಎಂದೇ ಗುರುತಿಸಲಾಗು ತ್ತದೆ. ಸರ್ಕಾರದ ಪ್ರತಿ ನಿರ್ಧಾರ ಟಿಪ್ಪಣಿ ಯಾಗುವುದು, ಕರಡಾಗುವುದು ಮತ್ತು ಅಂತಿಮವಾಗುವುದು ಇಲ್ಲೇ. ವಿವಿಧ ಸಚಿವಾಲಯಗಳು ಸಿದ್ಧಪಡಿಸಿಕೊಡುವ ಎಲ್ಲ ಕಡತಗಳಿಗೂ ಅಂತಿಮ ಸ್ಪರ್ಶ ದೊರೆಯುವುದು ಇಲ್ಲೇ. ಆದರೆ ಇಂತಹ ಮಹತ್ವದ ಸಚಿವಾಲಯದಲ್ಲೇ ಎಸ್‌ಸಿ, ಎಸ್‌ಟಿ ಮತ್ತು ಒಬಿಸಿ ಸಮುದಾಯಗಳ ಪ್ರಾತಿನಿಧ್ಯ ಕಡಿಮೆ ಇದೆ. ಬೇರೆಲ್ಲ ಸಚಿವಾಲಯಗಳಿಗೆ ಹೋಲಿಸಿದರೆ ಸಂಪುಟ ಸಚಿವಾಲಯದಲ್ಲೇ ಕಡಿಮೆ ಇದೆ ಎಂಬುದು ಕಳವಳಕಾರಿ ಅಂಶ.



ಕೇಂದ್ರದ ಎಲ್ಲ ಸಚಿವಾಲಯಗಳು, ಇಲಾಖೆಗಳಲ್ಲಿ ಇರುವ ಒಟ್ಟು ಹುದ್ದೆಗಳಲ್ಲಿ ಪರಿಶಿಷ್ಟ ಜಾತಿಗಳಿಗೆ (ಎಸ್‌ಸಿ) ಸೇರಿದ ಉದ್ಯೋಗಿಗಳ/ಅಧಿಕಾರಿಗಳ ಪ್ರಮಾಣ ಶೇ 17.49ರಷ್ಟು ಎನ್ನುತ್ತವೆ ದಾಖಲೆಗಳು. ಮೀಸಲಾತಿ ನಿಯಮಗಳ ಪ್ರಕಾರ ಈ ಸಮುದಾಯಗಳಿಗೆ ಮೀಸಲಿರಿಸಬೇಕಾದ ಹುದ್ದೆಗಳ ಪ್ರಮಾಣ ಶೇ 15ರಷ್ಟು ಮಾತ್ರ. ನಿಗದಿಗಿಂತ ಶೇ 2.49ರಷ್ಟು ಹೆಚ್ಚು ಹುದ್ದೆಗಳಲ್ಲಿ ಈ ಸಮುದಾಯದ ಮಂದಿ ಇದ್ದಾರೆ ಎಂದು ಕೇಂದ್ರ ಸರ್ಕಾರ ದಾಖಲೆಗಳನ್ನು ತೋರಿಸುತ್ತದೆ. ಅಂತಹ ದಾಖಲೆಗಳ ಕಡೆಯ ಪುಟದ ಅಂಚಿನಲ್ಲಿ ಒಂದು ‘*’ ಇಟ್ಟು, ‘ಪ್ರತಿಭೆ ಆಧಾರದಲ್ಲಿ ಆಯ್ಕೆ/ನೇಮಕವಾದ ಸಿಬ್ಬಂದಿಯ ಸಂಖ್ಯೆಯನ್ನೂ ಇದು ಒಳಗೊಂಡಿದೆ’ ಎಂದು ಟಿಪ್ಪಣಿ ಬರೆದಿರುತ್ತದೆ. ಆದರೆ ಇದನ್ನು ಸರ್ಕಾರ ಹೇಳುವುದಿಲ್ಲ.

ಕೇಂದ್ರ ಸರ್ಕಾರದ ಒಟ್ಟು ಹುದ್ದೆಗಳಲ್ಲಿ ಪರಿಶಿಷ್ಟ ಪಂಗಡಗಳಿಗೆ (ಎಸ್‌ಟಿ) ಸೇರಿದ ಉದ್ಯೋಗಿಗಳ ಪ್ರಮಾಣ ಶೇ 8.47ರಷ್ಟು. ನಿಗದಿಪಡಿಸಲಾದ ಒಟ್ಟು ಮೀಸಲಾತಿ (ಶೇ 7.5ರಷ್ಟು) ಪ್ರಮಾಣಕ್ಕಿಂತ ಒಂದು ಶೇಕಡಾವಾರು ಅಂಶಗಳಷ್ಟು ಹೆಚ್ಚು ಇದು. ಆದರೆ ಎಸ್‌ಸಿ ಸಮುದಾಯಗಳ ಅಭ್ಯರ್ಥಿಗಳಂತೆಯೇ, ಪ್ರತಿಭೆ ಆಧಾರದಲ್ಲಿ ಆಯ್ಕೆ/ನೇಮಕವಾದ ಉದ್ಯೋಗಿಗಳ ಸಂಖ್ಯೆ ಇಲ್ಲೂ ದೊಡ್ಡದಿದೆ.

ಒಳ ಮೀಸಲಿನ ಒಡಲಾಳ

ಪ್ರತಿಭೆ ಆಧಾರದಲ್ಲಿ ಉದ್ಯೋಗ ಪಡೆದುಕೊಂಡ ಎಸ್‌ಸಿ/ಎಸ್‌ಟಿ ಸಮುದಾಯಗಳ ಮಂದಿಯ ಸಂಖ್ಯೆಯನ್ನೂ ಇದು ಒಳಗೊಂಡಿದೆ ಎಂದು ಕೇಂದ್ರ ಸರ್ಕಾರ ಹೇಳುತ್ತದೆಯೇ ಹೊರತು, ಅಂತಹವರ ಪ್ರಮಾಣ ಮತ್ತು ಸಂಖ್ಯೆ ಎಷ್ಟು ಎಂಬುದನ್ನು ಬಹಿರಂಗಪಡಿಸುವುದಿಲ್ಲ. ಹೀಗಾಗಿ ಮೀಸಲಾತಿಯ ಪ್ರಯೋಜನ ಈ ಸಮುದಾಯಗಳಿಗೆ ಪೂರ್ಣ ಪ್ರಮಾಣದಲ್ಲಿ ಸಿಗುತ್ತಿದೆಯೇ ಅಥವಾ ಅದನ್ನು ನಿರಾಕರಿಸಲಾಗುತ್ತಿದೆಯೇ ಎಂಬುದು ಈ ದಾಖಲೆ ಮತ್ತು ದತ್ತಾಂಶಗಳನ್ನು ನೋಡಿದರೆ ಸಾಲುವುದಿಲ್ಲ. ಕೇಂದ್ರ ಸರ್ಕಾರದ ಯಾವ ದರ್ಜೆಯ ಉದ್ಯೋಗಿಗಳಲ್ಲಿ ಈ ಸಮುದಾಯಗಳ ಪ್ರಾತಿನಿಧ್ಯ ಎಷ್ಟಿದೆ ಎಂಬುದನ್ನು ಗಮನಿಸಿದಾಗಲಷ್ಟೇ ನಿಜ ಚಿತ್ರ ತೆರೆದುಕೊಳ್ಳುತ್ತದೆ. ಎಲ್ಲ ಕಾಲಕ್ಕೂ ಉನ್ನತ ಹುದ್ದೆಗಳಲ್ಲಿ ಈ ಸಮುದಾಯಗಳಿಗೆ ಸ್ಥಾನ ಮತ್ತು ಮೀಸಲಾತಿ ನಿರಾಕರಿಸುತ್ತಾ ಬರಲಾಗಿದೆ ಎಂಬುದು ಗೊತ್ತಾಗುತ್ತದೆ.

ಕೇಂದ್ರ ಸರ್ಕಾರವು 2019–2021ರ ನಡುವೆ ಸಂಸತ್ತಿಗೆ ನೀಡಿದ ಮಾಹಿತಿ ಹೀಗಿದೆ: ಗ್ರೂಪ್ ‘ಎ’ ಹುದ್ದೆಗಳಲ್ಲಿ ಎಸ್‌ಸಿ ಉದ್ಯೋಗಿಗಳ ಪ್ರಮಾಣ ಶೇ 13.4ರಷ್ಟು, ಎಸ್‌ಟಿ ಉದ್ಯೋಗಿಗಳ ಪ್ರಮಾಣ ಶೇ 6ರಷ್ಟು. ಒಟ್ಟು ಉದ್ಯೋಗಿಗಳಲ್ಲಿ ಈ ಸಮುದಾಯಗಳ ಪ್ರಮಾಣ ಕ್ರಮವಾಗಿ ಶೇ 17.49 ಮತ್ತು ಶೇ 8.47ರಷ್ಟು ಇದೆ. ಆದರೆ, ಗ್ರೂಪ್ ‘ಎ’ ಹುದ್ದೆಗಳಿಗೆ ಬಂದಾಗ ಪ್ರಮಾಣ ಕಡಿಮೆಯಾಗುತ್ತದೆ.

ಕೇಂದ್ರ ಸರ್ಕಾರದ ಸಚಿವಾಲಯ/ಇಲಾಖೆಗಳಲ್ಲಿ ‘ಸೆಂಟ್ರಲ್ ಸ್ಟಾಫಿಂಗ್ ಸ್ಕೀಮ್’ ಅಡಿಯಲ್ಲಿ ನೇಮಕ ಮಾಡಿಕೊಳ್ಳಲಾದ ಅಧೀನ ಕಾರ್ಯದರ್ಶಿ ಮತ್ತು ಅದಕ್ಕಿಂತಲೂ ಮೇಲಿನ ದರ್ಜೆಯ ಹುದ್ದೆಗಳಲ್ಲಿ ಈ ಸಮುದಾಯಗಳನ್ನು ಪ್ರತಿನಿಧಿಸುವವರ ಪ್ರಮಾಣ ಶೋಚನೀಯ ಮಟ್ಟದಲ್ಲಿದೆ. ಈ ವರ್ಗದಲ್ಲಿ 89 ಕಾರ್ಯದರ್ಶಿ ಹುದ್ದೆಗಳಿದ್ದು, ಅವುಗಳಲ್ಲಿ ಎಸ್‌ಸಿ ಸಮುದಾಯದ ಒಬ್ಬ (ಶೇ 1.1), ಎಸ್‌ಟಿ ಸಮುದಾಯದ ಮೂವರು (ಶೇ 3.3) ಅಧಿಕಾರಿಗಳು ಇದ್ದಾರೆ. ಈ ಹುದ್ದೆಗಳಲ್ಲಿ ಇತರೆ ಹಿಂದುಳಿದ ವರ್ಗಗಳನ್ನು ಪ್ರತಿನಿಧಿಸುವ ಒಬ್ಬ ಅಧಿಕಾರಿಯೂ ಇಲ್ಲ. ಇದೇ ವರ್ಗದಲ್ಲಿ ಬರುವ ಇತರ ಹುದ್ದೆಗಳಲ್ಲಿ ಈ ಮೂರೂ ಸಮುದಾಯಗಳ ಪ್ರಾತಿನಿಧ್ಯ ಎಷ್ಟಿದೆ ಎಂಬುದನ್ನು ಈ ಲೇಖನದ ಜತೆಗೆ ಇರುವ, ‘ಉನ್ನತ ಹುದ್ದೆಗಳಲ್ಲಿ ಮೀಸಲಾತಿ ಶೋಚನೀಯ’ ಎಂಬ ಚಾರ್ಟ್‌ನಲ್ಲಿ ತೋರಿಸಲಾಗಿದೆ.

ನೀತಿ ಆಯೋಗವು ಕೇಂದ್ರದ ನೀತಿ ನಿರೂಪಣೆಯಲ್ಲಿ ಮಹತ್ವದ ಪಾತ್ರವಹಿಸುತ್ತದೆ. ಆದರೆ ಇಲ್ಲಿ ಮೀಸಲಾತಿ ಅಡಿ ನೇಮಕವಾದ ಉದ್ಯೋಗಿಗಳ ಸಂಖ್ಯೆ ಕಡಿಮೆ ಇದೆ. ಈ ಸಂಸ್ಥೆಯ ಒಟ್ಟು ಹುದ್ದೆಗಳಲ್ಲಿ ಪರಿಶಿಷ್ಟ ಜಾತಿಗಳ ಪ್ರಾತಿನಿಧ್ಯ ನಿಗದಿಗಿಂತ ಹೆಚ್ಚೇ (ಶೇ 20.96) ಇದೆ. ಆದರೆ ಪರಿಶಿಷ್ಟ ಪಂಗಡದ ಉದ್ಯೋಗಿಗಳ ಪ್ರಮಾಣ ಶೇ 4.97 ಮತ್ತು ಇತರೆ ಹಿಂದುಳಿದ ವರ್ಗಗಳ ಉದ್ಯೋಗಿಗಳ ಪ್ರಮಾಣ ಶೇ 8.7ರಷ್ಟೇ. ಮಹತ್ವದ ಸಂಸ್ಥೆಯಲ್ಲೇ ಈ ಸಮುದಾಯಗಳಿಗೆ ನಿಗದಿಪಡಿಸಿದಷ್ಟು ಹುದ್ದೆಗಳಲ್ಲಿ ಪ್ರಾತಿನಿಧ್ಯ ಎಲ್ಲ ಎಂದಾದರೆ, ಈ ಸಂಸ್ಥೆಯು ಸಾಮಾಜಿಕ ನ್ಯಾಯದ ಪರವಾಗಿ ಕೆಲಸ ಮಾಡುತ್ತದೆಯೇ ಎಂಬ ಪ್ರಶ್ನೆ ಎತ್ತಬೇಕಾಗುತ್ತದೆ.

ಸರ್ಕಾರಿ ಕಚೇರಿಗಳಲ್ಲಿ ಸ್ವಚ್ಛತಾ ಸಿಬ್ಬಂದಿ, ಕಾರಕೂನ, ಕ್ಲರ್ಕ್ ಮೊದಲಾದ ಕೆಳಹಂತದ ಹುದ್ದೆಗಳಲ್ಲಷ್ಟೇ ಎಸ್‌ಸಿ, ಎಸ್‌ಟಿ ಮತ್ತು ಒಬಿಸಿ ಸಮುದಾಯಗಳಿಗೆ ಮೀಸಲಾತಿ ದೊರೆಯುತ್ತಿದೆ. ನೀತಿ ನಿರೂಪಣೆ ಮಟ್ಟದಲ್ಲಿ ಮಹತ್ವದ ಪಾತ್ರವಹಿಸುವಂತಹ ಉನ್ನತ ಅಧಿಕಾರಿಗಳ ಹುದ್ದೆಗಳಲ್ಲಿ ಈ ಸಮುದಾಯಗಳ ಪ್ರಾತಿನಿಧ್ಯ ಅತ್ಯಂತ ಕಡಿಮೆ ಇದೆ ಮತ್ತು ಕೆಲವೆಡೆ ಪ್ರಾತಿನಿಧ್ಯವೇ ಇಲ್ಲ. ಮೀಸಲಾತಿ ಅನ್ವಯವಾಗಿ ದಶಕಗಳು ಕಳೆದರೂ ಈ ಸಮುದಾಯಗಳಿಗೆ ನಿಗದಿಯಷ್ಟು ಹುದ್ದೆಗಳು ದೊರಕದೇ ಇರಲು, ಉನ್ನತ ಸ್ಥಾನಗಳಲ್ಲಿ ಈ ಮಂದಿ ಇಲ್ಲ ಎಂಬುದೂ ಒಂದು ಕಾರಣ. ಇದನ್ನು ಮೀಸಲಾತಿಯನ್ನು ನಿರಾಕರಿಸುವ ಮತ್ತು ಇರುವ ಮೀಸಲಾತಿಯನ್ನು ಕಸಿದುಕೊಳ್ಳುವ ಹುನ್ನಾರದ ಭಾಗ ಎಂದೇ ವಿಶ್ಲೇಷಿಸಬೇಕಾಗುತ್ತದೆ.

ಒಳಮೀಸಲಾತಿಗಾಗಿ ನಡೆಯುತ್ತಿರುವ ಆಗ್ರಹ ಎಷ್ಟು ಮಹತ್ವದ್ದೋ, ಅದೇ ರೀತಿ ಈಗಾಗಲೇ ಇರುವ ಮೀಸಲಾತಿಯನ್ನು ದಕ್ಕಿಸಿಕೊಳ್ಳುವುದೂ ಅಷ್ಟೇ ಅಗತ್ಯ. ಹೀಗೆ ಆಗದಿದ್ದರೆ, ಮೀಸಲಾತಿ ಇದ್ದೂ ಇಲ್ಲದಂತಾಗುತ್ತದೆ. ಈ ಎರಡೂ ವಿಷಯಗಳಲ್ಲಿ ಈ ಸಮುದಾಯಗಳು ಅತ್ಯಂತ ಎಚ್ಚರಿಕೆಯಿಂದ ಇರಬೇಕು ಎಂಬುದನ್ನು ಈ ಅಂಶಗಳು ಒತ್ತಿ ಹೇಳುತ್ತವೆ.

ಉನ್ನತ ಹುದ್ದೆಗಳಲ್ಲಿ ಮೀಸಲಾತಿ ಶೋಚನೀಯ



* ಅಧೀನ ಕಾರ್ಯದರ್ಶಿ ಮತ್ತು ಮೇಲ್ಪಟ್ಟ ಹುದ್ದೆಗಳಲ್ಲಿ ಸೆಂಟ್ರಲ್ ಸ್ಟಾಫಿಂಗ್ ಸ್ಕೀಮ್ ಹುದ್ದೆಗಳು

ನಿರಾಕರಣೆ ಮತ್ತು ಕಬಳಿಸುವ ಬಗೆ

‘ಕಾರ್ಯದರ್ಶಿ, ಜಂಟಿ ಕಾರ್ಯದರ್ಶಿ ಮತ್ತು ಹೆಚ್ಚುವರಿ ಕಾರ್ಯದರ್ಶಿಯಂತಹ ಉನ್ನತ ಹುದ್ದೆಗಳಿಗೆ, ಕೇಂದ್ರ ಸರ್ಕಾರದ ಸೇವೆಗೆ ಲಭ್ಯವಿರುವ ಅಧಿಕಾರಿ ವರ್ಗದಿಂದ ಆಯ್ಕೆ ಮಾಡಿಕೊಳ್ಳಲಾಗುತ್ತದೆ. ಮೀಸಲಾತಿಯಿಂದ ಆಯ್ಕೆಯಾದ ಅಭ್ಯರ್ಥಿಗಳು ಬಹುತೇಕ ಸಂದರ್ಭಗಳಲ್ಲಿ ತೀರಾ ತಡವಾಗಿ (ವಯೋಮಿತಿ ವಿನಾಯಿತಿ ಕಾರಣ) ಕರ್ತವ್ಯಕ್ಕೆ ಸೇರಿರುತ್ತಾರೆ. ಉನ್ನತ ಹುದ್ದೆಗೆ ಅವರ ಬ್ಯಾಚ್ ಅರ್ಹತೆ ಪಡೆಯುವಷ್ಟರಲ್ಲಿ ಅವರ ಕೆಲಸದ ಅವಧಿ ಅತ್ಯಂತ ಕಡಿಮೆ ಇರುತ್ತದೆ, ಇಲ್ಲವೇ ಹಲವರು ನಿವೃತ್ತಿಯಾಗಿರುತ್ತಾರೆ. ಹೀಗಾಗಿಯೇ ಉನ್ನತ ಹುದ್ದೆಗಳಲ್ಲಿ ಈ ಸಮುದಾಯದ ಪ್ರಾತಿನಿಧ್ಯ ಕಡಿಮೆ ಇರುತ್ತದೆ’.

–ಈ ಹಿಂದಿನ ಕೇಂದ್ರ ಸರ್ಕಾರದಲ್ಲಿ ಸಿಬ್ಬಂದಿ ಮತ್ತು ಕುಂದುಕೊರತೆ ಖಾತೆ ರಾಜ್ಯ ಸಚಿವರಾಗಿದ್ದ ಜಿತೇಂದ್ರ ಸಿಂಗ್ ರಾಜ್ಯಸಭೆಗೆ ನೀಡಿದ್ದ ಉತ್ತರವಿದು.

ಸರ್ಕಾರದ ಉನ್ನತ ಹುದ್ದೆಗಳಲ್ಲಿ ಈ ಸಮುದಾಯಗಳಿಗೆ ಮೀಸಲಾತಿಯನ್ನು ಹೇಗೆ ನಿರಾಕರಿಸಲಾಗುತ್ತದೆ ಎಂಬುದರ ತಾಂತ್ರಿಕ ವಿವರಣೆ ಈ ಉತ್ತರದಲ್ಲಿ ಕಾಣುತ್ತದೆ. ಈ ಸಚಿವಾಲಯವೇ ಸಿದ್ಧಪಡಿಸಿ ಪ್ರಕಟಿಸಿರುವ, ‘ಸಾಮಾನ್ಯವಾಗಿ ಕೇಳುವ ಪ್ರಶ್ನೆಗಳು– ಎಫ್‌ಎಕ್ಯು’ ಅಲ್ಲಿ ಮೇಲಿನ ವಿವರಣೆಗೆ ವ್ಯತಿರಿಕ್ತವಾದ ಅಂಶಗಳು ಇವೆ.

ಉನ್ನತ ಹುದ್ದೆಗಳಲ್ಲಿ ಮೀಸಲಾತಿ ದೊರಕಿಸಿಕೊಡುವ ಉದ್ದೇಶದಿಂದ ಈ ಸಮುದಾಯಗಳ ಅರ್ಹತೆಗಳನ್ನು ಸಡಿಲಿಸಲು ಅವಕಾಶವಿದೆ. ಜತೆಗೆ ಎಸ್‌ಸಿ ಮತ್ತು ಎಸ್‌ಟಿ ಸಮುದಾಯಗಳ ಅಭ್ಯರ್ಥಿಗಳಿಗೆ ಬಡ್ತಿ ನೀಡುವಲ್ಲಿ ವಯೋಮಿತಿಯನ್ನು 5 ವರ್ಷ ಸಡಿಲಿಸಲು ಅವಕಾಶವಿದೆ. ಒಬಿಸಿ ಅಭ್ಯರ್ಥಿಗಳಿಗೆ ಈ ಹಂತದಲ್ಲಿ ವಯೋಮಿತಿಯನ್ನು ಮೂರು ವರ್ಷಗಳವರೆಗೆ ಸಡಿಲಿಸಬಹುದಾಗಿದೆ. ಆದರೆ ಈ ನಿಯಮ ಮತ್ತು ವಿನಾಯತಿಗಳನ್ನು ಅನ್ವಯ ಮಾಡದೇ, ಮೀಸಲಾತಿಯೇತರ ವರ್ಗದಿಂದಲೇ ಈ ಹುದ್ದೆಗಳಿಗೆ ಅಧಿಕಾರಿಗಳನ್ನು ನೇಮಕ ಮಾಡಲಾಗುತ್ತಿದೆ. ತಳ ಸಮುದಾಯಗಳಿಗೆ ದೊರೆಯಬೇಕಾಗಿದ್ದ ಹುದ್ದೆಗಳು ಇತರ ಪ್ರಬಲ ಸಮುದಾಯಗಳ ಪಾಲಾಗುತ್ತಿವೆ.

ಒಬಿಸಿಗೆ ಪೂರ್ಣ ಪ್ರಾತಿನಿಧ್ಯವಿಲ್ಲ: ಕೇಂದ್ರ ಸರ್ಕಾರದ ಹುದ್ದೆಗಳಲ್ಲಿ ಒಬಿಸಿ ಸಮುದಾಯಗಳಿಗೆ ಶೇ 27ರಷ್ಟು ಹುದ್ದೆಗಳನ್ನು ಮೀಸಲಿರಿಸುವುದು ಸರಿಯಷ್ಟೆ. ಆದರೆ ಕೇಂದ್ರದ 78 ಸಚಿವಾಲಯಗಳಲ್ಲಿ ಯಾವೊಂದರಲ್ಲೂ ಈ ಸಮುದಾಯಗಳ ಪ್ರಾತಿನಿಧ್ಯ ನಿಗದಿಯಷ್ಟು ಇಲ್ಲ.

ಕೇಂದ್ರ ಸರ್ಕಾರದ ಎಲ್ಲ ಸಚಿವಾಲಯಗಳು/ಇಲಾಖೆಗಳ ಎಲ್ಲ ದರ್ಜೆಯ ಹುದ್ದೆಗಳಲ್ಲಿ ಒಬಿಸಿ ಸಮುದಾಯದ ಉದ್ಯೋಗಿಗಳ ಒಟ್ಟು ಪ್ರಮಾಣ ಶೇ 21.57ರಷ್ಟು ಮಾತ್ರ ಇದೆ. ಈವರೆಗೂ ನಿಗದಿಯಷ್ಟು ಹುದ್ದೆಗಳಿಗೆ ಈ ಸಮುದಾಯದ ಅಭ್ಯರ್ಥಿಗಳನ್ನು ನೇಮಕ ಮಾಡಲು ಸಾಧ್ಯವಾಗಿಯೇ ಇಲ್ಲ.

‘ಜಂಗಲ್ ಮಂಗಲ್’ನಲ್ಲಿ ಯಶ್ ಶೆಟ್ಟಿ

ಹರ್ಷಿತಾ ರಾಮಚಂದ್ರ, ಯಶ್ ಶೆಟ್ಟಿ

ನಿರ್ದೇಶಕ ಸಿಂಪಲ್ ಸುನಿ ಕುವೆಂಪು ಅವರ ಕೃತಿಯೊಂದನ್ನು ಸಿನಿಮಾವಾಗಿಸುವುದಾಗಿ ಘೋಷಿಸಿದ್ದರು. ಚಿತ್ರದ ಚಿತ್ರೀಕರಣ ಪೂರ್ಣಗೊಂಡಿದ್ದು, ಚಿತ್ರಕ್ಕೆ ‘ಜಂಗಲ್ ಮಂಗಲ್’ ಎಂದು ಹೆಸರಿಡಲಾಗಿದೆ. ಯಶ್ ಶೆಟ್ಟಿ ಚಿತ್ರದ ನಾಯಕ.

‘ಇದು ಅರೆ ಮಲೆನಾಡಿನ ಕಾಡಿನಲ್ಲಿ ನಡೆಯುವ ಕಥೆ. ಅರೆ ಮಲೆನಾಡು ಎಂದರೆ ಘಟ್ಟದ ಮೇಲ್ಭಾಗ ಹಾಗೂ ಘಟ್ಟದ ಕೆಳಭಾಗ ಸಂಧಿಸುವ ಊರು. ಅಲ್ಲಿ ವಿವಿಧ ಸಂಸ್ಕೃತಿಯ ಜನರು ಇರುತ್ತಾರೆ. ಅಲ್ಲೊಂದು ದಟ್ಟವಾದ ಕಾಡು. ಆ ಕಾಡಿನಲ್ಲಿ ನಡೆಯುವ ಪ್ರೇಮಕಥೆಯೂ ಈ ಚಿತ್ರದಲ್ಲಿದೆ. ಚಿತ್ರದ ಅರ್ಧಕ್ಕೂ ಹೆಚ್ಚಿನ ಭಾಗದ ಚಿತ್ರೀಕರಣ ಸುಬ್ರಹ್ಮಣ್ಯದ ಬಳಿಯ ಕಾಡಿನಲ್ಲೇ ನಡೆದಿದೆ. ಇನ್ನೊಂದು ತಿಂಗಳಲ್ಲಿ ಚಿತ್ರ ತೆರೆಗೆ ಬರಲು ಸಿದ್ಧವಾಗುತ್ತದೆ’ ಎಂದರು ನಿರ್ದೇಶಕ ಸುನಿ.

ಯಶ್ ಶೆಟ್ಟಿಗೆ ಜೋಡಿಯಾಗಿ ಹರ್ಷಿತಾ ರಾಮಚಂದ್ರ ಕಾಣಿಸಿಕೊಂಡಿದ್ದಾರೆ. ಉಗ್ರಂ ಮಂಜು, ಬಲ ರಾಜವಾಡಿ ಮುಂತಾದವರು ಪ್ರಮುಖ ಪಾತ್ರದಲ್ಲಿದ್ದಾರೆ. ಸಹ್ಯಾದ್ರಿ ಸ್ಟುಡಿಯೋಸ್ ಸಂಸ್ಥೆ ಮೂಲಕ ಈ ಚಿತ್ರ ನಿರ್ಮಾಣವಾಗಿದೆ. ಪ್ರಸಾದ್ ಶೆಟ್ಟಿ, ಪೂರ್ಣಚಂದ್ರ ತೇಜಸ್ವಿ ಸಂಗೀತ, ವಿಷ್ಣುಪ್ರಸಾದ್ ಛಾಯಾಚಿತ್ರಗ್ರಹಣ, ಮಂಜು ಶೇಡ್ಗಾರ್ ಸಂಕಲನವಿದೆ.

ಅ.17ಕ್ಕೆ ಸಿಂಹರೂಪಿಣಿ ತೆರೆಗೆ

ಮಾರಮ್ಮ ದೇವಿ ಕುರಿತಾದ ಕಥೆ ಹೊಂದಿರುವ ಭಕ್ತಿ ಪ್ರಧಾನ ‘ಸಿಂಹರೂಪಿಣಿ’ ಚಿತ್ರದ ಹಾಡು ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಅಕ್ಟೋಬರ್ 17ರಂದು ಚಿತ್ರವು ತೆರೆಗೆ ಬರಲಿದೆ. ಕೆ.ಎಂ.ನಂಜುಂಡೇಶ್ವರ ಕಥೆ ಬರೆದು, ಶ್ರೀಚಕ್ರ ಫಿಲ್ಮ್ಸ್ ಲಾಂಛನದಲ್ಲಿ ನಿರ್ಮಿಸಿರುವ ಚಿತ್ರಕ್ಕೆ ಕಿನ್ನಾಳ್ ರಾಜ್ ಆ್ಯಕ್ಷನ್ ಕಟ್ ಹೇಳಿದ್ದಾರೆ.

‘ದೇವಿ ಇದ್ದಾಳಾ, ಆಕೆಯ ಶಕ್ತಿ ಏನು ಎಂಬಿತ್ಯಾದಿ ಪ್ರಶ್ನೆಗಳಿಗೆ ನನ್ನ ಪಾತ್ರವು ಉತ್ತರ ನೀಡಲಿದೆ. ಅಂದು ‘ಅನ್ನಮಯ್ಯ’ ತೆಲುಗು ಚಿತ್ರ ಹಿಟ್ ಆಗಿತ್ತು. ಅದೇ ರೀತಿ ‘ಸಿಂಹರೂಪಿಣಿ’ ಕೂಡ ದೊಡ್ಡ ಯಶಸ್ಸು ಕಾಣಲಿ’ ಎಂದರು ಹಿರಿಯ ನಟ ಸುಮನ್.

‘ಏನೇ ಕಷ್ಟ ಎದುರಾದರೂ ಗ್ರಾಮೀಣ ಭಾಗದಲ್ಲಿ ಅವರು ನಂಬಿರುವಂತಹ ದೇವರ ಮೊರೆ ಹೋಗುತ್ತಾರೆ. ಜಾತ್ರೆ, ಉತ್ಸವಗಳಲ್ಲಿ ಇನ್ನೂ ನಂಬಿಕೆ ಇದೆ ಎನ್ನುವಂಥ ಸಣ್ಣ ಸಣ್ಣ ವಿಷಯಗಳನ್ನು ಹೆಕ್ಕಿ ಪಾತ್ರಗಳ ಮೂಲಕ ತೋರಿಸಲಾಗಿದೆ. ಪ್ರತಿಯೊಂದು ದೇವರಿಗೂ ಹಿನ್ನೆಲೆ ಇರುತ್ತದೆ. ಹಾಗೆಯೇ ದೇವಿಯು ಮಹಾಲಕ್ಷ್ಮಿ ರೂಪದಲ್ಲಿ ಭೂಮಿಗೆ ಬರುತ್ತಾಳೆ. ಮುಂದೆ ಏಕೆ ಮಾರಮ್ಮ ಆಗುತ್ತಾಳೆ ಎಂಬುದಕ್ಕೆ ಚಿತ್ರದಲ್ಲಿ ಉತ್ತರ ನೀಡಲಾಗಿದೆ’ ಎಂದರು ನಿರ್ದೇಶಕರು.

ಯಶ್ ಶೆಟ್ಟಿ, ಯಶಸ್ವಿನಿ, ಅಂಕಿತಾ ಗೌಡ, ದಿವ್ಯಾ ಆಲೂರು, ನೀನಾಸಂ ಅಶ್ವಥ್, ಹರೀಶ್ ರಾಯ್, ವಿಜಯ್ ಚೆಂಡೂರು ಮುಂತಾದವರು ಚಿತ್ರದಲ್ಲಿದ್ದಾರೆ.

ಆಕಾಶ್‌ಪರ್ವ ಸಂಗೀತ, ಕಿರಣ್ ಛಾಯಾಚಿತ್ರಗ್ರಹಣ ಚಿತ್ರಕ್ಕಿದೆ.

ಯಶಸ್ವಿನಿ

ಪಿವಿ ಫ್ಯಾಕ್ಟ್ ಚೆಕ್

ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರು ಕಟ್ಟಡವೊಂದರ ಕಾರಿಡಾರ್‌ನಲ್ಲಿ ಓಡುತ್ತಿರುವ ವಿಡಿಯೊ ತುಣುಕೊಂದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಪ್ಯಾಲೆಸ್ಟೀನ್‌ನಲ್ಲಿ ಹಮಾಸ್ ಮತ್ತು ಲೆಬನಾನ್‌ನಲ್ಲಿ ಹಿಜ್ಬುಲ್ಲಾ ವಿರುದ್ಧ ಇಸ್ರೇಲ್ ನಡೆಸುತ್ತಿರುವ ದಾಳಿಯನ್ನು ಖಂಡಿಸುತ್ತಿರುವ ಹಲವು ಸಾಮಾಜಿಕ ಜಾಲತಾಣ ಬಳಕೆದಾರರು, ಹಿಜ್ಬುಲ್ಲಾದ ಮುಖ್ಯಸ್ಥ ನಸರುಲ್ಲಾ ಹಸನ್‌ನನ್ನು ಹತ್ಯೆ ಮಾಡಿದ್ದಕ್ಕೆ ಪ್ರತೀಕಾರವಾಗಿ ಇರಾನ್ ಸೇನೆಯು ಇಸ್ರೇಲ್ ಮೇಲೆ ಕ್ಷಿಪಣಿ ದಾಳಿ ನಡೆಸಿದ ಸಂದರ್ಭಕ್ಕೆ ಈ ವಿಡಿಯೊವನ್ನು ತಳಕುಹಾಕುತ್ತಿದ್ದಾರೆ. ಈ ವಿಡಿಯೊ ತುಣುಕನ್ನು ‘ಎಕ್ಸ್’ ಸೇರಿದಂತೆ ಸಾಮಾಜಿಕ ಜಾಲತಾಣಗಳಲ್ಲಿ ಪೋಸ್ಟ್ ಮಾಡಿರುವ ಬಳಕೆದಾರರು, ‘ಇರಾನ್ ದಾಳಿಗೆ ಬೆದರಿದ ನೆತನ್ಯಾಹು ಜೀವರಕ್ಷಣೆಗಾಗಿ ಬಂಕರ್ ಕಡೆ ಓಡುತ್ತಿದ್ದಾರೆ’ ಎಂದು ಹೇಳುತ್ತಿದ್ದಾರೆ. ಆದರೆ, ಇದು ಸುಳ್ಳು.

ವಿಡಿಯೊವನ್ನು ಹಲವು ಕೀಫ್ರೇಮ್‌ಗಳಲ್ಲಿ ವಿಭಜಿಸಿ, ಗೂಗಲ್ ಲೆನ್ಸ್ ಮೂಲಕ ರಿವರ್ಸ್ ಇಮೇಜ್ ಹುಡುಕಾಟ ನಡೆಸಿದಾಗ, ಇಸ್ರೇಲ್‌ನ ನೌ 14 ಎಂಬ ಮಾಧ್ಯಮದಲ್ಲಿ 2021ರ ಡಿ.14ರಂದು ಪ್ರಕಟವಾದ ವರದಿ ಸಿಕ್ಕಿತು. ಆ ವರದಿಯೊಂದಿಗೆ ಈ ವಿಡಿಯೊ ತುಣುಕಿನ ಸ್ಕ್ರೀನ್‌ಶಾಟ್ ಕೂಡ ಇತ್ತು. ಹೀಬ್ರೂ ಭಾಷೆಯಲ್ಲಿದ್ದ ಈ ವರದಿಯ ಜೊತೆಗೆ ಬೆಂಜಮಿನ್ ನೆತನ್ಯಾಹು ಅವರು ‘ಎಕ್ಸ್’ ಖಾತೆಯಲ್ಲಿ ಮಾಡಿದ್ದ ಪೋಸ್ಟ್ ಇತ್ತು. ಆ ಪೋಸ್ಟ್‌ನಲ್ಲಿ ಅವರು ಇದೇ ವಿಡಿಯೊವನ್ನು ಪ್ರಕಟಿಸಿದ್ದರು. ಇಸ್ರೇಲ್ ಸಂಸತ್ತಿನ ಕಾರಿಡಾರಿನಲ್ಲಿ ಅವರು ಓಡುತ್ತಿರುವಾಗ ಈ ವಿಡಿಯೊ ಮಾಡಲಾಗಿದೆ. ಆಗ ಅವರು ಪ್ರಧಾನಿಯಾಗಿರಲಿಲ್ಲ. ವಿರೋಧ ಪಕ್ಷದ ನಾಯಕರಾಗಿದ್ದರು. ಸಂಸತ್ತಿನಲ್ಲಿ ಮಸೂದೆಯೊಂದನ್ನು ಮಂಡಿಸಿದಾಗ ಅದಕ್ಕೆ ಸಂಬಂಧಿಸಿದಂತೆ ಮತದಾನದಲ್ಲಿ ಭಾಗವಹಿಸುವುದಕ್ಕೆ ಅವರು ಓಡಿದ್ದರು. ನೆತನ್ಯಾಹು ಅವರು 2021ರ ಡಿಸೆಂಬರ್ 14ರಂದೇ ಈ ಟ್ವೀಟ್ ಮಾಡಿದ್ದರು ಎಂದು ಬೂಮ್‌ಲೈವ್ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

ಗುಂಡಣ್ಣ



ನಾವು ಗುಣ್ಯಾಗಿನ ಹೆಣ ಅಲ್ಲ!

ನುಡಿ ಬೆಳಗು 38

ಅಭಿನವ ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ

ಸಂಸಾರ ಅಂದ ಮೇಲೆ ಕಷ್ಟಗಳು ಬರ್ತಿರ್ತಾವ. ಅರಿತುಕೊಂಡು ಬದುಕಬೇಕು ಮನುಷ್ಯ. ಕಷ್ಟಗಳೇ ಇಲ್ಲದಿದ್ದರೆ ಜೀವನಕ್ಕೆ ಏನೂ ಮಜಾ ಇಲ್ಲ. ನಮ್ಮ ಬಯಕೆ ಏನು? ಅರಾಂ ಇರಬೇಕು. ಅರಾಂ ಅಂದರ ಕುರ್ಚಿಯಲ್ಲಿ ಕುಳಿತುಕೊಂಡು ಈ ಕಡೆನೂ ಹೊಳ್ಳಾಂಗಿಲ್ಲ, ಆ ಕಡೆನೂ ಹೊಳ್ಳಾಂಗಿಲ್ಲ, ಮಿರ್ಚಿ ಮಂಡಾಳು ತಿನಕೋತ ಇರಬೇಕು. ಹಾಂಗಂದ್ರ ಗುಣ್ಯಾಗಿನ ಹೆಣನೂ ಹಾಂಗೇ ಇರತೈತಿ. ಈ ಕಡೆನೂ ಹೊಳ್ಳಾಂಗಿಲ್ಲ, ಆ ಕಡೆನೂ ಹೊಳ್ಳಾಂಗಿಲ್ಲ. ಅಂದರ ಯಾರ ಜೀವನದಲ್ಲಿ ಕಷ್ಟ ಇಲ್ಲ ಅವರು ಗುಣ್ಯಾಗಿನ ಹೆಣ ಇದ್ದಂಗ. ಯಾರ ಜೀವನದಲ್ಲಿ ಕಷ್ಟಗಳು ಅದಾವ ಅವರು ಜೀವಂತ ಇದ್ದಾಂಗ.

ಅಕ್ಕಮಹಾದೇವಿ ಅಂತಾಳೆ ‘ದೇವನೇ ನನಗೆ ಅರಾಂ ಇಡಬ್ಯಾಡೋ, ಕಷ್ಟಕೊಡು, ನನಗೆ ಹ್ಯಾಂಗ ಮಾಡು ಅಂದ್ರ ಮನೆ ಮನೆ ಅಡ್ಡಾಡಿ ಭಿಕ್ಷೆ ಬೇಡುವಂಗೆ ಮಾಡು, ಭಿಕ್ಷಾ ಬೇಡಾಕ ಹೋದಾಗ ಮನೆಯವರು ನೀಡದಂಗೆ ಮಾಡು ದೇವರೆ, ಅಕಸ್ಮಾತ್ ನೀಡಿದರೂ ನನ್ನ ತಟ್ಟೆಯೊಳಗೆ ಬೀಳದಂಗೆ ಮಾಡು, ಕೆಳಗೆ ಬಿದ್ದಿದ್ದನ್ನು ನಾನು ಎತ್ತಿಕೊಳ್ಳುವುದಕ್ಕೆ ಮೊದಲು ನಾಯಿ ತಗಂಡು ಹೋಗುವಂತೆ ಮಾಡು’ ಅಂತ. ಬದುಕಿನಲ್ಲಿ ಸವಾಲು ಇರಬೇಕು. ರಿಸ್ಕ್ ಇಲ್ಲ ಅಂದ್ರ ಥ್ರಿಲ್ ಇಲ್ಲ. ಕಷ್ಟ ಕಷ್ಟ ಅಂತಾರಲ್ಲ, ಕಷ್ಟದೊಳಗ ಎಷ್ಟು ರೀತಿ ಅದಾವ? ಬದುಕಿನಲ್ಲಿ ಬರೋದು ಮೂರೇ ಕಷ್ಟಗಳು. ಒಂದು, ಶರೀರದಿಂದ ಕಷ್ಟ ಬರತೈತಿ. ಇನ್ನೊಂದು ಮನಸ್ಸಿನಿಂದ ಕಷ್ಟ ಬರತೈತಿ. ಮತ್ತೊಂದು ದೈವದಿಂದ ಕಷ್ಟ ಬರತೈತಿ. ಕಷ್ಟ ಎಷ್ಟೇ ಇದ್ದರೂ ಈ ಮೂರರೊಳಗೇ ಮುಕ್ತಾಯ ಆಗ್ತವ.

ಶರೀರಕ್ಕೆ ಅನ್ನ ಬೇಕಾತು, ಅನ್ನ ಸಿಗೋದಿಲ್ಲ, ನೆರಳು ಬೇಕಾತು ನೆರಳು ಸಿಗೋದಿಲ್ಲ, ದುಡ್ಡು ಬೇಕಾತು, ದುಡ್ಡು ಸಿಗೋದಿಲ್ಲ, ಶರೀರಕ್ಕೆ ರೋಗ ಬಂತು. ಇವೆಲ್ಲ ಶರೀರದ ಕಷ್ಟಗಳು. ಯಾರೋ ಏನೋ ಅಂದ್ರು ಅಂತ ಮನಸ್ಸಿಗೆ ತಾಪ ಆಗ್ತದ. ಹೊಸಾ ಮನೆ ಕಟ್ಟಿಸಿರ್ತೀರಿ. ಎಲ್ಲರನ್ನೂ ಊಟಕ್ಕೆ ಕರೀತೀರಿ. ಯಾಕೆ ಕರೀತೀರಿ? ಬಂದೋರೆಲ್ಲಾ ‘ಮಸ್ತ ಮನೆ ಕಟ್ಟಿಸಿದ್ದೀರಿ’ ಅಂತಾ ಹೇಳಲಿ ಅಂತ ಕರೀತೀರಿ. ‘ಮನೆ ಹ್ಯಾಂಗೈತಿ’ ಎಂದು ನೀವು ಕೇಳಿದರೆ ‘ಮೊನ್ನೆ ಅಲ್ಲೊಂದು ಮನೆಗೆ ಹೋಗಿದ್ದೆ, ಅದು ಮಸ್ತ್ ಇತ್ತು’ ಎಂದು ಅವರು ಹೇಳಿದರೆ ನಿಮ್ಮ ತಲೆಗೆ ಹ್ಯಾಂಗಾಗಬೇಡ. ನಿಮಗಿಂತ ಅವರು ಚೆಂದ ಅದಾರ ನೋಡು ಅಂದರೂ ತಲೆಗೆ ತಾಪ. ನಾವು ಮಿಸ್ ಯುನಿವರ್ಸ್ ಅಂದಕೊಂಡೇವಿ. ಈ ಯುನಿವರ್ಸ್‌ನೊಳಗ, ಇವತ್ತು ಒಬ್ಬರು ಮಿಸ್ ಯುನಿವರ್ಸ್ ಇದ್ದರ ಮುಂದಿನ ವರ್ಷ ಮತ್ತೊಬ್ಬರು ಬರ್ತಾರ. ಕಾಯಂ ಮಿಸ್ ಯುನಿವರ್ಸ್ ಯಾರೂ ಇಲ್ಲ. ಯುನಿವರ್ಸ್ ಯುನಿವರ್ಸಲ್ ಅಲ್ಲ ಅಂತ ತಿಳಕೊಬೇಕು. ಇದು ಮನಸ್ಸಿಗೆ ಬರೋ ಕಷ್ಟ.

ಬಾತ್ ರೂಂ ನಲ್ಲಿ ಜಾರಿ ಬೀಳ್ತೀರಿ. ಯಾರೂ ನೂಕಿಲ್ಲ, ಆದರೂ ಬೀಳ್ತೀರಿ. ಕುಡಿಯಂಗಿಲ್ಲ, ತಿನ್ನಂಗಿಲ್ಲ, ಒಂದು ಅಡಿಕೆ ಹೋಳೂ ಹಾಕಂಗಿಲ್ಲ, ಆದರೂ ಹೃದಯಾಘಾತ ಆಗ್ತದ. ಕೆಲವರಿಗೆ ಮಕ್ಕಳಾಗೋದಿಲ್ಲ. ಎಲ್ಲಾ ರೀತಿಯ ಚಿಕಿತ್ಸೆ ಮಾಡಿಸ್ತಾರ. ಆದರೂ ಮಕ್ಕಳು ಆಗೋದಿಲ್ಲ. ಇದಕ್ಕೆ ದೈವ ಅಂತಾರ. ದೈವದಿಂದಲೂ ಕಷ್ಟ ಬರ್ತದ. ಆದರೆ ಒಂದು ತಿಳಕೋಬೇಕು ಕಷ್ಟ ಬರ್ತದ ಮತ್ತ ಹೋಗ್ತದ. ಕಷ್ಟ ಇಲ್ಲದ ಜೀವನ ಇಲ್ಲ. ❖

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

ಸೋಮವಾರ ಅಕ್ಟೋಬರ್ 7, 2024

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಆಶ್ವಿನ ಶುಕ್ಲ ಪಂಚಮಿ ಅಹೋರಾತ್ರ ನಕ್ಷತ್ರ: ಅನುರಾಧ ಗಂ. 26-25 ಯೋಗ: ಪ್ರೀತಿ ಗಂ. 6-40 ಕರಣ: ವಿಷ್ಟಿ ಗಂ. 9-48, ಕನ್ಯಾ ಮಾಸದ 20 ನೇ ದಿನ, ಮಳೆನಕ್ಷತ್ರ: ಹಸ್ತ 4.

ರಾಹುಕಾಲ: ಬೆಳಿಗ್ಗೆ 07-30 – 09-00

ಸೂರ್ಯೋದಯ: 06-24 ಸೂರ್ಯಾಸ್ತ : 06-13, ಮುಸ್ಲಿಂ ದಿನಾಂಕ : 03 ರಬಿಯುಸ್ಸಾನಿ

ದಿನ ವಿಶೇಷ: ನವರಾತ್ರಿಯ ಐದನೇ ದಿನ, ಉಪಾಂಗ ಲಲಿತಾ ವ್ರತ (ಲಲಿತಾ ಪಂಚಮಿ)

ಅದೃಷ್ಟ ಸಂಖ್ಯೆ: 8, 9

ಮೇಷ: ಪ್ರಭಾವಿ ವ್ಯಕ್ತಿಯ ಸಹಾಯದಿಂದ ಆಧ್ಯಾತ್ಮಿಕ ಕಾರ್ಯಕ್ರಮಗಳನ್ನು ಉತ್ತಮವಾಗಿ ನೆರವೇರಿಸಿಕೊಳ್ಳುವಿರಿ. ಹಣಕಾಸು ನಿರ್ವಹಣೆಯಲ್ಲಿರುವ ಕುಶಲ ಮತಿಯು ಸಹಾಯಕ್ಕೆ ಬರಲಿದೆ. ಆರೋಗ್ಯ ಸುಸ್ಥಿತಿಯಲ್ಲಿರುವುದು.

ವೃಷಭ: ಅನಾಯಾಸದಿಂದ ಧನಾದಾಯವಿದ್ದರೂ ನಾನಾ ರೀತಿಯ ಅನವಶ್ಯಕ ಖರ್ಚು-ವೆಚ್ಚಗಳು ಆರ್ಥಿಕ ಬಿಕ್ಕಟ್ಟಿನ ಕಡೆಗೆ ಕೊಂಡೊಯ್ಯಲಿದೆ. ಸರಿಯಾಗಿ ಕಾರ್ಯ ಪ್ರವೃತ್ತರಾದಲ್ಲಿ ಹೆಚ್ಚಿನ ಅಭಿವೃದ್ಧಿ ಅನುಭವಕ್ಕೆ ಬರಲಿದೆ.

ಮಿಥುನ: ನಿಮ್ಮ ಪ್ರಿಯವಾದ ಮಾತು ಮತ್ತು ಸಕಾಲದ ಆರ್ಥಿಕ ನೆರವು ಸೋದರಿಯ ಸಂಸಾರ ನೆಲೆ ನಿಲ್ಲುವುದಕ್ಕೆ ಕಾರಣವಾಗಲಿದ್ದು, ನಿಮ್ಮ ಜವಾಬ್ದಾರಿ ಪೂರೈಸಿದ ತೃಪ್ತಿ ಈ ದಿನ ದೊರೆಯಲಿದೆ. ಹೊಸ ಗೆಳೆತನ ಬೆಳೆಸಿಕೊಳ್ಳುವಿರಿ.

ಕರ್ಕಾಟಕ: ಬಹಳ ದಿನಗಳಿಂದ ಕಾಯಿಲೆಯಲ್ಲಿ ಬಳಲುತ್ತಿರುವವರಿಗೆ ಔಷಧಿಯು ಪ್ರತಿಕ್ರಿಯಿಸಿ ಚೇತರಿಕೆಯ ಹಂತಕ್ಕೆ ಹೋಗುವಿರಿ. ಹೊಸ ಮನೆಯ ನಿರ್ಮಾಣದ ಕೆಲಸಗಳನ್ನು ಪೂರೈಸಿಕೊಳ್ಳುವ ಬಗ್ಗೆ ನಿಮ್ಮ ಹೆಚ್ಚಿನ ಗಮನವಿರಲಿ.

ಸಿಂಹ: ಮಗನ ಬೇಡಿಕೆಗಳನ್ನು ಪೂರೈಸುವ ನಿಮ್ಮ ಪ್ರಯತ್ನಕ್ಕೆ ಹಲವಾರು ಅಡ್ಡಿ ಆತಂಕಗಳು ಎದುರಾಗುವುದು. ರಿಯಲ್ ಎಸ್ಟೇಟ್ ವ್ಯವಹಾರಗಳ ಸಮಸ್ಯೆಯನ್ನು ನಿವಾರಿಸಿಕೊಂಡು, ವರಮಾನವನ್ನೂ ಹೆಚ್ಚಿಸಿಕೊಳ್ಳುವಿರಿ.

ಕನ್ಯಾ: ಮನಸ್ಸು ಧ್ಯಾನದತ್ತ ಹರಿಯಲು ಧಾರ್ಮಿಕ ವಿಚಾರಧಾರೆಯಂತಹ ಸಮಾರಂಭಗಳ ಆಲಿಕೆಯು ಕಾರಣವಾಗುವುದು. ನಿರುದ್ಯೋಗಿಗಳು ಒಂದು ಸ್ಥಿರವಾದ ಉದ್ಯೋಗವನ್ನು ಪಡೆಯುವ ಸಾಧ್ಯತೆ ಇರಲಿದೆ.

ತುಲಾ: ವಿದ್ಯಾರ್ಥಿಗಳಿಗೆ ಇತರೆ ಚಟುವಟಿಕೆಯ ಬಗ್ಗೆ ಹೆಚ್ಚಿನ ಒಲವು ಮೂಡಿಬಂದು ವಿದ್ಯಾಭ್ಯಾಸದಲ್ಲಿ ಹಿನ್ನಡೆಯಾಗುವುದು. ಪ್ರಭಾವಿ ವ್ಯಕ್ತಿಗಳಿಂದ ಸಿಕ್ಕ ಸಹಕಾರ ನಿಮಗೆ ಈ ಸಮಯದಲ್ಲಿ ಸಹಾಯಕ್ಕೆ ಬರಲಿದೆ.

ವೃಶ್ಚಿಕ: ದಿನಸಿ ವರ್ತಕರು ಆರ್ಥಿಕತೆಯಲ್ಲಿ ದುರ್ಬಲವಾಗಬಹುದು, ವಕೀಲಿ ವೃತ್ತಿಯನ್ನು ಅಭ್ಯಸಿಸುವವರಿಗೆ ಪಾಪ-ಪ್ರಜ್ಞೆಯು ಕಾಡಲಿದೆ. ಸರ್ಕಾರಿ ನೌಕರರಿಗೆ ಅಡ್ಡಿ-ಆತಂಕಗಳು ಕಾಡಬಹುದು.

ಧನು: ಇನ್ನಷ್ಟು ಪ್ರತಿಭೆ ಹೆಚ್ಚಿಸಿಕೊಳ್ಳುವ ಕಾಲ ಇದಾಗುವುದು. ಗೃಹ ತಾಪತ್ರಯಗಳಿಂದಲೂ ಮುಕ್ತರಾಗಿ ನಿಶ್ಚಿಂತೆ ತೋರಿ ಬರುತ್ತದೆ. ಬಂಧುಗಳ ನೆರವಿನಿಂದಾಗಿ ಹಳೆಯ ಬಾಕಿಯ ಹಣವು ನಿಮ್ಮ ಕೈ ಸೇರಲಿದೆ.

ಮಕರ: ನಿಮ್ಮ ಪ್ರಧಾನವಾದ ವೃತ್ತಿಗಿಂತ ಪ್ರವೃತ್ತಿಗೆ ಸಮಯ ಕೊಡುವಿಕೆ ಹೆಚ್ಚಲಿದೆ. ಸಮಸ್ಯೆ ಬಗೆಹರಿಸಲು ಜಾಣತನ ತೋರುವಿರಿ. ಕೆಲವರಿಗೆ ಹಿರಿಯರ ಮಾರ್ಗದರ್ಶನ ಬೇಕೆನಿಸಲಿದೆ. ಬಡಗಿಗಳಿಗೆ ಇಂದು ಸುಯೋಗದ ದಿನ.

ಕುಂಭ: ವ್ಯವಹಾರದಲ್ಲಿ ನೀವು ಮೋಸ ಮಾಡಿ ಹಣ ಮಾಡಬಹುದು. ಆದರೆ, ಅದರ ದುಷ್ಫಲವನ್ನು ಅನುಭವಿಸುತ್ತೀರಿ. ಈ ದಿನ ಮನಸ್ಸನ್ನು ಸ್ತಿಮಿತದಲ್ಲಿ ಇಟ್ಟುಕೊಳ್ಳಬೇಕಾದ ಅಗತ್ಯವಿದೆ. ಧಾರ್ಮಿಕ ನಾಯಕರಿಗೆ ಶುಭವಾಗುವುದು.

ಮೀನ: ನಿಮ್ಮ ಕೀರ್ತಿಯು ಎಲ್ಲ ಕಡೆಗೆ ಹರಡಲಿದೆ. ಇದೇ ವಿಷಯವಾಗಿ ದಂಪತಿಗಳಲ್ಲಿ ಭವಿಷ್ಯದ ಕುರಿತು ಗಂಭೀರವಾದ ಚರ್ಚೆ ನಡೆಯಲಿದೆ. ಧಾರ್ಮಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವಂತಹ ಮನಸ್ಸಾಗುವುದು.

ಪದಬಂಧ 5825

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1. ಪರಿವರ್ತನೆಯ ಯುಗ (4)
3.ಗೋವಿನ ಹತ್ತಿರವಿರುವ ಕೊಳಲು (4)
5.ಲಕ ಲಕ ಹೊಳೆಯುತ್ತಿರುವ ಕುಂಕುಮ (3)
7.ಪತ್ರ ಬರೆದಿರುವ ಸ್ನೇಹಿತ (2)
9.ಈತ ಕಾಡಿನ ರಕ್ಷಕ (5)
11.ಒಂದು ಸ್ಥಳದ ಬಗ್ಗೆ ಹೇಳುವ ಸಾಂಪ್ರದಾಯಿಕ ಕಥೆ (5)
13.ತರಾತುರಿಯಿಂದ ಖರೀದಿಸಿರುವ ನೀರಾವರಿ ಭೂಮಿ (2)
16.ನಾಯಕನ ಹತ್ತಿರವಿರುವ ಹಾಡುಗಾರ (3)
18.ತಾಳ್ಮೆಗೊಂದು ಪರ್ಯಾಯ ಪದ (4)
19.ಸರಿ ರಾತ್ರಿಯಲ್ಲಿ ಕಾಣಿಸುತ್ತಿರುವ ಸಮುದ್ರ (4)

ಮೇಲಿಂದ ಕೆಳಕ್ಕೆ

1.ಗಿಡಮರಗಳೇನೂ ಬೆಳೆಯದ ಬಂಜರು ಭೂಮಿ (4)
2.ಈಕೆ ಮನ್ಮಥನ ಪತ್ನಿ (2)
3.ಕಪಿಯನ್ನು ನೋಡುತ್ತಿರುವ ಗಿಳಿ (2)
4.ವಿಧ್ವಂಸವನ್ನು ತಡೆಗಟ್ಟುತ್ತಿರುವ ಪಂಡಿತ (3)
6.ಶುನಕ ಮೂಸುತ್ತಿರುವ ಬೆಳ್ಳುಳ್ಳಿ! (3)
8.ಮಿತ್ರರ ನ್ಯಾಯ ತೀರ್ಮಾನ ಮಾಡುವವನು (3)
10.ತಡಿಕೆಯಲ್ಲಿ ಮಲಗಿದಾಗ ಉಂಟಾದ ನವೆ (3)
12.ಕರ್ಣನ ಇನ್ನೊಂದು ಹೆಸರು (3)
14.ರೀತಿ ನಿಯಮದಂತೆ ಸಿಕ್ಕಿರುವ ಸೋಡಿ (4)
15.ಪ್ರಸವದ ಸಮಯದಲ್ಲಿ ಆಗಿರುವ ಸುಸ್ತು (3)
16.ಗಾಂಪನ ಬಾಯಲ್ಲಿ ಹೇಳಿಸಿದ ಹಾಡು (2)
17.ಸರೀಕನ ಮನೆಯಲ್ಲಿರುವ ಗಲೀಜು (2)



5824ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:

3.ಪರ್ಜನ್ಯಜಪ 4.ವರ್ಣಸಂಕರ
5.ಆಸ್ಥಾನ 7.ಉಡುಗು
9.ಕಸಿವಿಸಿ 11.ಲಾಲಾರಸ
12.ರುಮಾಲು 14.ಸಂತತಿ
17.ವೇಣಿಸಂಹಾರ 18.ಅತಿಮಾನುಷ

ಮೇಲಿಂದ ಕೆಳಕ್ಕೆ:

1.ನವಣೆ 2.ಸುಸಂಧಿ
3.ಪರದಾಡು 6.ಸ್ಥಾವರ
7.ಉಸಿರು 8.ಗುಲಾಲು
10.ಸಿದ್ಧಾಂತ 13.ಮಾರುವೇಷ
15.ಪ್ರಸಂಗ 16.ಎರಕ

ಸುಡೊಕು 6210

5		6		7		3		8
			2		4			
7		1		5		4		9
	9		5				7	
1				4	7			3
	6				8		5	
9		5			6			1
				3			8	
6		8	4			9	3	5

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6209 ಸುಡೊಕು

8	5	3	1	6	2	4	9	7
6	1	9	7	5	4	3	2	8
7	4	2	8	9	3	1	6	5
4	6	7	5	3	9	2	8	1
1	2	8	6	4	7	9	5	3
3	9	5	2	1	8	7	4	6
5	7	4	3	2	6	8	1	9
9	3	1	4	8	5	6	7	2
2	8	6	9	7	1	5	3	4

ಭಾರಿ ಮಳೆಗೆ ನಗರದ ಹಲವು ಪ್ರದೇಶಗಳು ಜಲಾವೃತ • ಧರೆಗುರುಳಿದ ಮರಗಳು

ಅಪಾರ್ಟ್‌ಮೆಂಟ್, ಮನೆಗಳಿಗೆ ನುಗ್ಗಿದ ನೀರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶನಿವಾರ ರಾತ್ರಿ ಸುರಿದ ಭಾರಿ ಮಳೆಗೆ ನಗರದ ಹಲವು ಪ್ರದೇಶಗಳು ಅಸ್ತವ್ಯಸ್ತಗೊಂಡವು. ಅಪಾರ್ಟ್‌ಮೆಂಟ್‌ಗಳು, ಮನೆಗಳು ಜಲಾವೃತಗೊಂಡವು. ಕಾಂಪೌಂಡ್‌ಗಳು ಕುಸಿದು ಬಿದ್ದವು. ಮರಗಳು ಉರುಳಿ ವಾಹನ ಸಂಚಾರಕ್ಕೆ ತೊಡಕುಂಟಾಯಿತು. ಸಮರ್ಪಕ ಚರಂಡಿ ಇಲ್ಲದೇ ಹಲವು ಕಡೆಗಳಲ್ಲಿ ರಸ್ತೆಗಳೇ ಕಾಲುವೆಗಳಂತಾದವು.

ಪಶ್ಚಿಮ ವಲಯದಲ್ಲಿ ಬಿನ್ನಿಪೇಟೆ ಬಳಿ ಪಾರ್ಕ್‌ವ್ಯೂವ್ ಅಪಾರ್ಟ್‌ಮೆಂಟ್‌ನ 7 ಅಡಿ ಎತ್ತರದ ಕಾಂಪೌಂಡ್ ಸುಮಾರು 10 ಅಡಿ ಉದ್ದದಷ್ಟು ಕುಸಿದು ಬಿದ್ದಿದೆ. ಇದರಿಂದ ಹಲವು ವಾಹನಗಳಿಗೆ ಹಾನಿಯಾಗಿದೆ. ಪಾಲಿಕೆ ಸಿಬ್ಬಂದಿ ಮತ್ತು ಅಪಾರ್ಟ್‌ಮೆಂಟ್ ಸಿಬ್ಬಂದಿ ಸೇರಿ ಕಾಂಪೌಂಡ್‌ನ ಭಗ್ನಾವಶೇಷಗಳನ್ನು ಭಾನುವಾರ ತೆರವುಗೊಳಿಸಿದರು.

ಇಟಿಎ ಮಾಲ್ ಬಳಿ ಕಾಪೌಂಡ್ ಕುಸಿದಿದ್ದು, ಅವಶೇಷಗಳನ್ನು ತೆರವುಗೊಳಿಸಿ ನಿವಾಸಿಗಳಿಗೆ ಓಡಾಡಲು ಅವಕಾಶ ಮಾಡಿಕೊಡಲಾಯಿತು. ಮಲ್ಲೇಶ್ವರ 8ನೇ ಅಡ್ಡರಸ್ತೆ ಕುಸಿದು ವಾಹನ ಸಂಚಾರಕ್ಕೆ ತೊಂದರೆ ಉಂಟಾಯಿತು.

ಅಪಾರ್ಟ್‌ಮೆಂಟ್ ಜಲಾವೃತ: ಯಲಹಂಕ ವಲಯದ ಕೇಂದ್ರೀಯ ವಿಹಾರ ಅಪಾರ್ಟ್‌ಮೆಂಟ್‌ನ ಕಾಂಪೌಂಡ್ ಸುಮಾರು 50 ಅಡಿ ಉದ್ದದಷ್ಟು ಕುಸಿದು ಬಿದ್ದಿದ್ದರಿಂದ ಅಲ್ಲಿನ ವಾಹನ ಪಾರ್ಕಿಂಗ್ ಸ್ಥಳಕ್ಕೆ ನೀರು ನುಗ್ಗಿತು. ಇದರಿಂದ ಅಪಾರ್ಟ್‌ಮೆಂಟ್ ನಿವಾಸಿಗಳಿಗೆ ಹೊರಬರಲಾರದಂಥ ಜಲದಿಗ್ಬಂಧನ ಉಂಟಾಯಿತು. ನಾಲ್ಕು ಅಡಿಗಿಂತಲೂ ಹೆಚ್ಚು ಇದ್ದ ನೀರನ್ನು ಪಾಲಿಕೆಯ ಗ್ಯಾಂಗ್‌ಮನ್ ತಂಡ, ರಾಜ್ಯ ವಿಪತ್ತು ನಿರ್ವಹಣಾ ಪಡೆ (ಎಸ್‌ಡಿಆರ್‌ಎಫ್), ಅಗ್ನಿಶಾಮಕ ತಂಡಗಳ ಸದಸ್ಯರು ಪಂಪ್‌ಗಳ ಮೂಲಕ ಹೊರಹಾಕಿದರು.

ಅಪಾರ್ಟ್‌ಮೆಂಟ್ ಪಕ್ಕದಲ್ಲಿ ಕೂಲಿಕಾರ್ಮಿಕರು ವಾಸಿಸುತ್ತಿರುವ 10ಕ್ಕೂ ಹೆಚ್ಚು ಮನೆಗಳಿಗೂ ನೀರು ನುಗ್ಗಿದ್ದರಿಂದ ಮನೆಯಲ್ಲಿದ್ದ ವಸ್ತುಗಳೆಲ್ಲ ನೀರಲ್ಲಿ ಮುಳುಗಿದವು.

ಯಲಹಂಕ ಕೆರೆಗೆ ಸುತ್ತಲಿನ 10 ಕೆರೆಗಳಿಂದ ನೀರು ಬರುತ್ತದೆ. ಇಲ್ಲಿಂದ ಜಕ್ಕೂರು ಕೆರೆಗೆ ನೀರು ಹರಿಯುತ್ತದೆ. ಯಲಹಂಕ ಕೆರೆಯ ಮಟ್ಟದಿಂದ 25 ಅಡಿ ತಗ್ಗಿನಲ್ಲಿ ಅಪಾರ್ಟ್‌ಮೆಂಟ್ ಇದ್ದು, ಅದರ ಆವರಣ ಗೋಡೆ ಕುಸಿದಿರುವ ಕಾರಣ ನೀರು ನುಗ್ಗಿದೆ. ಗೋಡೆ ಕುಸಿದಿರುವ ಭಾಗದಲ್ಲಿ ಮರಳು ಚೀಲಗಳನ್ನು ಜೋಡಿಸಲಾಗುತ್ತಿದೆ. ಅಪಾರ್ಟ್‌ಮೆಂಟ್‌ನ ನಿವಾಸಿಗಳಿಗೆ ಉಪಾಹಾರ ಮತ್ತು ಕುಡಿಯುವ ನೀರು ಪೂರೈಕೆಗೆ ವ್ಯವಸ್ಥೆ ಮಾಡಲಾಗಿದೆ. ಬಿಬಿಎಂಪಿ ಯಲಹಂಕ ವಲಯದ ಹಿರಿಯ ಅಧಿಕಾರಿಗಳು, ಸಿಬ್ಬಂದಿ ಸ್ಥಳಕ್ಕೆ ಭೇಟಿ ನೀಡಿದರು.

ಬಿಬಿಎಂಪಿ ದಕ್ಷಿಣ ವಲಯದ ವ್ಯಾಪ್ತಿಯಲ್ಲಿನ ವಿಜಯನಗರದ ಮಧುವನದ ಬಳಿ ರಾಜಕಾಲುವೆಯ ಬಳಿಯಿದ್ದ ಒಳಚರಂಡಿ ಉಕ್ಕಿ ಹರಿದ ಕಾರಣ 10 ಮನೆಗಳಿಗೆ ನೀರು ನುಗ್ಗಿದೆ. ನಿವಾಸಿಗಳು ಮನೆಯಿಂದ ನೀರು ಹೊರಹಾಕಲು ಪರದಾಡಿದರು.

ವೃದ್ಧಾಶ್ರಮಕ್ಕೆ ನುಗ್ಗಿದ ನೀರು: ಬಸವೇಶ್ವರನಗರದಲ್ಲಿ ಇರುವ ವೃದ್ಧಾಶ್ರಮಕ್ಕೆ ನೀರು ನುಗ್ಗಿದ್ದರಿಂದ ಅಲ್ಲಿದ್ದ 15ಕ್ಕೂ ಅಧಿಕ ವೃದ್ಧರು ಪರದಾಡಿದರು. ಬಸವೇಶ್ವರ ನಗರದ 8ಬಿ ಮುಖ್ಯರಸ್ತೆ ಹೊಳೆಯಂತಾಯಿತು. ಪ್ಲೈವುಡ್ ಹಾಗೂ ಗ್ಲಾಸ್ ಅಂಗಡಿಗಳು ಜಲಾವೃತಗೊಂಡವು. ಪಾಲಿಕೆ ವ್ಯಾಪ್ತಿಯ 8 ವಲಯಗಳಲ್ಲಿ ಯಲಹಂಕ ವಲಯ, ಪಶ್ಚಿಮ ವಲಯ ಹಾಗೂ ದಕ್ಷಿಣ ವಲಯಗಳಲ್ಲಿ ತೀವ್ರ ಮಳೆಯಾಗಿದ್ದು, ಉಳಿದ ಐದು ವಲಯಗಳಲ್ಲಿ ಸಾಧಾರಣ ಮಳೆ ಸುರಿದಿದೆ.

5 ಸೆಂಟಿ ಮೀಟರ್‌ಗಿಂತ ಅಧಿಕ ಮಳೆ ಸುರಿದ ಪ್ರದೇಶಗಳು

ಪ್ರದೇಶ	ಮಳೆ ಪ್ರಮಾಣ (ಸೆಂ.ಮೀ.)
ಕೊಟ್ಟಿಗೆಪಾಳ್ಯ	11.3
ಗಾಳಿ ಆಂಜನೇಯ ದೇವಸ್ಥಾನ	10.8
ಹಂಪಿನಗರ	10.8
ನಾಗಪುರ	10.7
ಅಟ್ಟೂರು	7.9
ಕೆಂಪೇಗೌಡ ನಿಲ್ದಾಣ	7.9
ಚೌಡೇಶ್ವರಿ ನಗರ	7.9
ನಾಗರಬಾವಿ	7.5
ಮಾರುತಿ ಮಂದಿರ	7.5
ನಂದಿನಿ ಲೇಔಟ್	7.5
ಮಾರಪ್ಪನಪಾಳ್ಯ	7.1
ಎಚ್‌ಎಂಟಿ	7.1
ಅಗ್ರಹಾರ ದಾಸರಹಳ್ಳಿ	5.9
ರಾಜಾಜಿನಗರ	5.9
ವಿದ್ಯಾರಣ್ಯಪುರ	5.6

ಕೇಂದ್ರೀಯ ವಿಹಾರ ಅಪಾರ್ಟ್‌ಮೆಂಟ್‌ನ ಕಾಂಪೌಂಡ್ ಕುಸಿದು ಜಲದಿಗ್ಬಂಧನಕ್ಕೆ ಒಳಗಾದ ಜನರನ್ನು ರಕ್ಷಿಸಲಾಯಿತು – ಪ್ರಜಾವಾಣಿ ಚಿತ್ರ: ಎಸ್‌.ಕೆ. ದಿನೇಶ್

ಬಿನ್ನಿಪೇಟೆಯಲ್ಲಿ ಪಾರ್ಕ್ ವ್ಯೂವ್ ಅಪಾರ್ಟ್‌ಮೆಂಟ್‌ನ ಕಾಂಪೌಂಡ್ ಕುಸಿದಿರುವುದು – ಪ್ರಜಾವಾಣಿ ಚಿತ್ರ: ಪುಷ್ಕರ್ ವಿ.

ಮುರಿದು ಬಿದ್ದ 15 ಮರ, 44 ಕೊಂಬೆ

ಎಚ್.ಎಸ್.ಆರ್. ಲೇಔಟ್, ಚೋಳೂರು ಪಾಳ್ಯ, ಮಲ್ಲೇಶ್ವರ 8ನೇ ಮುಖ್ಯರಸ್ತೆ, ಜಯನಗರ, ಜೀವನ್‌ಬಿಮಾ ನಗರ, ಜಾಲಹಳ್ಳಿಯ ಬಿಡಬ್ಲ್ಯುಎಸ್‌ಎಸ್‌ಬಿ ಪೈಪ್‌ಲೈನ್ ರಸ್ತೆ ಸಹಿತ 49 ಪ್ರದೇಶಗಳಲ್ಲಿ ಮರ ಮತ್ತು ಕೊಂಬೆಗಳು ಧರೆಗೆ ಉರುಳಿವೆ.

15 ಮರಗಳು ಹಾಗೂ 44 ಮರದ ರೆಂಬೆ-ಕೊಂಬೆಗಳು ಬಿದ್ದಿರುವುದು ಪಾಲಿಕೆಯ ಲೆಕ್ಕಕ್ಕೆ ಸಿಕ್ಕಿದೆ. ಪಾಲಿಕೆಯ ನಿಯಂತ್ರಣ ಕೊಠಡಿ ತಂಡಗಳು ಹಾಗೂ ಮರ ತೆರವು ತಂಡಗಳು ಮರ, ರೆಂಬೆಗಳನ್ನು ತೆರವುಗೊಳಿಸಿದವು.

ಕಾಲುವೆಯಂತಾದ ರಸ್ತೆಗಳು

ಕೆ.ಆರ್ ಮಾರುಕಟ್ಟೆಯಲ್ಲಿ ನೀರು ನುಗ್ಗಿ ರಸ್ತೆಯಲ್ಲಿ ಸಂಚರಿಸುವುದೇ ಕಷ್ಟವಾಯಿತು. ಖೋಡೆ ಜಂಕ್ಷನ್ ಅಂಡರ್‌ಪಾಸ್‌ನಲ್ಲಿ ನೀರು ನಿಂತಿದ್ದರಿಂದ ಮೆಜೆಸ್ಟಿಕ್ ಮತ್ತು ರಾಜಾಜಿನಗರದ ಕಡೆಗೆ ಹೋಗುವ ವಾಹನಗಳಿಗೆ ತೊಡಕಾಯಿತು.

ಸ್ಯಾಂಕಿ ರಸ್ತೆ ಬಳಿ ಮಳೆ ನೀರು ನಿಂತದ್ದರಿಂದ ಮಲ್ಲೇಶ್ವರ 18ನೇ ಅಡ್ಡರಸ್ತೆ ಕಡೆಗೆ ಹೋಗುವ ವಾಹನಗಳ ಸವಾರರು ಪರದಾಡಿದರು.

ಬಿಡಿಎ ಜಂಕ್ಷನ್ ಬಳಿ ಮಳೆ ನೀರು ನಿಂತ ಕಾರಣ ಬಳ್ಳಾರಿ ರಸ್ತೆ ಕಡೆಗೆ ಹೋಗಲು ತೊಂದರೆಯಾಯಿತು. ಎಎಸ್‌ಆರ್ ಸ್ಟ್ರೀಟ್ ಬಳಿ, ಸಂಪಿಗೆ ರಸ್ತೆ, ಅರೆಕೆರೆ, ಅಂಚಪ್ಪ ಗಾರ್ಡನ್, ಹೆಬ್ಬಾಳ ಪಿಎಸ್ ಬಳಿ, ವಿಶ್ವವಿದ್ಯಾಲಯದ ಜ್ಞಾನಭಾರತಿ ಗೇಟ್ ಬಳಿ, ಪಣತ್ತೂರು, ಹುಣಸೆಮಾರೇನಹಳ್ಳಿ ಬಳಿ ನೀರು ನಿಂತಿದ್ದರಿಂದ ವಾಹನ ಸವಾರರು ಪರದಾಡಿದರು.

ಮಲ್ಲೇಶ್ವರ, ಶಾಂತಿನಗರ, ರಾಜಾಜಿನಗರ, ವೈಟ್‌ಫೀಲ್ಡ್, ಮೆಜೆಸ್ಟಿಕ್ ಸಹಿತ ಅನೇಕ ಪ್ರದೇಶಗಳಲ್ಲಿ ರಸ್ತೆಯಲ್ಲೇ ನೀರು ಹರಿಯಿತು.

ಸುದ್ದಿ 2 ನಿಮಿಷ

ಮೈಕ್ರೋಸಾಫ್ಟ್‌ಗೆ ಪೊಲೀಸರ ಪತ್ರ

ಬೆಂಗಳೂರು: ನಗರದ ದಕ್ಷಿಣ ವಿಭಾಗದ ಮೂರು ಕಾಲೇಜುಗಳಿಗೆ ಏಕಕಾಲಕ್ಕೆ ಇ ಮೇಲ್ ಮೂಲಕ ಬಾಂಬ್ ಬೆದರಿಕೆ ಸಂದೇಶ ಕಳುಹಿಸಿದ್ದ ಪ್ರಕರಣದ ತನಿಖೆ ಚುರುಕುಗೊಳಿಸಿರುವ ಪೊಲೀಸರು, ನಕಲಿ ವಿಪಿಎನ್ ಬಳಸಿ ಇ–ಮೇಲ್ ಕಳುಹಿಸಿರುವುದನ್ನು ಪತ್ತೆ ಮಾಡಿದ್ದಾರೆ.

ಹನುಮಂತನಗರ ಪೊಲೀಸ್ ಠಾಣಾ ವ್ಯಾಪ್ತಿಯ ಬಿಎಂಎಸ್ ಕಾಲೇಜು, ವಿಶ್ವೇಶ್ವರಪುರದ ಬಿಐಟಿ ಕಾಲೇಜು ಹಾಗೂ ಸದಾಶಿವನಗರ ಪೊಲೀಸ್ ಠಾಣಾ ವ್ಯಾಪ್ತಿಯ ಎಂಎಸ್‌ಆರ್‌ಐಟಿ ಕಾಲೇಜುಗಳಿಗೂ ಒಂದೇ ಇ–ಮೇಲ್ ವಿಳಾಸದಿಂದ ಬಾಂಬ್ ಬೆದರಿಕೆ ಸಂದೇಶ ಬಂದಿತ್ತು.

ಸ್ಥಳಕ್ಕೆ ತೆರಳಿದ ಬಾಂಬ್ ನಿಷ್ಕ್ರಿಯ ದಳ, ಬಾಂಬ್ ತಪಾಸಣೆ ದಳ ಹಾಗೂ ಅಗ್ನಿಶಾಮಕ ದಳದ ಸಿಬ್ಬಂದಿ ಕಾಲೇಜು ಆವರಣದಲ್ಲಿ ಪರಿಶೀಲನೆ ನಡೆಸಿದ್ದರು. ಯಾವುದೇ ಸ್ಫೋಟಕ ವಸ್ತುಗಳಾಗಲಿ, ರಾಸಾಯನಿಕ ಪದಾರ್ಥಗಳಾಗಲಿ ಪತ್ತೆ ಆಗಿರಲಿಲ್ಲ. ಸಂದೇಶ ಕಳುಹಿಸಲು ನಕಲಿ ವಿಪಿಎನ್ ಬಳಸಿದ್ದರಿಂದ ಆರೋಪಿಗಳ ಪತ್ತೆ ಪೊಲೀಸರಿಗೆ ಸವಾಲಾಗಿದೆ.

ಬೆದರಿಕೆ ಸಂದೇಶ ಬಂದಿದ್ದ ಇ–ಮೇಲ್‌ಗಳ ವರ್ಚುವಲ್ ಪ್ರೈವೇಟ್ ನೆಟ್‌ವರ್ಕ್ಸ್ (ವಿಪಿಎನ್) ಹಾಗೂ ಇಂಟರ್‌ನೆಟ್ ಪ್ರೋಟೋಕಾಲ್ (ಐ.ಪಿ) ವಿಳಾಸದ ಮಾಹಿತಿ ನೀಡುವಂತೆ ಕೋರಿ ಮೈಕ್ರೋಸಾಫ್ಟ್‌ಕಂಪನಿಗೆ ಪೊಲೀಸರು ಪತ್ರ ಬರೆದಿದ್ದಾರೆ ಎಂದು ಮೂಲಗಳು ತಿಳಿಸಿವೆ.

‘ಭಾಷೆ ಕಲಿತು, ಬಾಂಧವ್ಯ ಬೆಸೆಯಿರಿ’

ಪೀಣ್ಯ ದಾಸರಹಳ್ಳಿ: ‘ರಾಜ್ಯದಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ಕೇರಳದ ವಿದ್ಯಾರ್ಥಿಗಳು ಕನ್ನಡ ಭಾಷೆ ಕಲಿತು, ರಾಜ್ಯಗಳ ನಡುವೆ ಬಾಂಧವ್ಯ ಬೆಸೆಯಬೇಕು’ ಎಂದು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ವಿದ್ಯಾರ್ಥಿಗಳಿಗೆ ಕರೆ ನೀಡಿದರು

ಚಿಕ್ಕಬಾಣಾವರದ ಎಂ.ಎ.ಜೆ ಫೌಂಡೇಷನ್‌ನ ಧನ್ವಂತರಿ ಶಿಕ್ಷಣ ಸಂಸ್ಥೆಯಿಂದ ನರ್ಸಿಂಗ್ ವಿದ್ಯಾರ್ಥಿಗಳಿಗೆ ಆಯೋಜಿಸಿದ್ದ ‘ಆರ್ಮಧಮ್ 2024 ಓಣಂ’ ಉದ್ಘಾಟಿಸಿ ಅವರು ಮಾತನಾಡಿದರು.

‘ಪ್ರತಿಯೊಂದು ರಾಜ್ಯದಲ್ಲೂ ಒಂದೊಂದು ವಿಶಿಷ್ಟ ಸಂಪ್ರದಾಯವಿದ್ದು ಅದರಂತೆ ಕೇರಳದ ಓಣಂ ಹಬ್ಬ ದೇಶದಲ್ಲೇ ಗಮನ ಸೆಳೆದಿದೆ. ಕೇರಳದಿಂದ ಓದುವುದಕ್ಕಾಗಿ ಬಂದಿರುವ ವಿದ್ಯಾರ್ಥಿಗಳಿಗಾಗಿ ಧನ್ವಂತರಿ ಶಿಕ್ಷಣ ಸಂಸ್ಥೆ ಓಣಂ ಆಚರಣೆ ಹಮ್ಮಿಕೊಂಡಿದೆ. ಇದು ಬಾಂಧವ್ಯ ಬೆಸೆಯುವ ಹೆಜ್ಜೆ’ ಎಂದು ಸಂತಸ ವ್ಯಕ್ತಪಡಿಸಿದರು.

ಶಾಸಕ ಎಸ್. ಮುನಿರಾಜು ಮಾತನಾಡಿ ‘ಓಣಂ ಹಬ್ಬವು ದೇಶದ ಸಂಸ್ಕೃತಿಯನ್ನು ಬೆಸೆಯುವುದರೊಂದಿಗೆ ಮನಸ್ಸುಗಳನ್ನು ಒಂದುಗೂಡಿಸುವ ಹಬ್ಬ. ಈ ಸಾಂಸ್ಕೃತಿಕ ಹಬ್ಬ ಎಲ್ಲರಿಗೂ ಸಮೃದ್ಧಿ ಹಾಗೂ ಒಳಿತನ್ನು ತರಲಿ' ಎಂದರು.

ವಿದ್ಯಾರ್ಥಿಗಳು ಕೇರಳದ ಸಾಂಪ್ರದಾಯಿಕ ನೃತ್ಯ, ಗಾಯನ ಮತ್ತು ಸಾಂಸ್ಕೃತಿಕ ಕಾರ್ಯಕ್ರಮವನ್ನು ಪ್ರಸ್ತುತಪಡಿಸಿದರು.

‘ಆದಾಯದ ಮೂಲ ಮುಚ್ಚುತ್ತಿರುವ ಕೇಂದ್ರ’

ಪ್ರಜಾವಾಣಿ ವಾರ್ತೆ

ಬೊಮ್ಮನಹಳ್ಳಿ: ಒಕ್ಕೂಟದ ತತ್ವಕ್ಕೆ ವಿರುದ್ಧವಾಗಿ ರಾಜ್ಯ ಸರ್ಕಾರಗಳ ಆದಾಯದ ಮೂಲಗಳನ್ನು ಮುಚ್ಚುತ್ತಿರುವ ಕೇಂದ್ರ ಸರ್ಕಾರ, ತನಗೆ ವಿರುದ್ಧವಾದ ಸರ್ಕಾರಗಳ ಮೇಲೆ ದ್ವೇಷ ಸಾಧಿಸುತ್ತಿದೆ ಎಂದು ಸಿಪಿಎಂ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಕೆ.ಪ್ರಕಾಶ್ ಆರೋಪಿಸಿದರು.

ಭಾನುವಾರ ಮೈಕೊ ಬಡಾವಣೆಯಲ್ಲಿ ನಡೆದ ಸಿಪಿಎಂನ ಮಡಿವಾಳ ವಲಯ ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿದರು.

‘ದೇಶದಲ್ಲಿ ಜಿಎಸ್‌ಟಿ ಜಾರಿ ಆದ ನಂತರ ಬಿಜೆಪಿಯೇತರ ರಾಜ್ಯ ಸರ್ಕಾರಗಳಿಗೆ ಜಿಎಸ್‌ಟಿ ಪಾಲನ್ನು ನಿರಾಕರಿಸುವುದು ಮಾತ್ರವಲ್ಲದೆ, ಸೆಸ್ ಸಂಗ್ರಹದ ಪಾಲು ಪೂರ್ತಿಯಾಗಿ ಕೇಂದ್ರ ಸರ್ಕಾರಕ್ಕೆ ಸೇರುವಂತೆ ಕಾಯ್ದೆಗೆ ತಿದ್ದುಪಡಿ ಮಾಡಿದೆ. ಈ ಮೂಲಕ ರಾಜ್ಯ ಸರ್ಕಾರಗಳ ಕತ್ತು ಹಿಸುಕುವ ಕೆಲಸ ಮಾಡುತ್ತಿದೆ ಎಂದರು.

ಸಿಪಿಎಂ ಬೆಂಗಳೂರು ದಕ್ಷಿಣ ಜಿಲ್ಲಾ ಕಾರ್ಯದರ್ಶಿ ಬಿ. ಎನ್. ಮಂಜುನಾಥ್ ಮೆಟ್ರೊ ರೈಲು ಪ್ರಯಾಣ ದರಗಳನ್ನು ಹೆಚ್ಚಿಸುವ ಪ್ರಸ್ತಾಪವನ್ನು ಖಂಡಿಸಿದರು. ಸ್ಥಳೀಯ ಮುಖಂಡರಾದ ಎನ್. ದಯಾನಂದ, ಧರ್ಮೇಗೌಡ, ಅಬ್ದುಲ್ ಗಫೂರ್ ಇದ್ದರು. ಸಿಪಿಎಂ ಮುಖಂಡ ಸಿ.ಜಗದೀಶ್ ಅಧ್ಯಕ್ಷತೆ ವಹಿಸಿದ್ದರು.

ಎನ್.ದಯಾನಂದ ಆಯ್ಕೆ: ಸಮ್ಮೇಳನದಲ್ಲಿ ಮುಂದಿನ ವರ್ಷದ ಅವಧಿಗೆ ಎನ್.ದಯಾನಂದ ಅವರು ಸಿಪಿಎಂ ಮಡಿವಾಳ ವಲಯದ ಕಾರ್ಯದರ್ಶಿಯಾಗಿ ಸರ್ವಾನುಮತದಿಂದ ಆಯ್ಕೆ ಆಗಿದ್ದಾರೆ ಎಂದು ಸಂಘಟಕರು ತಿಳಿಸಿದ್ದಾರೆ.

ಸಿಪಿಎಂ ಮಡಿವಾಳ ವಲಯ ಸಮ್ಮೇಳನದಲ್ಲಿ ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಕೆ.ಪ್ರಕಾಶ್ ಮಾತನಾಡಿದರು. ಜಿಲ್ಲಾ ಮಂಡಳಿ ಸದಸ್ಯ ಸಿ.ಜಿ. ಶ್ರೀಪತಿ, ಜಿಲ್ಲಾ ಕಾರ್ಯದರ್ಶಿ ಬಿ.ಎನ್.ಮಂಜುನಾಥ್, ಸ್ಥಳೀಯ ಮುಖಂಡ ಸಿ.ಜಗದೀಶ್, ಜಾವೀದ್ ಅಹಮ್ಮದ್ ಪಾಲ್ಗೊಂಡಿದ್ದರು

‘ಮಹಿಳೆಯರಿಗೆ ಸುರಕ್ಷತೆ ಅಗತ್ಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಇತ್ತೀಚಿನ ದಿನಗಳಲ್ಲಿ ಮಹಿಳೆಯರ ಮೇಲಿನ ದೌರ್ಜನ್ಯ ಪ್ರಕರಣಗಳು ಹೆಚ್ಚುತ್ತಿವೆ. ಸರ್ಕಾರ ಮಹಿಳೆಯರ ಸುರಕ್ಷತೆಗೆ ಆದ್ಯತೆ ನೀಡಬೇಕು’ ಎಂದು ಲೇಖಕಿ ಲೀಲಾ ವಾಸುದೇವ್ ಅಭಿಪ್ರಾಯಪಟ್ಟರು.

ಬುದ್ಧ ಬಸವ ಗಾಂಧಿ ಸಾಂಸ್ಕೃತಿಕ ಟ್ರಸ್ಟ್ ನಗರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ರಾಜ್ಯಮಟ್ಟದ 15ನೇ ಕನ್ನಡ ಸಾಹಿತ್ಯ ಸಂಸ್ಕೃತಿ ಜಾಗೃತಿ ಸಮಾವೇಶದ ಸಮ್ಮೇಳನಾಧ್ಯಕ್ಷತೆ ವಹಿಸಿ ಮಾತನಾಡಿದರು.

‘ವೇದಗಳ ಕಾಲದಲ್ಲಿ ಮಹಿಳೆಯರಿಗೆ ಒಳ್ಳೆಯ ಸ್ಥಾನಮಾನಗಳಿದ್ದವು. ಮಹಿಳೆಯರನ್ನು ತಮಗೆ ಸಮಾನವಾಗಿ ಪುರುಷರು ನೋಡುತ್ತಿದ್ದರು. ನಂತರದ ದಿನಗಳಲ್ಲಿ ಪುರುಷ ಪ್ರಧಾನ ಸಮಾಜ ತಲೆಯೆತ್ತಿತು. ಮಹಿಳೆಯರು ಕುಟುಂಬದೊಳಗೆ ಕಟ್ಟುಪಾಡುಗಳನ್ನು ಅನುಭವಿಸುತ್ತಾ ಇರಬೇಕಾಯಿತು. ಯಾವುದೇ ರೀತಿಯ ಸ್ವಾತಂತ್ರ್ಯ ಇರಲಿಲ್ಲ. ಈಗ ಮಹಿಳೆಯರು ಪುರುಷರಿಗೆ ಸಮಾನವಾಗಿ ಎಲ್ಲ ಕ್ಷೇತ್ರದಲ್ಲಿಯೂ ಶಕ್ತಿ ಸಂಪನ್ನರಾಗಿ ಬೆಳೆದಿದ್ದಾರೆ. ಇಂತಹ ಸಂದರ್ಭದಲ್ಲಿ ಮಹಿಳೆಯರು ಧೈರ್ಯವಾಗಿ ತಲೆಯೆತ್ತಿ ಓಡಾಡುವಂತಹ ವಾತಾವರಣವನ್ನು ಸರ್ಕಾರ ನಿರ್ಮಿಸಿಕೊಡಬೇಕು’ ಎಂದು ಹೇಳಿದರು.

ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷ ವೂಡೇ ಪಿ. ಕೃಷ್ಣ, ‘ನಾಡಿನಲ್ಲಿ ಪರಭಾಷಿಕರ ಹಾವಳಿ ಹೆಚ್ಚುತ್ತಿದೆ. ಈ ಅವಧಿಯಲ್ಲಿ ನಮ್ಮವರೇ ಹಿಂದಿ, ಇಂಗ್ಲಿಷ್ ಭಾಷೆಯ ವ್ಯಾಮೋಹಕ್ಕೆ ಒಳಗಾಗುತ್ತಿರುವುದು ಶೋಚನೀಯ. ಯುವಜನರು, ವಿದ್ಯಾರ್ಥಿಗಳಿಗೆ ಕನ್ನಡ ನಾಡು–ನುಡಿಯ ಮಹತ್ವದ ಬಗ್ಗೆ ಮನವರಿಕೆ ಮಾಡಿಸಿ, ಗೌರವ ಹೆಚ್ಚಿಸುವ ಕೆಲಸ ಮಾಡಬೇಕು’ ಎಂದರು.

ಇದೇ ವೇಳೆ ಲೀಲಾ ವಾಸುದೇವ್, ಉದಯರವಿ, ಅರ್ಚನಾ ರವಿ, ಸುನಿತಾ ನವೀನ್ ಗೌಡ ಅವರಿಗೆ ‘ಅನಿಕೇತನ ದತ್ತಿ ಪ್ರಶಸ್ತಿ’ ಪ್ರದಾನ ಮಾಡಲಾಯಿತು.

ಸಮಾವೇಶದಲ್ಲಿ ಲೀಲಾ ವಾಸುದೇವ್ ಅವರಿಗೆ ‘ಅನಿಕೇತನ ದತ್ತಿ ಪ್ರಶಸ್ತಿ’ಯನ್ನು ವೂಡೇ ಪಿ. ಕೃಷ್ಣ ಪ್ರದಾನ ಮಾಡಿದರು. (ಎಡದಿಂದ) ಬುದ್ಧ ಬಸವ ಗಾಂಧಿ ಸಾಂಸ್ಕೃತಿಕ ಟ್ರಸ್ಟ್‌ನ ಅಧ್ಯಕ್ಷ ಎಸ್. ರಾಮಲಿಂಗೇಶ್ವರ (ಸಿಸಿರಾ), ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ನಿಕಟಪೂರ್ವ ಅಧ್ಯಕ್ಷ ಮಾಯಣ್ಣ, ವಿದ್ವಾಂಸ ಮಲ್ಲೇಪುರಂ ಜಿ. ವೆಂಕಟೇಶ್, ಸ್ನೇಹಜೀವಿ ಗೆಳೆಯರ ಸಾಹಿತ್ಯ ಬಳಗದ ಅಧ್ಯಕ್ಷ ಶಶಿಕಾಂತ ರಾವ್ ಉಪಸ್ಥಿತರಿದ್ದರು –ಪ್ರಜಾವಾಣಿ ಚಿತ್ರ

ಕ್ಷೇತ್ರಕ್ಕೆ ₹200 ಕೋಟಿ: ಶಾಸಕ ಮನವಿ

ರಾಜರಾಜೇಶ್ವರಿನಗರ: ರಾಜಕಾಲುವೆಯಲ್ಲಿನ ಹೂಳು ತೆಗೆಸಿ ಮಳೆ ನೀರು ಸರಾಗವಾಗಿ ಹರಿಯುವಂತೆ ಮಾಡುವುದು, ಕೆರೆಗಳಿಗೆ ನೀರು ತುಂಬಿಸುವುದು ಸೇರಿದಂತೆ, ಯಶವಂತಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿ ಕೈಗೊಳ್ಳಲು ₹200 ಕೋಟಿ ಅನುದಾನ ನೀಡುವಂತೆ ಸರ್ಕಾರಕ್ಕೆ ಮನವಿ ಮಾಡಲಾಗಿದೆ ಎಂದು ಶಾಸಕ ಎಸ್.ಟಿ.ಸೋಮಶೇಖರ್ ತಿಳಿಸಿದರು.

ಬಿಬಿಎಂಪಿ ಹೇರೋಹಳ್ಳಿ ವಾರ್ಡ್‌ನ ಆದಾಯ ತೆರಿಗೆ ಬಡಾವಣೆಯಲ್ಲಿ ಬಿಡಿಎ ನಿರ್ಮಿಸಿರುವ ಉದ್ಯಾನ, ಜಿಮ್ ಕೇಂದ್ರ ಹಾಗೂ ನಡಿಗೆ ಪಥ ಲೋಕಾರ್ಪಣೆ ಮಾಡಿ ಅವರು ಮಾತನಾಡಿದರು. ಕ್ಷೇತ್ರದ ಎಲ್ಲ ಕೆರೆಗಳಿಗೂ ನೀರು ತುಂಬಿಸಲಾಗುವುದು. ಈ ಯೋಜನೆಗೆ ಸರ್ಕಾರ ಮಂಜೂರಾತಿ ನೀಡಿದೆ. ಹಂತ ಹಂತವಾಗಿ ಕಾಮಗಾರಿ ಕೈಗೊಳ್ಳಲಾಗುವುದು. ಬಿಡಿಎ ವತಿಯಿಂದ ನಿರ್ಮಿಸಲಾಗಿರುವ ಸರ್. ಎಂ. ವಿಶ್ವೇಶ್ವರಯ್ಯ ಬಡಾವಣೆ ಹಾಗೂ ಡಿ ಗ್ರೂಪ್ ಬಡಾವಣೆಗಳಲ್ಲಿ 5ನೇ ಹಂತದ ಕಾವೇರಿ ಕುಡಿಯುವ ನೀರು ಸರಬರಾಜು ಯೋಜನೆಯ ಜಲಸಂಗ್ರಹಣಾ ಕೇಂದ್ರ ನಿರ್ಮಾಣವಾಗಿದೆ ಎಂದರು. ಆದಾಯ ತೆರಿಗೆ ಬಡಾವಣೆ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಸಿದ್ದರಾಜು, ಬಿಬಿಎಂಪಿ ಮಾಜಿ ಸದಸ್ಯ ಆರ್ಯ ಶ್ರೀನಿವಾಸ್ ಮಾತನಾಡಿದರು.

PM SHRI JAWAHAR NAVODAYA VIDYALAYA,
DODDABALLAPUR, BANGALORE RURAL

Date: 07.10.2024

WALK IN INTERVIEW

Walk-in-Interview for the following posts will be conducted in the Office of the Jawahar Navodaya Vidyalaya, Doddaballapur, Bangalore Rural District against the vacancy for the session 2024-25 to appoint on contract basis on **14.10.2024 at 11.00 am.**

1) TGT Hindi 2) Counsellor (Male) 3) Counsellor (Female) 4) Matron

The interested candidates may appear for the interview physically with original documents with 1 set of Xerox copies.

For further details, Contact numbers 8116438494 (Principal) /9449090970 (JSA)

Sd/- PRINCIPAL

ಶಿಕ್ಷಣ ಇಲಾಖೆಗೆ ತ್ರಿಲೋಕ ಚಂದ್ರ ಆಯುಕ್ತ

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಕಾರ್ಯದರ್ಶಿ ಕೆ.ವಿ. ತ್ರಿಲೋಕಚಂದ್ರ ಅವರನ್ನು ಶಾಲಾ ಶಿಕ್ಷಣ ಇಲಾಖೆಯ ಆಯುಕ್ತರನ್ನಾಗಿ ವರ್ಗಾವಣೆ ಮಾಡಲಾಗಿದೆ.

ಶಾಲಾ ಶಿಕ್ಷಣ ಇಲಾಖೆಯ ಆಯುಕ್ತೆ ಬಿ.ಬಿ. ಕಾವೇರಿ ಅವರನ್ನು ಮುಖ್ಯಮಂತ್ರಿಯ ಕಾರ್ಯದರ್ಶಿಯಾಗಿ ವರ್ಗಾವಣೆ ಮಾಡಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ ಶನಿವಾರ ಆದೇಶ ಹೊರಡಿಸಿದೆ. ತ್ರಿಲೋಕಚಂದ್ರ ಅವರಿಗೆ ಇದ್ದ ವಾರ್ತಾ ಇಲಾಖೆಯ ಹೊಣೆಯನ್ನೂ ಕಾವೇರಿಗೆ ವಹಿಸಲಾಗಿದೆ.

ಬಿಬಿಎಂಪಿ ಆರೋಗ್ಯ ಇಲಾಖೆಯ ವಿಶೇಷ ಆಯುಕ್ತರಾಗಿದ್ದ ತ್ರಿಲೋಕಚಂದ್ರ ಅವರನ್ನು ಕಳೆದ ನವೆಂಬರ್‌ನಲ್ಲಿ ಮುಖ್ಯಮಂತ್ರಿಯ ಕಾರ್ಯದರ್ಶಿಯಾಗಿ ನೇಮಿಸಲಾಗಿತ್ತು.

‘ಭಾವ ದಿವ್ಯಗಾನ’ ಧ್ವನಿ ಸಾಂದ್ರಿಕೆ ಬಿಡುಗಡೆ

ಬೆಂಗಳೂರು: ಸಂಗೀತಧಾಮ ಸಂಸ್ಥೆಯು ನಗರದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ‘ಭಾವ ದಿವ್ಯಗಾನ’ ದೃಶ್ಯ ಗೀತೆಗಳ ಧ್ವನಿ ಸಾಂದ್ರಿಕೆ ಬಿಡುಗಡೆಗೊಂಡಿತು.

ಈ ಧ್ವನಿ ಸಾಂದ್ರಿಕೆಯು ಒಟ್ಟು ಎಂಟು ಗೀತೆಗಳನ್ನು ಒಳಗೊಂಡಿದೆ. ಅಮೆರಿಕದಲ್ಲಿ ನೆಲಸಿರುವ ಕನ್ನಡಿಗ ಶಶಿನಾಥ ಗೌಡ ಅವರ ಧ್ವನಿಯಲ್ಲಿ ಗೀತೆಗಳು ಮೂಡಿ ಬಂದಿವೆ. ಮೃತ್ಯುಂಜಯ ದೊಡ್ಡವಾಡ ಅವರ ಸಂಗೀತವಿದೆ. ಈ ಧ್ವನಿ ಸಾಂದ್ರಿಕೆಯಲ್ಲಿನ ಗೀತೆಗಳು ಕಾರ್ಯಕ್ರಮದಲ್ಲಿ ನೆರೆದಿದ್ದ ಪ್ರೇಕ್ಷಕರ ಮೆಚ್ಚುಗೆಗೆ ಪಾತ್ರವಾದವು. ಶಶಿನಾಥ್ ಗೌಡ, ಬಿ.ಆರ್. ಲಕ್ಷ್ಮಣರಾವ್, ಸತೀಶ್ ಹಂಪಿಹೊಳಿ, ಸಿದ್ದರಾಜ್ ಪೂಜಾರಿ, ಮೃತ್ಯುಂಜಯ ದೊಡ್ಡವಾಡ ಇದ್ದರು.

ಪ್ರಜಾವಾಣಿ

ನವವರ್ಣ

ಸಹಭಾಗಿತ್ವ

Sri Krishna GHEE | ದಿ ಚೆನ್ನೈ ಸಿಲ್ಕ್ಸ್ | ಶ್ರೀ ಕುಮರನ್

ಇವತ್ತಿನ ಬಣ್ಣ ಬಿಳಿ

ನಾಳೆಯ ಬಣ್ಣ ಕೆಂಪು

ನಿಮ್ಮ ಪ್ರವೇಶಗಳನ್ನು: 7338018541 ಕಳುಹಿಸಿ, ಅಥವಾ ನಮಗೆ ಇಮೇಲ್ ಮಾಡಿ: pv@prajavani.co.in

ಕುಂದು ಕೊರತೆ | ಜನದನಿ

ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ನಿಮ್ಮ ಅಹವಾಲುಗಳನ್ನು ವಾಟ್ಸ್ ಆ್ಯಪ್ ಮಾಡಿ 9606038256

ದೊಡ್ಡಬೊಮ್ಮಸಂದ್ರ ಮುಖ್ಯ ರಸ್ತೆಯಲ್ಲಿ ಪಾದಚಾರಿ ಮಾರ್ಗವನ್ನು ಒತ್ತುವರಿ ಮಾಡಿರುವುದು

‘ಪಾದಚಾರಿ ಮಾರ್ಗ ಒತ್ತುವರಿ’

ನಗರದ ವಿದ್ಯಾರಣ್ಯಪುರ ಕಡೆಗೆ ದೊಡ್ಡಬೊಮ್ಮಸಂದ್ರ ಮುಖ್ಯ ರಸ್ತೆಯಲ್ಲಿ ಸಾಗುವಾಗ ಜೀವವನ್ನು ಕೈಯಲ್ಲಿ ಹಿಡಿದು ಹೋಗಬೇಕಾಗಿದೆ. ದ್ವಿಮುಖ ಸಂಚಾರ ಇರುವುದೇ ಇದಕ್ಕೆ ಕಾರಣ. ರಸ್ತೆ ಕಿರಿದಾಗಿದ್ದು, ವಿಭಜಕ ಕೂಡ ಅಳವಡಿಸಿಲ್ಲ. ಪಾದಚಾರಿಗಳ ಪಾಡು ಹೇಳತೀರದಂತಾಗಿದೆ. ಪಾದಚಾರಿ ಮಾರ್ಗಗಳನ್ನು ಅಂಗಡಿಗಳು ಒತ್ತುವರಿ ಮಾಡಿದ್ದು, ರಸ್ತೆಯಲ್ಲಿಯೇ ಪಾದಚಾರಿಗಳು ಸಾಗಬೇಕಾದ ಅನಿವಾರ್ಯತೆ ನಿರ್ಮಾಣವಾಗಿದೆ. ಬಿಬಿಎಂಪಿ ಅಧಿಕಾರಿಗಳು ಪಾದಚಾರಿ ಮಾರ್ಗದ ಒತ್ತುವರಿ ತೆರವುಗೊಳಿಸಬೇಕು. ಸುಗಮ ಸಂಚಾರಕ್ಕೆ ಅವಕಾಶ ಒದಗಿಸಬೇಕು.

ಪುರೋಹಿತ್ ಮುರಳಿ, ದೊಡ್ಡಬೊಮ್ಮಸಂದ್ರ

‘ಪಾದಚಾರಿ ಮಾರ್ಗ ದುರಸ್ತಿಪಡಿಸಿ’

ವಿ.ವಿ. ಪುರದ ಡಯಾಗ್ನಲ್ ರಸ್ತೆಯ ಕೆನರಾ ಬ್ಯಾಂಕ್ ಎದುರಿನ ಪಾದಚಾರಿ ಮಾರ್ಗ ಅದ್ವಾನಗೊಂಡಿದೆ. ಕಲ್ಲು ಹಾಸು ಕಿತ್ತು ಹೋಗಿದ್ದು, ಇಲ್ಲಿ ಓಡಾಡುವುದು ಕಷ್ಟ ಸಾಧ್ಯ. ವೃದ್ಧರು, ಮಕ್ಕಳು ಬಿದ್ದು ಗಾಯಗೊಳ್ಳುವ ಸಾಧ್ಯತೆಯಿದೆ. ಇದರಿಂದ ಪಾದಚಾರಿ ಮಾರ್ಗ ಜನರಿಗೆ ನಿರುಪಯುಕ್ತವಾಗಿದೆ. ಹೆಚ್ಚಿನ ಸಂಖ್ಯೆಯಲ್ಲಿ ವಾಹನಗಳು ಈ ರಸ್ತೆಯಲ್ಲಿ ಸಂಚರಿಸುವುದರಿಂದ ಪಾದಚಾರಿಗಳು ರಸ್ತೆ ಅಪಘಾತಕ್ಕೆ ಒಳಗಾಗುವ ಅಪಾಯ ಇದೆ. ಆದ್ದರಿಂದ ಸಂಬಂಧಪಟ್ಟ ಅಧಿಕಾರಿಗಳು ಈಗಾಲಾದರೂ ಈ ಬಗ್ಗೆ ಗಮನ ಹರಿಸಿ, ಸಮಸ್ಯೆಯನ್ನು ನಿವಾರಿಸಬೇಕು.

ಕೃಷ್ಣ ಧರ್ಮದಾಸ್, ವಿ.ವಿ.ಪುರ

ಡಯಾಗ್ನಲ್ ರಸ್ತೆಯ ಕೆನರಾ ಬ್ಯಾಂಕ್ ಎದುರಿನ ಪಾದಚಾರಿ ಮಾರ್ಗದ ಕಲ್ಲು ಹಾಸು ಕಿತ್ತಿರುವುದು

‘ಕಸದ ತಾಣವಾದ ಖಾಲಿ ನಿವೇಶನ’

ಜೆ.ಪಿ. ನಗರದ 8ನೇ ಹಂತದಲ್ಲಿರುವ ಬಿಡಿಎ ಬಡಾವಣೆಯಲ್ಲಿನ ಖಾಲಿ ನಿವೇಶನಗಳು ಕಸ ಎಸೆಯುವ ತಾಣಗಳಾಗಿ ಮಾರ್ಪಟ್ಟಿವೆ. ಇಲ್ಲಿ ಕಸ ವಿಲೇವಾರಿ ಮಾಡದೇ ಇರುವುದರಿಂದ ದಿನದಿಂದ ದಿನಕ್ಕೆ ಕಸದ ರಾಶಿ ಬೆಳೆಯುತ್ತಿದೆ. ಇದರಿಂದ ಸ್ಥಳೀಯ ನಿವಾಸಿಗಳು ಸಮಸ್ಯೆ ಎದುರಿಸುತ್ತಿದ್ದಾರೆ. ರಸ್ತೆಯಲ್ಲೆಲ್ಲ ತ್ಯಾಜ್ಯ ಹರಡಿ, ವಾಹನ ಸವಾರರು ಮತ್ತು ಪಾದಚಾರಿಗಳಿಗೆ ತೊಂದರೆಯಾಗುತ್ತಿದೆ. ಗಾಳಿ ಬೀಸಿದಾಗ, ಈ ಕಸ ರಸ್ತೆಗಳಿಗೂ ಹರಡಿಕೊಳ್ಳುತ್ತದೆ. ಮಳೆ ಬಂದಲ್ಲಿ ನೀರು ನಿಂತು, ಸೊಳ್ಳೆಗಳು ಉತ್ಪತ್ತಿಯಾಗುವ ಸಾಧ್ಯತೆಯಿದೆ. ಆದ್ದರಿಂದ ಇಲ್ಲಿ ಕಸ ಹಾಕದಂತೆ ಹಾಗೂ ಈಗ ಇರುವ ಕಸವನ್ನು ತುರ್ತಾಗಿ ವಿಲೇವಾರಿ ಮಾಡಲು ಕ್ರಮ ಕೈಗೊಳ್ಳಬೇಕು.

ಗಣೇಶ್, ಜೆ.ಪಿ.ನಗರ ನಿವಾಸಿ

ಬಿಡಿಎ ಬಡಾವಣೆಯಲ್ಲಿನ ಖಾಲಿ ನಿವೇಶನಗಳಲ್ಲಿ ಕಸ ಹಾಕಿರುವುದು

ವರದಿಗೆ ಸ್ಪಂದನೆ

ವಾಲಿದ್ದ ವಿದ್ಯುತ್ ಕಂಬವನ್ನು ಬೆಸ್ಕಾಂ ಸಿಬ್ಬಂದಿ ಸರಿಪಡಿಸಿರುವುದು

‘ವಿದ್ಯುತ್ ಕಂಬ ಸರಿಮಾಡಿದ ಸಿಬ್ಬಂದಿ’

ವೈಟ್‌ಫೀಲ್ಡ್‌ನ ಬೋರ್‌ವೆಲ್ ರಸ್ತೆಯ ಎಸ್. ಎಸ್. ಫೆಲಿಸಿಟಿ ಹೋಮ್ಸ್ ಮುಂಭಾಗದ ರಸ್ತೆ ಬದಿಯಲ್ಲಿ ವಾಲಿದ್ದ ವಿದ್ಯುತ್ ಕಂಬವನ್ನು ಬೆಸ್ಕಾಂ ಸಿಬ್ಬಂದಿ ಸರಿಪಡಿಸಿದ್ದಾರೆ.

‘ಪ್ರಜಾವಾಣಿ’ಯ ಕುಂದು ಕೊರತೆ ವಿಭಾಗದಲ್ಲಿ ಸೆಪ್ಟೆಂಬರ್ 30ರಂದು ‘ವಾಲಿದ ವಿದ್ಯುತ್ ಕಂಬ’ ಎಂಬ ಶೀರ್ಷಿಕೆ ಅಡಿಯಲ್ಲಿ ವರದಿ ಪ್ರಕಟವಾಗಿತ್ತು. ಇದರಿಂದ ಎಚ್ಚೆತ್ತ ಬೆಸ್ಕಾಂ ಅಧಿಕಾರಿಗಳು, ಸಮಸ್ಯೆ ನಿವಾರಿಸಿದ್ದಾರೆ.

ಎಬಿಬಿ ವೃತ್ತದಿಂದ ನೆಲಗದರನಹಳ್ಳಿಗೆ ಸಂಪರ್ಕ ಸಾಧಿಸುವ ರಸ್ತೆಯಲ್ಲಿ ಗುಂಡಿ ಬಿದ್ದಿರುವುದು

‘ರಸ್ತೆ ಗುಂಡಿ ಮುಚ್ಚಿ’

ಪೀಣ್ಯ ಕೈಗಾರಿಕಾ ಪ್ರದೇಶದ ಎರಡನೇ ಹಂತದಲ್ಲಿ ಎಬಿಬಿ ವೃತ್ತದಿಂದ ನೆಲಗದರನಹಳ್ಳಿಗೆ ಸಂಪರ್ಕ ಕಲ್ಪಿಸುವ ರಸ್ತೆಯು ಗುಂಡಿಗಳಿಂದ ಕೂಡಿದ್ದು, ಇಲ್ಲಿ ಸಂಚರಿಸುವುದು ತುಂಬಾ ಕಷ್ಟ. ವಾಹನ ಸವಾರರು ಗುಂಡಿ ತಪ್ಪಿಸಲು ಬ್ರೇಕ್ ಹಾಕುವುದರಿಂದ ಅಪಘಾತಗಳು ಸಂಭವಿಸಿದ ಉದಾಹರಣೆಗಳಿವೆ. ಈ ಮಾರ್ಗದಲ್ಲಿ ವಾಹನ ಚಾಲನೆ ಮಾಡುವುದು ದುಸ್ತರವಾಗಿದೆ. ಚಾಲಕರು ಗುಂಡಿಗಳನ್ನು ತಪ್ಪಿಸಲು ಅಡ್ಡಾದಿಡ್ಡಿಯಾಗಿ ವಾಹನ ಚಲಾಯಿಸುವುದರಿಂದ ವೃದ್ಧರು, ಮಕ್ಕಳು ಈ ರಸ್ತೆಯ ಮೂಲಕ ಓಡಾಡುವುದು ಕಷ್ಟ. ಮಳೆ ಬಂದರೆ ನೀರು ತುಂಬಿಕೊಂಡ ಗುಂಡಿಗಳನ್ನು ಗುರುತಿಸುವುದೇ ಕಷ್ಟ. ಸಂಬಂಧಪಟ್ಟವರು ಕೂಡಲೇ ಕ್ರಮವಹಿಸಿ, ಗುಂಡಿಗಳನ್ನು ಮುಚ್ಚಿ ಸುಗಮ ಸಂಚಾರಕ್ಕೆ ಅನುಕೂಲ ಮಾಡಿಕೊಡಬೇಕು.

ಕೆಂಚೇಗೌಡ, ಸ್ಥಳೀಯ ನಿವಾಸಿ

ಬಿಳಿ ಬಣ್ಣದ ದಿರಿಸನ್ನು ಧರಿಸಿ ತೆಗಿಸಿಕೊಂಡ ಭಾವಚಿತ್ರಗಳನ್ನು ಸೋಮವಾರ ಮಧ್ಯಾಹ್ನ 2 ಗಂಟೆಯೊಳಗೆ ಕಳುಹಿಸಿ.
ಹೆಸರು ವಿಳಾಸ ಇರಲಿ...
7338018541

Sri Krishna Pure GHEE
ನವರಾತ್ರಿ ನವಖಾದ್ಯ ಸ್ಪರ್ಧೆ
ಅಕ್ಟೋಬರ್ 3 ರಿಂದ 11 ರವರೆಗೆ
ಶ್ರೀ ಕೃಷ್ಣ ತುಪ್ಪದಿಂದ ಮಾಡಿದ ನೈವೇದ್ಯದ ಫೋಟೋ ಕಳುಹಿಸಿ
ಬಹುಮಾನ ಗೆಲ್ಲಿ
ಮನೆಗೆ ಬರಲಿ ಅಚ್ಚರಿಯ ಬಹುಮಾನಗಳು
ಸ್ಪರ್ಧೆಯಲ್ಲಿ ಭಾಗವಹಿಸಲು ನಿಮ್ಮ ಹೆಸರನ್ನು Whatsapp ಮಾಡಿ
+91 90350 26824
ಅಥವಾ QR Code Scan ಮಾಡಿ

ಚಿಲಿಪಿಲಿ ತಂಡ

ಬೋರಣ್ಣವರ್ ಕುಟುಂಬ

ಧನ್ಯಶ್ರೀ

ದೀಪಾ ಮತ್ತು ಗೆಳತಿಯರು

ಗೌರಿ ಮತ್ತು ಶಶಿಕಲಾ

ಕಾಮದೇನು ಆಸ್ಪತ್ರೆ ಸಿಬ್ಬಂದಿ

ಕುಸುಮಾ ಮತ್ತು ಗೆಳತಿಯರು

ಲಕ್ಷ್ಮಿ ಮತ್ತು ತಂಡ

ಉಮಾ ಮತ್ತು ಸ್ನೇಹಿತರು. ರಾಮಯ್ಯ ಎನ್ಲೇವ್, ಬೆಂಗಳೂರು

ನಂದಿನಿ ಮತ್ತು ಸ್ನೇಹಿತೆಯರು

ಸುಮಾ, ಯಶೋದಾ, ಮೀನಾ

ಸಂಧ್ಯಾ ಮತ್ತು ಗೆಳತಿಯರು

ಕೋಮಲಾ ಮತ್ತು ಗೆಳತಿಯರು

ಯಶೋಧಾ ಮತ್ತು ಗೆಳತಿಯರು, ಬನಶಂಕರಿ 3ನೇ ಹಂತ

ಪ್ಲಾಟಿನಂ ಅಪಾರ್ಟ್ಮೆಂಟ್ ಗೆಳತಿಯರು

ಅನುಪಮಾ ಮತ್ತು ಕುಟುಂಬ

ವಿದ್ಯಾ ಮತ್ತು ಗೆಳತಿಯರು, ಶ್ರೀನಿವಾಸನಗರ

ಬಸವ ಬಳಗ

ನೇತ್ರಾವತಿ ಮತ್ತು ಗೆಳತಿಯರು

ಕವಿತಾ ಮತ್ತು ಗೆಳತಿಯರು

ಸುಮಾ ಮತ್ತು ಗೆಳತಿಯರು

ಸುವರ್ಣ, ನಿರ್ಮಲಾ

ಪೂಜಾ ಮತ್ತು ಗೆಳತಿಯರು

ಇಂದಿನ ಅಧಿದೇವತೆ
ಸ್ಕಂದಮಾತಾ

ಶ್ರೀ ಕೃಷ್ಣ ತುಪ್ಪ ಆನ್ಲೈನ್ ನಲ್ಲಿ ಕೊಳ್ಳಲು ಸ್ಕ್ಯಾನ್ ಮಾಡಿ
ನವರಾತ್ರಿ ಪೂಜೆಯಲ್ಲಿ ಪವಿತ್ರ ನೈವೇದ್ಯ ಸಮರ್ಪಿಸಿ
ಶ್ರೀ ಕೃಷ್ಣ ಹಳ್ಳಿ ತುಪ್ಪ
ಕಣಕಣವೂ ಪವಿತ್ರ
Sri Krishna Pure COW GHEE Since 1990

ಬೆಂಗಳೂರಿನ ವಿದ್ಯಾರ್ಥಿ ಸಾವು

ಪ್ರಜಾವಾಣಿ ವಾರ್ತೆ

ಭಟ್ಕಳ (ಉತ್ತರ ಕನ್ನಡ ಜಿಲ್ಲೆ): ಮುರುಡೇಶ್ವರ ಪ್ರವಾಸಕ್ಕೆ ಬಂದಿದ್ದ ಬೆಂಗಳೂರಿನ ವಿದ್ಯಾರ್ಥಿಯೊಬ್ಬ ಸಮುದ್ರದ ಅಲೆಗೆ ಸಿಲುಕಿ ಮೃತಪಟ್ಟಿದ್ದು, ಇನ್ನೊಬ್ಬ ವಿದ್ಯಾರ್ಥಿಯನ್ನು ರಕ್ಷಣೆ ಮಾಡಲಾಗಿದೆ.

ಗೌತಮ್ ಕೆ.ವಿ ಮೃತ ವಿದ್ಯಾರ್ಥಿ. ಬೆಂಗಳೂರಿನ ಧನುಶ್ ಡಿ. ಅವರನ್ನು ರಕ್ಷಿಸಲಾಗಿದೆ. ಬೆಂಗಳೂರಿನಿಂದ ವಿದ್ಯಾ ಸೌಧ ಕಾಲೇಜಿನ 220 ವಿದ್ಯಾರ್ಥಿಗಳು ಭಾನುವಾರ ಮುರುಡೇಶ್ವರ ಪ್ರವಾಸಕ್ಕೆ ಬಂದಿದ್ದರು. ಈ ವೇಳೆ ಇಬ್ಬರು ವಿದ್ಯಾರ್ಥಿಗಳು ಸಮುದ್ರದಲ್ಲಿ ಈಜಲು ತೆರಳಿದ್ದು ಅಲೆಯ ಹೊಡೆತಕ್ಕೆ ಗೌತಮ್ ನೀರಿನಲ್ಲಿ ಮುಳುಗಿದ್ದು ಇನ್ನೊಬ್ಬ ವಿದ್ಯಾರ್ಥಿ ಧನುಷ್‌ನನ್ನು ನೋಡಿದ ಲೈಫ್ ಗಾರ್ಡ್ ಹಾಗೂ ಪೊಲೀಸರು ಓಷಿಯನ್ ಅಡ್ವೆಂಚರ್ಸ್‌ನವರ ಮೂರು ಬೋಟುಗಳನ್ನು ಕೊಂಡೊಯ್ದು ರಕ್ಷಣೆ ಮಾಡಿದ್ದಾರೆ.

ಮುರುಡೇಶ್ವರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಗರದ ಅಂಚೆ ಕಚೇರಿಯಲ್ಲಿದ್ದ ನೂರಾರು ಡ್ರಗ್ಸ್ ಪಾರ್ಸೆಲ್ ಪೊಲೀಸರ ವಶ

ವಿದೇಶದಿಂದ ಮಾದಕ ವಸ್ತು ಪೂರೈಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ಸ್ವಾಮ್ಯದ ಅಂಚೆ ಇಲಾಖೆಯನ್ನೇ ಬಳಸಿಕೊಂಡು ವಿದೇಶಗಳಿಂದ ಬೆಂಗಳೂರು ನಗರಕ್ಕೆ ಮಾದಕವಸ್ತು ಪೂರೈಸುತ್ತಿರುವುದು ಪತ್ತೆ ಯಾಗಿದೆ.

ಈ ಬಗ್ಗೆ ತನಿಖೆ ಚುರುಕುಗೊಳಿಸಿರುವ ಸಿಸಿಬಿ ಪೊಲೀಸರು, ನೂರಾರು ಪಾರ್ಸೆಲ್‌ಗಳನ್ನು ವಶಪಡಿಸಿಕೊಂಡಿದ್ದಾರೆ.

ಚಾಮರಾಜಪೇಟೆಯಲ್ಲಿನ ವಿದೇಶಿ ಅಂಚೆ ಕಚೇರಿಯಲ್ಲಿ ಹಲವು ವರ್ಷಗಳಿಂದ ತರಿಸಿಕೊಂಡಿದ್ದ ಪಾರ್ಸೆಲ್ ಗಳನ್ನು ಸ್ವೀಕರಿಸಿರಲಿಲ್ಲ ಎಂಬ ಮಾಹಿತಿ ಸಿಸಿಬಿಗೆ ಸಿಕ್ಕಿತ್ತು. ಪಾರ್ಸೆಲ್‌ಗಳಲ್ಲಿ ಡ್ರಗ್ಸ್ ಇದೆ ಎಂಬ ಶಂಕೆ ವ್ಯಕ್ತವಾಗಿತ್ತು. ಹಾಗಾಗಿ ಸಿಸಿಬಿ ಮಾದಕ ವಸ್ತು ನಿಗ್ರಹ ಘಟಕದ ಸಿಬ್ಬಂದಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿತು.

'ವಿಲೇವಾರಿಯಾಗದ ಪಾರ್ಸೆಲ್‌ಗಳನ್ನು ಶ್ವಾನ 'ರಾಣಾ' ಗುರುತಿಸಿತು. ಹೀಗೆ ರಾಣಾ ಗುರುತಿಸಿದ 626 ಪಾರ್ಸೆಲ್‌ಗಳನ್ನು ಪರಿಶೀಲಿಸಿದಾಗ ಹೈಡ್ರೋ ಗಾಂಜಾ, ಕೊಕೇನ್, ಎಂಡಿಎಂಎ ಇದ್ದವು. ಪ್ರತಿ ಪಾರ್ಸೆಲ್‌ನಲ್ಲಿ 100 ಗ್ರಾಂ. ಮಾದಕ ವಸ್ತು ಇಡಲಾಗಿತ್ತು. ಮಹಜರು ಕಾರ್ಯ ನಡೆಸಲಾಗುತ್ತಿದ್ದು, ಮುಗಿದ ಬಳಿಕವಷ್ಟೇ ಎಷ್ಟು ಪ್ರಮಾಣದ ಡ್ರಗ್ಸ್ ಇದೆ ಎಂಬುದು ಗೊತ್ತಾಗಲಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಪಾರ್ಸೆಲ್‌ಗಳಲ್ಲಿ ಇಂಗ್ಲೆಂಡ್, ಥಾಯ್ಲೆಂಡ್, ನೆದರ್ಲೆಂಡ್ ಸೇರಿದಂತೆ ಹಲವು ದೇಶಗಳಿಂದ ಕಳುಹಿಸಿರುವ ವಿಳಾಸವಿದೆ. ಪಾರ್ಸೆಲ್ ತರಿಸಿಕೊಂಡಿದ್ದವರ ನಗರದ ವಿಳಾಸವನ್ನು ನಮೂದಿಸಲಾಗಿದೆ. ಆದರೆ, ಆ ವಿಳಾಸಕ್ಕೆ ತೆರಳಿ ವಿಚಾರಿಸಿದರೆ, ಸಂಬಂಧಪಟ್ಟ ವ್ಯಕ್ತಿ ವಾಸವಿರುವುದಿಲ್ಲ. ಪೊಲೀಸರಿಗೆ ಸಿಕ್ಕಿಬೀಳುವ ಭಯದಿಂದ ಪೆಡ್ಲರ್‌ಗಳು ಕೆಲವೊಂದು ಪಾರ್ಸೆಲ್‌ಗಳನ್ನು ಸ್ವೀಕರಿಸದೆ ಬಿಟ್ಟಿರುವ ಸಾಧ್ಯತೆಯಿದೆ. ಹೀಗಾಗಿ 2018ರಿಂದಲೂ ಮಾದಕವಸ್ತು ಪಾರ್ಸೆಲ್‌ಗಳು ಹಾಗೆಯೇ ಉಳಿದುಕೊಂಡಿವೆ' ಎಂದು ಮೂಲಗಳು ಹೇಳಿವೆ.

'ಬಹುತೇಕ ಪಾರ್ಸೆಲ್‌ಗಳಿಗೆ ನೀಡಿರುವ ವಿಳಾಸಗಳು ನಕಲಿಯೇ ಆಗಿವೆ. ಪ್ರಾಥಮಿಕ ತನಿಖೆಯಲ್ಲಿ ಡ್ರಗ್ಸ್ ಪಾರ್ಸೆಲ್‌ನಲ್ಲಿರುವ ವಿಳಾಸ ಹಾಗೂ ವ್ಯಕ್ತಿಗಳ ವಿವರ ನಕಲಿ ಎಂಬುದು ಗೊತ್ತಾಗಿದೆ. ಹಾಗಾಗಿ ಡ್ರಗ್ಸ್ ತರಿಸಿಕೊಂಡಿದ್ದವರು ಯಾರು? ಕಳಿಸಿದವರು ಯಾರು? ಎಂಬುದರ ಕುರಿತು ಹೆಚ್ಚಿನ ತನಿಖೆ ನಡೆಯುತ್ತಿದೆ' ಎಂದು ತಿಳಿಸಿವೆ.

ಕಾರ್ಖಾನೆಯಲ್ಲಿ ನಗದು, ಲ್ಯಾಪ್‌ಟಾಪ್ ಕದ್ದವನ ಸೆರೆ

ಅಪರಾಧ ಸುದ್ದಿ

ಬೆಂಗಳೂರು: ನಗರದ ವಿವಿಧೆಡೆ ಮನೆಗಳ ಬೀಗ ಮುರಿದು ಕಳವು ಮಾಡುತ್ತಿದ್ದ ಹಾಗೂ ಕದ್ದ ಮಾಲು ಪಡೆಯುತ್ತಿದ್ದ ಆರೋಪಿ ಸೇರಿ ಇಬ್ಬರನ್ನು ರಾಜಗೋಪಾಲ ನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಯಶವಂತಪುರ ನಿವಾಸಿ ಶ್ರೀನಿವಾಸ ಅಲಿಯಾಸ್ ಕರಾಟೆ ಸೀನ (35) ಮತ್ತು ದೇವನಹಳ್ಳಿ ನಿವಾಸಿ ಮಂಜುನಾಥ್ (47) ಎಂಬುವರನ್ನು ಬಂಧಿಸಿ, ₹14 ಲಕ್ಷ ಮೌಲ್ಯದ 245 ಗ್ರಾಂ. ತೂಕದ ಚಿನ್ನಾಭರಣ ಹಾಗೂ ಕೃತ್ಯಕ್ಕೆ ಬಳಸುತ್ತಿದ್ದ ದ್ವಿಚಕ್ರ ವಾಹನ ಮತ್ತು ಕಬ್ಬಿಣದ ರಾಡ್ ಜಪ್ತಿ ಮಾಡಲಾಗಿದೆ.

ಮೇ 7ರಂದು ಮುಂಜಾನೆ ದುಷ್ಕರ್ಮಿಗಳು ಪೀಣ್ಯ 2ನೇ ಹಂತದ ಕಾರ್ಖಾನೆಯೊಂದರ ಚಾವಣಿಯ ಶೀಟ್ ಕತ್ತರಿಸಿ ಒಳ ಪ್ರವೇಶಿಸಿ ₹ 55 ಸಾವಿರ ನಗದು, ಲ್ಯಾಪ್‌ಟಾಪ್, ಬಿಲ್ಲಿಂಗ್ ಸಿಗ್ನೇಚರ್ ಸೀಲ್ ಹಾಗೂ ಇತರೆ ವಸ್ತುಗಳನ್ನು ಕಳವು ಮಾಡಿದ್ದರು. ಕಾರ್ಖಾನೆ ಮಾಲೀಕರ ದೂರು ಆಧರಿಸಿ ಪೊಲೀಸರು ಪ್ರಕರಣ ದಾಖಲಿಸಿಕೊಂಡು, ತನಿಖೆ ನಡೆಸಿದ್ದರು.

'ಸಿ.ಸಿ.ಟಿ.ವಿ ಕ್ಯಾಮೆರಾ ಪರಿಶೀಲನೆ ವೇಳೆ ದೊರೆತ ಸುಳಿವು ಹಾಗೂ ಬಾತ್ಮೀದಾರರು ನೀಡಿದ ಮಾಹಿತಿ ಮೇರೆಗೆ ಆರೋಪಿ ಶ್ರೀನಿವಾಸ್ ಎಂಬಾತನನ್ನು ಬಸ್ ನಿಲ್ದಾಣ ಬಳಿ ಬಂಧಿಸಲಾಯಿತು. ಆರೋಪಿ ವೃತ್ತಿಪರ ಕಳ್ಳನಾಗಿದ್ದು, ಈತನ ವಿರುದ್ಧ 30ಕ್ಕೂ ಅಧಿಕ ಮನೆಗಳವು ಪ್ರಕರಣಗಳು ದಾಖಲಾಗಿವೆ. ಆರೋಪಿಯು ತನ್ನ ಸ್ನೇಹಿತನಿಗೆ ನೀಡಿದ್ದ ಚಿನ್ನಾಭರಣವನ್ನು ವಶಪಡಿಸಿಕೊಳ್ಳಲಾಯಿತು' ಎಂದು ಪೊಲೀಸರು ತಿಳಿಸಿದ್ದಾರೆ.

ಆರೋಪಿಯ ಬಂಧನದಿಂದ ರಾಜಗೋಪಾಲನಗರ ಪೊಲೀಸ್ ಠಾಣೆ ಮತ್ತು ಬಾಗಲಗುಂಟೆ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿನ ತಲಾ ಮೂರು ಮನೆ ಕಳವು ಪ್ರಕರಣಗಳು ಪತ್ತೆಯಾಗಿವೆ.

ಸುದ್ದಿ 2 ನಿಮಿಷ

ವಂಚನೆ: ಮೂವರ ಬಂಧನ

ಬೆಂಗಳೂರು: ಸಾರ್ವಜನಿಕರಿಂದ ಚೀಟಿ ಹಣ ಕಟ್ಟಿಸಿಕೊಂಡು ಕೋಟ್ಯಂತರ ರೂಪಾಯಿ ವಂಚಿಸಿದ್ದ ದಂಪತಿ ಸೇರಿ ಮೂವರನ್ನು ಕಾಡುಗೋಡಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಬೆಳತ್ತೂರು ನಿವಾಸಿಗಳಾದ ಮಹದೇವಮ್ಮ, ಪತಿ ಚಂದ್ರಶೇಖರ್ ಹಾಗೂ ಪುತ್ರ ಸಾಗರ್ ಎಂಬುವರನ್ನು ಬಂಧಿಸಿ, ವಿಚಾರಣೆ ನಡೆಸುತ್ತಿದ್ದಾರೆ.

'ಮಹದೇವಮ್ಮ ಕುಟುಂಬ ಹತ್ತು ವರ್ಷಗಳಿಂದ ಬೆಳತ್ತೂರಿನ ಬಾಡಿಗೆ ಮನೆಯಲ್ಲಿ ವಾಸವಿತ್ತು. ಚಂದ್ರಶೇಖರ್ ಟಿ.ವಿ ರಿಪೇರಿ ಕೆಲಸ ಮಾಡುತ್ತಿದ್ದರೆ, ಮಹದೇವಮ್ಮ ಅವರು ಚೀಟಿ ವ್ಯವಹಾರ ನಡೆಸುತ್ತಿದ್ದರು. ₹1 ರಿಂದ ₹10 ಲಕ್ಷದವರೆಗೆ ಚೀಟಿ ನಡೆಸುತ್ತಿದ್ದ ಅವರು, ಏಕಾಏಕಿ ಚೀಟಿ ಹಣ ತೆಗೆದುಕೊಂಡು ಪರಾರಿಯಾಗಿದ್ದರು. ಹಣ ಕಳೆದುಕೊಂಡವರು ನೀಡಿದ ದೂರಿನ ಮೇರೆಗೆ ಆರೋಪಿಗಳನ್ನು ಮೈಸೂರಿನಲ್ಲಿ ಬಂಧಿಸಲಾಯಿತು' ಎಂದು ಪೊಲೀಸರು ತಿಳಿಸಿದ್ದಾರೆ.

'ಮಹದೇವಮ್ಮ ಅವರು ಫೆಬ್ರುವರಿಯಿಂದಲೂ ನಾನಾ ಕಾರಣಗಳನ್ನು ನೀಡಿ ಚೀಟಿ ತೆಗೆದುಕೊಳ್ಳಲು ಅನುವು ಮಾಡಿಕೊಟ್ಟಿರಲಿಲ್ಲ. ಎರಡು ತಿಂಗಳ ಹಿಂದೆ ಮನೆ ಖಾಲಿ ಮಾಡಿಕೊಂಡು ಹೋಗಿದ್ದರು. ಯಾರ ಸಂಪರ್ಕಕ್ಕೂ ಸಿಕ್ಕಿರಲಿಲ್ಲ' ಎಂದು ಹೇಳಿದರು.

ಸುಮಾರು ₹1.5 ಕೋಟಿಗೂ ಹೆಚ್ಚು ವಂಚಿಸಿರುವ ಬಗ್ಗೆ ಮಾಹಿತಿಯಿದ್ದು, ಈ ಸಂಬಂಧ ತನಿಖೆ ಮುಂದುವರಿದಿದೆ ಎಂದು ತಿಳಿಸಿದ್ದಾರೆ.

ಮಹಿಳೆಯ ಸರ ಕಸಿದು ಪರಾರಿ

ಬೆಂಗಳೂರು: ಸ್ನೇಹಿತೆಯನ್ನು ಭೇಟಿಯಾಗಲು ಮಹಿಳೆಯೊಬ್ಬರು ರಸ್ತೆ ಬದಿ ನಿಂತಿದ್ದ ವೇಳೆ ದ್ವಿಚಕ್ರ ವಾಹನದಲ್ಲಿ ಬಂದ ಇಬ್ಬರು ಅಪರಿಚಿತರು ಅವರ ಕುತ್ತಿಗೆಯಲ್ಲಿದ್ದ ಚಿನ್ನದ ಸರ ಕಿತ್ತುಕೊಂಡು ಪರಾರಿಯಾಗಿರುವ ಘಟನೆ ಚಂದ್ರಾಲೇಔಟ್ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.

ಶ್ರೀನಗರ ನಿವಾಸಿ ರೇಖಾ ಅವರು ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ದುಷ್ಕರ್ಮಿಗಳ ಪತ್ತೆಗೆ ತನಿಖೆ ಕೈಗೊಳ್ಳಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ರೇಖಾ ಅವರು ತಮ್ಮ ಸ್ನೇಹಿತೆಯನ್ನು ಭೇಟಿಯಾಗಲು ಶನಿವಾರ ರಾತ್ರಿ 8.30ಕ್ಕೆ ನಾಗರಬಾವಿ ವೃತ್ತಕ್ಕೆ ಬಂದಿದ್ದರು. ಅಲ್ಲಿಗೆ ದ್ವಿಚಕ್ರ ವಾಹನದಲ್ಲಿ ಬಂದ ಇಬ್ಬರು ಅಪರಿಚಿತರು, ಅವರ ಕುತ್ತಿಗೆಗೆ ಕೈ ಹಾಕಿ 10 ಗ್ರಾಂ. ತೂಕದ ಚಿನ್ನದ ಸರ ಕಿತ್ತುಕೊಂಡು ಪರಾರಿಯಾಗಿದ್ದಾರೆ' ಎಂದು ಪೊಲೀಸರು ಹೇಳಿದ್ದಾರೆ.

ಚಂದ್ರಾಲೇಔಟ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ದುಷ್ಕರ್ಮಿಗಳ ಪತ್ತೆಗೆ ಪೊಲೀಸರು ಶೋಧ ಮುಂದುವರೆಸಿದ್ದಾರೆ.

ಛಲವಾದಿ ನಾರಾಯಣಸ್ವಾಮಿ ಅಭಿನಂದನಾ ಸಮಾರಂಭದಲ್ಲಿ ಸಲಹೆ

ದಲಿತ ಸಂಘಟನೆಗಳು ಒಂದಾಗಲಿ: ಸಂತೋಷ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯಾರದ್ದೋ ಸ್ವಾರ್ಥಕ್ಕೆ ಎರಡು ಸಂಘಟನೆಗಳು ಒಡೆದು ಹಲವು ತುಂಡುಗಳಾಗಿವೆ. ಅದು ರೈತ ಸಂಘ ಮತ್ತು ದಲಿತ ಸಂಘರ್ಷ ಸಮಿತಿ. ಮತ್ತೆ ಒಂದೇ ಧ್ವನಿ ಆಗದೇ ಇದ್ದರೆ ಸಮಾಜಕ್ಕೆ ಬಲ ಬರುವುದಿಲ್ಲ ಎಂದು ಬಿಜೆಪಿ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್. ಸಂತೋಷ್ ಸಲಹೆ ನೀಡಿದರು.

ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಪದವೀಧರರ ಸಂಘವು ಭಾನುವಾರ ಆಯೋಜಿಸಿದ್ದ ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣ ಸ್ವಾಮಿ ಅವರ ಅಭಿನಂದನಾ ಸಮಾರಂಭದಲ್ಲಿ ಅವರು ಮಾತನಾಡಿದರು.

'ರೈತ ಸಂಘ ಒಂದೇ ಆಗಿದ್ದರೆ ರಾಜ್ಯ ಹೇಗಿರುತ್ತಿತ್ತು? ದಲಿತ ಸಂಘಟನೆಗಳು ಒಂದೇ ಆಗಿದ್ದರೆ ಹೇಗಿರುತ್ತಿತ್ತು ಎಂದು ಯೋಚಿಸಬೇಕಿದೆ. ಭಿನ್ನಾಭಿಪ್ರಾಯ ಏನೇ ಇದ್ದರೂ ಅನ್ಯಾಯದ ವಿರುದ್ಧ ಧ್ವನಿ ಎತ್ತಲು, ಸಮಾಜವನ್ನು ಏಳಿಗೆಯತ್ತ ಒಯ್ಯಲು ಒಂದಾಗಿರಬೇಕು' ಎಂದರು.

'ಮಾತಿನ ಪ್ರಚೋದನೆಗೆ ಒಳಗಾಗಿ ಬೇರೆ ಪಕ್ಷದಲ್ಲಿದ್ದ ನಾರಾಯಣಸ್ವಾಮಿ ಮನಸ್ಸು ಮಾಗಿದ ಮೇಲೆ, ಸರಿ ಯಾವುದು, ತಪ್ಪು ಯಾವುದು ಎಂದು ಗೊತ್ತಾದ ಮೇಲೆ ಸತ್ಯ ಮತ್ತು ಪ್ರಾಮಾಣಿಕತೆ ಇರುವ ಪಕ್ಷಕ್ಕೆ ಬಂದಿದ್ದಾರೆ. ಗರ್ಭಗುಡಿಯಲ್ಲಿ ಕುಳಿತಿದ್ದಾರೆ. ಅವರು ಸಮಾಜಕ್ಕೆ ಇನ್ನಷ್ಟು ಕೆಲಸ ಮಾಡಬೇಕು' ಎಂದು ತಿಳಿಸಿದರು.

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಮಾತನಾಡಿ, 'ಸಾಮಾಜಿಕ ನ್ಯಾಯದ ಪರಿಕಲ್ಪನೆ ಮತ್ತು ಬಿ.ಎಸ್. ಯಡಿಯೂರಪ್ಪ ಅವರ ಸಲಹೆಯನ್ನು ಪಕ್ಷದ ರಾಷ್ಟ್ರೀಯ ಅಧ್ಯಕ್ಷರಿಗೆ ತಿಳಿಸಿ ಹೋರಾಟಗಾರ ನಾರಾಯಣಸ್ವಾಮಿ ಅವರನ್ನು ವಿರೋಧ ಪಕ್ಷದ ನಾಯಕರನ್ನಾಗಿ ಆಯ್ಕೆ ಮಾಡಲಾಗಿದೆ' ಎಂದು ಹೇಳಿದರು.

ಸಂಸದ ಗೋವಿಂದ ಎಂ. ಕಾರಜೋಳ ಅಧ್ಯಕ್ಷತೆ ವಹಿಸಿದ್ದರು. ಬಸವ ಮಹಾಮನೆಯ ಅಧ್ಯಕ್ಷ ಸಿದ್ಧರಾಮ ಬೆಲ್ದಾಳ ಶರಣರು, ಉರಿಲಿಂಗಪೆದ್ದಿಮಠದ ಜ್ಞಾನಪ್ರಕಾಶ ಸ್ವಾಮೀಜಿ, ಛಲವಾದಿ ಗುರುಪೀಠದ ಬಸವನಾಗಿದೇವ ಸ್ವಾಮೀಜಿ, ಸೇವಾಲಾಲ್ ಬಂಜಾರ ಗುರು ಪೀಠದ ಸೇವಾಲಾಲ್ ಸರ್ದಾರ್ ಸ್ವಾಮೀಜಿ, ಮಾಜಿ ಸಚಿವರು, ಶಾಸಕರು, ಸಂಸದರು, ಬಿಜೆಪಿ ಮುಖಂಡರು ಭಾಗವಹಿಸಿದ್ದರು.

ಛಲವಾದಿಯಾದ ತಿಮ್ಮಯ್ಯ ನಾರಾಯಣಸ್ವಾಮಿ

'ನನ್ನ ಹೆಸರು ತಿಮ್ಮಯ್ಯ ನಾರಾಯಣಸ್ವಾಮಿ ಆಗಿತ್ತು. ಜನಸೇವೆ ಮಾಡಬೇಕು ಎಂದು ರಾಜಕಾರಣಕ್ಕೆ ಬಂದೆ. ಛಲದಿಂದ ಗುರಿ ಸಾಧಿಸುವುದು ನನ್ನ ಇರಾದೆಯಾಗಿತ್ತು. ನನ್ನ ಹೆಸರನ್ನು ಛಲವಾದಿ ನಾರಾಯಣ ಸ್ವಾಮಿ ಎಂದು ಬದಲಾಯಿಸಿಕೊಂಡೆ' ಎಂದು ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣ ಸ್ವಾಮಿ ತಿಳಿಸಿದರು.

'ನನ್ನ ಸಮುದಾಯದ ಹೆಸರು ಚಲುವಾದಿ ಎಂದಾಗಿತ್ತು. ನಾನು ಛಲವಾದಿ ಸಂಘಟನೆ ಕಟ್ಟಿ ಹೆಸರು ಬದಲಾಯಿಸಿಕೊಂಡ ಮೇಲೆ ಸಮುದಾಯದ ಹೆಸರು ಛಲವಾದಿಯಾಯಿತು' ಎಂದರು.

ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಪದವೀಧರರ ಸಂಘವು ಭಾನುವಾರ ಆಯೋಜಿಸಿದ್ದ ಅಭಿನಂದನಾ ಸಮಾರಂಭದಲ್ಲಿ ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿಗೆ ಅವರ ಪತ್ನಿ ಸುನಂದಾ ಅವರ ಜೊತೆಗೆ ಗೌರವಿಸಲಾಯಿತು. ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ, ಸಂಸದ ಗೋವಿಂದ ಕಾರಜೋಳ, ಮಾಜಿ ಸಂಸದ ಎಸ್. ಮುನಿಸ್ವಾಮಿ, ಮಾಜಿ ಸಚಿವ ಹರತಾಳ ಹಾಲಪ್ಪ, ಮಾಜಿ ಶಾಸಕರಾದ ವೈ. ಸಂಪಂಗಿ, ಎನ್. ಮಹೇಶ್, ಬಿಜೆಪಿ ರಾಷ್ಟ್ರೀಯ ಸಂಘಟನಾ ಪ್ರದಾನ ಕಾರ್ಯದರ್ಶಿ ಬಿ.ಎಲ್. ಸಂತೋಷ್ ಉಪಸ್ಥಿತರಿದ್ದರು

ಲಾರಿ ಡಿಕ್ಕಿ: ಬೈಕ್ ಸವಾರ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೇಗವಾಗಿ ಬಂದ ಲಾರಿಯೊಂದು ಡಿಕ್ಕಿ ಹೊಡೆದು ದ್ವಿಚಕ್ರ ವಾಹನ ಸವಾರ ಮೃತಪಟ್ಟಿರುವ ಘಟನೆ ಪೀಣ್ಯ ಸಂಚಾರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.

ರಾಜಗೋಪಾಲ ನಗರ ನಿವಾಸಿ ಶೇಷಾದ್ರಿ (23) ಮೃತ ಸವಾರ.

'ಕೆಲಸ ಮುಗಿಸಿಕೊಂಡು ಶೇಷಾದ್ರಿ ಅವರು ಯಶವಂತಪುರ ಕಡೆಗೆ ರಾತ್ರಿ 10 ಗಂಟೆಗೆ ಬೈಕ್‌ನಲ್ಲಿ ಬರುತ್ತಿದ್ದರು. ಅತಿವೇಗ ಹಾಗೂ ಅಜಾಗರೂಕತೆಯಿಂದ ಬಂದ ಲಾರಿ ಚಾಲಕ ದಾಸರಹಳ್ಳಿ ಮೆಟ್ರೊ ನಿಲ್ದಾಣ ಸಮೀಪ ಹಿಂದಿನಿಂದ ಬೈಕ್‌ಗೆ ಡಿಕ್ಕಿ ಹೊಡೆದಿದ್ದಾನೆ. ಕೆಳಗೆ ಬಿದ್ದ ಶೇಷಾದ್ರಿ ಮೇಲೆ ಲಾರಿ ಚಕ್ರಗಳು ಹರಿದು ಸ್ಥಳದಲ್ಲಿಯೇ ಮೃತಪಟ್ಟರು' ಎಂದು ಪೊಲೀಸರು ತಿಳಿಸಿದ್ದಾರೆ.

ಘಟನೆ ಬಳಿಕ ಲಾರಿ ಚಾಲಕ ಪರಾರಿಯಾಗಿದ್ದು, ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಲಾರಿಯನ್ನು ವಶಕ್ಕೆ ಪಡೆದಿದ್ದು, ಚಾಲಕನ ಪತ್ತೆ ಕಾರ್ಯ ನಡೆಯುತ್ತಿದೆ.

ಗುಂಪು ದಾಳಿ: ವ್ಯಕ್ತಿ ಸಾವು

ಪ್ರಜಾವಾಣಿ ವಾರ್ತೆ

ಕೋಲ್ಕತ್ತ: ಪಶ್ಚಿಮ ಬಂಗಾಳದ ಪೂರ್ವ ಮೇದಿನಿಪುರ್ ಜಿಲ್ಲೆಯಲ್ಲಿ ಮಹಿಳೆ ಮೇಲೆ ಅತ್ಯಾಚಾರ ಎಸಗಿ ಆಕೆಗೆ ವಿಷವುಣಿಸಿದ್ದಾನೆಂದು ಆರೋಪಿಸಿ ಆಕ್ರೋಶಗೊಂಡ ಗ್ರಾಮಸ್ಥರ ಗುಂಪೊಂದು ವ್ಯಕ್ತಿಯೊಬ್ಬನನ್ನು ಥಳಿಸಿದ್ದು, ಆ ವ್ಯಕ್ತಿಯು ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾನೆ.

'ಗುಂಪು ದಾಳಿಗೆ ಒಳಗಾದ ವ್ಯಕ್ತಿಯು ಶುಕ್ರವಾರ ಮಹಿಳೆಯ ಮೇಲೆ ಅತ್ಯಾಚಾರ ಎಸಗಿದ್ದಾನೆ' ಎಂದು ಸ್ಥಳೀಯರು ಆರೋಪಿಸಿದ್ದಾರೆ.

ಮಹಿಳೆ ಭಾನುವಾರ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ. ಕುಪಿತ ಗ್ರಾಮಸ್ಥರು ಸ್ಥಳೀಯ ಮಹಿಳೆಯರ ನೇತೃತ್ವದಲ್ಲಿ ವ್ಯಕ್ತಿಯನ್ನು ಮನೆಯಿಂದ ಹೊರಗೆಳೆದು ಥಳಿಸಿದ್ದಾರೆ. ತೀವ್ರ ಗಾಯಗೊಂಡಿದ್ದ ವ್ಯಕ್ತಿಯನ್ನು ಪೊಲೀಸರು ರಕ್ಷಿಸಿ ಆಸ್ಪತ್ರೆಗೆ ದಾಖಲಿಸಿದ್ದರು. ಆದರೆ, ಆ ವ್ಯಕ್ತಿ ಚಿಕಿತ್ಸೆಗೆ ಸ್ಪಂದಿಸದೆ ಮೃತಪಟ್ಟಿದ್ದಾನೆ.

ಸಫಾರಿ ವಾಹನಕ್ಕೆ ಜಿಗಿದ ಚಿರತೆ

ಆನೇಕಲ್: ಬನ್ನೇರುಘಟ್ಟ ಜೈವಿಕ ಉದ್ಯಾನದ ಚಿರತೆ ಸಫಾರಿಯಲ್ಲಿ ಚಿರತೆಯೊಂದು ಇದ್ದಕ್ಕಿದ್ದಂತೆ ಸಫಾರಿ ವಾಹನದ ಕಿಟಕಿಯ ಮೇಲೆ ಹತ್ತಿದ ಘಟನೆ ನಡೆದಿದೆ. ಇದರಿಂದಾಗಿ ಸಫಾರಿ ವಾಹನದಲ್ಲಿದ್ದ ಪ್ರವಾಸಿಗರು ಕೆಲ ಕಾಲ ಆತಂಕಕ್ಕೆ ಒಳಗಾದರು.

ಘಟನೆಯಿಂದ ಭಯಗೊಂಡ ಪ್ರವಾಸಿಗರು ಕಿರುಚಾಡಿದ್ದಾರೆ. ಈ ದೃಶ್ಯವನ್ನು ಹಿಂಬದಿಯ ಮತ್ತೊಂದು ಸಫಾರಿ ವಾಹನದಲ್ಲಿದ್ದ ಪ್ರವಾಸಿಗರು ಸೆರೆಹಿಡಿದಿದ್ದು ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ.

ವಾಕಥಾನ್‌ನಲ್ಲಿ ಸಚಿವ ದಿನೇಶ್ ಗುಂಡೂರಾವ್ ಕಳವಳ

'ಮಹಿಳೆಯರಲ್ಲಿ ಸ್ತನ ಕ್ಯಾನ್ಸರ್ ಹೆಚ್ಚಳ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬದಲಾದ ಜೀವನಶೈಲಿ, ಪಾಶ್ಚಾತ್ಯ ಆಹಾರ ಪದ್ಧತಿ ಸೇರಿ ವಿವಿಧ ಕಾರಣಗಳಿಂದ ಮಹಿಳೆಯರಲ್ಲಿ ಸ್ತನ ಕ್ಯಾನ್ಸರ್ ಹೆಚ್ಚಳವಾಗುತ್ತಿದೆ. ಈ ರೋಗದ ಬಗ್ಗೆ ಜಾಗೃತಿ ಮೂಡಿಸಬೇಕಿದೆ' ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

ಸ್ತನ ಕ್ಯಾನ್ಸರ್ ಜಾಗೃತಿ ಮಾಸದ ಅಂಗವಾಗಿ ಬನ್ನೇರುಘಟ್ಟ ರಸ್ತೆಯ ಫೋರ್ಟಿಸ್ ಆಸ್ಪತ್ರೆ ನಗರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ 'ಪಿಂಕ್ ಸ್ಟ್ರಾಂಗ್' ವಾಕಥಾನ್‌ಗೆ ಚಾಲನೆ ನೀಡಿ, ಮಾತನಾಡಿದರು.

'ರೋಗವನ್ನು ಶೀಘ್ರವಾಗಿ ಪತ್ತೆ ಮಾಡಿ, ಸಕಾಲದಲ್ಲಿ ಚಿಕಿತ್ಸೆ ಒದಗಿಸಿದಲ್ಲಿ ಸುಲಭವಾಗಿ ವಾಸಿ ಮಾಡಬಹುದಾಗಿದೆ. ಮಹಿಳೆಯರು ಸ್ತನ ಕ್ಯಾನ್ಸರ್ ಲಕ್ಷಣದ ಬಗ್ಗೆ ತಿಳಿದಲ್ಲಿ ಮಾತ್ರ ರೋಗ ಉಲ್ಬಣ ತಡೆ ಸಾಧ್ಯ. ಆದ್ದರಿಂದ ಸ್ತನ ಕ್ಯಾನ್ಸರ್ ಬಗ್ಗೆ ಜಾಗೃತಿ ಹೆಚ್ಚಬೇಕು. ಮಹಿಳೆಯರು ಆರೋಗ್ಯ ಕಡೆಗಣಿಸದೆ, ರೋಗ ಲಕ್ಷಣಗಳು ಕಂಡುಬಂದಲ್ಲಿ ತಪಾಸಣೆ ಮಾಡಿಸಿಕೊಳ್ಳಬೇಕು' ಎಂದು ಅಭಿಪ್ರಾಯಪಟ್ಟರು.

'ಪಿಂಕ್ ಸ್ಟ್ರಾಂಗ್' ವಾಕಥಾನ್‌ನಲ್ಲಿ ಸ್ತನ ಕ್ಯಾನ್ಸರ್ ಬಗ್ಗೆ ಜಾಗೃತಿ ಮೂಡಿಸಲಾಯಿತು

ಫೋರ್ಟಿಸ್ ಆಸ್ಪತ್ರೆಯ ಕ್ಯಾನ್ಸರ್ ತಜ್ಞೆ ಡಾ.ಮೋನಿಕಾ ಪನ್ವಾರಿ, 'ಸ್ತನ ಕ್ಯಾನ್ಸರ್ ವಯಸ್ಸಾದ ಮಹಿಳೆಯರಿಗೆ ಮಾತ್ರ ಸೀಮಿತವಾಗಿರದೆ, ಯುವತಿಯರಲ್ಲಿಯೂ ಕಂಡುಬರುತ್ತಿದೆ. ನಿರಂತರ ತಪಾಸಣೆ ಮತ್ತು ಆರಂಭಿಕ ಹಂತದಲ್ಲಿಯೇ ರೋಗ ಪತ್ತೆಯಿಂದ ಮಾತ್ರ ಕ್ಯಾನ್ಸರ್ ತಡೆಗಟ್ಟಲು ಸಾಧ್ಯ. ಸ್ತನ ಕ್ಯಾನ್ಸರ್‌ಗೆ ಸಂಬಂಧಿಸಿದಂತೆ ಮಹಿಳೆಯರೇ ಸ್ವಯಂ ಪರೀಕ್ಷೆ ಮಾಡಿಕೊಳ್ಳಬಹುದಾಗಿದೆ. ಒಂದು ವೇಳೆ ತಮ್ಮ ಸ್ತನದಲ್ಲಿ ಗಂಟಿನ ರೀತಿ ಕಾಣಿಸಿಕೊಂಡರೆ ವೈದ್ಯರನ್ನು ಸಂಪರ್ಕಿಸಬೇಕು' ಎಂದರು.

5 ಕಿ.ಮೀ. ದೂರದ ಈ ವಾಕಥಾನ್‌ನಲ್ಲಿ ಸ್ತನ ಕ್ಯಾನ್ಸರ್‌ನಿಂದ ಗುಣಮುಖರಾದವರು, ಅವರ ಕುಟುಂಬಸ್ಥರು, ಸಾರ್ವಜನಿಕರು, ವೈದ್ಯರು ಹಾಗೂ ಆಸ್ಪತ್ರೆ ಸಿಬ್ಬಂದಿ ಸೇರಿ 450ಕ್ಕೂ ಹೆಚ್ಚು ಜನರು ಪಾಲ್ಗೊಂಡಿದ್ದರು.

ಖರ್ಗೆ– ಡಿಕೆಶಿ ಸಮಾಲೋಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಭಾನುವಾರ ರಾತ್ರಿ ಭೇಟಿ ಮಾಡಿ ಸಮಾಲೋಚನೆ ನಡೆಸಿದರು.

ಸದಾಶಿವನಗರದಲ್ಲಿರುವ ಖರ್ಗೆ ಅವರ ನಿವಾಸಕ್ಕೆ ತೆರಳಿದ ಶಿವಕುಮಾರ್, ರಾಜ್ಯ ರಾಜಕೀಯದಲ್ಲಿನ ಪ್ರಸಕ್ತ ವಿದ್ಯಮಾನಗಳ ಕುರಿತು ಅರ್ಧ ಗಂಟೆಗೂ ಹೆಚ್ಚು ಕಾಲ ಮಾತುಕತೆ ನಡೆಸಿದರು.

ಮುಡಾ ನಿವೇಶನ ಹಂಚಿಕೆ ವಿಚಾರದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಲೋಕಾಯುಕ್ತ ಮತ್ತು ಜಾರಿ ನಿರ್ದೇಶನಾಲಯ ಪ್ರಕರಣ ದಾಖಲಿಸಿಕೊಂಡ ಬಳಿಕದ ರಾಜಕೀಯ ಬೆಳವಣಿಗೆಗಳ ಬಗ್ಗೆ ಇಬ್ಬರು ನಾಯಕರೂ ಚರ್ಚೆ ನಡೆಸಿದರು. ರಾಜ್ಯದಲ್ಲಿ ನಡೆದಿರುವ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ (ಜಾತಿ ಜನಗಣತಿ) ವರದಿ ಕುರಿತು ಕೂಡಾ ವಿಚಾರ ವಿನಿಮಯ ನಡೆಸಿದರು ಎಂದು ಗೊತ್ತಾಗಿದೆ.

ಸೀತಾರಾಂ ಯೆಚೂರಿ ಅವರ ಶ್ರದ್ಧಾಂಜಲಿ ಸಭೆಯಲ್ಲಿ ಯೆಚೂರಿ ಅವರ ಭಾವ ಚಿತ್ರಕ್ಕೆ ನಮನ ಸಲ್ಲಿಸಲಾಯಿತು. ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ವಿ.ಗೋಪಾಲಗೌಡ (ಎಡದಿಂದ), ಕೇರಳ ಸಿಪಿಎಂನ ಎಂ.ಎ.ಬೇಬಿ, ಕರ್ನಾಟಕ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಎಚ್.ಎನ್.ನಾಗಮೋಹನದಾಸ್, ಸಾಹಿತಿ ಬರಗೂರು ರಾಮಚಂದ್ರಪ್ಪ, ಎಎಪಿ ರಾಜ್ಯ ಘಟಕದ ಅಧ್ಯಕ್ಷ ಮುಖ್ಯಮಂತ್ರಿ ಚಂದ್ರು ಪಾಲ್ಗೊಂಡಿದ್ದರು ಪ್ರಜಾವಾಣಿ ಚಿತ್ರ

'ಕಾಂಗ್ರೆಸ್‌ಗೆ ಜತೆಯಾದರೂ ಸಿದ್ಧಾಂತ ಬಿಡದ ಯೆಚೂರಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಾಂಗ್ರೆಸ್ ಅನ್ನು ವಿರೋಧಿಸುತ್ತಿದ್ದವರೇ ಕಾಂಗ್ರೆಸ್ ಜತೆ ಕೈಜೋಡಿಸುವ ಸ್ಥಿತಿ ಎದುರಾಗಿತ್ತು. ಅದನ್ನು ಸರಿಯಾಗಿ ನಿರ್ವಹಿಸಿದ ಶ್ರೇಯ ಸೀತಾರಾಂ ಯೆಚೂರಿ ಅವರಿಗೆ ಸಲ್ಲುತ್ತದೆ' ಎಂದು ಸಾಹಿತಿ ಬರಗೂರು ರಾಮಚಂದ್ರಪ್ಪ ಅಭಿಪ್ರಾಯಪಟ್ಟರು.

ನಗರದಲ್ಲಿ ಶನಿವಾರ ಸಿಪಿಎಂ ಆಯೋಜಿಸಿದ್ದ 'ಕಾಮ್ರೇಡ್ ಸೀತಾರಾಂ ಯೆಚೂರಿ ಶ್ರದ್ಧಾಂಜಲಿ ಸಭೆ'ಯಲ್ಲಿ ಮಾತನಾಡಿದ ಅವರು, 'ಈ ಸಭೆಯಲ್ಲಿ ಇರುವವರೆಲ್ಲರೂ ಒಂದೊಮ್ಮೆ ಕಾಂಗ್ರೆಸ್‌ನ ಕಡುವಿರೋಧಿಗಳಾಗಿದ್ದರು. ಆದರೆ ಧಾರ್ಮಿಕ ಮೂಲಭೂತವಾದ ತೀವ್ರವಾಗಿ, ದ್ವೇಷ ಬಿತ್ತುವುದು ಹೆಚ್ಚಾದಾಗ ಕಾಂಗ್ರೆಸ್ ಜೊತೆಗೇ ಕೈಜೋಡಿಸಬೇಕಾಯಿತು' ಎಂದರು.

'ಎಡ ಪಕ್ಷಗಳು ಕಾಂಗ್ರೆಸ್ ಜೊತೆಗೆ ಸೇರದೇ ಉಳಿದಿದ್ದರೆ, ದೇಶದ ಸ್ಥಿತಿ ಇನ್ನಷ್ಟು ಹೀನಾಯವಾಗುತ್ತಿತ್ತು. ಅಂತಹ ಅಪಾಯವನ್ನು ಯೆಚೂರಿ ಅವರು ತಪ್ಪಿಸಿದರು. ಕಾಂಗ್ರೆಸ್ ಜೊತೆಗೆ ಹೋದರೂ ತಮ್ಮ ಮತ್ತು ತಮ್ಮ ಪಕ್ಷದ ಮೂಲ ಆಶಯ ಹಾಗೂ ಸಿದ್ಧಾಂತವನ್ನು ಅವರು ಬಿಟ್ಟುಕೊಟ್ಟಿರಲಿಲ್ಲ' ಎಂದರು.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology and Painting work. Call-9880916988

REAL ESTATE SELLING

Flat

Banashankari

DUPLEX THREE and Half Bedroom Luxurious Penthouse Title Clear OC 3118 sqft Rs 2.53Cr Vegetarians 9845228595 9844021380

JOB OPPORTUNITIES

Wanted

WANTED FEMALE Office Assistant Qulification Any Degree Good Communication Skills English, Hindi, In around Rajajinagar 9108458798/ 9845579620

PERSONAL

Change of Name

I, ZIAUR RAHAMAN, R/O 514 H Block,Beedi Workers Colony, Kengeri Upanagara, Bangalore-560060, have corrected my name from ZIAUR REHAMAN to ZIAUR RAHAMAN. Vide Affidavit Date 30.9.2024 before Notary Mr.Ravi. Certificate No:IN-K42955303918253.W

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

DH Classifieds More value, more impact | ಪ್ರಜಾವಾಣಿ
RECRUITMENT
BOOK YOUR JOB ADS IN DH ALL KARNATAKA + PRAJAVANI BENGALURU CITY ON WEDNESDAY + SUNDAY
@ 2481/-* FOR 15 WORDS
*Conditions apply
www.dhclassifieds.com BOOK NOW
For more details contact:
+91 9901641752 | +91 9845114560 | +91 9900428036

ನಿಧನ ವಾರ್ತೆ

ವಿವೇಕ್ ಎನ್.

ಬೆಂಗಳೂರು: ನೆಲಮಂಗಲ ಸಮೀಪದ ಅರಿಶಿನಕುಂಟೆ ನಿವಾಸಿ ವಾಣಿಜ್ಯ ತೆರಿಗೆ ಇಲಾಖೆಯ ಉದ್ಯೋಗಿ ವಿವೇಕ್ ಎನ್. (50) ಅವರು ಭಾನುವಾರ ನಿಧನರಾದರು. ಮೃತರಿಗೆ ಪತ್ನಿ, ಒಬ್ಬ ಪುತ್ರ, ಒಬ್ಬ ಪುತ್ರಿ ಇದ್ದಾರೆ.

ಸಂಜೆ ನೆಲಮಂಗಲದಲ್ಲಿ ಅಂತ್ಯಕ್ರಿಯೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ವಿಮಾನ ನಿಲ್ದಾಣದಲ್ಲಿ ಸರ್ವರ್ ಸಮಸ್ಯೆ: ಪರದಾಟ

ಪ್ರಜಾವಾಣಿ ವಾರ್ತೆ

ದೇವನಹಳ್ಳಿ: ಇಲ್ಲಿನ ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದ ಟರ್ಮಿನಲ್-1ರಲ್ಲಿ ಶನಿವಾರ ಮಧ್ಯಾಹ್ನ ವಿಮಾನ ನಿಲ್ದಾಣಕ್ಕೆ ಬಂದಿದ್ದ ಪ್ರಯಾಣಿಕರು ಇಂಡಿಗೋ ಏರ್‌ಲೈನ್ಸ್ ಸಂಸ್ಥೆಯ ಸರ್ವರ್ ಸಮಸ್ಯೆಯಿಂದಾಗಿ ಪರದಾಡಿದರು.

ದೇವನಹಳ್ಳಿ ವಿಮಾನ ನಿಲ್ದಾಣದಿಂದ ದೇಶದ ವಿವಿಧ ಭಾಗಗಳಿಗೆ ತೆರಳಬೇಕಿದ್ದ ಪ್ರಯಾಣಿಕರು ಬೋರ್ಡಿಂಗ್ ಪಾಸ್ ಪಡೆಯಲು ತಾಂತ್ರಿಕ ಸಮಸ್ಯೆ ಉಂಟಾಗಿದ್ದ ಪರಿಣಾಮ ಚೆಕ್ ಇನ್ ಆಗಲು ಆಗದೇ ಗಂಟೆಗಟ್ಟಲೇ ಸರತಿ ಸಾಲಿನಲ್ಲಿ ನಿಲ್ಲುವಂತಾಗಿತ್ತು.

ತಾಂತ್ರಿಕ ಸಮಸ್ಯೆಯಿಂದಾಗಿ ಕೆಲ ವಿಮಾನಗಳ ಹಾರಾಟದ ಸಮಯವನ್ನು ಏರ್‌ಲೈನ್ಸ್ ಸಿಬ್ಬಂದಿ ಬದಲಾಯಿಸಿದ್ದಾರೆ. ಪ್ರಯಾಣಿಕರು ವಿಮಾನ ನಿಲ್ದಾಣದಿಂದ ಹೊರ ಹೋಗಲು ಸಹ ಚೆಕ್ ಔಟ್ ಆಗಲು ಸಾಧ್ಯವಾಗದೇ ಸಂಕಷ್ಟ ಎದುರಿಸಿದರು.

ಇಂಡಿಗೋ ವಿಮಾನ ನಿಲ್ದಾಣದ ಕೌಂಟರ್‌ಗಳಲ್ಲಿ ಚೆಕ್ ಇನ್ ಹಾಗೂ ಚೆಕ್‌ಔಟ್ ಆಗಲು ಪ್ರಯಾಣಿಕರು ಸರತಿ ಸಾಲಿನಲ್ಲಿ ತಮ್ಮ ಲಗೇಜ್‌ನೊಂದಿಗೆ ಬೀಡು ಬಿಟ್ಟಿದ್ದರು. ಬೆಳಿಗ್ಗೆ 11ರಿಂದ ಆರಂಭವಾದ ಈ ಸಮಸ್ಯೆ ಮಧ್ಯಾಹ್ನದವರೆಗೂ ಮುಂದುವರೆದಿತ್ತು. ನಾಲ್ಕೈದು ಗಂಟೆಗಳ ಬಳಿಕ ಸಮಸ್ಯೆ ಬಗೆಹರಿಯಿತು.

ನಗರದಲ್ಲಿ ಇಂದು

70ನೇ ವನ್ಯಜೀವಿ ಸಪ್ತಾಹದ ಸಮಾರೋಪ ಸಮಾರಂಭ: ಮುಖ್ಯ ಅತಿಥಿ: ಈಶ್ವರ್ ಖಂಡ್ರೆ, ಅಧ್ಯಕ್ಷತೆ: ಮಂಜುನಾಥ್ ಪ್ರಸಾದ್, ಆಯೋಜನೆ: ಅರಣ್ಯ ಇಲಾಖೆ, ಸ್ಥಳ: ಅರಣ್ಯ ಭವನ, 18ನೇ ಅಡ್ಡ ರಸ್ತೆ, ಮಲ್ಲೇಶ್ವರ, ಬೆಳಿಗ್ಗೆ 11.30

'ಐಸಿಡಿಎಸ್–50, ಯೋಜನೆಯಿಂದ ಕಾಯ್ದೆಯೆಡೆಗೆ– ಪೌಷ್ಟಿಕತೆ ಮತ್ತು ಪೂರ್ವ ಪ್ರಾಥಮಿಕ ಶಿಕ್ಷಣದ ಹಕ್ಕಿನೆಡೆಗೆ' ವಿಚಾರಸಂಕಿರಣ: 'ಐಸಿಡಿಎಸ್‌ನಲ್ಲಿ ಒಕ್ಕೂಟ ಸರ್ಕಾರದ ಪಾತ್ರ', ಉದ್ಘಾಟನೆ: ವಿ. ಸೋಮಣ್ಣ, ಮುಖ್ಯ ಅತಿಥಿ: ಎಚ್.ಎಸ್. ಸುನಂದಾ, ಉಪಸ್ಥಿತಿ: ವಿನಯ ಶ್ರೀನಿವಾಸ, ಪ್ರೊ.ಟಿ.ಆರ್. ಚಂದ್ರಶೇಖರ್, ಅಧ್ಯಕ್ಷತೆ: ಕೆ. ನಾಗರತ್ನಮ್ಮ, 'ಐಸಿಡಿಎಸ್‌ನಲ್ಲಿ ರಾಜ್ಯ ಸರ್ಕಾರಗಳ ಪಾತ್ರ' ವಿಚಾರಸಂಕಿರಣ: ಉದ್ಘಾಟನೆ: ಡಿ.ಕೆ. ಶಿವಕುಮಾರ್, ಮುಖ್ಯ ಅತಿಥಿ: ಕರೆಮ್ಮ ಜಿ. ನಾಯಕ್, ಅಧ್ಯಕ್ಷತೆ: ಜಿ.ಸಿ. ಬಯ್ಯಾರೆಡ್ಡಿ, ಉಪಸ್ಥಿತಿ: ಕೆ.ಎಸ್. ವಿಮಲಾ, ನಳಿನಾಕ್ಷಿ, ಆಯೋಜನೆ: ಐಸಿಡಿಎಸ್ ಉಳಿಸಿ–ಮಕ್ಕಳನ್ನು ರಕ್ಷಿಸಿ ವೇದಿಕೆ, ಸ್ಥಳ: ಶಿಕ್ಷಕರ ಸದನ, ಬೆಳಿಗ್ಗೆ 11.30ರಿಂದ

'ಭಾರತ ಪ್ಯಾಲೆಸ್ಟೀನ್ ಐಕ್ಯತೆ' ಸಾರ್ವಜನಿಕ ಚರ್ಚೆ: ಅದ್ನಾನ್ ಅನು ಅಲ್–ಹಿಜಾ, ಫಿರೋಜ್ ಮಿತಿಬೋರ್ವಾಲ, ಶಿವಸುಂದರ್, ಸುನಿಲಂ, ನಿರ್ವಹಣೆ: ಶ್ರೀಲಕ್ಷ್ಮಿ, ಮನು, ಆಯೋಜನೆ: ನ್ಯಾಯ ಮತ್ತು ಶಾಂತಿಗಾಗಿ ಬೆಂಗಳೂರು, ಸ್ಥಳ: ಮೊದಲನೇ ಮಹಡಿ, ಇನ್‌ಸ್ಟಿಟ್ಯೂಟ್ ಆಫ್ ಅಗ್ರಿಕಲ್ಚರಲ್ ಟೆಕ್ನಾಲಾಜಿಸ್ಟ್ಸ್, ಕ್ವೀನ್ಸ್ ರಸ್ತೆ, ಸಂಜೆ 6.30

24ನೇ ವರ್ಷದ ಪ್ರವಚನ ವಾಹಿನಿ: 'ಭಜ ಗೋವಿಂದಂ' ಉಪನ್ಯಾಸ: ಶ್ರೀನಿವಾಸ್ ಪ್ರಸಾದ್ ಸಿ.ವಿ., ಆಯೋಜನೆ ಹಾಗೂ ಸ್ಥಳ: ಸಾಂಸ್ಕೃತಿಕ ಮಂದಿರ, ರಾಗೀಗುಡ್ಡದ ಶ್ರೀ ಪಸನ್ನ ಆಂಜನೇಯಸ್ವಾಮಿ ಭಕ್ತಮಂಡಳಿ ಟ್ರಸ್ಟ್, ಜಯನಗರ 9ನೇ ಬಡಾವಣೆ, ಸಂಜೆ 6.30

ನವರಾತ್ರಿ ವಿಶೇಷ

ಶರನ್ನವರಾತ್ರಿ ಮಹೋತ್ಸವ: 'ದೇವಿ ಮಹಾತ್ಮೆ' ಉಪನ್ಯಾಸ: ಮಂಜುನಾಥ ಭಟ್ಟ, ಆಯೋಜನೆ ಮತ್ತು ಸ್ಥಳ: ಅಧ್ಯಾತ್ಮ ಪ್ರಕಾಶ ಕಾರ್ಯಾಲಯ, ತ್ಯಾಗರಾಜನಗರ, ಬೆಳಿಗ್ಗೆ 10ರಿಂದ

ಭಜನೆ: ರಾಜಾಜಿನಗರ ರುಕ್ಮಿಣಿ ಮಹಿಳಾ ಸಂಘ, ಆಯೋಜನೆ ಮತ್ತು ಸ್ಥಳ: ನಂಜನಗೂಡು ಸ್ವಾಮಿ ಮಠ, ಮಂತ್ರಿ ಮಾಲ್ ಮೆಟ್ರೊ ನಿಲ್ದಾಣ ಮುಂಭಾಗ, ಸಂಜೆ 5

ವಚನ ನವರಾತ್ರಿ: 'ಧೂಪಶೀಲೆ ಗೊಗ್ಗವ್ವೆಯವರ ಪರಿಚಯ': ಕಾತ್ಯಾಯಿನಿ ಸುಭಾಷ್, 'ಗೊಗ್ಗವ್ವೆಯವರ ವಚನಗಳ ನಿರ್ವಚನ': ರುದ್ರೇಶ್ ಅದರಂಗಿ, ಅಧ್ಯಕ್ಷತೆ: ಎಸ್. ಪಿನಾಕಪಾಣಿ, ಆಯೋಜನೆ: ವಚನ ಜ್ಯೋತಿ ಬಳಗ, ಸ್ಥಳ: ಬಸವ ಬೆಳಕು, 533, 7ನೇ ಮುಖ್ಯರಸ್ತೆ, ದೊಡ್ಡಬಸ್ತಿ ಮುಖ್ಯರಸ್ತೆ, ಕಲ್ಯಾಣ ಗೃಹ ನಿರ್ಮಾಣ ಸಹಕಾರ ಸಂಘ ಬಡಾವಣೆ, ಸಂಜೆ 5

ಮಾತಾ ಅನ್ನಪೂರ್ಣೇಶ್ವರಿ ದೇವಿಗೆ ಗಜಲಕ್ಷ್ಮಿ ಅಲಂಕಾರ: ಭರತನಾಟ್ಯ: ಶಾಶ್ವತಿ ಎನ್. ಭಟ್, ಗಾಯನ: ಆನೂರು ಅನಂತಕೃಷ್ಣ ಶರ್ಮ, ಆಯೋಜನೆ ಮತ್ತು ಸ್ಥಳ: ಶ್ರೀಮಾತಾ ಅನ್ನಪೂರ್ಣೇಶ್ವರಿ ದೇವಿ, ವಸಂತಪುರ, ಸಂಜೆ 5.30ರಿಂದ

ಶಾರದಾ ಮಹಾಭಿಷೇಕ, ಶಾರದಾ ಶರನ್ನವರಾತ್ರಿ ಮಹೋತ್ಸವ, ನೃತ್ಯ ನವರಾತ್ರಿ: ಭರತನಾಟ್ಯ ಪ್ರದರ್ಶನ: ಚಂದನಪ್ರಿಯಾ, ಮಿಲನ್, ಮಾನಸಾ ಜೋಶಿ, ಸ್ಥಳ: ಶೃಂಗೇರಿ ಶಂಕರ ಮಠ, ಸಂಜೆ 5.30ರಿಂದ

ಆಯೋಜನೆ: ದುರ್ಗಾ ಮಹೇಶ್ವರಮ್ಮ ದೇವಾಲಯ, **ಅಲಂಕಾರ:** ಚಂಡಿಕಾ ಪರಮೇಶ್ವರಿ, ಭಜನೆ: ನಾರಾಯಣಿ ಮಾತೃ ಭಜನೆ ಮಂಡಳಿ, ಸ್ಥಳ: ದುರ್ಗಾ ಮಹೇಶ್ವರಮ್ಮ ದೇವಾಲಯ, ಕೃಷ್ಣರಾಜಪುರ, ಸಂಜೆ 6ರಿಂದ

ದಸರಾ ಮಹೋತ್ಸವ: 'ಭಾರತೀಯ ಸಂಸ್ಕೃತಿ–ಆಚರಣೆಗಳ ವೈಶಿಷ್ಟ್ಯ' ಉಪನ್ಯಾಸ: ಇಂದು ಮಂಜುನಾಥ್, ಭರತನಾಟ್ಯ: ಪೂರ್ಣವಂದಿತ ವೆಂಕಟರಾಮು, ಜಾನಪದ ನೃತ್ಯ: ನಂದನ, ಆಯೋಜನೆ ಮತ್ತು ಸ್ಥಳ: ಲಾಸ್ಯ ವರ್ಧನ ಟ್ರಸ್ಟ್, ಮಲ್ಲೇಶ್ವರ, ಸಂಜೆ 6

ಆಯೋಜನೆ: ವರಸಿದ್ಧಿ ವಿನಾಯಕ ದೇವಾಲಯ: ಅಲಂಕಾರ: ಪಂಚವರ್ಣ, ಕರ್ನಾಟಕ ಶಾಸ್ತ್ರೀಯ ಸಂಗೀತ: ಹರಿ ಭಟ್ ಮತ್ತು ತಂಡ, ಸ್ಥಳ: ವರಸಿದ್ಧಿ ವಿನಾಯಕ ದೇವಾಲಯ, ಕೆನರಾ ಬ್ಯಾಂಕ್ ಕಾಲೊನಿ, ಸಂಜೆ 6.30ರಿಂದ

ಆಯೋಜನೆ: ಸರ್ಕಲ್ ಮಾರಮ್ಮ ದೇವಸ್ಥಾನ: ಅಲಂಕಾರ: ಕೈಲಾಸ ಅಲಂಕಾರ, ಮಧ್ಯಾಹ್ನ 1.30ಕ್ಕೆ ಸಾಮೂಹಿಕ ಲಲಿತಾ ಸಹಸ್ರನಾಮ ಪಾರಾಯಣ, ಭಕ್ತಿ ಗೀತೆಗಳ ಗಾಯನ: ರಂಜನಿ ಗಾನ ಮಂಡಳಿ, ಸ್ಥಳ: ಸರ್ಕಲ್ ಮಾರಮ್ಮ ದೇವಸ್ಥಾನ, ಮಲ್ಲೇಶ್ವರ, ಸಂಜೆ 6.30

ಆಯೋಜನೆ: ವೆಂಕಟರಮಣ ಸ್ವಾಮಿ ದೇವಸ್ಥಾನ: ಅಲಂಕಾರ: ನರಸಿಂಹವತಾರ, ಶಾಸ್ತ್ರೀಯ ಗಾಯನ: ಎಚ್.ಎಸ್. ಕೇಶವಪ್ರಸಾದ್ ಮತ್ತು ತಂಡ, ಸ್ಥಳ: ವೆಂಕಟರಮಣ ಸ್ವಾಮಿ ದೇವಸ್ಥಾನ ಕಣಿಯರ ಕಾಲೊನಿ, ಚಾಮರಾಜಪೇಟೆ, ಸಂಜೆ 6.30

ಶರನ್ನವರಾತ್ರಿ ಮತ್ತು ವಿಜಯದಶಮಿ: ದೊಡ್ಡಮ್ಮ ದೇವಿಗೆ ದ್ರಾಕ್ಷಿ ಅಲಂಕಾರ, ಆಯೋಜನೆ ಮತ್ತು ಸ್ಥಳ: ದೊಡ್ಡಮ್ಮ ದೇವಿ ಅಭಿವೃದ್ಧಿ ಸಮಿತಿ, ಚಿಕ್ಕದೇವಸಂದ್ರ, ಕೃಷ್ಣರಾಜಪುರ, ಸಂಜೆ 7.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in

ನವವರ್ಣ

ಬಿಳಿ ಬಣ್ಣದ ದಿರಿಸನ್ನು ಧರಿಸಿ ತೆಗಿಸಿಕೊಂಡ ಭಾವಚಿತ್ರಗಳನ್ನು ಸೋಮವಾರ ಮಧ್ಯಾಹ್ನ 2 ಗಂಟೆಯೊಳಗೆ ಕಳುಹಿಸಿ. ಹೆಸರು ವಿಳಾಸ ಇರಲಿ...
7338018541

ಡೆಕ್ಕನ್ ಹ್ಯಾಬಿಟ್ಯಾಟ್ ಸ್ನೇಹಿತೆಯರು, ಯಶಂತಪುರ

ರಘುವೀರ ರಾಮಧ್ಯಾನ ಭಜನಾ ಮಂಡಳಿ

ತಿಶಾ

ಸೌಮ್ಯಾ ಮತ್ತು ಗೆಳತಿಯರು

ಶೈಲಜಾ ಮತ್ತು ಕುಟುಂಬದವರು, ವಿನಾಯಕನಗರ

ವಿನೋದಾ ಮತ್ತು ಗೆಳತಿಯರು

ಶ್ರೀ ವರಸಿದ್ಧಿ ವಿನಾಯಕ ಸಮೂಹ

ಪೂರ್ಣಿಮಾ ಮತ್ತು ಗೆಳತಿಯರು

ಕವಿತಾ ಮತ್ತು ಗೆಳತಿಯರು

ಸೌಮ್ಯಾ ಮತ್ತು ಗೆಳತಿಯರು

ವಿಜಯಲಕ್ಷ್ಮಿ ಮತ್ತು ಬಳಗ

ಭೂಮಿಕಾ, ಸಂಧ್ಯಾ

ವಿಜಯಮಂಗಲ ಮತ್ತು ಗೆಳತಿಯರು

ಸೌಭಾಗ್ಯ ಮತ್ತು ಗೆಳತಿಯರು

ಶಶಿಕಲಾ ಮತ್ತು ಗೆಳತಿಯರು

ಶಕ್ತಿ ಸಂಘ, ಆಜಾದ್ ನಗರ

ಚಂದ್ರಕಲಾ ಮತ್ತು ಗೆಳತಿಯರು

ನಯನಾ ಮತ್ತು ಗೆಳತಿಯರು

ರೋಹಿಣಿ ಮತ್ತು ಗೆಳತಿಯರು

ದಿವ್ಯಶ್ರೀ, ರಶ್ಮಿ

ಸಿಂಧು, ಗಿರಿಜಾ

ದ್ರಾಕ್ಷಾಯಣಿ ಮತ್ತು ಕುಟುಂಬ

ದೀಪಾ ದಿನಾ ದಿವ್ಯಾ

ಶ್ವೇತಾ ಮತ್ತು ಗೆಳತಿಯರು

ಗೌರಮ್ಮ ಮತ್ತು ಗೆಳತಿಯರು

ಮನೋರಮಾ ಮತ್ತು ಗೆಳತಿಯರು

ಶ್ರೀ ಕೃಷ್ಣವಾದಿರಾಜ್ ಭಜನಾ ಮಂಡಳಿ

ಪವಿತ್ರಾ ಮತ್ತು ಗೆಳತಿಯರು

ಶಿಲ್ಪಾ ಮತ್ತು ಕುಟುಂಬ

ನಂದಾ ಮತ್ತು ಸ್ನೇಹಿತೆ

ಆಶಾ ಮತ್ತು ಸ್ನೇಹಿತೆ

ಅರುಂಧತಿ, ಶ್ರೇಯಾಂಕಾ ಅಮೋಘ ಬೌಲಿಂಗ್ • ಹರ್ಮನ್ ಮಿಂಚು

ಭಾರತಕ್ಕೆ ಮಣಿದ ಪಾಕಿಸ್ತಾನ

ದುಬೈ (ಪಿಟಿಐ): ನಾಯಕಿ ಹರ್ಮನ್‌ಪ್ರೀತ್ ಕೌರ್ ಅವರು ಭಾರತ ತಂಡದ ಬೌಲರ್‌ಗಳ ಶ್ರಮ ವ್ಯರ್ಥವಾಗದಂತೆ ನೋಡಿಕೊಂಡರು. 24 ಎಸೆತಗಳಲ್ಲಿ 29 ರನ್ ಗಳಿಸಿದ ಕೌರ್ ಬ್ಯಾಟಿಂಗ್‌ನಿಂದಾಗಿ ಭಾರತವು ಇಲ್ಲಿ ನಡೆಯುತ್ತಿರುವ ಮಹಿಳೆಯರ ಟಿ20 ಕ್ರಿಕೆಟ್ ವಿಶ್ವಕಪ್ ಟೂರ್ನಿಯಲ್ಲಿ ಪಾಕಿಸ್ತಾನ ಎದುರು ಜಯ ಸಾಧಿಸಿತು.

ದುಬೈ ಅಂತರರಾಷ್ಟ್ರೀಯ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ 6 ವಿಕೆಟ್‌ಗಳಿಂದ ಜಯಿಸಿದ ಕೌರ್ ಬಳಗದ ಸೆಮಿಫೈನಲ್ ಪ್ರವೇಶದ ಅವಕಾಶ ಜೀವಂತವಾಗುಳಿಯಿತು. ಎ ಗುಂಪಿನ ಮೊದಲ ಪಂದ್ಯದಲ್ಲಿ ನ್ಯೂಜಿಲೆಂಡ್ ಎದುರು ಭಾರತ ಸೋಲನುಭವಿಸಿತ್ತು. ಆಗ ಮಾಡಿದ್ದ ಲೋಪಗಳನ್ನು ತಿದ್ದಿಕೊಂಡು ಇಲ್ಲಿ ಕಣಕ್ಕಿಳಿದ ಭಾರತ ತಂಡವು ಯಶಸ್ಸು ಸಾಧಿಸಿತು.

ಟಾಸ್ ಗೆದ್ದ ಪಾಕಿಸ್ತಾನ ತಂಡವು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ಭಾರತ ತಂಡದ ಮಧ್ಯಮವೇಗಿ ಅರುಂಧತಿ ರೆಡ್ಡಿ (19ಕ್ಕೆ3) ಮತ್ತು ಕರ್ನಾಟಕದ ಸ್ಪಿನ್ನರ್ ಶ್ರೇಯಾಂಕಾ ಪಾಟೀಲ (12ಕ್ಕೆ2) ಅವರ ದಾಳಿಯ ಮುಂದೆ ಪಾಕ್ ತಂಡವು 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 105 ರನ್‌ಗಳ ಸಾಧಾರಣ ಮೊತ್ತ ಗಳಿಸಿತು.

ಭಾರತ ತಂಡದ ನಾಯಕಿ ಹರ್ಮನ್‌ಪ್ರೀತ್ ಕೌರ್ ಬ್ಯಾಟಿಂಗ್ –ಎಎಫ್‌ಪಿ ಚಿತ್ರ

ಕಿವೀಸ್ ಎದುರಿನ ಪಂದ್ಯದಲ್ಲಿ ವಿಕೆಟ್ ಪಡೆಯಲು ವಿಫಲರಾಗಿದ್ದ ಶ್ರೇಯಾಂಕಾ ಪಾಕ್ ಎದುರು ನಿಖರ ದಾಳಿ ನಡೆಸಿದರು. ಅವರ 4 ಓವರ್‌ಗಳಲ್ಲಿ 1 ಮೇಡನ್ ಕೂಡ ಇತ್ತು. ಅರುಂಧತಿ ಬೌಲಿಂಗ್ ಶಿಸ್ತು-ಬದ್ಧವಾಗಿತ್ತು. ಲೈನ್ ಮತ್ತು ಲೆಂಗ್ತ್ ಕಾಪಾಡಿಕೊಂಡ ಅವರ ಎಸೆತಗಳನ್ನು ಎದುರಿಸುವಲ್ಲಿ ಪಾಕ್ ಬ್ಯಾಟರ್‌ಗಳು ವಿಫಲರಾದರು. ಅರುಂಧತಿ ಪಂದ್ಯಶ್ರೇಷ್ಠ ಗೌರವಕ್ಕೆ ಪಾತ್ರರಾದರು.

ಗುರಿ ಬೆನ್ನಟ್ಟಿದ ಭಾರತ ತಂಡಕ್ಕೆ ಐದನೇ ಓವರ್‌ನಲ್ಲಿ ಮೊದಲ ಆಘಾತ ಎದುರಾಯಿತು. ಆರಂಭಿಕ ಬ್ಯಾಟರ್ ಸ್ಮೃತಿ ಮಂದಾನ (7 ರನ್) ಅವರ ವಿಕೆಟ್ ಗಳಿಸಿದ ಸಾದಿಯಾ ಇಕ್ಬಾಲ್ ಸಂಭ್ರಮಿಸಿದರು. ಈ ಹಂತದಲ್ಲಿ ಶಫಾಲಿ ವರ್ಮಾ (32; 35ಎ) ಮತ್ತು ಜೆಮಿಮಾ ರಾಡ್ರಿಗಸ್ (23; 28ಎ) ಎರಡನೇ ವಿಕೆಟ್‌ಗೆ 43 ರನ್ ಸೇರಿಸಿದರು. 12ನೇ ಓವರ್‌ನಲ್ಲಿ ಶಫಾಲಿ ಔಟಾಗಿದ್ದರಿಂದ ಜೊತೆಯಾಟ ಮುರಿಯಿತು.

ಇದಾಗಿ 3 ಓವರ್‌ಗಳ ನಂತರ ಪಾಕ್ ತಂಡದ ನಾಯಕಿ ಫಾತಿಮಾ ಸನಾ ಅವರು ಒಂದೇ ಓವರ್‌ನಲ್ಲಿ ಜೆಮಿಮಾ ಮತ್ತು ರಿಚಾ ಘೋಷ್ ಅವರಿಬ್ಬರನ್ನೂ ಔಟ್ ಮಾಡಿದರು. ಇದರಿಂದಾಗಿ ರನ್ ಗಳಿಕೆಯ ವೇಗ ಕುಂಠಿತವಾಯಿತು. ಒಂದು ಹಂತದಲ್ಲಿ 30 ಎಸೆತಗಳಿಗೆ 29 ರನ್‌ಗಳ ಅಗತ್ಯವಿತ್ತು. ಇದು ಭಾರತ ತಂಡದಲ್ಲಿ ತುಸು ಆತಂಕ ಮೂಡಿಸಿತು.

ಈ ಹಂತದಲ್ಲಿ ತಾಳ್ಮೆಯುತವಾಗಿ ಆಡಿದ ಹರ್ಮನಪ್ರೀತ್ ತಂಡವನ್ನು ಗೆಲುವಿನ ಸನಿಹಕ್ಕೆ ತಂದು ನಿಲ್ಲಿಸಿದರು. ಆದರೆ, 19ನೇ ಓವರ್‌ನಲ್ಲಿ ಓಡುವ ಪ್ರಯತ್ನದಲ್ಲಿ ಆಯ ತಪ್ಪಿ ಬಿದ್ದ ಅವರು ಕುತ್ತಿಗೆ ನೋವಿನಿಂದಾಗಿ ಆಟ ಮೊಟಕುಗೊಳಿಸಿ ಡಗ್‌ಔಟ್‌ಗೆ ಮರಳಿದರು. ಕ್ರೀಸ್‌ಗೆ ಬಂದ ಸಜೀವನ್ ಸಜನಾ ವಿಜಯದ ಬೌಂಡರಿ ಬಾರಿಸಿದರು.

ಸಂಕ್ಷಿಪ್ತ ಸ್ಕೋರ್: ಪಾಕಿಸ್ತಾನ: 20 ಓವರ್‌ಗಳಲ್ಲಿ 8 ವಿಕೆಟ್‌ಗೆ 105 (ಮುನೀಬಾ ಅಲಿ 17, ನಿದಾ ದಾರ್ 28; ಅರುಂಧತಿ ರೆಡ್ಡಿ 19ಕ್ಕೆ 3, ಶ್ರೇಯಾಂಕಾ ಪಾಟೀಲ 12ಕ್ಕೆ 2). ಭಾರತ: 18.5 ಓವರ್‌ಗಳಲ್ಲಿ 4ಕ್ಕೆ 108 (ಶೆಫಾಲಿ ವರ್ಮಾ 32, ಜೆಮಿಯಾ ರಾಡ್ರಿಗಸ್ 23, ಹರ್ಮನ್‌ಪ್ರೀತ್ 29; ಫಾತಿಮಾ ಸನಾ 23ಕ್ಕೆ 2). **ಫಲಿತಾಂಶ:** ಭಾರತಕ್ಕೆ ಆರು ವಿಕೆಟ್ ಜಯ: ಪಂದ್ಯದ ಆಟಗಾರ್ತಿ: ಅರುಂಧತಿ ರೆಡ್ಡಿ

ಚಕ್ರವರ್ತಿ ಸ್ಪಿನ್ ಸುಳಿಗೆ ಬಿದ್ದ ಬಾಂಗ್ಲಾ

ಗ್ವಾಲಿಯರ್: ಭಾರತ ಜಯಭೇರಿ • ಮಯಂಕ್ ಮಿಂಚು • ಹಾರ್ದಿಕ್ ಅಬ್ಬರ



ವರುಣ್ ಚಕ್ರವರ್ತಿ

4 ಓವರ್

31 ರನ್

3 ವಿಕೆಟ್

ವರುಣ್ ಚಕ್ರವರ್ತಿ ಬೌಲಿಂಗ್ – ಎಎಫ್‌ಪಿ ಚಿತ್ರ

ಗ್ವಾಲಿಯರ್ (ಪಿಟಿಐ): ಮಿಸ್ಟರಿ ಸ್ಪಿನ್ನರ್ ಖ್ಯಾತಿಯ ವರುಣ್ ಚಕ್ರವರ್ತಿ ಮತ್ತು ಭರವಸೆ ಮೂಡಿಸಿದ ವೇಗದ ಬೌಲರ್ ಮಯಂಕ್ ಯಾದವ್ ಅವರ ಆಟದ ಬಲದಿಂದ ಭಾರತ ತಂಡವು ಬಾಂಗ್ಲಾ ಎದುರಿನ ಪಂದ್ಯದಲ್ಲಿ ಜಯಿಸಿತು. ಹಾರ್ದಿಕ್ ಪಾಂಡ್ಯ ಅವರ ಅಬ್ಬರದ ಬ್ಯಾಟಿಂಗ್ ಅಭಿಮಾನಿಗಳ ಮನ ಮುದಗೊಳಿಸಿತು.

ಇದರೊಂದಿಗೆ ಮೂರು ಪಂದ್ಯಗಳ ಸರಣಿಯಲ್ಲಿ 1-0 ಮುನ್ನಡೆ ಸಾಧಿಸಿತು. ಹೊಸದಾಗಿ ನಿರ್ಮಾಣವಾಗಿರುವ ಶ್ರೀಮಂತ್ ಮಾಧವರಾವ್ ಸಿಂಧಿಯಾ ಕ್ರಿಕೆಟ್ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಸರಣಿಯ ಮೊದಲ ಪಂದ್ಯದಲ್ಲಿ ಭಾರತ ತಂಡವು 7 ವಿಕೆಟ್‌ಗಳಿಂದ ಗೆಲುವು ಸಾಧಿಸಿತು.

ಟಾಸ್ ಗೆದ್ದ ಭಾರತ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಬಾಂಗ್ಲಾ ತಂಡವು ನಾಯಕ ನಜ್ಮುಲ್ ಹುಸೇನ್ ಶಾಂತೊ (27; 25ಎ) ಮತ್ತು ಮೆಹದಿ ಹಸನ್ ಮಿರಾಜ್ (ಔಟಾಗದೆ 35; 32ಎ) ಅವರಿಬ್ಬರ ಪ್ರಯತ್ನದಿಂದಾಗಿ 19.5 ಓವರ್‌ಗಳಲ್ಲಿ 127 ರನ್ ಗಳಿಸಿತು. ಇದಕ್ಕುತ್ತರವಾಗಿ ಭಾರತ ತಂಡವು 11.5 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 132 ರನ್ ಗಳಿಸಿತು.

ಸ್ಪಿನ್ನರ್ ವರುಣ್ ಮತ್ತು ಎಡಗೈ ವೇಗಿ ಅರ್ಷದೀಪ್ ಸಿಂಗ್ ಕೂಡ ಬಿಗಿ ದಾಳಿ ನಡೆಸಿದರು. ಈ ಪಂದ್ಯದ ಮೂಲಕ ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದ ಮಯಂಕ್ ಅವರು ಮೆಹಮುದುಲ್ಲಾ ವಿಕೆಟ್ ಗಳಿಸುವಲ್ಲಿ ಸಫಲರಾದರು. ಆದರೆ ಮಯಂಕ್ ಅವರು 4 ಓವರ್‌ಗಳಲ್ಲಿ 1 ಮೇಡನ್ ಹಾಕಿ ಗಮನ ಸೆಳೆದರು. ಒಟ್ಟು 21 ರನ್ ನೀಡಿದರು.

ಗುರಿ ಬೆನ್ನಟ್ಟಿದ ಭಾರತ ತಂಡಕ್ಕೆ ಸಂಜು ಸ್ಯಾಮ್ಸನ್ ಮತ್ತು ಅಭಿಷೇಕ್ ಶರ್ಮಾ ಉತ್ತಮ ಆರಂಭ ನೀಡಿದರು.

ಗೆಲುವಿನ ಬಳಿಕ ಹಾರ್ದಿಕ್ ಪಾಂಡ್ಯ ಸಂಭ್ರಮ

ಅಭಿಷೇಕ್ 7 ಎಸೆತಗಳಲ್ಲಿ 16 ರನ್ ಗಳಿಸಿದರು. ಆದರೆ ಎರಡನೇ ಓವರ್‌ನಲ್ಲಿ ಅಭಿಷೇಕ್ ರನ್‌ಔಟ್ ಆದರು. ಸೂರ್ಯಕುಮಾರ್ ಯಾದವ್ (29; 14ಎ, 4X2, 6X3) ಅವರು 207.14ರ ಸ್ಟ್ರೈಕ್‌ರೇಟ್‌ನಲ್ಲಿ ರನ್ ಸೂರೆಮಾಡಿದರು .

ಆದರೆ ಬಾಂಗ್ಲಾ ಬೌಲರ್‌ಗಳು ಅವರಿಗೂ ತಡೆಯೊಡ್ಡಿದರು. ಕ್ರೀಸ್‌ಗೆ ಬಂದ ಹಾರ್ದಿಕ್ ಪಾಂಡ್ಯ (ಔಟಾಗದೆ 39; 16ಎ, 4X5, 6X2) ಅಬ್ಬರಿಸಿದರು. ತಂಡವನ್ನು ಗೆಲುವಿನ ದಡ ಸೇರಿಸಿದರು.

ಸಂಕ್ಷಿಪ್ತ ಸ್ಕೋರು: ಬಾಂಗ್ಲಾದೇಶ: 19.5 ಓವರ್‌ಗಳಲ್ಲಿ 127 (ನಜ್ಮುಲ್ ಹುಸೇನ್ ಶಾಂತೊ 27, ಮೆಹದಿ ಹಸನ್ ಮಿರಾಜ್ 35, ಅರ್ಷದೀಪ್ ಸಿಂಗ್ 14ಕ್ಕೆ3, ವರುಣ್ ಚಕ್ರವರ್ತಿ 31ಕ್ಕೆ3, ಮಯಂಕ್ ಯಾದವ್ 21ಕ್ಕೆ1, ವಾಷಿಂಗ್ಟನ್ ಸುಂದರ್ 12ಕ್ಕೆ1) ಭಾರತ: 11.5 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 132 (ಸಂಜು ಸ್ಯಾಮ್ಸನ್ 29, ಅಭಿಷೇಕ್ ಶರ್ಮಾ 16, ಸೂರ್ಯಕುಮಾರ್ ಯಾದವ್ 29, ಹಾರ್ದಿಕ್ ಪಾಂಡ್ಯ ಔಟಾಗದೆ 39, ಮುಸ್ತಫಿಜುರ್ ರೆಹಮಾನ್ 36ಕ್ಕೆ1) **ಫಲಿತಾಂಶ:** ಭಾರತ ತಂಡಕ್ಕೆ 7 ವಿಕೆಟ್‌ಗಳ ಜಯ. ಸರಣಿಯಲ್ಲಿ 1–0 ಮುನ್ನಡೆ.

ಪಂಕಜ್‌ಗೆ ಸಿಂಗಪುರ ಓಪನ್ ಕಿರೀಟ

ನವದೆಹಲಿ (ಪಿಟಿಐ): ಭಾರತದ ಬಿಲಿಯರ್ಡ್ಸ್ ತಾರೆ ಪಂಕಜ್ ಅಡ್ವಾಣಿ ಭಾನುವಾರ ನಡೆದ ಸಿಂಗಪುರ ಓಪನ್ ಪ್ರಶಸ್ತಿ ಮುಡಿಗೇರಿಸಿಕೊಂಡರು.

ಸಿಂಗಪುರದ ಲಗೂನ್ ಬಿಲಿಯರ್ಡ್ಸ್ ರೂಮ್‌ನಲ್ಲಿ ನಡೆದ ಫೈನಲ್ ಪಂದ್ಯದಲ್ಲಿ ಪಂಕಜ್ 5-1 ಅಂತರದಿಂದ ಸ್ಥಳೀಯ ನೆಚ್ಚಿನ ಆಟಗಾರ ಜೇಡನ್ ಒಂಗ್ ಅವರನ್ನು ಸೋಲಿಸಿದರು. ಅಡ್ವಾಣಿ ಕ್ವಾರ್ಟರ್ ಫೈನಲ್ ರೋಚಕ ಹಣಾಹಣಿಯಲ್ಲಿ 4–3 ಅಂತರದಿಂದ ಥಾಯ್ಲೆಂಡ್‌ನ ಡೆಚಾವತ್ ಪೂಮ್‌ಜೆಂಗ್ ಅವರಿಗೆ ಆಘಾತ ನೀಡಿದ್ದರು.

ಭಾರತ ಪ್ಯಾರಾಲಿಂಪಿಕ್ಸ್ ಸಮಿತಿ ವತಿಯಿಂದ ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿ ಭಾನುವಾರ ಪ್ಯಾರಿಸ್ ಪ್ಯಾರಾಲಿಂಪಿಕ್ಸ್ ಪದಕ ವಿಜೇತರಾದ ನವದೀಪ್ ಸಿಂಗ್, ಅಜಿತ್ ಸಿಂಗ್, ಮರಿಯಪ್ಪನ್ ತಂಗವೇಲು, ಪೀತಿ ಪಾಲ್, ದೀಪ್ತಿ ಜೀವಂಜಿ, ನಿತೀಶ್ ಕುಮಾರ್, ಹರ್ವಿಂದರ್ ಸಿಂಗ್ ಸೇರಿದಂತೆ 18 ಕ್ರೀಡಾಪಟುಗಳನ್ನು ಸನ್ಮಾನಿಸಲಾಯಿತು. ರಾಷ್ಟ್ರೀಯ ಪ್ಯಾರಾ ಅಥ್ಲೀಟ್ಸ್ ಮುಖ್ಯ ಕೋಚ್ ಸತ್ಯನಾರಾಯಣ, ಭಾರತ ಪ್ಯಾರಾಲಿಂಪಿಕ್ಸ್ ಸಮಿತಿ ಅಧ್ಯಕ್ಷ ದೇವೇಂದ್ರ ಜಝಾರಿಯಾ, ಲಂಡನ್ ಪ್ಯಾರಾಲಿಂಪಿಕ್ಸ್ ಪದಕ ವಿಜೇತ ಕನ್ನಡಿಗ ಎಚ್.ಎನ್. ಗಿರೀಶ್ ಉಪಸ್ಥಿತರಿದ್ದರು.

ಅಂಧರ ಚೆಸ್: ಲುಬೋವ್, ಜೂಲಿಯಾಗೆ ಕಿರೀಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಿರೀಕ್ಷೆಯಂತೆ ಉಕ್ರೇನ್ ಝಿಲ್ಟ್ಸೋವಾ ಲಿಸೆಂಕೊ ಲುಬೋವ್ ಮತ್ತು ಪೋಲೆಂಡ್‌ನ ಸಾಲೊಮನ್ ಜೂಲಿಯಾ ಅವರು ಐಬಿಸಿಎ 12ನೇ ವಿಶ್ವ ಅಂಧರ ಚೆಸ್ ಚಾಂಪಿಯನ್‌ಷಿಪ್‌ನಲ್ಲಿ ಕ್ರಮವಾಗಿ ಮಹಿಳೆಯರ ಮತ್ತು ಜೂನಿಯರ್ ವಿಭಾಗದ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡರು.

ನಗರದ ಚಾನ್ಸರಿ ಪೆವಿಲಿಯನ್‌ನಲ್ಲಿ ಭಾನುವಾರ ಮುಕ್ತಾಯವಾದ ಟೂರ್ನಿಯ ಒಂಬತ್ತು ಸುತ್ತಿನಲ್ಲಿ ಲುಬೋವ್ ಗರಿಷ್ಠ 9 ಪಾಯಿಂಟ್ಸ್‌ಗಳನ್ನು ಸಂಪಾದಿಸಿ 12ನೇ ಬಾರಿ ಪ್ರಶಸ್ತಿಯನ್ನು ಗೆದ್ದುಕೊಂಡರು. ಅವರು ಶನಿವಾರ ಎಂಟು ಸುತ್ತಿನ ಮುಕ್ತಾಯಕ್ಕೆ ಪ್ರಶಸ್ತಿಯನ್ನು ಖಚಿತಪಡಿಸಿಕೊಂಡಿದ್ದರು.

ಪೋಲೆಂಡ್‌ನ ಇಗೆಮನ್ ಎಮಿಲಿಯಾ 7.5 ಅಂಕಗಳೊಂದಿಗೆ ಬೆಳ್ಳಿ ಗೆದ್ದರೆ, ಪೋಲೆಂಡ್‌ನ ಮತ್ತೊಬ್ಬ ಸ್ಪರ್ಧಿ ಟ್ರಯಾನ್‌ಸ್ಕಾ ಎಮಿಲಿಯಾ 7 ಪಾಯಿಂಟ್‌ಗಳೊಂದಿಗೆ ಕಂಚಿನ ಪದಕವನ್ನು ತಮ್ಮದಾಗಿಸಿಕೊಂಡರು.

ಜೂನಿಯರ್ ವಿಭಾಗದಲ್ಲಿ ಎರಡನೇ ಶ್ರೇಯಾಂಕದ ಸಾಲೊಮನ್ ಜೂಲಿಯಾ ಮತ್ತು ಅಗ್ರ ಶ್ರೇಯಾಂಕದ ಪೋಲೆಂಡ್‌ನ ರೇಸಿಸ್ ಮೈಕೆಲ್ ಅವರ ಮಧ್ಯೆ ಆರಂಭಿಕ ಸುತ್ತಿನಿಂದಲೂ ತೀವ್ರ ಪೈಪೋಟಿ ಇತ್ತು. ಮೂರನೇ ಸುತ್ತಿನಲ್ಲಿ ಮುಖಾಮುಖಿಯಾಗಿದ್ದಾಗ ಡ್ರಾ ಮಾಡಿಕೊಂಡಿದ್ದ ಅವರು, ಅಂತಿಮ ಸುತ್ತಿನವರೆಗೂ ಅಗ್ರಸ್ಥಾನಕ್ಕೆ ಪೈಪೋಟಿ ನಡೆಸಿದ್ದರು.

ಅಂತಿಮವಾಗಿ ಜೂಲಿಯಾ ಚಿನ್ನದ ಪದಕ ಗೆದ್ದರೆ, ರೇಸಿಸ್ ಬೆಳ್ಳಿಗೆ ತೃಪ್ತಿ ಪಟ್ಟುಕೊಂಡರು. ಕಜಕಸ್ತಾನದ ಕುವಾನಶುಲಿ ನುರ್ಗಿಸಾ ಕಂಚಿನ ಪದಕ ತಮ್ಮದಾಗಿಸಿಕೊಂಡರು.

ಝಿಲ್ಟ್ಸೋವಾ ಲಿಸೆಂಕೊ ಲುಬೋವ್

ಮಾಲ್ದೀವ್ಸ್ ಅಧ್ಯಕ್ಷ ಮೊಹಮ್ಮದ್ ಮುಯಿಜು ನವದೆಹಲಿಗೆ ಭಾನುವಾರ ಬಂದಿದ್ದಾರೆ. ಅವರನ್ನು ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಭೇಟಿಯಾದರು ಪಿಟಿಐ ಚಿತ್ರ

‘ಬದಲಾವಣೆ ಕಾಣದ ವಿಶ್ವಸಂಸ್ಥೆ’

ನವದೆಹಲಿ (ಪಿಟಿಐ): ಮಾರುಕಟ್ಟೆಯಲ್ಲಿ ಆದ ಬದಲಾವಣೆಗೆ ಹೊಂದಿಕೊಳ್ಳದ ಕಂಪನಿಯಂತೆಯೇ ವಿಶ್ವಸಂಸ್ಥೆ ಕೂಡ ಕಾಣುತ್ತಿದೆ ಎಂದು ಕೇಂದ್ರ ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಅವರು ಟೀಕಿಸಿದರು.

ಎಸ್. ಜೈಶಂಕರ್

ವಿಶ್ವಸಂಸ್ಥೆಯ ಬಗ್ಗೆ ವಿಮರ್ಶಾತ್ಮಕವಾಗಿ ಮಾತನಾಡಿದ ಅವರು, ಮಾರುಕಟ್ಟೆಯ ಜೊತೆಯಲ್ಲೇ ಬದಲಾವಣೆ ಕಾಣದೆ ಇದ್ದರೂ ಬಹಳ ದೊಡ್ಡದಾದ ಸ್ಥಾನವನ್ನು ಪಡೆದ ಕಂಪನಿಯಂತೆ ವಿಶ್ವಸಂಸ್ಥೆ ಇದೆ ಎಂದು ಹೇಳಿದರು.

‘ಕೌಟಿಲ್ಯ ಅರ್ಥಶಾಸ್ತ್ರ ಸಮಾವೇಶ’ದಲ್ಲಿ ಮಾತನಾಡಿದ ಅವರು, ‘ಜಗತ್ತಿನಲ್ಲಿ ಎರಡು ಗಂಭೀರ ಸಂಘರ್ಷಗಳು ನಡೆಯುತ್ತಿದ್ದರೂ ಅವರ ಪಾಲಿಗೆ ವಿಶ್ವಸಂಸ್ಥೆ ಎಲ್ಲಿದೆ? ಅದು ಪಕ್ಕದಲ್ಲಿ ನಿಂತು ನೋಡುವವರ ರೀತಿಯಲ್ಲಿ ಇದೆ’ ಎಂದು ಹೇಳಿದರು. ‘ಜಗತ್ತು ಮತ್ತು ಭಾರತ’ ಎಂಬ ವಿಷಯದ ಕುರಿತ ಸಂವಾದದಲ್ಲಿ ಜೈಶಂಕರ್ ಮಾತನಾಡಿದರು.

ಶಾಂಘೈ ಸಹಕಾರ ಸಂಘಟನೆಯ (ಎಸ್‌ಸಿಒ) ಸಭೆಯಲ್ಲಿ ಭಾಗಿಯಾಗಲು ಪಾಕಿಸ್ತಾನಕ್ಕೆ ತೆರಳುತ್ತಿರುವುದಕ್ಕೆ ಸಂಬಂಧಿಸಿದ ಪ್ರಶ್ನೆಗೆ ಉತ್ತರಿಸಿದ ಅವರು, ಪಾಕಿಸ್ತಾನದ ಜೊತೆ ದ್ವಿಪಕ್ಷೀಯ ಮಾತುಕತೆ ಇಲ್ಲ ಎಂಬುದನ್ನು ಸ್ಪಷ್ಟಪಡಿಸಿದರು.

‘ಪ್ರಮುಖ ಸಂಗತಿಗಳ ವಿಚಾರವಾಗಿ ವಿಶ್ವಸಂಸ್ಥೆಯು ಹೆಚ್ಚು ಕೆಲಸಗಳನ್ನು ಮಾಡದೆ ಇದ್ದಾಗ, ದೇಶಗಳು ತಮ್ಮದೇ ಆದ ಮಾರ್ಗ ಕಂಡುಕೊಳ್ಳುತ್ತವೆ. ಉದಾಹರಣೆಗೆ, ಕಳೆದ ಐದು ಅಥವಾ 10 ವರ್ಷಗಳನ್ನು ಪರಿಗಣಿಸೋಣ. ನಮ್ಮ ಜೀವನದಲ್ಲಿ ನಡೆದ ಅತಿದೊಡ್ಡ ಘಟನೆಯೆಂದರೆ ಕೋವಿಡ್. ವಿಶ್ವಸಂಸ್ಥೆಯು ಕೋವಿಡ್ ವಿಚಾರದಲ್ಲಿ ಏನು ಮಾಡಿತು? ಅದು ಹೆಚ್ಚೇನೂ ಕೆಲಸ ಮಾಡಲಿಲ್ಲ’ ಎಂದು ಹೇಳಿದರು.

ಹಿಜ್ಬುಲ್ಲಾ, ಹಮಾಸ್ ವಿರುದ್ಧ ದಾಳಿ ಅವ್ಯಾಹತ

ಇಸ್ರೇಲ್ ಮೇಲೆ ಹಮಾಸ್ ದಾಳಿಗೆ 1 ವರ್ಷ • ತಗ್ಗದ ಕಿಚ್ಚು • ಭಾನುವಾರ ವಾಯುದಾಳಿಗೆ 23 ಬಲಿ

ಬೈರೂತ್ (ಎಎಫ್‌ಪಿ/ಎ.ಪಿ): ಹಿಜ್ಬುಲ್ಲಾ ಬಂಡುಕೋರರ ಗುರಿಯಾಗಿಸಿ ಇಸ್ರೇಲ್ ಭಾನುವಾರ ಲೆಬನಾನ್ ರಾಜಧಾನಿ ಬೈರೂತ್ ಮೇಲೆ ಸರಣಿ ದಾಳಿ ಮುಂದುವರಿಸಿದೆ. ಇದರಿಂದ ಬೈರೂತ್‌ನಲ್ಲಿ ದಿಗಂತವನ್ನು ದಟ್ಟ ಹೊಗೆ, ಬೆಂಕಿ ಜ್ವಾಲೆ ಆವರಿಸಿದ್ದವು.

ಇಸ್ರೇಲ್ ಮೇಲೆ ಹಮಾಸ್ ನಡೆಸಿದ್ದ ದಾಳಿಗೆ ಅಕ್ಟೋಬರ್ 7ಕ್ಕೆ ವರ್ಷವಾಗಲಿದೆ. ಪ್ರತಿಯಾಗಿ ಇಸ್ರೇಲ್ ಸೇನೆ, ಹಮಾಸ್ ಗುರಿಯಾಗಿಸಿ ಗಾಜಾಪಟ್ಟಿಯಲ್ಲಿ ದಾಳಿ ಮುಂದುವರಿಸಿದೆ. ಜೊತೆಗೆ ಲೆಬನಾನ್‌ನಲ್ಲಿ ಹಿಜ್ಬುಲ್ಲಾ ವಿರುದ್ಧವೂ ದಾಳಿ ತೀವ್ರಗೊಳಿಸಿದೆ.

ಗಾಜಾಪಟ್ಟಿಯಲ್ಲಿ ಭಾನುವಾರ ಇಸ್ರೇಲ್ ಸೇನೆಯು ಮಸೀದಿ ಮತ್ತು ಶಾಲಾ ಕಟ್ಟಡವನ್ನು ಗುರಿಯಾಗಿಸಿ ನಡೆಸಿರುವ ಪ್ರತ್ಯೇಕ ದಾಳಿಯಲ್ಲಿ 23 ಜನರು ಸಾವಿಗೀಡಾಗಿದ್ದಾರೆ ಎಂದು ವರದಿಗಳು ತಿಳಿಸಿವೆ.

ಬೈರೂತ್‌ನ ದಕ್ಷಿಣ ಭಾಗದಲ್ಲಿ ದಾಳಿ ಮುಂದುವರಿದಂತೆ, ಲೆಬನಾನ್ ಪ್ರಧಾನಿ ನಜೀಬ್ ಮಿಕಾಟಿ, ಕದನವಿರಾಮ ಘೋಷಿಸುವಂತೆ ಇಸ್ರೇಲ್ ಮೇಲೆ ಒತ್ತಡ ಹೇರಬೇಕು ಎಂದು ಅಂತರರಾಷ್ಟ್ರೀಯ ಸಮುದಾಯವನ್ನು ಒತ್ತಾಯಿಸಿದ್ದಾರೆ.

ಹಮಾಸ್ ಬಂಡುಕೋರರು ಅಪ್ರಚೋದಿತ ದಾಳಿ ಆರಂಭಿಸಿದ್ದಕ್ಕೆ ಪ್ರತೀಕಾರವಾಗಿ ವರ್ಷದ ಹಿಂದೆ ಹಮಾಸ್ ಬಂಡುಕೋರರನ್ನು ಹತ್ತಿಕ್ಕುವ ಗುರಿಯೊಂದಿಗೆ ಗಾಜಾಪಟ್ಟಿಯಲ್ಲಿ ಇಸ್ರೇಲ್ ಸೇನೆ ದಾಳಿ ಆರಂಭಿಸಿತ್ತು.

ಲೆಬನಾನ್‌ನ ಅಂತರರಾಷ್ಟ್ರೀಯ ವಿಮಾನನಿಲ್ದಾಣಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಯ ಪ್ರಮುಖ ಕಟ್ಟಡ ಮತ್ತು ಹಿಜ್ಬುಲ್ಲಾದ ಸುದ್ದಿ ಮಾಧ್ಯಮ ಅಲ್ ಮನಾರ್ ಬಳಸುತ್ತಿದ್ದ ಇನ್ನೊಂದು ಕಟ್ಟಡದ ಮೇಲೆ ದಾಳಿ ನಡೆದಿದೆ.

ಲೆಬನಾನ್‌ನ ಅಧಿಕೃತ ಸುದ್ದಿ ಮಾಧ್ಯಮದ ಪ್ರಕಾರ, ಭಾನುವಾರ 30ಕ್ಕೂ ಹೆಚ್ಚು ಬಾರಿ ನಿಯಮಿತವಾಗಿ ದಾಳಿ ನಡೆದಿದೆ. ಪೆಟ್ರೋಲ್ ಬಂಕ್ ಮತ್ತು ಔಷಧ ದಾಸ್ತಾನು ಗೋದಾಮು ಅನ್ನು ಗುರಿಯಾಗಿಸಿ ದಾಳಿ ನಡೆಸಲಾಗಿದೆ ಎಂದು ತಿಳಿಸಿದೆ.

ದಾಳಿಯಿಂದಾಗಿ ಭೂಕಂಪನದ ಅನುಭವವಾಯಿತು ಎಂದು ಸ್ಥಳೀಯರೊಬ್ಬರು ಪ್ರತಿಕ್ರಿಯಿಸಿದರು. ಸಾಬ್ರಾ ವಲಯದಲ್ಲಿ ಆತಂಕಗೊಂಡಿದ್ದ ಜನರು ಸುರಕ್ಷಿತ ತಾಣಗಳತ್ತ ಧಾವಿಸುತ್ತಿದ್ದುದು ಕಂಡುಬಂದಿತು.

ಭದ್ರತೆ ಕಾರಣಗಳಿಂದಾಗಿ ಲೆಬನಾನ್‌ನಲ್ಲಿ ಶೈಕ್ಷಣಿಕ ವರ್ಷದ ಆರಂಭವನ್ನು ನವೆಂಬರ್ 4ರವರೆಗೂ ಮುಂದೂಡಲಾಗಿದೆ ಎಂದು ಶಿಕ್ಷಣ ಸಚಿವರು ಪ್ರಕಟಿಸಿದ್ದಾರೆ.

ಇಸ್ರೇಲ್ ಸೇನೆ ದಾಳಿಯಿಂದ ಗಾಜಾಪಟ್ಟಿಯಲ್ಲಿ 42 ಸಾವಿರ ಪ್ಯಾಲೆಸ್ಟೀನಿಯರು ಸತ್ತಿದ್ದಾರೆ. ಇವರಲ್ಲಿ ಅರ್ಧದಷ್ಟು ಮಹಿಳೆಯರು, ಮಕ್ಕಳು. ಲೆಬನಾನ್‌ನಲ್ಲಿ ನಡೆದಿರುವ ದಾಳಿಯಲ್ಲಿ ಸೆಪ್ಟೆಂಬರ್ 23ರಿಂದ ಈವರೆಗೂ ಸುಮಾರು 2 ಸಾವಿರ ಜನರು ಸತ್ತಿದ್ದಾರೆ.

ಇಸ್ರೇಲ್ ಮೇಲೆ 2024ರ ಅಕ್ಟೋಬರ್ 6ರಂದು ಹಮಾಸ್ ನಡೆಸಿದ ದಾಳಿಯಲ್ಲಿ ಮೃತಪಟ್ಟವರ ಸ್ಮರಣಾರ್ಥ ಸ್ಥಾಪಿಸಿದ್ದ ಸ್ಮಾರಕಗಳನ್ನು ಇಸ್ರೇಲ್ ಯೋಧರೊಬ್ಬರು ಭಾನುವಾರ ವೀಕ್ಷಿಸಿದರು ಎಎಫ್‌ಪಿ ಚಿತ್ರ

ಹಿಜ್ಬುಲ್ಲಾ ಬಂಡುಕೋರರನ್ನು ಗುರಿಯಾಗಿಸಿ ಬೈರೂತ್ ನಗರದಲ್ಲಿ ಇಸ್ರೇಲ್ ಸೇನೆ ನಡೆಸಿರುವ ತೀವ್ರ ದಾಳಿಯಿಂದ ಜಖಂಗೊಂಡಿರುವ ವಸತಿ ಸಂಕೀರ್ಣಗಳ ಅವಶೇಷಗಳನ್ನು ನಿವಾಸಿಯೊಬ್ಬರು ಭಾನುವಾರ ವೀಕ್ಷಿಸಿದರು ಎಎಫ್‌ಪಿ ಚಿತ್ರ

ದಿನದ ಬೆಳವಣಿಗೆ...

- ಗಾಜಾದಿಂದ ಇಸ್ರೇಲ್‌ನತ್ತ ರಾಕೆಟ್ ದಾಳಿ, ಅನಾಹುತವಾಗಿಲ್ಲ – ಇಸ್ರೇಲ್ ಸೇನೆ ಹೇಳಿಕೆ
- ದಾಳಿ ಭೀತಿ: ಸೋಮವಾರ ಬೆಳಿಗ್ಗೆವರೆಗೆ ಹಲವು ವಿಮಾನಗಳ ಸಂಚಾರ ರದ್ದುಗೊಳಿಸಿದ ಇರಾನ್
- ಸಿರಿಯಾದ ಕಾರು ತಯಾರಿಕಾ ಘಟಕದ ಮೇಲೆ ಇಸ್ರೇಲ್ ದಾಳಿ
- ಉತ್ತರ ಗಾಜಾದ, ನಿರಾಶ್ರಿತರೇ ಹೆಚ್ಚಿರುವ ಜಬಾಲಿಯ ವಲಯ ತೆರವಿಗೆ ಇಸ್ರೇಲ್ ಸೇನೆ ಆದೇಶ
- ಇರಾನ್‌ನ ತೈಲ ಸ್ಥಾವರಗಳ ಮೇಲೆ ಇಸ್ರೇಲ್ ದಾಳಿ ನಡೆಸದಿರಲಿ– ಅಮೆರಿಕ ಅಧ್ಯಕ್ಷ ಜೋ ಬೈಡನ್

ಇಸ್ರೇಲ್ ಮೇಲೆ ದಾಳಿ ಮುಂದುವರಿಸಿದ್ದೇ ಆದಲ್ಲಿ ಗಾಜಾ, ಬೈರೂತ್‌ಗೆ ಎದುರಾದ ಪರಿಸ್ಥಿತಿಯೇ ಇರಾನ್‌ಗೂ ಎದುರಾಗಲಿದೆ

ಯೋವ್ ಗ್ಯಾಲಂಟ್
ರಕ್ಷಣಾ ಸಚಿವ, ಇಸ್ರೇಲ್

ಮಸೀದಿ, ಶಾಲಾ ಕಟ್ಟಡದ ಮೇಲೆ ದಾಳಿ

ಜೆರುಸಲೇಂ (ಎ.ಪಿ): ಗಾಜಾ ಕೇಂದ್ರ ಭಾಗದಲ್ಲಿ ಇಸ್ರೇಲ್ ಸೇನೆ ಭಾನುವಾರ ಮಸೀದಿಯೊಂದರ ಮೇಲೆ ವಾಯು ದಾಳಿ ನಡೆಸಿದೆ. 19 ಜನರು ಮೃತಪಟ್ಟಿದ್ದಾರೆ ಎಂದ ಪ್ಯಾಲೆಸ್ಟೀನ್ ಅಧಿಕಾರಿಗಳು ತಿಳಿಸಿದ್ದಾರೆ.

ಗಾಜಾದ ದೇರ್ ಅಲ್ ಬಲಾಹ್ ಪಟ್ಟಣದಲ್ಲಿ ನಿರಾಶ್ರಿತರು ಆಶ್ರಯ ಪಡೆದಿದ್ದ ಮಸೀದಿ ಮೇಲೆ ದಾಳಿ ನಡೆದಿದೆ. ಮತ್ತೊಂದು ಕಡೆ ಶಾಲೆ ಕಟ್ಟಡದ ಮೇಲೂ ದಾಳಿ ನಡೆದಿದ್ದು, ನಾಲ್ವರು ಮೃತಪಟ್ಟಿದ್ದಾರೆ.

ಎರಡೂ ಕಡೆ ಬಂಡುಕೋರರನ್ನು ಗುರಿಯಾಗಿಸಿ ದಾಳಿ ನಡೆಸಲಾಯಿತು ಎಂದು ಸೇನೆಯು ತಿಳಿಸಿದೆ.

ತಿರುಗೇಟು ಖಚಿತ; ಇರಾನ್ ಸೇನೆ

ಟೆಹರಾನ್ (ಎಎಫ್‌ಪಿ): ಇಸ್ರೇಲ್ ದಾಳಿಗೆ ಪ್ರತ್ಯುತ್ತರ ನೀಡಲು ಇರಾನ್ ಸಜ್ಜಾಗಿದೆ. ಪೂರ್ಣ ಪ್ರಮಾಣದಲ್ಲಿ ಪ್ರತಿಕ್ರಿಯೆ ನೀಡಲು ಯೋಜನೆ ಸಿದ್ಧವಾಗಿದೆ ಎಂದು ಇರಾನ್‌ನ ಸೇನೆ ತಿಳಿಸಿದೆ.

ಸೇನೆಯ ಮೂಲಗಳನ್ನು ಉಲ್ಲೇಖಿಸಿ ಸ್ಥಳೀಯ ಮಾಧ್ಯಮ ಈ ಕುರಿತು ವರದಿ ಮಾಡಿದೆ. ಮಂಗಳವಾರದಂದು ಇರಾನ್‌ನ ಐಆರ್‌ಜಿಸಿ ಪಡೆಯು 200 ಕ್ಷಿಪಣಿಗಳನ್ನು ಇಸ್ರೇಲ್‌ನತ್ತ ಪ್ರಯೋಗಿಸಿತ್ತು.

‘ಇಸ್ರೇಲ್ ದಾಳಿ ಮುಂದುವರಿದರೆ, ಇರಾನ್ ಉತ್ತರ ನೀಡುವುದರಲ್ಲಿ ಅನುಮಾನವೇ ಬೇಡ. ದಾಳಿ ನಡೆಸಬೇಕಾದ ಇಸ್ರೇಲ್ ತಾಣಗಳ ಪಟ್ಟಿ ಇರಾನ್ ಬಳಿ ಈಗಾಗಲೇ ಇದೆ. ತಾನು ಬಯಸಿದ ಯಾವುದೇ ತಾಣದ ಮೇಲೆ ದಾಳಿ ನಡೆಸಬಲ್ಲೆವು ಎಂದೂ ತೋರಿಸಿದ್ದೇವೆ’ ಎಂದು ವರದಿ ಉಲ್ಲೇಖಿಸಿದೆ.

ಇಮ್ರಾನ್ ಖಾನ್ ಬಿಡುಗಡೆಗೆ ಆಗ್ರಹಿಸಿ ಪ್ರತಿಭಟನೆ ತೀವ್ರ

ಇಸ್ಲಾಮಾಬಾದ್: ಬಿಗುವಿನ ಸ್ಥಿತಿ, 30 ಬಂಧನ

ಇಸ್ಲಾಮಾಬಾದ್ (ಪಿಟಿಐ): ಮಾಜಿ ಪ್ರಧಾನಿ ಇಮ್ರಾನ್ ಖಾನ್ ನೇತೃತ್ವದ ಪಾಕಿಸ್ತಾನ್ ತೆಹ್ರೀಕ್ ಇ ಇನ್ಸಾಫ್ (ಪಿಟಿಐ) ಪಕ್ಷವು ಪಾಕಿಸ್ತಾನ ಸರ್ಕಾರದ ವಿರುದ್ಧ ನಡೆಸುತ್ತಿರುವ ಪ್ರತಿಭಟನೆಯಿಂದಾಗಿ ರಾಜಧಾನಿಯಲ್ಲಿ ಬಿಗುವಿನ ಸ್ಥಿತಿ ನಿರ್ಮಾಣವಾಗಿದೆ.

ಇಮ್ರಾನ್‌ಖಾನ್ ಬಿಡುಗಡೆಗೆ ಒತ್ತಾಯ, ಜೊತೆಗೆ ಹಣದುಬ್ಬರಕ್ಕೆ ಕಡಿವಾಣ ಹಾಕಬೇಕು, ನ್ಯಾಯಾಂಗದಲ್ಲಿ ಹಸ್ತಕ್ಷೇಪ ಇರಬಾರದು ಎಂದು ಒತ್ತಾಯಿಸಿ ಪಿಟಿಐ ಪ್ರತಿಭಟನೆಗೆ ಕರೆ ನೀಡಿದೆ. ಪ್ರತಿಭಟನೆ ಭಾನುವಾರ 2ನೇ ದಿನದಲ್ಲಿ ಮುಂದುವರಿದಿತ್ತು.

ಪ್ರತಿಭಟನೆಗೆ ಸಂಬಂಧ ಪೊಲೀಸರು 30 ಜನರನ್ನು ಬಂಧಿಸಿದ್ದಾರೆ. ಅಲ್ಲದೆ ಇಮ್ರಾನ್ ಖಾನ್ ಸೇರಿದಂತೆ ಪಿಟಿಐನ 200 ಮುಖಂಡರ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ.

ಪ್ರತಿಭಟನೆ ನೇತೃತ್ವ ವಹಿಸಬೇಕಿದ್ದ ಮುಖಂಡ ಅಲಿ ಅಮಿನ್ ಗಂದಾಪುರ್ ದಿಢೀರ್ ಬೆಳವಣಿಗೆಯಲ್ಲಿ ತಲೆಮರೆಸಿಕೊಂಡಿದ್ದಾರೆ. ಸರ್ಕಾರ ಗಂದಾಪುರ್‌ರನ್ನು ಬಂಧಿಸಿದಲ್ಲಿ, ಮುಖಂಡ ಅಜಂ ಸ್ವಾತಿ ಮುನ್ನಡೆಸುವರು. ಸ್ವಾತಿ ಅವರನ್ನೂ ಬಂಧಿಸಿದಲ್ಲಿ ಹೊಸ ನಾಯಕನ ಆಯ್ಕೆಯಾಗಲಿದೆ ಎಂದು ಪಕ್ಷ ನಿರ್ಧರಿಸಿದೆ ಎಂದು ಡಾನ್ ವರದಿ ಮಾಡಿದೆ.

ಭ್ರಷ್ಟಾಚಾರ ಪ್ರಕರಣದಲ್ಲಿ ಬಂಧಿಸಿರುವ ಇಮ್ರಾನ್ ಖಾನ್ ಒಂದು ವರ್ಷದಿಂದ ರಾವಲ್ಪಿಂಡಿಯ ಅಡಿಯಾಲ ಜೈಲಿನಲ್ಲಿದ್ದಾರೆ. ಇಮ್ರಾನ್ ಖಾನ್ ಅವರಿಗೆ ಸ್ಪಷ್ಟ ನಿರ್ದೇಶನ ಬರುವವರೆಗೂ ಪ್ರತಿಭಟನೆ ಮುಂದುವರಿಯಲಿದೆ ಎಂದು ಪಿಟಿಐ ನಾಯಕ ಅಸದ್ ಖೈಸರ್ ಅವರು ಸ್ಪಷ್ಟಪಡಿಸಿದ್ದಾರೆ.

ಜೈಶಂಕರ್‌ಗೆ ಆಹ್ವಾನಿಸಿಲ್ಲ –ಪಿಟಿಐ

ಪೆಶಾವರ (ಪಿಟಿಐ): ‘ಸರ್ಕಾರದ ವಿರುದ್ಧ ಪಕ್ಷ ನಡೆಸುತ್ತಿರುವ ಪ್ರತಿಭಟನೆ ಬೆಂಬಲಿಸಿ, ಭಾಗವಹಿಸಬೇಕು ಎಂದು ಭಾರತದ ವಿದೇಶಾಂಗ ಸಚಿವ ಎಸ್.ಜೈಶಂಕರ್ ಸೇರಿ ಯಾವುದೇ ವಿದೇಶಿಯರಿಗೂ ಆಹ್ವಾನಿಸಿಲ್ಲ’ ಎಂದು ಪಿಟಿಐ ಪಕ್ಷ ಸ್ಪಷ್ಟಪಡಿಸಿದೆ.

ಮುಖಂಡ ಮೊಹಮ್ಮದ್ ಅಲಿ ಸೈಫ್ ಹೇಳಿಕೆ ಕುರಿತು ಪಿಟಿಐ ಅಂತರ ಕಾಯ್ದುಕೊಂಡಿದೆ. ‘ಶಾಂತಿಯುತ ಪ್ರತಿಭಟನೆ ನಮ್ಮ ಸಾಂವಿಧಾನಿಕ ಹಕ್ಕು. ಭಾರತ ಸೇರಿದಂತೆ ವಿದೇಶದ ಯಾವುದೇ ಪ್ರತಿನಿಧಿಗೂ ಆಹ್ವಾನ ನೀಡಿಲ್ಲ. ನಮ್ಮ ಆಂತರಿಕ ವಿಷಯದಲ್ಲಿ ಹೇಳಿಕೆ ನೀಡಲು ಅವಕಾಶವಿಲ್ಲ’ ಎಂದು ಪಕ್ಷದ ಅಧ್ಯಕ್ಷ ಬ್ಯಾರಿಸ್ಟರ್ ಗೋಹ್ ಅಲಿ ಖಾನ್ ಹೇಳಿದ್ದಾರೆ.

ಪ್ರತಿಭಟನೆಯಲ್ಲಿ ಭಾಗವಹಿಸಲು ಭಾರತದ ವಿದೇಶಾಂಗ ಸಚಿವ ಎಸ್.ಜೈಶಂಕರ್ ಅವರನ್ನು ಆಹ್ವಾನಿಸಲಾಗುವುದು ಎಂದು ಸೈಫ್ ಶನಿವಾರ ಹೇಳಿಕೆ ನೀಡಿದ್ದರು. ಎಸ್‌ಸಿಒ ಶೃಂಗಸಭೆಯಲ್ಲಿ ಭಾಗವಹಿಸಲು ಜೈಶಂಕರ್ 15ರಂದು ಪಾಕ್‌ಗೆ ಭೇಟಿ ನೀಡುತ್ತಿದ್ದಾರೆ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ

General

ತಕ್ಷಣಬೇಕಾಗಿದ್ದಾರೆ. ಟಾಟಾಮೋಟಾರ್ಸ್, ಟಯೋಟಾ, ಬ್ರಿಟಾನಿಯಾ,TVSಗಳಿಗೆ, ಆಫೀಸ್‌ಗಳಿಗೆ, SSLC, PUC,Degree, ITIನವರುಗಳು. 18,100- 76,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ. 7259552930

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ರಿಯಲ್ ಎಸ್ಟೇಟ್ ಸೆಲ್ಲಿಂಗ್

Farm House/ Land/ Resorts

Mysore Road

SLN CITY 30X60 Site For Sale Ajjanahalli Tavarekere Bangalore South.Call 9901960105

ಪ್ರವಾಸ

Travel

★ಶ್ರೇಯಸ್ ಟೂರ್ಸ್★ 20.11.2024 12/15/21ದಿನಗಳು ಈಶಾನ್ಯ ಭಾರತ ರಾಜ್ಯಗಳ(ಸೆವೆನ್ ಸಿಸ್ಟರ್ಸ್)ಅಸ್ಸಾಂ,ಅರುಣಾಚಲ ಮೇಘಾಲಯ,ನಾಗಲ್ಯಾಂಡ್ ಮಣಿಪುರ,ತ್ರಿಪುರ,ಮಿಜೋರಾಂ 08.11.2024 7ದಿನಗಳು ಭೂತಾನ್ ರಾಷ್ಟ್ರದ ತಿಂಪೂ ಪಾರೋ,ಪುನಕಾ,ಫೂಚಲಿಂಗ್. 01.12.2024 13ದಿನಗಳು ಅಖಂಡ ಮಧ್ಯಪ್ರದೇಶ ರಾಜ್ಯ ಪ್ರವಾಸ (ಅಮರಕಂಟಕ ಮಯ್ಯಾರ್ ಸಹಿತ). 20.12.2024 9ದಿನಗಳು ವಿಜಯವಾಡ,ಮಂಗಳಗಿರಿ ಪಂಚರಾಮ,ಪೀಠಾಪುರಂ ಅನ್ನಾವರಂ,ವಿಶಾಖಪಟ್ಟಣ ಅರಕು,ಶ್ರೀಕೂರ್ಮಂ 20.10.2024,21.11.2024, 20.12.2024 7ದಿನಗಳು ಕಾಶಿ ನೈಮಿಷ್ಯಾರಣ್ಯ,ಪ್ರಯಾಗ್ ಗಯಾ,ದೇವ್‌ಘರ್,ನಳಂದ 01.12.2024 10ದಿನಗಳು ಆಖಂಡ ರಾಜಸ್ಥಾನ ಪ್ರವಾಸ. 21.11.2024,20.12.2024 12ದಿನಗಳು ಆಖಂಡ ಗುಜರಾತ್ ರಾಜ್ಯ ಪ್ರವಾಸ (ಬುಜ್‌ಕಚ್ ಸಹಿತ)(ಉಜ್ಜೈನಿ ಓಂಕಾರ್ ಸಹಿತ).9743351212/ 9206979202

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ಸಾರ್ವಜನಿಕ ಪ್ರಕಟಣೆ
BOOK YOUR PUBLIC NOTICE ADS IN PRAJAVANI ALL KARNATAKA, ON ALL DAYS
@500/-* PER SQCM
www.dhclassifieds.com
BOOK NOW
*Conditions apply
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9886213331 | +91 9845114560
+91 9731810277 | 080- 45557163/164

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ದಸರಾ ಕ್ರೀಡಾಕೂಟಕ್ಕೆ ಸಂಭ್ರಮದ ತೆರೆ: ಜಫರ್‌ಖಾನ್, ಮೇಘಾಗೆ ಪ್ರಶಸ್ತಿ

ಬೆಂಗಳೂರು ನಗರ ವಿಭಾಗ ಚಾಂಪಿಯನ್

ಪ್ರಜಾವಾಣಿ ವಾರ್ತೆ

ಮೈಸೂರು: ಅಥ್ಲೆಟಿಕ್ಸ್, ಈಜು ಹಾಗೂ ಗುಂಪು ವಿಭಾಗದ ಬಹುತೇಕ ಸ್ಪರ್ಧೆಗಳಲ್ಲಿ ಚೇತೋಹಾರಿ ಪ್ರದರ್ಶನ ನೀಡಿದ ಬೆಂಗಳೂರು ನಗರ ವಿಭಾಗದ ಸ್ಪರ್ಧಿಗಳು ಭಾನುವಾರ ಇಲ್ಲಿ ಮುಕ್ತಾಯಗೊಂಡ ಸಿ.ಎಂ. ಕಪ್ ರಾಜ್ಯಮಟ್ಟದ ದಸರಾ ಕ್ರೀಡಾಕೂಟದಲ್ಲಿ ಸಮಗ್ರ ಪ್ರಶಸ್ತಿ ಜಯಿಸಿದರು.

ಒಟ್ಟು 201 ಅಂಕಗಳೊಂದಿಗೆ ಬೆಂಗಳೂರು ನಗರ ವಿಭಾಗವು ಪ್ರಶಸ್ತಿ ಎತ್ತಿಹಿಡಿಯಿತು. ಅವರಿಗೆ ತೀವ್ರ ಪೈಪೋಟಿ ಒಡ್ಡಿದ ಮೈಸೂರು ವಿಭಾಗವು 194 ಅಂಕಗಳೊಂದಿಗೆ ರನ್ನರ್ಸ್ ಅಪ್ ಸ್ಥಾನ ಪಡೆಯಿತು. ಬೆಳಗಾವಿ 131 ಅಂಕ, ಬೆಂಗಳೂರು ಗ್ರಾಮಾಂತರ 123 ಅಂಕ ಹಾಗೂ ಕಲಬುರಗಿ 45 ಅಂಕಗಳೊಂದಿಗೆ ಕ್ರಮವಾಗಿ ನಂತರದ ಸ್ಥಾನ ಪಡೆದವು.

ಮೈಸೂರಿನಲ್ಲಿ ನಡೆದ ದಸರಾ ಕ್ರೀಡಾಕೂಟದ ಸಮಗ್ರ ಚಾಂಪಿಯನ್ ಆದ ಬೆಂಗಳೂರು ನಗರ ವಿಭಾಗ ತಂಡ ಪ್ರಶಸ್ತಿಯೊಂದಿಗೆ –ಪ್ರಜಾವಾಣಿ ಚಿತ್ರ

ಲಾಂಗ್‌ಜಂಪ್‌ನಲ್ಲಿ 7.53 ಮೀಟರ್ ಜಿಗಿದು ದಾಖಲೆ ನಿರ್ಮಿಸುವ ಜೊತೆಗೆ ಟ್ರಿಪಲ್ ಜಂಪ್‌ನಲ್ಲೂ ಚಿನ್ನ ಗೆದ್ದಿದ್ದ ಬೆಳಗಾವಿಯ ಜಫರ್‌ಖಾನ್ 1035 ಅಂಕಗಳೊಂದಿಗೆ ಪುರುಷರ ವಿಭಾಗದಲ್ಲಿ ವೈಯಕ್ತಿಕ ಚಾಂಪಿಯನ್ ಪ್ರಶಸ್ತಿ ಪಡೆದರು. ಮಹಿಳೆಯರ ವಿಭಾಗದಲ್ಲಿ 400 ಮೀಟರ್ಸ್ ಓಟದಲ್ಲಿ ಚಿನ್ನ, 200 ಮೀಟರ್ಸ್ ಓಟದಲ್ಲಿ ಬೆಳ್ಳಿ ಗೆದ್ದ ಧಾರವಾಡದ ಮೇಘಾ ಮುನವಳ್ಳಿಮಠ 992 ಅಂಕಗಳೊಂದಿಗೆ ವೈಯಕ್ತಿಕ ಪ್ರಶಸ್ತಿ ತಮ್ಮದಾಗಿಸಿಕೊಂಡರು.

ಗುಂಪು ಕ್ರೀಡೆಗಳ ಫಲಿತಾಂಶ: ಪುರುಷರು: ಹಾಕಿ: ಬೆಂಗಳೂರು ನಗರ-1, ಮೈಸೂರು-2, ಬೆಳಗಾವಿ-3; ಕೊಕ್ಕೊ: ಬೆಂಗಳೂರು ನಗರ-2, ಬೆಂಗಳೂರು ಗ್ರಾಮಾಂತರ-2, ಮೈಸೂರು-3; ಥ್ರೋಬಾಲ್: ಮೈಸೂರು-1, ಬೆಂಗಳೂರು ನಗರ-2, ಬೆಳಗಾವಿ-3; ವಾಲಿಬಾಲ್: ಮೈಸೂರು-1, ಬೆಂಗಳೂರು ನಗರ-2, ಬೆಳಗಾವಿ-3. ಬಾಲ್ ಬ್ಯಾಡ್ಮಿಂಟನ್: ಮೈಸೂರು-1, ಬೆಂಗಳೂರು ನಗರ-2, ಬೆಂಗಳೂರು ಗ್ರಾಮಾಂತರ-3; ಹ್ಯಾಂಡ್‌ಬಾಲ್; ಬೆಂಗಳೂರು ಗ್ರಾಮಾಂತರ-1, ಮೈಸೂರು-2, ಬೆಂಗಳೂರು ನಗರ-3; ಬ್ಯಾಸ್ಕೆಟ್‌ಬಾಲ್: ಬೆಂಗಳೂರು ನಗರ-1, ಮೈಸೂರು-2, ಬೆಂಗಳೂರು ಗ್ರಾಮಾಂತರ-3; ಟೇಬಲ್ ಟೆನಿಸ್: ಬೆಂಗಳೂರು ನಗರ-1, ಮೈಸೂರು-2, ಬೆಳಗಾವಿ-3; ಫೆನ್ಸಿಂಗ್: ಬೆಂಗಳೂರು ನಗರ-1, ಮೈಸೂರು-2, ಬೆಂಗಳೂರು ಗ್ರಾಮೀಣ-3.

ಮಹಿಳೆಯರು: ಹಾಕಿ: ಮೈಸೂರು-1, ಬೆಂಗಳೂರು ಗ್ರಾಮಾಂತರ-2, ಬೆಳಗಾವಿ-3; ಥ್ರೋಬಾಲ್: ಮೈಸೂರು-1, ಬೆಂಗಳೂರು ನಗರ-2, ಬೆಂಗಳೂರು ಗ್ರಾಮಾಂತರ-3; ಬಾಲ್ ಬ್ಯಾಡ್ಮಿಂಟನ್: ಮೈಸೂರು-1, ಬೆಂಗಳೂರು ನಗರ-2, ಬೆಂಗಳೂರು ಗ್ರಾಮಾಂತರ-3; ಹ್ಯಾಂಡ್‌ಬಾಲ್: ಮೈಸೂರು-1, ಬೆಂಗಳೂರು ಗ್ರಾಮಾಂತರ-2, ಬೆಂಗಳೂರು ನಗರ-3; ಬ್ಯಾಸ್ಕೆಟ್‌ಬಾಲ್: ಮೈಸೂರು-1, ಬೆಂಗಳೂರು ನಗರ-2, ಬೆಂಗಳೂರು ಗ್ರಾಮಾಂತರ-3; ನೆಟ್‌ಬಾಲ್: ಬೆಂಗಳೂರು ನಗರ-1, ಮೈಸೂರು-2, ಕಲಬುರಗಿ-3; ಟೆನಿಸ್: ಮೈಸೂರು-1, ಬೆಂಗಳೂರು ಗ್ರಾಮಾಂತರ-2, ಬೆಂಗಳೂರು ನಗರ-3.

ಕುಸ್ತಿ: ಬೆಂಗಳೂರು ಗ್ರಾಮಾಂತರಕ್ಕೆ ಸಮಗ್ರ ಪ್ರಶಸ್ತಿ

ಮೈಸೂರು: ಬೆಂಗಳೂರು ಗ್ರಾಮಾಂತರ ಹಾಗೂ ಬೆಳಗಾವಿ ವಿಭಾಗದ ಕುಸ್ತಿಪಟುಗಳು, ಇಲ್ಲಿ ನಡೆಯುತ್ತಿರುವ 'ದಸರಾ ಸಿ.ಎಂ ಕಪ್ ಕುಸ್ತಿ ಟೂರ್ನಿ'ಯಲ್ಲಿ ಕ್ರಮವಾಗಿ ಪುರುಷರು ಮತ್ತು ಮಹಿಳೆಯರ ವಿಭಾಗದಲ್ಲಿ ಸಮಗ್ರ ಪ್ರಶಸ್ತಿ ಗೆದ್ದರು.

ನಗರದ ಡಿ.ದೇವರಾಜ ಅರಸು ವಿವಿಧೋದ್ದೇಶ ಕ್ರೀಡಾಂಗಣದಲ್ಲಿ ಭಾನುವಾರ ಮುಕ್ತಾಯಗೊಂಡ ಪುರುಷರ 'ಗ್ರೀಕೊ ರೋಮನ್' ಕುಸ್ತಿಯಲ್ಲಿ ಬೆಂಗಳೂರು ಗ್ರಾಮಾಂತರ ವಿಭಾಗದ ಕುಸ್ತಿಪಟುಗಳು 45 ಅಂಕಗಳೊಂದಿಗೆ ಟ್ರೋಫಿ ತಮ್ಮದಾಗಿಸಿಕೊಂಡರೆ, ಬೆಳಗಾವಿ ರನ್ನರ್ ಅಪ್ (30 ಅಂಕ) ಆಯಿತು. ಪುರುಷರ ಫ್ರೀಸ್ಟೈಲ್ ಕುಸ್ತಿಯಲ್ಲೂ ಬೆಂಗಳೂರು ಗ್ರಾಮಾಂತರ ವಿಭಾಗದ ಕುಸ್ತಿಪಟುಗಳು ಸಮಗ್ರ ಪ್ರಶಸ್ತಿ ಗೆದ್ದರು.

ಮಹಿಳೆಯರ ಫ್ರೀಸ್ಟೈಲ್ ಕುಸ್ತಿಯಲ್ಲಿ 60 ಅಂಕ ಪಡೆದ ಬೆಳಗಾವಿ ವಿಭಾಗದ ಕುಸ್ತಿಪಟುಗಳು ಚಾಂಪಿಯನ್ ಪ್ರಶಸ್ತಿ ಗೆದ್ದರೆ, ಬೆಂಗಳೂರು ಗ್ರಾಮಾಂತರ ವಿಭಾಗವು 2ನೇ ಸ್ಥಾನ (30 ಅಂಕ) ಪಡೆಯಿತು.



ಸಿ. ಪುಟ್ಟಯ್ಯ ಸ್ಮಾರಕ ಕಪ್ ಫುಟ್‌ಬಾಲ್ ಟೂರ್ನಿ

ಅಗ್ನಿಪುತ್ರ ಚಾಂಪಿಯನ್, ಬಿಎಫ್‌ಸಿಗೆ ನಿರಾಸೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಫ್‌ಸಿ ಅಗ್ನಿಪುತ್ರ ತಂಡವು ಭಾನುವಾರ ಇಲ್ಲಿ ನಡೆದ ಸಿ.ಪುಟ್ಟಯ್ಯ ಸ್ಮಾರಕ ಕಪ್ ಫುಟ್‌ಬಾಲ್ ಟೂರ್ನಿಯ ಫೈನಲ್‌ನಲ್ಲಿ ಪೆನಾಲ್ಟಿ ಶೂಟೌಟ್ ಮೂಲಕ ಬಿಎಫ್‌ಸಿ ತಂಡವನ್ನು ಮಣಿಸಿ ಪ್ರಶಸ್ತಿಯನ್ನು ಉಳಿಸಿಕೊಂಡಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯವು ನಿಗದಿ ಅವಧಿಯಲ್ಲಿ ಗೋಲುರಹಿತವಾಗಿ 'ಡ್ರಾ' ಗೊಂಡಿತು. ನಂತರ ಪೆನಾಲ್ಟಿ ಶೂಟೌಟ್‌ನಲ್ಲಿ ಹಾಲಿ ಚಾಂಪಿಯನ್ ಅಗ್ನಿಪುತ್ರ ತಂಡವು 5-3ರಿಂದ ಜಯ ಸಾಧಿಸಿತು. ಟೂರ್ನಿಯ ಉತ್ತಮ ಆಟಗಾರನಾಗಿ ಬಿಎಫ್‌ಸಿಯ ಸೋಹಮ್ ಸೋಹಂ ವಾರ್ಷ್ಣೇಯ ಮತ್ತು ಗರಿಷ್ಠ ಸ್ಕೋರರ್ ಆಗಿ ಕಿಕ್‌ಸ್ಟಾರ್ಟ್ ತಂಡದ ಸೈಖೋಮ್ ಬೋರಿಶ್ ಸಿಂಗ್ ಹೊರಹೊಮ್ಮಿದರು.

ಕೆಎಸ್‌ಎಫ್‌ಎ ಕಾರ್ಯದರ್ಶಿ ಎಂ.ಕುಮಾರ್ ವಿಜೇತ ತಂಡಕ್ಕೆ ಬಹುಮಾನ ವಿತರಿಸಿದರು. ಬಿಡಿಎಫ್‌ಎ ಅಧ್ಯಕ್ಷ ಎಸ್.ಎಂ. ಬಾಲು ಕಾರ್ಯದರ್ಶಿ ಎಂ.ಶ್ರೀಧರನ್ ಇದ್ದರು.

ಪ್ರಶಸ್ತಿಯೊಂದಿಗೆ ಎಫ್‌ಸಿ ಅಗ್ನಿಪುತ್ರ ತಂಡ. ಎಡದಿಂದ (ಕುಳಿತವರು) ಸಂದೀಪ್ ಎಸ್, ವಿಜಯ್, ಜಿದಾನ್ ಸಿಂಗ್ ನಿಂಗ್ ತೌಜಮ್, ಅಪ್ಪು ಆರೋಗ್ಯಸ್ವಾಮಿ ಪಿ, ಸೂರ್ಯ ಯು.ಕೆ, ಕಾರ್ತಿಕ್ ಗೋವಿಂದ ಸ್ವಾಮಿ, ಮಿಕ್ಕಿ ಡಯಾಸ್, ಅಜ್ಞರ್ ನೂರಾನಿ, ಸಪಂ ಬಿಶೋರ್‌ಜಿತ್ ಮೈತೇಯಿ, ವಿ.ಸುರೇಂದ್ರ ಪ್ರಸಾದ್ (ನಿಂತವರು) ಲಾಲ್ ರುತ್ಥೆಲಾ, ಮೊಹಮ್ಮದ್ ಸುಹೇಲ್ ಕೆ.ಟಿ (ಮ್ಯಾನೇಜರ್), ಅದಿಲ್ ಅಶ್ರಫ್, ಧನುಷ್ ಆರ್, ಪಿ.ಸಿ. ಕೃಷ್ಣಾಜ್, ಅಹ್ಮದ್ ಫೈಜ್ ಖಾನ್, ಇಮ್ರಾನ್ ಅರ್ಷಿದ್, ಮೊಹಮ್ಮದ್ ಸಫೀಕ್ ಅಹ್ಮದ್, ಭೂಪೇಂದರ್ ಸಿಂಗ್, ರಾಹುಲ್ ಎಂ, ಸೇತು ಸತ್ಯನ್ (ಕೋಚ್), ಸತೀಶ್ ಕುಮಾರ್, ಜಯಕರ್ ವಿ. (ಸಹಾಯಕ ಕೋಚ್), ಹರಿಹರನ್ ಪಿ. (ಗೋಲ್‌ಕೀಪರ್ ಕೋಚ್), ಗೌತಮ್ (ಸಹಾಯಕ ವ್ಯವಸ್ಥಾಪಕ), ಅಜಯ್ (ಫಿಸಿಯೊ). –ಪ್ರಜಾವಾಣಿ ಚಿತ್ರ: ಎಸ್‌.ಕೆ. ದಿನೇಶ್

ಸಿಲಿಕಾನ್ ಸಿಟಿಯಲ್ಲಿ 'ವಿಪ್ರೊ ಬೆಂಗಳೂರು ಮ್ಯಾರಥಾನ್'

ಲಕ್ಷ್ಮಿ, ಕಾರ್ತಿಕ್‌ಗೆ ಚಿನ್ನದ ಪದಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತೀಯ ಸೇನೆಯ ಕಾರ್ತಿಕ್ ಕುಮಾರ್ ಮತ್ತು ರೈಲ್ವೇಸ್‌ನ ಕೆ.ಎಂ. ಲಕ್ಷ್ಮಿ ಅವರು ಭಾನುವಾರ 'ವಿಪ್ರೊ ಬೆಂಗಳೂರು ಮ್ಯಾರಥಾನ್'ನಲ್ಲಿ ಕ್ರಮವಾಗಿ ಪುರುಷರ ಮತ್ತು ಮಹಿಳೆಯರ ಎಲೀಟ್ ವಿಭಾಗಗಳಲ್ಲಿ ಚಾಂಪಿಯನ್ ಆದರು.

ಪುರುಷರ ಎಲೀಟ್ ವಿಭಾಗದಲ್ಲಿ ಕಾರ್ತಿಕ್ 2 ಗಂಟೆ 22 ನಿಮಿಷ 50 ಸೆಕೆಂಡ್‌ನಲ್ಲಿ ಗುರಿ ತಲುಪಿ ಚಿನ್ನ ಗೆದ್ದರೆ, ಸೇನೆಯ ಮತ್ತೊಬ್ಬ ಸ್ಪರ್ಧಿ ಪ್ರದೀಪ್ ಸಿಂಗ್ (2 ಗಂಟೆ 23 ನಿ.35ಸೆ) ಬೆಳ್ಳಿ ಗೆದ್ದರು. ರೈಲ್ವೇಸ್‌ನ ಹರ್ಷದ್ ಮ್ಹಾತ್ರೆ (2 ಗಂಟೆ 25 ನಿ.50ಸೆ) ಕಂಚಿನ ಪದಕಕ್ಕೆ ಕೊರಳೊಡ್ಡಿದರು.

ಮಹಿಳೆಯರ ಎಲೀಟ್ ವಿಭಾಗದಲ್ಲಿ ಲಕ್ಷ್ಮಿ 3 ಗಂಟೆ 21 ಸೆಕೆಂಡ್‌ನಲ್ಲಿ ಗುರಿ ಮುಟ್ಟಿದರು. ಅಶ್ವಿನಿ ಮದನ್ ಜಾಧವ್ (3ಗಂಟೆ 12ನಿ.42ಸೆ) ಮತ್ತು ಜ್ಯೋತಿ ಶಂಕರರಾವ್ ಗಾವಟೆ (3 ಗಂಟೆ 25 ನಿಮಿಷ 21ಸೆ) ಕ್ರಮವಾಗಿ ನಂತರದ ಸ್ಥಾನ ಪಡೆದರು.

ವಿಪ್ರೊ ಪ್ರಾಯೋಜಿತ 11ನೇ ಆವೃತ್ತಿಯ ಮ್ಯಾರಥಾನ್‌ನಲ್ಲಿ 30,000ಕ್ಕೂ ಅಧಿಕ ಓಟಗಾರರು ಪಾಲ್ಗೊಂಡರು. ಕಂಠೀರವ ಕ್ರೀಡಾಂಗಣ ದಿಂದ ಆರಂಭವಾದ ಓಟವು ನಗರದ ಎಂ.ಜಿ. ರಸ್ತೆ, ವಿಧಾನಸೌಧ, ಕಬ್ಬನ್ ಪಾರ್ಕ್ ಮೂಲಕ ಸಂಚರಿಸಿತು.

ಇತರ ಫಲಿತಾಂಶಗಳು: ಹಾಫ್ ಮ್ಯಾರಥಾನ್: ಪುರುಷರು: ಅಶೋಕ್ ಬೈಂಡ್ (ಕಾಲ: 1ಗಂಟೆ 12ನಿ. 05ಸೆ)-1, ಎಂ.ನಂಜುಂಡಪ್ಪ-2, ಮಣಿಕಂಠ ಪಿ.-3; ಮಹಿಳೆಯರು: ತೇಜಸ್ವಿನಿ (ಕಾಲ: 1ಗಂಟೆ 25ನಿ. 16ಸೆ)-1, ಮೋನಿಶಾ ಜೋಷಿ-2, ಬುಗಲಿ ಕುಮಾರಿ ಗುರ್ಜರ್-3. 10ಕೆ ಓಟ: ಪುರುಷರು: ಅವಿಕ್ ಭಟ್ಟಾಚಾರ್ಯ (ಕಾಲ: 40ನಿ. 18ಸೆ)-1, ವಿಜಯ್ ಕುಮಾರ್ ಬಿ.-2, ಶಿವಾನಂದ್ ಆರ್.-3; ಮಹಿಳೆಯರು: ಭಾರತಿ ಎಸ್. (ಕಾಲ: 56ನಿ. 06ಸೆ)-1, ಕಿಯೋಕೊ ಹಶಿಮೊಟೊ-2, ವೈಭವಿ ವಿಶ್ವನಾಥ್-3.

ವಿಪ್ರೊ ಬೆಂಗಳೂರು ಮ್ಯಾರಥಾನ್ ಪುರುಷರ ಎಲೀಟ್ ವಿಭಾಗದ ಪದಕ ವಿಜೇತರು. ಎಡದಿಂದ ಪ್ರದೀಪ್ ಸಿಂಗ್ (ಬೆಳ್ಳಿ) ಕಾರ್ತಿಕ್ ಕುಮಾರ್ (ಚಿನ್ನ) ಮತ್ತು ಹರ್ಷದ್ ಮ್ಹಾತ್ರೆ (ಕಂಚು)

ದಸರಾ ರನ್: ಆಶಾ ಶಿವಾನಂದಗೆ ಪ್ರಶಸ್ತಿ

ಮಂಗಳೂರು: ಬೆಳಗಾವಿಯ ಶಿವಾನಂದ ಚಿಗರಿ ಮತ್ತು ಕೇರಳದ ಆಶಾ ಟಿ.ಪಿ., ದಸರಾ ಅಂಗವಾಗಿ ಕುದ್ರೋಳಿ ಗೋಕರ್ಣನಾಥ ಕ್ಷೇತ್ರ ಮತ್ತು ಝ್ಯೂಯಿಸ್ ಫಿಟ್‌ನೆಸ್ ಕ್ಲಬ್ ಭಾನುವಾರ ಆಯೋಜಿಸಿದ್ದ ದಸರಾ ರನ್‌ನ 21 ಕಿಲೊಮೀಟರ್ ಓಟದಲ್ಲಿ ಕ್ರಮವಾಗಿ ಪುರುಷ ಮತ್ತು ಮಹಿಳೆಯರ ವಿಭಾಗದ ಚಾಂಪಿಯನ್ ಎನಿಸಿಕೊಂಡರು.

ಪುರುಷರ ವಿಭಾಗದ ಓಟದಲ್ಲಿ ಶಿವಾನಂದ ಚಿಗರಿ 1 ತಾಸು 12 ನಿಮಿಷ 7 ಸೆಕೆಂಡ್‌ಗಳಲ್ಲಿ ಗುರಿ ಮುಟ್ಟಿದರೆ, ಮಹಿಳೆಯರ ವಿಭಾಗದಲ್ಲಿ ಆಶಾ, 1 ತಾಸು 30 ನಿಮಿಷ 20 ಸೆಕೆಂಡುಗಳಲ್ಲಿ ಗುರಿ ತಲುಪಿದರು.

ಹಾವೇರಿಯ ಪುರುಷೋತ್ತಮ ಆರ್. ಮತ್ತು ಮೈಸೂರಿನ ಸಚಿನ್ ನಂದು ಪುರುಷರ ವಿಭಾಗದಲ್ಲಿ ಕ್ರಮವಾಗಿ ಬೆಳ್ಳಿ ಮತ್ತು ಕಂಚಿನ ಪದಕ ಗೆದ್ದುಕೊಂಡರು. ಮಹಿಳೆಯರ ವಿಭಾಗದಲ್ಲಿ ಬೆಂಗಳೂರಿನ ಪ್ರಿಯಾಂಕಾ ಸಿ. ಮತ್ತು ಮೈಸೂರಿನ ಅರ್ಚನಾ ಕೆ.ಎಂ. ಕ್ರಮವಾಗಿ ಬೆಳ್ಳಿ ಮತ್ತು ಕಂಚಿನ ಪದಕ ಗಳಿಸಿದರು.

ಪುರುಷರ 10ಕೆ ಓಟದಲ್ಲಿ ಮಂಗಳೂರಿನ ರಂಗಣ್ಣ ನಾಯ್ಕರ (33ನಿ 53 ಸೆ) ಚಿನ್ನ ಗೆದ್ದರೆ, ಬೆಂಗಳೂರಿನ ಶ್ರೀಧರ್ ಎಸ್.ಎನ್ ಬೆಳ್ಳಿ ಮತ್ತು ಗೋವಿಂದರಾಜ ಎಚ್. ಕಂಚು ಜಯಿಸಿದರು. ಮಹಿಳೆಯರ ವಿಭಾಗದಲ್ಲಿ ಬೆಂಗಳೂರಿನ ಸ್ಮಿತಾ ಡಿ.ಆರ್. (41ನಿ 9 ಸೆಕೆಂಡು) ಚಿನ್ನಕ್ಕೆ ಮುತ್ತಿಟ್ಟರು. ಮೈಸೂರಿನ ಉಷಾ ಆರ್ ಹಾಗೂ ಪ್ರಿಯಾಂಕಾ ಮಾರುತಿ ಕ್ರಮವಾಗಿ ಬೆಳ್ಳಿ ಮತ್ತು ಕಂಚು ಗೆದ್ದರು.

ಏಷ್ಯನ್ ರಗ್ಬಿ: ಬೆಳ್ಳಿ ಪದಕ ಗೆದ್ದ ಭಾರತದ ವನಿತೆಯರು

ಮುಂಬೈ (ಪಿಟಿಐ): ಭಾರತ ಮಹಿಳೆಯರ ತಂಡವು ನೇಪಾಳದ ಕಠ್ಮಂಡುವಿನಲ್ಲಿ ನಡೆದ ಏಷ್ಯನ್ ರಗ್ಬಿ ಎಮಿರೇಟ್ಸ್ ಸೆವೆನ್ಸ್ ಟೂರ್ನಿಯಲ್ಲಿ ಬೆಳ್ಳಿ ಪದಕ ಗೆದ್ದಿದೆ.

ಫೈನಲ್‌ನಲ್ಲಿ ಭಾರತ ತಂಡವು 5-7ರಿಂದ ಫಿಲಿಪ್ಪೀನ್ಸ್ ವಿರುದ್ಧ ಸೋತು ಬೆಳ್ಳಿಗೆ ತೃಪ್ತಿಪಟ್ಟಿತು.

ಇದಕ್ಕೂ ಮೊದಲು ಶಿಖಾ ಯಾದವ್ ನೇತೃತ್ವದ ತಂಡವು ಸೆಮಿಫೈನಲ್‌ನಲ್ಲಿ 24-7 ಅಂತರದಿಂದ ಗುವಾಮ್ ತಂಡವನ್ನು ಸೋಲಿಸಿತ್ತು.

ಭಾರತವು ಲೀಗ್ ಹಂತದಲ್ಲಿ ಶ್ರೀಲಂಕಾವನ್ನು 29-10ರಿಂದ ಮತ್ತು ಇಂಡೊನೇಷ್ಯಾವನ್ನು 17-10ರಿಂದ ಮಣಿಸಿ ನಾಲ್ಕರ ಘಟ್ಟಕ್ಕೆ ಮುನ್ನಡೆದಿತ್ತು.